ಬುಧವಾರ, ಸೆಪ್ಟೆಂಬರ್ 7, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ರೇಲರ್ ಬಿಡುಗಡೆ

ಮುಂಬೈನಲ್ಲಿ ಮಂಗಳವಾರ ನಡೆದ 'ಗುಡ್‌ಬೈ' ಹಿಂದಿ ಸಿನಿಮಾದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಬಹುಭಾಷಾ ಚಿತ್ರನಟ ರಶ್ಮಿಕಾ ಮಂದಣ್ಣ ಭಾಗವಹಿಸಿದ್ದರು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಕರ್ನಾಟಕ ಸರ್ಕಾರ

ಪ್ರಧಾನ ಮಂತ್ರೀ ಆವಾಸ ಯೋಜನಾ-ಗ್ರಾಮೀಣ
Pradhan Mantri Awaas Yojana

ವಸತಿ ಇಲಾಖೆ

ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮುಖ್ಯಮಂತ್ರಿಗಳ

1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ

ಸಾಂಕೇತಿಕವಾಗಿ ಮೊದಲ ಹಂತದಲ್ಲಿ

2000

ಫಲಾನುಭವಿಗಳಿಗೆ ವಸತಿಗಳ ಹಸ್ತಾಂತರ

ದಿನಾಂಕ: 07.09.2022 ಬುಧವಾರ, ಬೆಳಿಗ್ಗೆ 10:30 ಗಂಟೆ | ಸ್ಥಳ: ಅಗ್ರಹಾರಪಾಳ್ಯ, ಸ.ನಂ.30, ಯಲಹಂಕ ತಾಲ್ಲೂಕು.

ಸ್ಥಳದಲ್ಲಿಯೇ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಬಸವರಾಜ ಎಸ್. ಬೊಮ್ಮಾಯಿ** ರವರೊಂದಿಗೆ ಮಾನ್ಯ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಸಚಿವರಾದ **ಶ್ರೀ ವಿ. ಸೋಮಣ್ಣ ರವರು** ಹಾಗೂ ಬಿ.ಡಿ.ಎ ಅಧ್ಯಕ್ಷರು ಮತ್ತು ಯಲಹಂಕ ಶಾಸಕರಾದ **ಶ್ರೀ ಎಸ್.ಆರ್. ವಿಶ್ವನಾಥ್** ರವರು ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣಾ ಸಮಾರಂಭದಲ್ಲಿ ಪಾಲ್ಗೊಂಡಿರುವುದು.

ಅಗ್ರಹಾರಪಾಳ್ಯ ಸಾದೇನಹಳ್ಳಿ ಮತ್ತು ಪಿಲ್ಲಹಳ್ಳಿ ಯಲಹಂಕ ಕ್ಷೇತ್ರ	ನವರತ್ನ ಅಗ್ರಹಾರ ಬ್ಯಾಟರಾಯನಪುರ ಕ್ಷೇತ್ರ	ಕೂಗೂರು ಆನೇಕಲ್ ಕ್ಷೇತ್ರ	ಬಿದರಹಳ್ಳಿ ಮಹಾದೇವಪುರ ಕ್ಷೇತ್ರ	ದೇವಗೆರೆ ಮತ್ತು ಕೆಂಚನಾಪುರ ಯಶವಂತಪುರ ಕ್ಷೇತ್ರ	ಅನುಮೋದನೆಯಾದ 52,735 ಮನೆಗಳ ಪೈಕಿ 48,118 ಮನೆಗಳ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ

ವಸತಿ ಸಮುಚ್ಚಯಗಳ ಲೋಕಾರ್ಪಣೆ ಮತ್ತು ವಸತಿಗಳ ಹಸ್ತಾಂತರ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಗೌರವಾನ್ವಿತ ಅತಿಥಿಗಳು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಮತ್ತು
ಕಾರ್ಪೊರೇಟ್ ವ್ಯವಹಾರಗಳ ಸಚಿವರು
ಭಾರತ ಸರ್ಕಾರ

ಶ್ರೀ ರಾಜೀವ್ ಚಂದ್ರಶೇಖರ್
ಮಾನ್ಯ ಕೇಂದ್ರ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು
ಭಾರತ ಸರ್ಕಾರ

ಘನ ಉಪಸ್ಥಿತಿ

ಶ್ರೀ ವಿ. ಸೋಮಣ್ಣ
ಸನ್ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು

ಅಧ್ಯಕ್ಷತೆ

ಶ್ರೀ ಎಸ್. ಆರ್. ವಿಶ್ವನಾಥ್
ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಹಾಗೂ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಮುಖ್ಯ ಅತಿಥಿಗಳು

ಶ್ರೀ ಡಿ.ವಿ. ಸದಾನಂದ ಗೌಡ
ಮಾನ್ಯ ಸಂಸದರು
ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ

ಶ್ರೀ ಡಿ.ಕೆ. ಸುರೇಶ್
ಮಾನ್ಯ ಸಂಸದರು
ಬೆಂಗಳೂರು (ಗ್ರಾ) ಲೋಕಸಭಾ ಕ್ಷೇತ್ರ

ಶ್ರೀ ಬಿ. ಶಿವಣ್ಣ
ಮಾನ್ಯ ಶಾಸಕರು
ಆನೇಕಲ್ ವಿಧಾನಸಭಾ ಕ್ಷೇತ್ರ

ಶ್ರೀ ಕೆ. ನಾರಾಯಣ
ಮಾನ್ಯ ಸಂಸದರು
(ರಾಜ್ಯಸಭೆ)

ಶ್ರೀ ಲೆಹರ್ ಸಿಂಗ್ ಸಿರೋಯ
ಮಾನ್ಯ ಸಂಸದರು
(ರಾಜ್ಯಸಭೆ)

ಶ್ರೀ ಬಿ.ಎನ್. ಬಚ್ಚೇಗೌಡ
ಮಾನ್ಯ ಸಂಸದರು
ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ

ಶ್ರೀ ಕೃಷ್ಣ ಬೈರೇಗೌಡ
ಮಾನ್ಯ ಶಾಸಕರು
ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ

ಡಾ. ಎಲ್. ಹನುಮಂತಯ್ಯ
ಮಾನ್ಯ ಸಂಸದರು
(ರಾಜ್ಯಸಭೆ)

ಶ್ರೀ ಜಗ್ಗೇಶ್
ಮಾನ್ಯ ಸಂಸದರು
(ರಾಜ್ಯಸಭೆ)

ಶ್ರೀ ಜಯರಾಮ್ ರಮೇಶ್
ಮಾನ್ಯ ಸಂಸದರು
(ರಾಜ್ಯಸಭೆ)

ವಿಶೇಷ ಆಹ್ವಾನಿತರು

ಶ್ರೀ ಹೆಚ್.ಎಸ್. ಗೋಪಿನಾಥ್ ರೆಡ್ಡಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆಂಗಳೂರು ನಗರ ಜಿಲ್ಲೆ

ಶ್ರೀ ಅ. ದೇವೇಗೌಡ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆಂಗಳೂರು ನಗರ ಜಿಲ್ಲೆ

ಶ್ರೀ ಪುಟ್ಟಣ್ಣ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆಂಗಳೂರು ನಗರ ಜಿಲ್ಲೆ

ಆಹ್ವಾನಿತರು

ಶ್ರೀಮತಿ ಕಮಲಮ್ಮ ರೇವಣಸಿದ್ದೇಶ್ವರ
ಅಧ್ಯಕ್ಷರು
ಗೋಪಾಲಪುರ ಗ್ರಾಮ ಪಂಚಾಯತಿ

ಶ್ರೀ ವಿ. ಚಂದ್ರಶೇಖರ್
ಉಪಾಧ್ಯಕ್ಷರು, ಗೋಪಾಲಪುರ
ಗ್ರಾಮ ಪಂಚಾಯತಿ

ಶ್ರೀ ಕೆ. ವೀರಣ್ಣ
ಅಧ್ಯಕ್ಷರು
ರಾಜಾನುಕುಂಟೆ ಗ್ರಾಮ ಪಂಚಾಯತಿ

ಶ್ರೀಮತಿ ಅಂಬಿಕಾ ರಾಜೇಂದ್ರ್ ಕುಮಾರ್
ಉಪಾಧ್ಯಕ್ಷರು
ರಾಜಾನುಕುಂಟೆ ಗ್ರಾಮ ಪಂಚಾಯತಿ

ಶ್ರೀ ಬಿ. ರಮೇಶ್
ಅಧ್ಯಕ್ಷರು (ಪ್ರ) ಹಾಗೂ ಉಪಾಧ್ಯಕ್ಷರು
ಹುಸ್ಕೂರು ಗ್ರಾಮ ಪಂಚಾಯತಿ

ಶ್ರೀಮತಿ ಎನ್. ಸೌಭಾಗ್ಯಮ್ಮ
ಅಧ್ಯಕ್ಷರು
ದೊಡ್ಡಜಾಲಗ್ರಾಮ ಪಂಚಾಯತಿ

ಶ್ರೀಮತಿ ಗೀತಾ. ವಿ ಶಂಕರ್
ಉಪಾಧ್ಯಕ್ಷರು, ದೊಡ್ಡಜಾಲ ಗ್ರಾಮ ಪಂಚಾಯತಿ

ಶ್ರೀ ನಾರಾಯಣಸ್ವಾಮಿ
ಅಧ್ಯಕ್ಷರು, ಮುಗಳೂರು ಗ್ರಾಮ ಪಂಚಾಯತಿ

ಶ್ರೀಮತಿ ರೋಜಾ
ಉಪಾಧ್ಯಕ್ಷರು, ಮುಗಳೂರು ಗ್ರಾಮ ಪಂಚಾಯತಿ

ಹಾಗೂ ರಾಜಾನುಕುಂಟೆ ಗ್ರಾಮ ಪಂಚಾಯತಿ, ಗೋಪಾಲಪುರ ಗ್ರಾಮ ಪಂಚಾಯತಿ, ಹುಸ್ಕೂರು ಗ್ರಾಮ ಪಂಚಾಯತಿ, ದೊಡ್ಡಜಾಲಗ್ರಾಮ ಪಂಚಾಯತಿ, ಮುಗಳೂರು ಗ್ರಾಮ ಪಂಚಾಯತಿ ಸರ್ವ ಸದಸ್ಯರು

ಸರ್ವರಿಗೂ ಸುಸ್ವಾಗತ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದುಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಡಾ|| ಜಿ. ರವಿಶಂಕರ್ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ

ಡಾ|| ಬಸವರಾಜು. ಎಸ್ ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತ

ಕೆ. ಶ್ರೀನಿವಾಸ್ ಭಾ.ಆ.ಸೇ.
ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

ವರುಣನ ಅಬ್ಬರ: ತಪ್ಪದ ಆತಂಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಧಾರವಾಡ: ಧಾರಾಕಾರ ಮಳೆಯಿಂದಾಗಿ ತಾಲ್ಲೂಕಿನಲ್ಲಿ ಬೆಣ್ಣೆಹಳ್ಳದಲ್ಲಿ ಪ್ರವಾಹ ಬಂದಿದೆ. ಹಳ್ಳದಂಚಿನಲ್ಲಿರುವ ಕಿರೇಸೂರು, ಹೆಬಸೂರು, ಇಂಗಳಹಳ್ಳಿ ಸೇರಿದಂತೆ ಕೆಲ ಗ್ರಾಮಗಳು ಜಲಾವೃತಗೊಂಡಿವೆ.

ಕಿರೇಸೂರು ಗ್ರಾಮದಲ್ಲಿನ ದೇವಸ್ಥಾನ, ಪಂಚಾಯಿತಿ ಆವರಣದಲ್ಲಿ ಮಂಡಿಯುದ್ದ ನೀರು ನಿಂತಿದೆ. ಹೆಬಸೂರಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಜಲಾವೃತಗೊಂಡಿದ್ದವು. ಧಾರವಾಡ ಜಿಲ್ಲೆಯ ಪ್ರಸಿದ್ಧ ಅಮೃತೇಶ್ವರ ದೇಗುಲ ಜಲಾವೃತವಾಗಿದೆ. ನವಲಗುಂದ–ರೋಣ ಸಂಪರ್ಕ ಕಡಿತಗೊಂಡಿದೆ. ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಕೊಕಟನೂರು ಯಲ್ಲಮ್ಮ ದೇಗುಲ ಜಲಾವೃತಗೊಂಡಿದೆ.

ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಹಳ್ಳಿಕೇರಿ ನಾಗವ್ವ (50) ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಪತ್ತೆಗೆ ಶೋಧ ನಡೆದಿದೆ.

ಲಕ್ಷ್ಮೇಶ್ವರ ತಾಲ್ಲೂಕಿನ ಇಟ್ಟಿಗೇರಿಯಲ್ಲಿ ಮನೆ ಜಲಾವೃತಗೊಂಡಿದ್ದರಿಂದ ಬೇಸತ್ತ ಮಹಿಳೆ ಜಿಲ್ಲಾಧಿಕಾರಿ ಎದುರೇ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರು. ಸ್ಥಳೀಯರು ಆಕೆಯನ್ನು ರಕ್ಷಿಸಿದರು.

ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ ಅಗಸ್ತ್ಯ ತೀರ್ಥ ಹೊಂಡ ಕೋಡಿ ಬಿದ್ದಿದ್ದರೆ, ತಾಳಿಕೋಟೆ–ವಿಜಯಪುರ ಹಾಗೂ ತಾಳಿಕೋಟೆ –ಹಡಗಿನಾಳ ಸೇತುವೆಗಳು ಜಲಾವೃತವಾಗಿದ್ದವು.

ಧಾರವಾಡ ಜಿಲ್ಲೆಯ ನವಲಗುಂದ ಪಟ್ಟಣದ ಸಮೀಪ ಜಮೀನು ಬೆಣ್ಣೆಹಳ್ಳ ಪ್ರವಾಹದಿಂದ ಜಲಾವೃತಗೊಂಡಿರುವುದು
– ಪ್ರಜಾವಾಣಿ ಚಿತ್ರ: ಬಿ.ಎಂ. ಕೇದಾರನಾಥ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್*	124.80	124.76	21,775	28,591
ಹಾರಂಗಿ	2,859	2,856.55	1,835	1,600
ಕಬಿನಿ	2284	2,283.56	7,746	8,000
ಹೇಮಾವತಿ	2,922	2,922	10,595	10,600
ಲಿಂಗನಮಕ್ಕಿ	1,819	1,814	4,292	4,292
ಸೂಪಾ (ಮೀ)	564	550.90	8,215	310
ಮಾಣಿ	595	588	721	-
ತುಂಗಭದ್ರಾ	1,633	1,632.64	58,969	38,056
ಮಲಪ್ರಭಾ	2079.5	2,079.50	3,044	3,044
ಘಟಪ್ರಭಾ	2175	2,175	2,336	2,336
ಭದ್ರಾ	186	185	11,397	15,333
ಆಲಮಟ್ಟಿ (ಮೀ)	519.6	519.60	15,451	25,000
ನಾರಾಯಣಪುರ (ಮೀ)	492.25	492.15	45,000	40,800

* ನೆಲಮಟ್ಟದಿಂದ

ಮಳೆ: ಎಲ್ಲಿ, ಎಷ್ಟು? (ಸೆಂಟಿ ಮೀಟರ್‌ಗಳಲ್ಲಿ)

ಅಣ್ಣಿಗೇರಿ (ಧಾರವಾಡ)	15.3
ಗದಗ	12
ಶಿರಹಟ್ಟಿ	11
ಲಕ್ಷ್ಮೇಶ್ವರ	11
ಗಜೇಂದ್ರಗಡ	10
ಧವಳಗಿ	6.7
ನರಗುಂದ	6.4
ಮುದ್ದೇಬಿಹಾಳ	6

ಅಂತ್ಯಕ್ರಿಯೆಗೆ ಅಡ್ಡಿ

ಕಡೂರು: ದಾರಿ ಜಲಾವೃತಗೊಂಡ ಕಾರಣ ತಾಲ್ಲೂಕಿನ ಚಿಕ್ಕ ದೇವನೂರಿನ ಎಸ್. ಬೊಮ್ಮೇನಹಳ್ಳಿಯಲ್ಲಿ ಶವ ಸಾಗಿಸಲಾರದೇ ಕುಟುಂಬದವರು ಪರದಾಡಿದ್ದಾರೆ. ಪ್ರಮೋದ್ ಸೋಮವಾರ ಮೃತಪಟ್ಟಿದ್ದರು.

ಮಂಡಿಯ ವರೆಗೆ ಹರಿಯುತ್ತಿದ್ದ ನೀರಿನಲ್ಲೇ ಶವ ಪೆಟ್ಟಿಗೆ ಹೊತ್ತು ಒಯ್ದರು.

ತಗ್ಗಿದ ಅಬ್ಬರ

ಮೈಸೂರು: ಮೈಸೂರು ಭಾಗದ ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗಿನಲ್ಲಿ ಮಳೆ ಆರ್ಭಟ ಕಡಿಮೆಯಾಗಿದ್ದು, ಪ್ರವಾಹ ಪರಿಸ್ಥಿತಿ ಸುಧಾರಿಸಿದೆ.

ಕೊಳ್ಳೇಗಾಲ ತಾಲ್ಲೂಕಿನ ಮಧುವನಹಳ್ಳಿಯಲ್ಲಿ ಸೋಮವಾರ ರಾತ್ರಿ ದೊಡ್ಡರಂಗನಾಥನ ಕೆರೆ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಎಲೆಕೊಪ್ಪ ಮತ್ತು ಕಂಚಿಕೋಟೆ ಗ್ರಾಮದ ಕೆರೆಗಳ ಏರಿ ಒಡೆದಿವೆ.

ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನಲ್ಲಿ 50 ವರ್ಷಗಳ ನಂತರ ಮೊದಲ ಬಾರಿಗೆ ಸುವರ್ಣಾವತಿ ನದಿ ನೀರು ಯಳಂದೂರು ಪಟ್ಟಣದ ಹಲವೆಡೆ ಆವರಿಸಿತ್ತು. ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, 'ಆರೆಂಜ್ ಅಲರ್ಟ್' ಘೋಷಿಸಿದೆ.

ನಂದಿ ಕಣಿವೆಯಲ್ಲಿ ಭೂಕುಸಿತ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿಬೆಟ್ಟದ ಕಣಿವೆ ಬಸವೇಶ್ವರ ದೇಗುಲದ ಬಳಿಯ 'ಕಣಿವೆ' ಪ್ರದೇಶದ ಒಂದು ಬದಿಯಲ್ಲಿ ಭೂಮಿ ಕುಸಿದಿದೆ. ನಂದಿಗಿರಿಧಾಮದ ಅಲ್ಲಲ್ಲಿ ಸಣ್ಣ ಮಟ್ಟದಲ್ಲಿ ಮಣ್ಣು ಕಳಚಿದೆ.

ಸುಲ್ತಾನ್ ಪೇಟೆ ಮಾರ್ಗವಾಗಿ ದೊಡ್ಡಬಳ್ಳಾಪುರಕ್ಕೆ ತೆರಳುವ ರಸ್ತೆಗೆ ಅಡ್ಡಲಾಗಿ ಮಣ್ಣು ಕುಸಿದಿದ್ದು, ಈ ಮಾರ್ಗದಲ್ಲಿ ವಾಹನ ಸಂಚಾರ ಬಂದ್ ಮಾಡಲಾಗಿದೆ. ಮಣ್ಣು ತೆರವುಗೊಳಿಸುವ ಕಾಮಗಾರಿ ನಡೆಯುತ್ತಿದೆ.

ಚಿಕ್ಕಬಳ್ಳಾಪುರ – ದೊಡ್ಡಬಳ್ಳಾಪುರದ ಕಣಿವೆಯಲ್ಲಿ ಭೂಕುಸಿತ

ಮಳೆ ಮುಂದುವರಿದರೆ ಮತ್ತಷ್ಟು ಭೂಮಿ ಕುಸಿಯುವ ಆತಂಕ ಎದುರಾಗಿದೆ. ಕೊತ್ತನೂರಿನಲ್ಲಿ ಅಪಾರ ಪ್ರಮಾಣದ ನೀರು ಮನೆಗಳಿಗೆ ನುಗ್ಗಿದೆ. ಶಾಲೆ, ಡೇರಿ ಆವರಣ ಮುಳುಗಿದೆ.

ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಳೆ ಆರ್ಭಟ ಮುಂದುವರಿದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕಿನ ತಿರುಮಲಶೆಟ್ಟಿಯಲ್ಲಿ ಪ್ರವಾಹದಲ್ಲಿ ಸಿಲುಕಿದ್ದ 40 ಜನರನ್ನು ರಕ್ಷಣಾ ತಂಡ ಕಾಪಾಡಿದೆ.

'ಕಾಂಗ್ರೆಸ್ ದುರಾಡಳಿತ ಬೆಂಗಳೂರು ದುಃಸ್ಥಿತಿಗೆ ಕಾರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿನ ದುರಾಡಳಿತವೇ ಬೆಂಗಳೂರು ನಗರದ ಈಗಿನ ದುಃಸ್ಥಿತಿಗೆ ಕಾರಣ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನಗರದ ಕೆರೆಗಳ ಒಳಭಾಗ, ಕೆರೆಯಂಗಳ, ಕೆರೆ ಸುತ್ತಲಿನ ನಿರ್ಬಂಧಿತ ಪ್ರದೇಶ (ಬಫರ್ ಝೋನ್), ರಾಜಕಾಲುವೆಗಳ ಮೇಲೆ ಕಟ್ಟಡ ನಿರ್ಮಾಣಕ್ಕೆ ಕಾಂಗ್ರೆಸ್ ಸರ್ಕಾರಗಳ ಅವಧಿಯಲ್ಲಿ ಅನುಮತಿ ನೀಡಲಾಗಿತ್ತು.

> **ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ವರ್ಷವಾಗಿದೆ. ಅಂದಿನಿಂದ ಏನು ಮಾಡುತ್ತಿದ್ದರು**
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

ಹೀಗಾಗಿ, ನಗರದಲ್ಲಿ ಬೃಹತ್ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ' ಎಂದರು.

ಕೆರೆ, ಕಾಲುವೆ ಒತ್ತುವರಿ ಮಾಡಿ ಹಿಂದೆ ನಿರ್ಮಿಸಿರುವ ಕಟ್ಟಡಗಳ ತೆರವು ಕೆಲಸವನ್ನು ತಮ್ಮ ಸರ್ಕಾರ ಆರಂಭಿಸಿದೆ. ಈ ಕಾರ್ಯಾಚರಣೆ ಮುಂದುವರಿಯಲಿದೆ. ಎಲ್ಲ ಅಕ್ರಮ ನಿರ್ಮಾಣಗಳ ತೆರವು ಆಗಲಿದೆ ಎಂದು ಹೇಳಿದರು.

ಭೂಗಳ್ಳರ ಬೆಂಬಲಕ್ಕೆ ನಿಂತಿತ್ತು ಬಿಜೆಪಿ: ಸಿದ್ದರಾಮಯ್ಯ ಆರೋಪ

ಬೆಂಗಳೂರು: ತಮ್ಮ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಕೆರೆ, ಕಾಲುವೆಗಳ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುತ್ತಿದ್ದಾಗ ಭೂಗಳ್ಳರ ಬೆಂಬಲಕ್ಕೆ ನಿಂತಿದ್ದ ಬಿಜೆಪಿ, ಈಗ ಕಾಂಗ್ರೆಸ್ ವಿರುದ್ಧ ಆರೋಪ ಮಾಡುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

'ಬೆಂಗಳೂರಿನ ದುಃಸ್ಥಿತಿಗೆ ಕಾಂಗ್ರೆಸ್ ದುರಾಡಳಿತವೇ ಕಾರಣ' ಎಂಬ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರೋಪಕ್ಕೆ ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿರುವ ಅವರು, 'ಯಾವ ಮಾಹಿತಿಯೂ ಇಲ್ಲದೆ ಸುಳ್ಳು ಹೇಳಿಕೊಂಡು ಓಡಾಡಿದರೆ ಆಗುವುದಿಲ್ಲ. ಇವರ ಸರ್ಕಾರದ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆಗಳ ಗುಂಡಿ ಮುಚ್ಚಲೂ ಆಗದೆ ಹೈಕೋರ್ಟ್‌ನಿಂದ ಎಷ್ಟು ಬಾರಿ ಛೀಮಾರಿ ಹಾಕಿಸಿಕೊಂಡಿದ್ದಾರೆ ಎಂಬುದನ್ನು ಹೇಳಲಿ' ಎಂದಿದ್ದಾರೆ.

11,680 ಎಕರೆ ಸರ್ಕಾರಿ ಜಮೀನು ಒತ್ತುವರಿಯನ್ನು ತಮ್ಮ ಸರ್ಕಾರದ ಅವಧಿಯಲ್ಲಿ ತೆರವುಗೊಳಿಸಲಾಗಿತ್ತು. ಬಿಜೆಪಿ ಶಾಸಕರಾಗಿದ್ದ ಎಸ್. ಸುರೇಶ್ ಕುಮಾರ್ ಮತ್ತು ಜಗದೀಶ್ ಕುಮಾರ್ ಒತ್ತುವರಿದಾರರ ಬೆಂಬಲಕ್ಕೆ ನಿಂತು ಸರ್ಕಾರದ ಕಾರ್ಯಾಚರಣೆ ವಿರೋಧಿಸಿದ್ದರು. ಬಿಜೆಪಿ ಸರ್ಕಾರ ಒತ್ತುವರಿದಾರರಿಗೆ ಅನುಕೂಲ ಮಾಡಿಕೊಡಲು ಕಾನೂನು ತಿದ್ದುಪಡಿ ಮಾಡಿದೆ. ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕವನ್ನೂ ನೀಡಿ ಬೆಂಬಲಿಸುತ್ತಿದೆ ಎಂದು ಟೀಕಿಸಿದ್ದಾರೆ.

'ನಾನು ಮುಖ್ಯಮಂತ್ರಿಯಾಗಿದ್ದಾಗ 2014ರ ಸೆಪ್ಟೆಂಬರ್ 26ರಂದು ಬೆಂಗಳೂರಿನಲ್ಲಿ ಒಂದೇ ದಿನ 132 ಮಿಲಿ ಮೀಟರ್ ಮಳೆ ಬಿದ್ದಿತ್ತು. ಆಗ ಸರ್ಕಾರ ಕೈಗೊಂಡಿದ್ದ ಮುನ್ನೆಚ್ಚರಿಕೆ ಕ್ರಮಗಳಿಂದ ಹೆಚ್ಚು ತೊಂದರೆ ಆಗಿರಲಿಲ್ಲ. ಆದರೆ, ಕಳೆದ ಭಾನುವಾರ 131.6 ಮಿಲಿ ಮೀಟರ್ ಮಳೆ ಸುರಿದಿದ್ದರೂ ಭಾರಿ ಅನಾಹುತಗಳಾಗಿವೆ. ಬಿಜೆಪಿ ಸರ್ಕಾರದ ವೈಫಲ್ಯವೇ ಇದಕ್ಕೆ ಕಾರಣ' ಎಂದು ದೂರಿದ್ದಾರೆ.

'ಶಾಸಕರು ಯಾರು?'

'ಈಗ ಜಲಾವೃತವಾಗಿರುವ ಮಹದೇವಪುರ, ಬೊಮ್ಮನಹಳ್ಳಿ, ಕೆ.ಆರ್. ಪುರ ಭಾಗದಲ್ಲಿ ಎಷ್ಟು ವರ್ಷಗಳಿಂದ ಯಾವ ಪಕ್ಷದ ಶಾಸಕರು ಅಧಿಕಾರದಲ್ಲಿದ್ದಾರೆ ಎಂಬುದನ್ನು ಬೊಮ್ಮಾಯಿಯವರಿಗೆ ನೆನಪಿಸಬೇಕೆ' ಎಂದು ಸಿದ್ದರಾಮಯ್ಯ ಕುಟುಕಿದ್ದಾರೆ.

ಬೊಮ್ಮನಹಳ್ಳಿಯ ಸತೀಶ್ ರೆಡ್ಡಿಯವರು ಎಷ್ಟು ವರ್ಷದಿಂದ ಬಿಜೆಪಿ ಶಾಸಕರು? ಮಹದೇವಪುರದ ಅರವಿಂದ ಲಿಂಬಾವಳಿಯವರು ಎಷ್ಟು ವರ್ಷದಿಂದ ಆಯ್ಕೆಯಾಗುತ್ತಿದ್ದಾರೆ? ಕೆ. ಆರ್ ಪುರದ ನಂದೀಶ್ ರೆಡ್ಡಿ ಯಾವ ಪಕ್ಷದವರಾಗಿದ್ದರು? ಈಗಿರುವ ನಗರಾಭಿವೃದ್ಧಿ ಸಚಿವರಾದ ಬೈರತಿ ಬಸವರಾಜ ಯಾವ ಪಕ್ಷದಿಂದ ಆಯ್ಕೆಯಾಗಿದ್ದಾರೆ? ಇವರುಗಳೆಲ್ಲ ತಮ್ಮ ಕ್ಷೇತ್ರಗಳನ್ನು ಸರಿಪಡಿಸಿಕೊಳ್ಳಲು ಯಾವ ಪ್ರಯತ್ನ ಮಾಡಿದ್ದಾರೆ' ಎಂದೂ ಪ್ರಶ್ನಿಸಿದ್ದಾರೆ.



ದೋಸೆ ಸವಿದ ವಿಡಿಯೊ; ತೇಜಸ್ವಿ ನಡೆಗೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಟೆಲ್‌ನಲ್ಲಿ ದೋಸೆ ಸವಿದು, ಅದರ ಕುರಿತು ವಿಡಿಯೊ ಪ್ರಕಟಿಸಿದ್ದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಅವರನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಜನರು ತರಾಟೆಗೆ ತೆಗೆದುಕೊಂಡಿದ್ದಾರೆ.

ಪದ್ಮನಾಭನಗರದ ಹೋಟೆಲ್ ಒಂದರಲ್ಲಿ ಸೋಮವಾರ ದೋಸೆ ಸವಿದಿದ್ದ ತೇಜಸ್ವಿ, ಆ ಕುರಿತು ವಿಡಿಯೊ ತುಣುಕಿನಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದರು. ಅದನ್ನು ತಮ್ಮ ಅಧಿಕೃತ ಸಾಮಾಜಿಕ ಮಾಧ್ಯಮಗಳ ಖಾತೆಗಳಲ್ಲಿ ಹಂಚಿಕೊಂಡಿದ್ದರು.

'ಪದ್ಮನಾಭನಗರದ ಸಾತ್ವಿ ಕಿಚನ್‌ಗೆ ಬಂದಿದ್ದೆ. ಇನ್‌ಸ್ಟಾಗ್ರಾಂನಲ್ಲಿ ದೋಸೆಯ ಫೋಟೊ ನೋಡಿ ಟೆಂಪ್ಟ್ ಆಗಿ ಇಲ್ಲಿಗೆ ಬಂದಿದ್ದು. ತುಂಬಾ ಚೆನ್ನಾಗಿದೆ ಬೆಣ್ಣೆ ಮಸಾಲೆ. ನೀವೂ ಬನ್ನಿ, ತಿಂದಾಗಲೇ ಆಸ್ವಾದ ಗೊತ್ತಾಗುವುದು. ಉಪ್ಪಿಟ್ಟು ಬಹಳ ಚೆನ್ನಾಗಿದೆ ಬನ್ನಿ' ಎಂದೂ ವಿಡಿಯೊದಲ್ಲಿ ಆಹ್ವಾನ ನೀಡಿದ್ದರು.

ಈ ಕುರಿತು ಪ್ರತಿಕ್ರಿಯಿಸಿರುವ ಹಲವರು, 'ಮಳೆಯಿಂದ ಜನರು ಸಂಕಷ್ಟಪಡುತ್ತಿರುವಾಗ ಬೇಜವಾಬ್ದಾರಿ ಸಂಸದ ಹೋಟೆಲ್ ಒಂದರ ಪ್ರಚಾರ ಮಾಡುತ್ತಾ ದೋಸೆ ರುಚಿ ಸವಿಯುತ್ತಿದ್ದಾರೆ' ಎಂದು ಟೀಕಿಸಿದ್ದಾರೆ.

'ರೋಮ್‌ಗೆ ಬೆಂಕಿ ಬಿದ್ದಾಗ ದೊರೆ ನೀರೊ ಪಿಟೀಲು ಬಾರಿಸುತ್ತಿದ್ದ ಎಂಬುದು ಹಳೆಯ ಮಾತಾಗಿದೆ. ಬೆಂಗಳೂರಲ್ಲಿ ಪ್ರವಾಹವಾದಾಗ ನಮ್ಮ ದಕ್ಷಿಣದ ಸಂಸದ ಸಂಭ್ರಮ ಪಡುತ್ತಿದ್ದರು ಎಂಬುದು ಈಗಿನ ಮಾತಾಗಿದೆ' ಎಂದು ನಿತ್ಯಾನಂದ ಶೆಟ್ಟಿ ಫೇಸ್‌ಬುಕ್‌ನಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ವಾಗ್ದಾಳಿ

'ಮತಿ ದೋಷ ಇರುವವರನ್ನು ಆಯ್ಕೆ ಮಾಡಿದರೆ ಜನ ಮುಳುಗುವಾಗ ದೋಸೆ ತಿನ್ನಲು ಹೋಗುತ್ತಾರೆ. ಬೆಂಗಳೂರು ಮುಳುಗಿದೆ, ಜನತೆ ಪರದಾಡುತ್ತಿದ್ದಾರೆ. ಸಂಸದ ತೇಜಸ್ವಿ ಅವರಿಗೆ ದೋಸೆ ತಿನ್ನುವ ಟೆಂಪ್ಟ್ ಆಗಿದೆಯಂತೆ. ಮಕ್ಕಳಾಟ ಆಡಿಕೊಂಡಿದ್ದ ಅಪ್ರಬುದ್ಧರನ್ನು ಸಂಸದರನ್ನಾಗಿ ಆಯ್ಕೆಮಾಡಿದರೆ ಇನ್ನೇನು ನಿರೀಕ್ಷಿಸಲು ಸಾಧ್ಯ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾದ ಘಟನೆ

> 24 ಗಂಟೆಯೊಳಗೆ ವರದಿ ನೀಡುವಂತೆ ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥರಿಗೆ ಸೂಚಿಸಿದ್ದೇನೆ- ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ

ಪತಿಯ ಕೊಳೆತ ಕಾಲಿನ ಭಾಗ ಪತ್ನಿ ಕೈಗಿಟ್ಟ ಮಿಮ್ಸ್ ಸಿಬ್ಬಂದಿ

ಮಂಡ್ಯ: ತಾಲ್ಲೂಕಿನ ಕೀಲಾರ ಗ್ರಾಮದ ಪ್ರಕಾಶ್ ಎಂಬುವವರ ಕೊಳೆತ ಕಾಲಿನ ಭಾಗವನ್ನು ನಗರದ ಮಿಮ್ಸ್ ವೈದ್ಯರು ಶಸ್ತ್ರ ಚಿಕಿತ್ಸೆ ಮೂಲಕ ತೆಗೆದು, ಅವರ ಪತ್ನಿ ಭಾಗ್ಯಮ್ಮ ಅವರಿಗೆ ಕೊಟ್ಟು ಮಣ್ಣು ಮಾಡುವಂತೆ ಸೂಚಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಗ್ಯಾಂಗ್ರೀನ್‌ನಿಂದ ಬಳಲುತ್ತಿದ್ದ ಪ್ರಕಾಶ್ ಅವರನ್ನು ಶನಿವಾರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಂಪೂರ್ಣ ಕೊಳೆತಿದ್ದರಿಂದ ಮಂಗಳವಾರ ಶಸ್ತ್ರ ಚಿಕಿತ್ಸೆ ಮೂಲಕ ವೈದ್ಯರು ಕಾಲು ಕತ್ತರಿಸಿದ್ದರು. ನಂತರ ಅದನ್ನು ನಿಯಮಾನುಸಾರ ವಿಲೇವಾರಿ ಮಾಡದೆ, ಭಾಗ್ಯಮ್ಮ ಅವರಿಗೆ ನೀಡಿದ್ದರು.

ಪತಿಯ ಕೊಳೆತ ಕಾಲಿನ ಭಾಗವನ್ನು ಹಿಡಿದು ಕಣ್ಣೀರಿಟ್ಟ ಭಾಗ್ಯಮ್ಮ

ಅದರಿಂದ ಆಘಾತಕ್ಕೆ ಒಳಗಾದ ಭಾಗ್ಯಮ್ಮ ಆಸ್ಪತ್ರೆ ಮುಂಭಾಗ, ಗಂಡನ ಕತ್ತರಿಸಿದ ಕಾಲನ್ನು ಹಿಡಿದು ಕಣ್ಣೀರು ಹಾಕುತ್ತಿದ್ದರು.

ಈ ಕುರಿತು ಪ್ರತಿಕ್ರಿಯಿಸಿದ ಮಿಮ್ಸ್ ನಿರ್ದೇಶಕ ಡಾ.ಮಹೇಂದ್ರ, 'ರೋಗಿಯ ಮೊಣಕಾಲಿನ ಕೆಳ ಭಾಗವನ್ನು ತೆಗೆಯಲಾಗಿತ್ತು. ಅದನ್ನು ಡಿ ದರ್ಜೆ ನೌಕರರು ರೋಗಿಯ ಸಂಬಂಧಿಕರಿಗೆ ಕೊಟ್ಟಿದ್ದಾರೆ. ವಿಷಯ ಗಮನಕ್ಕೆ ಬಂದ ಕೂಡಲೇ, ಅದನ್ನು ವಾಪಸ್ ಪಡೆಯಲಾಗಿದೆ' ಎಂದು ತಿಳಿಸಿದರು.

104 ಕ್ಷೇತ್ರಗಳ ಪ್ರವಾಸ ಮುಂದೂಡಿಕೆ: ರವಿಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಳೆಯ ತೀವ್ರತೆ ಕಡಿಮೆ ಆದ ನಂತರ 104 ವಿಧಾನಸಭಾ ಕ್ಷೇತ್ರಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ನೇತೃತ್ವದ ಎರಡು ತಂಡಗಳ ಪ್ರವಾಸ ಆರಂಭವಾಗಲಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಈ ಮೊದಲು ತೀರ್ಮಾನಿಸಿದಂತೆ ಇದೇ 7 ರಿಂದ ಪ್ರವಾಸ ಆರಂಭವಾಗಬೇಕಿತ್ತು. ಮಳೆಯ ಕಾರಣದಿಂದಾಗಿ ಮುಂದೂಡಲಾಗಿದೆ. ಮಳೆ ಕಡಿಮೆ ಆದ ಬಳಿಕ ಹೊಸ ದಿನಾಂಕ ಪ್ರಕಟಿಸಲಾಗುವುದು ಎಂದು ಹೇಳಿದರು.

ಕೆಲವು ವಿಧಾನಸಭಾ ಕ್ಷೇತ್ರ ಪ್ರವಾಸ ಮತ್ತು ಸಮಾವೇಶಗಳಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾಗವಹಿಸಲಿದ್ದಾರೆ. ಹುಬ್ಬಳ್ಳಿ, ಬಳ್ಳಾರಿ, ಮೈಸೂರು, ಶಿವಮೊಗ್ಗ, ಬೆಂಗಳೂರು ಸೇರಿ ಪಾಲಿಕೆ ಇರುವ ಕಡೆಗಳಲ್ಲಿ ಪ್ರವಾಸ ನಡೆಯಲಿದೆ ಎಂದರು.

ಡಿಸೆಂಬರ್ 15 ರೊಳಗೆ 104 ಕ್ಷೇತ್ರಗಳ ಪ್ರವಾಸದ ಜತೆಗೆ, ರೈತ ಸಮಾವೇಶ, ಎಸ್‌ಸಿ ಸಮಾವೇಶ, ಒಬಿಸಿ ಸಮಾವೇಶ, ಯುವ ಸಮಾವೇಶ, ಮಹಿಳಾ ಸಮಾವೇಶ, ಎಸ್‌ಟಿ ಸಮಾವೇಶ ಮತ್ತು ಅಲ್ಪಸಂಖ್ಯಾತ ಸಮಾವೇಶ ಸೇರಿ ಒಟ್ಟು ಏಳು ಸಮಾವೇಶಗಳನ್ನೂ ಆಯೋಜಿಸಲಾಗಿದೆ ಎಂದು ರವಿಕುಮಾರ್ ಹೇಳಿದರು.

ಪಕ್ಷದ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಸಮಾವೇಶವನ್ನು ಸಂಘಟಿಸಲಿವೆ. ಪ್ರವಾಸ ಮತ್ತು ಸಮಾವೇಶದ ಯಶಸ್ವಿಗಾಗಿ ಪ್ರಭಾರಿಗಳನ್ನು ನೇಮಿಸಲಾಗಿದೆ. 150 ಕ್ಷೇತ್ರಗಳ ಗೆಲುವಿಗಾಗಿ ಕಾರ್ಯತಂತ್ರ ರೂಪಿಸಲಾಗಿದೆ ಎಂದು ಅವರು ಹೇಳಿದರು.

ಮುರುಘಾ ಶರಣರು ಲೈಂಗಿಕ ಕಿರುಕುಳ ನೀಡಿದ ಆರೋಪದ ಪ್ರಕರಣ

ತನಿಖೆಗೆ 5ನೇ ಆರೋಪಿ ಹಾಜರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರಿಗೆ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಲೈಂಗಿಕ ಕಿರುಕುಳ ನೀಡಿರುವ ಆರೋಪದ ಪ್ರಕರಣದ 5ನೇ ಆರೋಪಿಯಾಗಿರುವ ವಕೀಲ ಗಂಗಾಧರಯ್ಯ ಮಂಗಳವಾರ ತನಿಖಾಧಿಕಾರಿ ಎದುರು ಹಾಜರಾದರು.

ಗಂಗಾಧರಯ್ಯ

ಇಲ್ಲಿನ ಡಿವೈಎಸ್‌ಪಿ ಕಚೇರಿಯಲ್ಲಿ ಆರೋಪಿಯ ವಿಚಾರಣೆ ನಡೆಸಿದ ತನಿಖಾಧಿಕಾರಿ ಎಚ್.ಆರ್. ಅನಿಲ್ ಕುಮಾರ್, ಅಗತ್ಯವಿದ್ದಾಗ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ವಾಪಸ್ ಕಳುಹಿಸಿದರು.

'ಗಂಗಾಧರಯ್ಯ ತನಿಖಾಧಿಕಾರಿ ಎದುರು ಹಾಜರಾಗಿದ್ದರು. ಅವರ ವಿಚಾರಣೆ ನಡೆಸಿ, ಷರತ್ತು ವಿಧಿಸಿ ಕಳುಹಿಸಲಾಗಿದೆ' ಎಂದು ಎಸ್ಪಿ ಕೆ.ಪರಶುರಾಮ್ ತಿಳಿಸಿದ್ದಾರೆ.

ಪ್ರಕರಣ ದಾಖಲಾದ ಎರಡು ದಿನ ಶಿವಮೂರ್ತಿ ಮುರುಘಾ ಶರಣರೊಂದಿಗೆ ಮಠದಲ್ಲಿಯೇ ಇದ್ದ ಗಂಗಾಧರಯ್ಯ, ಆಗಸ್ಟ್ 28ರ ಬಳಿಕ ತಲೆಮರೆಸಿಕೊಂಡಿದ್ದರು. ತನಿಖಾಧಿಕಾರಿ ಎದುರು ಹಾಜರಾಗುವಂತೆ ಸೆಪ್ಟೆಂಬರ್ 5ರಂದು ನೋಟಿಸ್ ನೀಡಲಾಗಿತ್ತು. ಪ್ರಕರಣದಲ್ಲಿ 17 ವರ್ಷದ ಬಾಲಕ ಹಾಗೂ ಪರಮಶಿವಯ್ಯ ಅವರು ಇನ್ನಿಬ್ಬರು ಆರೋಪಿಗಳಾಗಿದ್ದು, ಅವರನ್ನು ವಿಚಾರಣೆಗೆ ಒಳಪಡಿಸಲಾಗಿಲ್ಲ.

ವಾರ್ಡನ್ ಪೊಲೀಸ್ ವಶಕ್ಕೆ

ಲೈಂಗಿಕ ಕಿರುಕುಳ ಪ್ರಕರಣದ ಎರಡನೇ ಆರೋಪಿ, ಹಾಸ್ಟೆಲ್‌ನ ಮಹಿಳಾ ವಾರ್ಡನ್‌ರನ್ನು ಹೆಚ್ಚಿನ ವಿಚಾರಣೆಗೆ ಪೊಲೀಸರು ಸೆ.8ರವರೆಗೆ ವಶಕ್ಕೆ ಪಡೆದಿದ್ದಾರೆ.

ಆ.31ರಂದು ನ್ಯಾಯಾಲಯಕ್ಕೆ ಹಾಜರಾದ ಆರೋಪಿಯನ್ನು ತನಿಖಾಧಿಕಾರಿಗಳು ಬಂಧಿಸಿದ್ದರು. ಭದ್ರತೆಯ ದೃಷ್ಟಿಯಿಂದ ಅವರನ್ನು ಶಿವಮೊಗ್ಗದ ಕಾರಾಗೃಹದಲ್ಲಿ ಇರಿಸಲಾಗಿತ್ತು.

ನ್ಯಾಯಾಲಯದ ಅನುಮತಿ ಪಡೆದ ಪೊಲೀಸರು, ಆರೋಪಿಯನ್ನು ಮಂಗಳವಾರ ಚಿತ್ರದುರ್ಗಕ್ಕೆ ಕರೆತಂದರು. ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಹಾಜರುಪಡಿಸಿ 6 ದಿನ ವಶಕ್ಕೆ ನೀಡುವಂತೆ ಮನವಿ ಮಾಡಿದರು. ಮೂರು ದಿನ ಪೊಲೀಸ್ ವಶಕ್ಕೆ ಒಪ್ಪಿಸಿ ನ್ಯಾಯಾಧೀಶೆ ಬಿ.ಕೆ.ಕೋಮಲಾ ಆದೇಶಿಸಿದರು.

ಜೈಲಲ್ಲಿ ಮೌನಕ್ಕೆ ಶರಣು

ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಜಿಲ್ಲಾ ಕಾರಾಗೃಹದಲ್ಲಿ ಮೌನಕ್ಕೆ ಶರಣಾಗಿದ್ದಾರೆ.

'ನಾಲ್ವರು ವಿಚಾರಣಾಧೀನ ಕೈದಿಗಳಿರುವ ಕೊಠಡಿಯಲ್ಲಿ ಅವರನ್ನು ಇರಿಸಲಾಗಿದೆ. ಮಂಗಳವಾರ ಬೆಳಿಗ್ಗೆ ಇಷ್ಟಲಿಂಗ ಪೂಜೆ ನೆರವೇರಿಸಿದ ಅವರು, ತಿಂಡಿ ಸ್ವೀಕರಿಸಿ ಪತ್ರಿಕೆಗಳನ್ನು ಓದಿದರು. ಗ್ರಂಥಾಲಯದಿಂದ ಕೆಲ ಪುಸ್ತಕಗಳನ್ನು ತರಿಸಿಕೊಂಡು ಓದುತ್ತಿದ್ದಾರೆ. ಹೆಚ್ಚಾಗಿ ಯಾರೊಂದಿಗೂ ಮಾತನಾಡದೇ ಮೌನವಾಗಿದ್ದಾರೆ' ಎಂದು ಮೂಲಗಳು ಮಾಹಿತಿ ನೀಡಿವೆ.

ನೇಗಿನಹಾಳ: ಮಠದ ಆವರಣದಲ್ಲೇ ಅಂತ್ಯಕ್ರಿಯೆ

ಬಸವಸಿದ್ಧಲಿಂಗ ಸ್ವಾಮೀಜಿ

ನೇಗಿನಹಾಳ (ಬೆಳಗಾವಿ ಜಿಲ್ಲೆ): ಬೈಲಹೊಂಗಲ ತಾಲ್ಲೂಕಿನ ನೇಗಿನಹಾಳ ಗ್ರಾಮದ ಗುರು ಮಡಿವಾಳೇಶ್ವರ ಶಿವಯೋಗಿ ಮಠದ ಬಸವಸಿದ್ಧಲಿಂಗ ಸ್ವಾಮೀಜಿ ಅವರ ಅಂತ್ಯಕ್ರಿಯೆ ಲಿಂಗಾಯತ ಸಂಪ್ರದಾಯದಂತೆ ಸಕಲ ವಿಧಿ, ವಿಧಾನಗಳಿಂದ ಮಂಗಳವಾರ ಮಧ್ಯಾಹ್ನ ಮಠದ ಆವರಣದಲ್ಲಿ ನೆರವೇರಿತು.

ಸೋಮವಾರ ರಾತ್ರಿಯಿಂದ ಮಂಗಳವಾರ ಮಧ್ಯಾಹ್ನದವರೆಗೆ ಅಪಾರ ಸಂಖ್ಯೆಯ ಭಕ್ತರು ಶ್ರೀಗಳ ಅಂತಿಮ ದರ್ಶನ ಪಡೆದರು. ನಂತರ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಾರ್ಥಿವ ಶರೀರದ ಮೆರವಣಿಗೆ ನಡೆಯಿತು. ದಾರಿಯುದ್ದಕ್ಕೂ ಕಿಕ್ಕಿರಿದು ಸೇರಿದ್ದ ಭಕ್ತರು ಕೈ ಮುಗಿದು, ಹೂವು ಮಾಲೆ ಅರ್ಪಿಸಿದರು. ಜೈಕಾರಗಳು ಮುಗಿಲು ಮುಟ್ಟಿದವು.

ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಗದಗ ಡಂಬಳದ ಡಾ.ಸಿದ್ಧರಾಮ ಸ್ವಾಮೀಜಿ, ಬೈಲೂರಿನ ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ, ಹೊಸೂರ ಗಂಗಾಧರ ಸ್ವಾಮೀಜಿ, ಯಕ್ಕುಂಡಿ ಪಂಚಾಕ್ಷರ ಸ್ವಾಮೀಜಿ, ಉಳವಿ ಬಸವಪೀಠದ ಬಸವಪ್ರಕಾಶ ಸ್ವಾಮೀಜಿ, ಶಿವಮೊಗ್ಗ, ದಾವಣಗೆರೆ ಬಸವಪ್ರಭು ಸ್ವಾಮೀಜಿ ಸೇರಿದಂತೆ ಸುತ್ತಮುತ್ತಲಿನ ಹಲವಾರು ಸ್ವಾಮೀಜಿಗಳು, ಶಾಸಕ ಮಹಾಂತೇಶ ದೊಡ್ಡಗೌಡರ, ಮಾಜಿ ಶಾಸಕ ಡಿ.ಬಿ. ಇನಾಮದಾರ, ಕಾಡಾ ಅಧ್ಯಕ್ಷ ಡಾ.ವಿಶ್ವನಾಥ ಪಾಟೀಲ ಹಾಗೂ ಊರಿನ ಗಣ್ಯರು ನೇತೃತ್ವ ವಹಿಸಿದ್ದರು.

ಮತೀಯ ಗೂಂಡಾಗಿರಿ; ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಇಲ್ಲಿನ ಖಾಸಗಿ ಬಸ್‌ನಿಲ್ದಾಣದಲ್ಲಿ ಹಿಂದೂ ಹಾಗೂ ಮುಸ್ಲಿಮ್ ಧರ್ಮದ ವಿದ್ಯಾರ್ಥಿಗಳು ಒಟ್ಟಿಗೆ ಕುಳಿತಿದ್ದಾರೆ ಎಂಬ ಕಾರಣಕ್ಕೆ ಗಲಾಟೆ ಮಾಡಿದ ಆರೋಪದ ಮೇರೆಗೆ ಇಬ್ಬರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ.

ವಿನಯ್ ಹಾಗೂ ಮನು ರೈ ಬಂಧಿತರು. ಯುವಕರು ನಡೆಸಿದ ಗಲಾಟೆ ಕಾರಣಕ್ಕೆ ಮನನೊಂದ ಯುವತಿಯು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದರು. ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಸದ್ಯ ಆರೋಗ್ಯವಾಗಿದ್ದಾರೆ.

'ಜಿಲ್ಲೆಯಲ್ಲಿ ಮತೀಯ ಗೂಂಡಾಗಿರಿಗೆ ಅವಕಾಶ ನೀಡುವುದಿಲ್ಲ. ಅಂಥ ಕೃತ್ಯ ಎಸಗುವ ಯಾವುದೇ ಧರ್ಮದವರನ್ನೂ ಬಿಡುವುದಿಲ್ಲ' ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಮಡಿಕೇರಿ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಢೇಸೂಗೂರು ಧಮ್ಕಿ; ಆಡಿಯೊ ವೈರಲ್

ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿ ವಿವಿಧೆಡೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ವ್ಯಕ್ತಿಯೊಬ್ಬರಿಗೆ ₹15 ಲಕ್ಷ ವಾಪಸ್ ಕೊಡುವ ಸಂಬಂಧ ನಡೆದ ಮಾತುಕತೆ ವೇಳೆ ಜಿಲ್ಲೆಯ ಕನಕಗಿರಿ ಕ್ಷೇತ್ರದ ಬಿಜೆಪಿ ಶಾಸಕ ಬಸವರಾಜ ದಢೇಸೂಗೂರು ಬೆದರಿಕೆ ಹಾಕಿದ ಮತ್ತೊಂದು ಆಡಿಯೊ ಮಂಗಳವಾರ ವೈರಲ್ ಆಗಿದೆ.

ಆಡಿಯೊದಲ್ಲಿ ದಢೇಸೂಗೂರು ಅವರು, 'ಪ್ರೆಸ್‌ಮೀಟ್ ಮಾಡ್ತಿಯಾ? ದೊಡ್ಡವರ ಮುಂದೆ ಹೋಗಿ ಹೇಳ್ತಿಯಾ? ಹೇಳು ಹೋಗು' ಎಂದಿದ್ದಾರೆ. ಅದಕ್ಕೆ ಅಕ್ಕಪಕ್ಕದಲ್ಲಿದ್ದವರು 'ಪತ್ರಿಕಾಗೋಷ್ಠಿ ಮಾಡಿದರೆ ಶಾಸಕರ ಮರ್ಯಾದೆ ಏನಾಗುತ್ತದೆ ಎನ್ನುವುದನ್ನು ತಿಳಿದು ಮಾತಾಡು' ಎಂದು ಪರಸಪ್ಪಗೆ ಹೇಳಿದ ಮಾತುಗಳು ದಾಖಲಾಗಿವೆ.

ಮೊದಲ ಆಡಿಯೊದಲ್ಲಿ ನಿವೃತ್ತ ಪೊಲೀಸ್ ಕಾನ್‌ಸ್ಟೆಬಲ್ ಪರಸಪ್ಪ ಅವರು ಶಾಸಕರಿಗೆ ದೂರವಾಣಿ ಕರೆ ಮಾಡಿ, 'ನನ್ನ ಮಗನ ಪಿಎಸ್‌ಐ ನೇಮಕಾತಿಗೆ ಕೊಟ್ಟ ₹15 ಲಕ್ಷ ಹಣ ವಾಪಸ್ ಕೊಡಿ' ಎಂದಿದ್ದಾರೆ. ಇದಕ್ಕೆ ಪ್ರತಿಯಾಗಿ ದಢೇಸೂಗೂರು 'ಹೌದು ನೀನು ದುಡ್ಡು ಕೊಟ್ಟಿದ್ದೀಯಾ. ಅದನ್ನು ಹೇಗೆ ಕೇಳಬೇಕು ಎನ್ನುವ ಸೌಜನ್ಯವಿಲ್ಲವಾ?' ಎಂದು ತರಾಟೆಗೆ ತೆಗೆದುಕೊಂಡಿದ್ದರು.

> **ಸಮಾಜದ ಹಿರಿಯನಾಗಿ ಇಬ್ಬರ ನಡುವಿನ ಸಮಸ್ಯೆ ಪರಿಹರಿಸಲು ಹೋಗಿದ್ದೆ. ಅದನ್ನೇ ಕೆಲವರು ಆಡಿಯೊ ಮಾಡಿ ಹಂಚಿದ್ದಾರೆ. ಇದರಲ್ಲಿ ನನ್ನ ಪಾತ್ರ ಏನೂ ಇಲ್ಲ.**
> **ಬಸವರಾಜ ದಢೇಸೂಗೂರು**
> ಶಾಸಕ, ಕನಕಗಿರಿ ಕ್ಷೇತ್ರ

'ಆತ ನಾನಲ್ಲ'

ಪತ್ರಿಕಾಗೋಷ್ಠಿ ನಡೆಸಿದ ಪರಸಪ್ಪ, 'ಶಾಸಕರ ಜೊತೆ ನನಗೆ ಯಾವುದೇ ಹಣಕಾಸು ವ್ಯವಹಾರವಿಲ್ಲ. ಆಡಿಯೊದಲ್ಲಿ ಮಾತನಾಡಿದ ವ್ಯಕ್ತಿ ನಾನಲ್ಲ' ಎಂದರು. ಮಂಗಳವಾರ ಬಿಡುಗಡೆಯಾದ ಇನ್ನೊಂದು ವಿಡಿಯೊದಲ್ಲೂ ಪರಸಪ್ಪ ಇದೇ ಮಾತನ್ನು ಪುನರುಚ್ಚರಿಸಿದ್ದಾರೆ.

ಪ್ರತಿಭಟನೆ: ದಢೇಸೂಗೂರು ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕನಕಗಿರಿ, ಕಾರಟಗಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಕೊಪ್ಪಳದಲ್ಲಿ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಶಾಸಕ: ಏನಪ್ಪ ಪ್ರೆಸ್‌ಮೀಟ್ ಮಾಡ್ತೀನಿ ಅಂದೆಯಂತಲ್ಲ?
ಪರಸಪ್ಪ: ಪ್ರೆಸ್‌ಮೀಟ್ ಅಂತ ನಾನು ಹೇಳಿಲ್ಲ ಸರ್. ದೊಡ್ಡವರ ಹತ್ತಿರ ಹೋಗ್ತೀನಿ ಎಂದಿದ್ದೇನೆ ಅಷ್ಟೇ.
ಶಾಸಕ: ಯಾರಪ್ಪ ದೊಡ್ಡವರು?
ಪರಸಪ್ಪ: ದೊಡ್ಡನಗೌಡ್ರ (ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ), ಸಂಸದರ ಹತ್ರ ಹೋಗ್ತೀನಿ.
ಶಾಸಕ: ಹೋಗಬೇಕಾಗಿತ್ತು.
ಪರಸಪ್ಪ: ನನಗೆ ಕಷ್ಟ ಐತಿ. ಹೋಗಿ ಅಂದ್ರ ಹೋಗ್ತಿನಿ ಸರ್.
ಶಾಸಕ: ಏ ಬೇಕೂಫ್, ಯಾವಾನ್ ಜೊತೆ ಮಾತಾಡ್ತೀಯಾ? ನಾನೇನ್ ಹಣ ತೆಗೆದುಕೊಂಡು ಬಾ ಎಂದು ನಿನಗೆ ಹೇಳಿದ್ದೆನಾ. ಯಾರ ಮರ್ಯಾದೆ ಕಳೆಯಬೇಕು ಎಂದು ಮಾಡಿದ್ದೀಯಾ? ನಿನ್ನ ಒದಿತೀನಿ ನೋಡಲೇ. ಪ್ರೆಸ್‌ಮೀಟ್ ಮಾಡಿ ದೊಡ್ಡತನ ತೋರಿಸಬೇಕು ಅಂದುಕೊಂಡಿದ್ದೀಯಾ.
ಪರಸಪ್ಪ: ಸರ್, ನನಗೂ ರಾಜಕಾರಣ ಗೊತ್ತಿದೆ. ಎರಡು ವರ್ಷ ನನ್ನ ಹಣಕ್ಕಾಗಿ ನಿಮ್ಮ ಹತ್ತಿರ ಅಲೆದಾಡಿದ್ದೇನೆ. ಕೈ ಕಾಲು ಬಿದ್ದಿದ್ದೇನೆ.
ಶಾಸಕ: ಮಗನೇ ನಿನಗೆ ಒದಿತೀನಿ. ಪ್ರೆಸ್‌ಮೀಟ್ ಮಾಡ್ತಿಯಾ?
ಪರಸಪ್ಪ: ನನಗೆ ಹೊಡಿತೀರಾ? ಹೊಡಿರೀ ನೋಡೋಣ. ನನಗೆ ಕಷ್ಟ ಇದೆ, ಕಾಲು ಬಿದ್ದು ಹಣ ವಾಪಸ್ ಕೊಡಿ ಅಂತ ಕೇಳಿದೀನಿ. ನಾನೂ ಪೊಲೀಸ್ ಇಲಾಖೆಯಲ್ಲಿ 30 ವರ್ಷ ಕೆಲಸ ಮಾಡಿ ಬಂದಿದ್ದೇನೆ. ನನಗೇ ಅವಾಚ್ಯ ಪದಗಳಿಂದ ಬೈಯ್ದರೆ ನಾನೇಕೆ ಕೇಳಲಿ? ದೊಡ್ಡನಗೌಡ್ರ ಅವರಿಂದ ಹೇಳಿಸಿದ್ದೇನೆ ಅಷ್ಟೇ.
ಶಾಸಕ: ನೀನು ಕೊಡೊ ಹಣದಿಂದ ಬದುಕುತ್ತೇನೆ ಅಂದುಕೊಂಡಿದ್ದೀಯಾ.
ಪರಸಪ್ಪ: ನನ್ನನ್ನು ಕರೆಯಿಸಿ ಹೊಡೆಯಬೇಕು ಎಂದು ಮಾಡಿದ್ದೀರಿ. ಹೊಡೆಯುವುದಾದರೆ ಹೊಡೆಯಿರಿ.
ಶಾಸಕ: ನಿನ್ನ ಹಣ ನಾನು ತಿಂದಿದ್ದೇನೆ ಅಂದುಕೊಂಡೆಯಾ? ಯಾರ ಹತ್ತಿರ ಬೇಕಾದರೂ ಹೋಗು. ಪ್ರೆಸ್‌ಮೀಟ್ ಮಾಡ್ತಿಯಾ, ಮಾಡು ಹೋಗು. ಒಂದು ಪೋಸ್ಟ್ ಕೇಳಿದಿಯಾ; ಹಣ ಬೇರೆಯವರ ಬಳಿಯಿದ್ದು ಬರಬೇಕಿದೆ. ಶಾಸಕನಾಗಿ ನೂರು ಜನರ ನೂರು ಕೆಲಸಗಳನ್ನು ಒಪ್ಪಿಕೊಂಡಿರುತ್ತೇನೆ. ಸಮಸ್ಯೆ ಇದೆ, ಹಣ ವಾಪಸ್ ಕೊಡಿ ಎಂದು ಕೇಳಿದರೆ ಒಂದೆರಡು ದಿನಗಳಲ್ಲಿ ಕೊಡುತ್ತಿದ್ದೆ.

'ರಿಯಲ್ ಎಸ್ಟೇಟ್ ಉದ್ಯಮಿಗೆ ಮಾತ್ರ ಟಿಕೆಟ್ ಏಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರಾಗಲು ರಿಯಲ್ ಎಸ್ಟೇಟ್ ಉದ್ಯಮಿಯೇ ಬೇಕೇ' ಎಂದು ನಟಿ ರಮ್ಯಾ ಅವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ರಮ್ಯಾ

'ನಗರದಲ್ಲಿರುವ ಶಾಸಕರು ಹಾಗೂ ಸಂಸದರಲ್ಲಿ ಎಷ್ಟು ಮಂದಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿದ್ದಾರೆ, ನಿಮಗೆ ಗೊತ್ತೇ? ಯಾರೋ ಹೇಳಿದರು, 28 ಶಾಸಕರಲ್ಲಿ 26 ಮಂದಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿದ್ದಾರಂತೆ. ಸಂಖ್ಯೆ ದಿಗ್ಭ್ರಮೆ ಮೂಡಿಸಿತು' ಎಂದು ನಟಿ ದಿವ್ಯಾ ಸ್ಪಂದನ (ರಮ್ಯಾ) ಟ್ವೀಟ್ ಮಾಡಿದ್ದಾರೆ.

'ಹಣ ಇರುವ ಜನರಿಗೆ (ಹೆಚ್ಚಾಗಿ ರಿಯಲ್ ಎಸ್ಟೇಟ್ ವ್ಯವಹಾರದವರು) ಮಾತ್ರ ಸ್ಪರ್ಧಿಸಲು ಟಿಕೆಟ್ ನೀಡಲಾಗುತ್ತದೆ ಏಕೆ? ಚುನಾವಣೆ ಆಯೋಗ ಒಬ್ಬ ಶಾಸಕನಿಗೆ ₹40 ಲಕ್ಷ ಮಾತ್ರ ವೆಚ್ಚ ಮಾಡಲು ಅನುಮತಿ ನೀಡುತ್ತದೆ. ಆದರೆ ಚುನಾವಣೆಗಳು ಕೋಟಿಗಳಲ್ಲಿ ನಡೆಯುತ್ತದೆ (ಈ ಬಗ್ಗೆ ಗಂಭೀರವಾಗಿ ಆಲೋಚಿಸಿರಿ). ಇದೆಲ್ಲದರ ಪರಿಣಾಮವೇ ಇದು...' ಎಂದಿದ್ದಾರೆ.

ಬುಧವಾರ, ಸೆಪ್ಟೆಂಬರ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 248 | ಪುಟ 16
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕನಿಷ್ಠ ಪಕ್ಷ ಒಂದು ವಾರವಾದರೂ ಇಬ್ಬರು ಗಗನಯಾತ್ರಿಗಳು ಚಂದ್ರನ ಮೇಲೆ ತಂಗುವಂತೆ ಮಾಡುವುದು ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶ



ಆಳ-ಅಗಲ
ಜೀವರಕ್ಷಕ ಸೀಟ್‌ಬೆಲ್ಟ್

ಇನ್ಫೊಸಿಸ್ ಜತೆ ಒಪ್ಪಂದ: 12,300 ಕೋರ್ಸ್‌ಗಳು ಉಚಿತ 5

ಭಾರತ–ಬಾಂಗ್ಲಾ: 7 ಒಪ್ಪಂದಗಳಿಗೆ ಸಹಿ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,196 ▼	17,655 ▼	₹ 52,460 (ಬೆಂಗಳೂರು) ▲	₹ 54,900 (ಬೆಂಗಳೂರು) ▲	79.82 ▼

ಅಕ್ರಮ ನೇಮಕ: 11 ಸಹ ಶಿಕ್ಷಕರ ಸೆರೆ

ಬೆಂಗಳೂರು: ಪ್ರೌಢಶಾಲೆಗಳ ಗ್ರೇಡ್–2 ಸಹ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಮೇಲೆ ಎರಡು ಎಫ್‌ಐಆರ್ ದಾಖಲಾಗಿದ್ದು, ಈ ಪ್ರಕರಣಗಳಲ್ಲಿ 11 ಸಹ ಶಿಕ್ಷಕರನ್ನು ಸಿಐಡಿ ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಅಕ್ರಮ ನಡೆದಿದ್ದು, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಬಿ.ಸಿ. ನಾಗೇಶ್ ಅವರು, ಸೆ.5ರಂದು ಹೇಳಿದ್ದರು.

8ನೇ ಪುಟ ನೋಡಿ

ಅಕ್ಟೋಬರ್‌ನಲ್ಲೇ ವೇತನ ಆಯೋಗ ರಚನೆ: ಸಿ.ಎಂ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಏಳನೇ ವೇತನ ಆಯೋಗವನ್ನು ಅಕ್ಟೋಬರ್‌ನಲ್ಲಿ ರಚನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಘೋಷಿಸಿದರು.

3

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮತ್ತಷ್ಟು ಮುಳುಗಿದ ಬೆಂಗಳೂರು ‘ಪೂರ್ವ’ ● ವಿವಿಧೆಡೆ ಮುಂದುವರಿದ ಅಬ್ಬರ

ತಗ್ಗದ ಮಳೆ, ಏಳು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಳೆ ಅಬ್ಬರ ಮಂಗಳವಾರವೂ ಇತ್ತು. ಈ ಸಂಬಂಧಿ ಅವಘಡಗಳಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಬಳ್ಳಾರಿ, ವಿಜಯನಗರದಲ್ಲಿ 55 ಮನೆಗಳು, ಧಾರವಾಡ ಜಿಲ್ಲೆಯಲ್ಲಿ 107 ಮನೆಗಳಿಗೆ ಹಾನಿಯಾಗಿದೆ.

ರಸ್ತೆ, ಜಮೀನು, ತಗ್ಗು ಪ್ರದೇಶಗಳಲ್ಲಿ ನೀರಿನ ಮಟ್ಟ ಹೆಚ್ಚುತ್ತಿದೆ. ಜೊತೆಗೆ ನಿವಾಸಿಗಳು, ಸಂತ್ರಸ್ತರ ಕಷ್ಟಗಳು ಹೆಚ್ಚುತ್ತಿವೆ. ಬೆಂಗಳೂರಿನಲ್ಲಿ ಸಂಜೆ ಮತ್ತು ರಾತ್ರಿ ಧಾರಾಕಾರವಾಗಿ ಮಳೆಯಾಗುತ್ತಿದೆ. ಐ.ಟಿ ಉದ್ಯಮ ಕೇಂದ್ರೀತ ಪ್ರದೇಶಗಳು ಸೇರಿ ಹೆಚ್ಚಿನ ಕಡೆ ರಸ್ತೆಗಳು ಜಲಾವೃತವಾಗಿವೆ.

ಬೆಂಗಳೂರಿನಲ್ಲಿ ಬಹುತೇಕ ಎಲ್ಲ ಪ್ರದೇಶದಲ್ಲಿ ಸೋಮವಾರ ಹಾಗೂ ಮಂಗಳವಾರ ರಾತ್ರಿಯೂ ಮಳೆ ಮುಂದುವರಿದಿದೆ. ಪೂರ್ವ ಭಾಗದ ಬಡಾವಣೆಗಳು ಕೆರೆಗಳಾಗಿದ್ದರೆ, ರಸ್ತೆಗಳು ಹೊಳೆಗಳ ರೂಪ ತಾಳಿವೆ. ಮಹದೇವಪುರ ವಲಯದಲ್ಲಿ 10 ಸೆಂ.ಮೀ ಮಳೆಯಾಗಿದ್ದು, ಬಡಾವಣೆಗಳು ಹಾಗೂ ರಸ್ತೆಗಳಲ್ಲಿ ನೀರಿನ ಮಟ್ಟ ಏರುತ್ತಲೇ ಇದೆ.

ಐಟಿ ಕಂಪನಿಗಳು ಬಹುತೇಕ ವರ್ಕ್ ಫ್ರಂ ಹೋಂ ವ್ಯವಸ್ಥೆ ಆರಂಭಿಸಿವೆ. ಸರ್ಜಾಪುರ ರಸ್ತೆ, ವರ್ತೂರು, ಬೆಳ್ಳಂದೂರು ಪ್ರದೇಶಗಳಲ್ಲಿ ಮಳೆ ಮಧ್ಯೆಯೇ ಬಿಬಿಎಂಪಿ ಸಿಬ್ಬಂದಿ ರಾಜಕಾಲುವೆ ತೆರವು ಮಾಡಿ ನೀರು ಹರಿಸಲು ಯತ್ನಿಸುತ್ತಿದ್ದಾರೆ. ಗದಗ, ಬಾಗಲಕೋಟೆ, ಬಳ್ಳಾರಿ, ವಿಜಯನಗರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಾಮ ರಾಜನಗರ ಜಿಲ್ಲೆಗಳಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟದ ಬಳಿ ಭೂಕುಸಿತವಾಗಿದ್ದು, ದೊಡ್ಡಬಳ್ಳಾಪುರ ಮತ್ತು ಚಿಕ್ಕ ಬಳ್ಳಾಪುರ ನಡುವಿನ ಸಂಚಾರ ವ್ಯತ್ಯಯವಾಗಿದೆ.

ರಾಜ್ಯದಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಚಾಮರಾಜನಗರ ಜಿಲ್ಲೆ ಕೆಸ್ತೂರು ಮತ್ತು ಬಾಗಲಕೋಟೆ ಜಿಲ್ಲೆ ಇಳಕಲ್ ತಾಲ್ಲೂಕಿನ ದಮ್ಮೂರಯಲ್ಲಿ ತಲಾ ಒಬ್ಬ ರೈತ ಹಾಗೂ ಹನೂರು ತಾಲ್ಲೂಕಿನ ಮಿಣ್ಯಂನಲ್ಲಿ ಕುರಿಗಾಹಿ ಸಿಡಿಲು ಬಡಿದು ಸತ್ತಿದ್ದಾರೆ. ಶಿವಮೊಗ್ಗದ ಮಲವಗೊಪ್ಪದಲ್ಲಿ ಗೋಡೆ ಕುಸಿದು ಗೌರಮ್ಮ (60), ಹಾವೇರಿ ಜಿಲ್ಲೆಯ ಶಿಶುವಿನಹಾಳ ಗ್ರಾಮದಲ್ಲಿ ಮನೆ ಕುಸಿದು ಯುವಕನೊಬ್ಬ ಮಂಗಳವಾರ ಮೃತಪಟ್ಟಿದ್ದಾರೆ. ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಸೋಮವಾರ ರಾತ್ರಿ ಮಳೆ ಸುರಿಯುವ ವೇಳೆ ವಿದ್ಯುತ್ ತಗುಲಿ ಅಖಿಲಾ ಎಂಬುವರು ಮೃತಪಟ್ಟಿದ್ದಾರೆ. ಗದಗ ಜಿಲ್ಲೆ ಗಜೇಂದ್ರಗಡದಲ್ಲಿ ಭದ್ರತೆಗೆ ನಿಯೋಜನೆ ಗೊಂಡು ಕೊಚ್ಚಿಹೋಗಿದ್ದ ಇಬ್ಬರು ಪೊಲೀಸರ ಪೈಕಿ ನಿಂಗಪ್ಪ ಅವರ ಶವ ಪತ್ತೆಯಾಗಿದ್ದು, ಮಹೇಶ ವಕ್ಕರದ ಅವರ ಪತ್ತೆಗೆ ಶೋಧ ನಡೆದಿದೆ. ಮುಂಡರಗಿ ತಾಲ್ಲೂಕಿನ ಹಳ್ಳಿಕೇರಿಯಲ್ಲಿ ಮಹಿಳೆ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದು, ಪತ್ತೆ ಕಾರ್ಯ ನಡೆದಿದೆ.

ಬೆಟಗೇರಿಯಲ್ಲಿ ವಿದ್ಯಾರ್ಥಿನಿ ಸುಮಯ್ಯಾ ಆಂಡೇವಾಲೆ ತಮ್ಮ ಮನೆಗೆ ನುಗ್ಗಿದ ಮಳೆನೀರಿನಿಂದ ಒದ್ದೆಯಾದ ಶಾಲಾಪುಸ್ತಕಗಳನ್ನು ಒಣಗಲು ಇಟ್ಟಿರುವುದು

ಬೆಂಗಳೂರು ಮುಳುಗಿಲ್ಲ; ಹಾಗೆ ಬಿಂಬಿಸುವ ಅವಶ್ಯವಿಲ್ಲ– ಮುಖ್ಯಮಂತ್ರಿ

ಮೈಸೂರು: ‘ಮಳೆ ನಮ್ಮನ್ನು ಕೇಳಿ ಬರುತ್ತದೆಯೇ? 80 ವರ್ಷಗಳಲ್ಲಿ ಆಗದಿರುವಷ್ಟು ಒಮ್ಮೆಲೇ ಸುರಿದಿದೆ. ಇಡೀ ಬೆಂಗಳೂರು ಮುಳುಗಿ ಹೋಗಿಲ್ಲ. ಎಲ್ಲವೂ ಮುಳುಗಿದೆ ಎಂದು ಬಿಂಬಿಸುವ ಅವಶ್ಯಕತೆಯೂ ಇಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ನಿರಂತರ ಮಳೆಯಿಂದಾಗಿ ಬೆಂಗಳೂರಿನ ಎಂಟು ವಲಯಗಳಲ್ಲಿ ಎರಡರಲ್ಲಿ ಸ್ವಲ್ಪ ಸಮಸ್ಯೆಯಾಗಿದೆ. ಬೊಮ್ಮನಹಳ್ಳಿ ವಲಯ ನಿಯಂತ್ರಣದಲ್ಲಿದೆ. ಮಹದೇವಪುರ ವಲಯದ 69 ಕೆರೆ ಸೇರಿ ಬೆಂಗಳೂರಿನಲ್ಲಿ 164 ಕೆರೆಗಳು ತುಂಬಿವೆ’ ಎಂದರು.

8ನೇ ಪುಟ ನೋಡಿ

ಹೃದಯಾಘಾತ: ಸಚಿವ ಉಮೇಶ್ ಕತ್ತಿ ನಿಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅರಣ್ಯ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಉಮೇಶ್ ವಿ. ಕತ್ತಿ (62) ಅವರು ಹೃದಯಾಘಾತದಿಂದ ಮಂಗಳವಾರ ರಾತ್ರಿ ನಿಧನರಾದರು.

ರಾತ್ರಿ ಶೌಚಾಲಯಕ್ಕೆ ತೆರಳಿದ್ದ ಅವರು ಅಲ್ಲಿಯೇ ಕುಸಿದು ಬಿದ್ದಿದ್ದರು. 10 ನಿಮಿಷಗಳಾದರೂ ಹೊರ ಬರದಿದ್ದಾಗ ಕುಟುಂಬದವರು ಬಾಗಿಲು ತೆರೆದು ಒಳಹೋದಾಗ ಅಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬಂದಿತ್ತು. ಬಳಿಕ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ತೀವ್ರನಿಗಾ ಘಟಕದಲ್ಲಿ ಇರಿಸಲಾಗಿತ್ತು. ತಡರಾತ್ರಿ ವೇಳೆಗೆ ಉಮೇಶ ಕತ್ತಿ ಕೊನೆಯುಸಿರೆಳೆದರು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ. ಉಮೇಶ್ ಕತ್ತಿ ಅವರಿಗೆ ಪತ್ನಿ ಶೀಲಾ, ಮಗ ನಿಖಿಲ್, ಮಗಳು ಸ್ನೇಹಾ ಇದ್ದಾರೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ 1960ರ ಮಾರ್ಚ್ 14ರಂದು ಜನಿಸಿದ್ದ ಉಮೇಶ್ ಅವರು ಬಿ.ಎ. ಪದವಿ ಪಡೆದಿದ್ದರು. ಹುಕ್ಕೇರಿ ವಿಧಾನಸಭಾ ಕ್ಷೇತ್ರದಿಂದ 1985ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದ ಅವರು, ಇದೇ ಕ್ಷೇತ್ರವನ್ನು ಹಲವು ಬಾರಿ ಪ್ರತಿನಿಧಿಸಿದ್ದರು.

14-3-1960: 6-9-2022

3Dನೇ ಪುಟ ನೋಡಿ

ಎನ್‌ಎಸ್‌ಇ ಮಾಜಿ ಸಿಇಒ ರವಿ ನಾರಾಯಣ ಬಂಧನ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್‌ನ ಮಾಜಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಹಾಗೂ ವ್ಯವಸ್ಥಾಪಕ ನಿರ್ದೇಶಕ ರವಿ ನಾರಾಯಣ್ ಅವರನ್ನು ಜಾರಿ ನಿರ್ದೇಶನಾಲಯ ಮಂಗಳವಾರ ಬಂಧಿಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಟ್ಯಾಪಿಂಗ್ ಪ್ರಕರಣದಲ್ಲಿ ನಾರಾಯಣ್ ಅವರನ್ನು ಬಂಧಿಸಲಾಗಿದೆ ಎಂದು ತಿಳಿದುಬಂದಿದೆ.

ಅವರು 1994ರ ಏಪ್ರಿಲ್‌ನಿಂದ 2013ರ ಮಾರ್ಚ್ 31ರವರೆಗೆ ಎನ್‌ಎಸ್‌ಇಯ ಕಾರ್ಯ ನಿರ್ವಾಹಕ ಅಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದರು. ಆ ಬಳಿಕ 2013ರಿಂದ 2017ರವರೆಗೆ ಅವರನ್ನು ಕಾರ್ಯನಿರ್ವಹಕೇತರ ಉಪ ಮುಖ್ಯಸ್ಥರಾಗಿ ನೇಮಕವಾಗಿದ್ದರು.

ಇದಕ್ಕೂ ಮುಂಚೆ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಇ.ಡಿ ಅಧಿಕಾರಿಗಳು ಎನ್‌ಎಸ್‌ಇಯ ಮಾಜಿ ವ್ಯವಸ್ಥಾಪಕ ನಿರ್ದೇಶಕಿ ಮತ್ತು ಸಿಇಒ ಚಿತ್ರಾ ರಾಮಕೃಷ್ಣನ್ ಅವರನ್ನು ಬಂಧಿಸಿತ್ತು.

ಅಲ್ಲದೆ, ಮುಂಬೈ ಮಾಜಿ ಪೊಲೀಸ್ ಆಯುಕ್ತ ಸಂಜಯ್ ಪಾಂಡೆ ಅವರನ್ನು ಸಹ ಅಕ್ರಮ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಇ.ಡಿ ಬಂಧಿಸಿತ್ತು.

ವರದಿ ನೀಡಿದ ಮೂರು ತಿಂಗಳ ಬಳಿಕ ಘಟನೋತ್ತರ ಅನುಮೋದನೆ

ಅಸ್ತಿತ್ವದಲ್ಲೇ ಇಲ್ಲದ ಸಮಿತಿಯಿಂದ ವಾರ್ಡ್ ಮರುವಿಂಗಡಣೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಅಸ್ತಿತ್ವದಲ್ಲೇ ಇಲ್ಲದ ವಾರ್ಡ್ ಮರು ವಿಂಗಡಣಾ ಸಮಿತಿ ನೀಡಿದ ವರದಿ ಆಧರಿಸಿ ಸರ್ಕಾರ ವಾರ್ಡ್‌ಗಳ ಮರು ವಿಂಗಡಣೆ ಮಾಡಿದ್ದು, ಇದನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲು ಕಾಂಗ್ರೆಸ್ ತಯಾರಾಗಿದೆ.

ವಾರ್ಡ್‌ಗಳ ಮರು ವಿಂಗಡಣೆಗೆ 2021ರ ಜನವರಿ 29ರಂದು ಪಾಲಿಕೆ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದ ಸರ್ಕಾರ, ಆರು ತಿಂಗಳ ಅವಧಿ ನಿಗದಿ ಮಾಡಿತ್ತು. ಕೋವಿಡ್ ಸಾಂಕ್ರಾಮಿಕದ ಕಾರಣ ನೀಡಿ ಇನ್ನಷ್ಟು ಕಾಲಾವಕಾಶ ನೀಡಲು ಮುಖ್ಯ ಆಯುಕ್ತರು ಮನವಿ ಮಾಡಿದ್ದರು.

ಅದರಂತೆ 2021ರ ಜುಲೈ 28ರಂದು ಮತ್ತೊಂದು ಆದೇಶ ಹೊರಡಿಸಿದ ಸರ್ಕಾರ ಆರು ತಿಂಗಳ ಅವಧಿ ನೀಡಿತ್ತು. ಆ ಅವಧಿಯಲ್ಲೂ ವರದಿ ಸಿದ್ಧವಾಗದೆ ಮತ್ತೆ ಎರಡು ತಿಂಗಳ ಅವಧಿ ನೀಡಿ 2022ರ ಜನವರಿ 28ರಂದು ಆದೇಶ ಹೊರಡಿಸಿತ್ತು.

ಈ ಅವಧಿಯು ಮಾರ್ಚ್ 28ಕ್ಕೆ ಮುಕ್ತಾಯವಾಗಿದ್ದು, ಬಳಿಕ ಸಮಿತಿ ಅಸ್ತಿತ್ವ ಕಳೆದುಕೊಂಡಿತ್ತು. ಆ ನಂತರ ವರದಿ ಸಿದ್ಧಪಡಿಸಿದ ಮುಖ್ಯ ಆಯುಕ್ತರು, ಜೂನ್ 9ರಂದು ಸರ್ಕಾರಕ್ಕೆ ಸಲ್ಲಿಸಿದರು. ಅದೇ ವರದಿ ಆಧರಿಸಿ ಕರಡು ಪ್ರಕಟಿಸಿದ್ದ ನಗರಾಭಿವೃದ್ಧಿ ಇಲಾಖೆ, ಆಕ್ಷೇಪಣೆಗೆ ಅವಕಾಶ ನೀಡಿತ್ತು. ಬಳಿಕ ಅಧಿಸೂಚನೆ ಹೊರಡಿಸಿ ವಾರ್ಡ್‌ಗಳ ಮರು ವಿಂಗಡಣೆಯನ್ನು ಅಧಿಕೃತಗೊಳಿಸಿತು. ಆ ಮೂಲಕ ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ 198ರಿಂದ 243ಕ್ಕೆ ಏರಿಕೆಯಾಗಿದೆ.

ಈ ಪ್ರಕ್ರಿಯೆಗಳೆಲ್ಲವೂ ಮುಗಿದ ಬಳಿಕ ಆಗಸ್ಟ್ 28ರಲ್ಲಿ ಅಧಿಸೂಚನೆ ಹೊರಡಿಸಿರುವ ಸರ್ಕಾರ, ಸಮಿತಿಗೆ ಘಟನೋತ್ತರ ಅನುಮೋದನೆ ನೀಡಿದೆ. ಜೂನ್ ತಿಂಗಳ ಅಂತ್ಯದ ತನಕ ಸಮಿತಿಯ ಅವಧಿಯನ್ನು ವಿಸ್ತರಿಸಿದೆ. ಅಸ್ತಿತ್ವದಲ್ಲೇ ಇಲ್ಲದ ಸಮಿತಿ ನೀಡಿರುವ ವರದಿಯ ಶಿಫಾರಸು ಆಧರಿಸಿ ಮಾಡಿರುವ ವಾರ್ಡ್ ವಿಂಗಡಣೆಯ ಸಿಂಧುತ್ವ ಪ್ರಶ್ನಿಸಿ ನ್ಯಾಯಾಲಯದ ಮೊರೆಹೋಗಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ನ್ಯಾಯಾಲಯದಲ್ಲಿ ಪ್ರಶ್ನೆ: ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ

'ಅಸ್ತಿತ್ವದಲ್ಲೇ ಇಲ್ಲದ ಸಮಿತಿ ನೀಡಿರುವ ವರದಿ ಆಧರಿಸಿ ಮಾಡಿರುವ ವಾರ್ಡ್‌ಗಳ ಮರು ವಿಂಗಡಣೆ ಸಂಪೂರ್ಣ ಅಸಿಂಧು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು.

'ಅವಧಿ ಮುಗಿದಿದ್ದ ಸಮಿತಿಗೆ ವರದಿ ನೀಡಲು ಯಾವ ಅಧಿಕಾರವೂ ಇಲ್ಲ. ವರದಿ ನೀಡುವ ಮುನ್ನ ಅವಧಿ ವಿಸ್ತರಣೆ ಮಾಡಿದ್ದರೆ ಅದಕ್ಕೆ ಮೌಲ್ಯ ಇರುತ್ತಿತ್ತು. ಈಗ ನೀಡಿರುವ ವರದಿಗೆ ಯಾವುದೇ ಮೌಲ್ಯ ಇಲ್ಲ' ಎಂದರು.

'ವರದಿ ನೀಡಿದ ಮೂರು ತಿಂಗಳ ಬಳಿಕ ಘಟನೋತ್ತರ ಅನುಮೋದನೆಯನ್ನು ಸರ್ಕಾರ ನೀಡಿದೆ. ವರದಿಯ ಸಿಂಧುತ್ವವನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗುತ್ತಿದ್ದು, ವಾರ್ಡ್ ಮರು ವಿಂಗಡಣೆಯನ್ನು ಸಂಪೂರ್ಣ ರದ್ದುಪಡಿಸಬೇಕು ಎಂದು ಮನವಿ ಮಾಡಲಾಗುತ್ತಿದೆ' ಎಂದು ಹೇಳಿದರು.

ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಶಿಕ್ಷಣ ಕರ್ನಾಟಕ ಕೋಲಾರ ಜಿಲ್ಲೆ, ಕೋಲಾರ.

ಸಂಖ್ಯೆ:ಅ1 ಸಶಿಕ/ಐ.ಸಿ.ಟಿ.03/2022–23 ದಿನಾಂಕ:01.09.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಕರ್ನಾಟಕ ಕೋಲಾರ ಜಿಲ್ಲೆ ಯೋಜನೆಯಡಿ 2022–23ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ 6 ಶಾಲೆಗಳಿಗೆ ಐ.ಸಿ.ಟಿ. ಫೇಸ್ ಚಟುವಟಿಕೆಯುಡಿಯಲ್ಲಿ ಕಂಪ್ಯೂಟರ್, ಲ್ಯಾಪ್‌ಟಾಪ್, ಯು.ಪಿ.ಎಸ್. ಪ್ರೊಜೆಕ್ಟರ್ ಸಾಮಗ್ರಿಗಳನ್ನು ಖರೀದಿಸಲು ಅರ್ಹ ಏಜೆನ್ಸಿಗಳಿಂದ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು ಹೆಚ್ಚಿನ ಮಾಹಿತಿಗಾಗಿ www.eprocurement.karnataka.gov.in ವೀಕ್ಷಿಸಿ. (1) **ಚಟುವಟಿಕೆ:** ಕೋಲಾರ ಜಿಲ್ಲೆಯ 6 ಶಾಲೆಗಳಿಗೆ ಐ.ಸಿ.ಟಿ. ಫೇಸ್ ಚಟುವಟಿಕೆಯಡಿಯಲ್ಲಿ ಕಂಪ್ಯೂಟರ್, ಲ್ಯಾಪ್‌ಟಾಪ್, ಯು.ಪಿ.ಎಸ್. ಪ್ರೊಜೆಕ್ಟರ್ ಸಾಮಗ್ರಿಗಳನ್ನು ಖರೀದಿಸಲು. (2) ಇ–ಟೆಂಡರ್‌ನ ಅಂದಾಜು ಮೊತ್ತ: **ರೂ.34.20 ಲಕ್ಷಗಳು** (3) ಇ–ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 15.09.2022ರ ಸಂಜೆ 5.30 ಘಂಟೆವರೆಗೂ** (4) ಇಲಾಖೆಯ ವೆಬ್‌ಸೈಟ್: **www.eprocurement.karnataka.gov.in**

ಸಹಿ/– ಉಪ ನಿರ್ದೇಶಕರು ಹಾಗೂ
ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ273/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅರ್ಜಿ ಆಹ್ವಾನ

ಬೆಂಗಳೂರು: ಅರಿವು ಟ್ರಸ್ಟ್ ಸಾಹಿತ್ಯ ಬಳಗವು 'ಸಂಗಂ' ಸಾಹಿತ್ಯ ರಾಷ್ಟ್ರೀಯ ಪುರಸ್ಕಾರ–2022ಕ್ಕೆ ಅರ್ಜಿ ಸಲ್ಲಿಸಲು ಕವನ ಸಂಕಲನಗಳನ್ನು ಆಹ್ವಾನಿಸಿದೆ.

2020, 2021 ಮತ್ತು 2022ನೇ ಸಾಲಿನಲ್ಲಿ ಪ್ರಥಮ ಮುದ್ರಣ ಕಂಡ ಕವನ ಸಂಕಲನಗಳನ್ನು ಆಯ್ಕೆಗೆ ಪರಿಗಣಿಸಲಾಗುತ್ತದೆ. ಆಸಕ್ತರು ಸೆಪ್ಟೆಂಬರ್ 25ರೊಳಗೆ ಕವನ ಸಂಕಲನದ 4 ಪ್ರತಿಗಳನ್ನು ಅರಿವು, 004 ಮರ್ಚೆಂಡ್ ರೀನೋ, 2ನೇ ಅಡ್ಡರಸ್ತೆ, ಗಾಂಧಿನಗರ, ಬಳ್ಳಾರಿ–583103 ವಿಳಾಸಕ್ಕೆ ಕಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ 9449622737 ಸಂಪರ್ಕಿಸಿ.

ಅ.12ಕ್ಕೆ ಅಂತರರಾಷ್ಟ್ರೀಯ ಸಾರಿಗೆ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೊಸೈಟಿ ಆಫ್ ಆಟೊಮೊಟಿವ್ ಎಂಜಿನಿಯರ್ಸ್ ಇಂಡಿಯಾ' ವತಿಯಿಂದ ಅ. 12ರಿಂದ 14ರವರೆಗೆ ಬೆಂಗಳೂರಿನಲ್ಲಿ 'ಅಂತರರಾಷ್ಟ್ರೀಯ ಸಾರಿಗೆ ಸಮ್ಮೇಳನ'(ಎಸ್‌ಐಐಎಂಸಿ) ನಡೆಯಲಿದೆ.

ಸಂಚಾರಕ್ಕೆ ಸಂಬಂಧಿಸಿದ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ 'ಎಸ್‌ಎಇ ಇಂಡಿಯಾ' ಸಂಸ್ಥೆಯ 10ನೇ ಆವೃತ್ತಿಯ ಸಮ್ಮೇಳನ ಇದಾಗಿದೆ.

ಮೂರು ದಿನಗಳ ಈ ಸಮ್ಮೇಳನದಲ್ಲಿ ಸುಸ್ಥಿರ ಬಹುಮಾದರಿಯ ಸಂಚಾರಸ್ನೇಹಿ ವ್ಯವಸ್ಥೆ ಸೇರಿ ವಿವಿಧ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ.

ಭವಿಷ್ಯದಲ್ಲಿ ಎದುರಾಗಲಿರುವ ಸಂಚಾರ ಸಮಸ್ಯೆಗಳು ಮತ್ತು ತಂತ್ರಜ್ಞಾನ ಆಧಾರಿತ ಪರಿಹಾರಗಳ ಕುರಿತು 700ಕ್ಕೂ ಅಧಿಕ ತಜ್ಞರು, ಉದ್ಯಮಿಗಳು, ಮೊಬಿಲಿಟಿ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೃತ್ತಿಪರರು, ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು 'ಎಸ್‌ಎಇ ಇಂಡಿಯಾ' ನಿಕಟಪೂರ್ವ ಅಧ್ಯಕ್ಷ ಡಾ.ಬಾಲಾ ಭಾರದ್ವಾಜ್ ಮಂಗಳವಾರ ತಿಳಿಸಿದರು.

ನಗರಗಳು ಬೆಳೆದಂತೆ ಸಂಚಾರ ವ್ಯವಸ್ಥೆಯು ಪ್ರಮುಖ ಭಾಗವಾಗಿದೆ. ನಾಗರಿಕರ ಅಗತ್ಯಗಳನ್ನು ಪೂರೈಸಿಕೊಳ್ಳುವ ಭರದಲ್ಲಿ ಪರಿಸರಕ್ಕೆ ಹಾನಿಯಾಗದಂತೆ ಎಚ್ಚರ ವಹಿಸುವುದು ಸಹ ಮುಖ್ಯವಾಗಿದೆ. ಪ್ರಸ್ತುತ ಮತ್ತು ಭವಿಷ್ಯದ ಸುಸ್ಥಿರ ಸಂಚಾರದ ಬಗ್ಗೆ ಚರ್ಚೆಗೆ ಮೂರು ದಿನಗಳು ನಡೆಯಲಿರುವ ಸಮ್ಮೇಳನ ಉತ್ತಮ ವೇದಿಕೆ ಕಲ್ಪಿಸಲಿದೆ ಎಂದು ಹೇಳಿದರು.

'ಸ್ವಿಚ್ ಮೊಬಿಲಿಟಿ ಇಂಡಿಯಾ' ಮತ್ತು 'ಎಸ್‌ಐಐಎಂಸಿ– 2022'ರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹೇಶ್ ಬಾಬು ಮಾತನಾಡಿ, 'ವಾತಾವರಣದಲ್ಲಿ ಮಾಲಿನ್ಯ ಉಂಟು ಮಾಡುವ ಅತಿದೊಡ್ಡ ಉದ್ಯಮ ಸಾರಿಗೆ. ಹೀಗಾಗಿ, ಸುಸ್ಥಿರ ಮತ್ತು ಪರಿಸರಸ್ನೇಹಿ ಸಂಚಾರ ವ್ಯವಸ್ಥೆ ಅಗತ್ಯವಾಗಿದೆ. ಇತರ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಸಮೂಹ ಸಾರಿಗೆಗೆ ನೀರಸ ಸ್ಪಂದನ ಇದೆ. ಇದಕ್ಕೆ ಹಲವು ಕಾರಣಗಳಿವೆ ಎಂದು ತಿಳಿಸಿದರು.

ಎಸ್‌ಎಇ ಇಂಡಿಯಾ ಬೆಂಗಳೂರು ವಿಭಾಗದ ಅಧ್ಯಕ್ಷ ದಾಮೋದರನ್, ಪದಾಧಿಕಾರಿಗಳಾದ ಮುನಿರತ್ನಂ ಧನಂಜಯನ್ ಇದ್ದರು.

ಗುಜರಾತ್ ಪೆಟ್ರೋಸಿಂಥೆಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು – 560048. ದೂ: 080–2852 4133 / 91–80–40943197 E-mail:info@gpl.in, Website: www.gpl.in CIN: L23209KA1977PLC043357

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ)/ಇನ್ನಿತರ ಆಡಿಯೋ ವಿಷ್ಯುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಏರ್ಪಡಿಸಲಾಗುವ 45ನೇ ವಾರ್ಷಿಕ ಮಹಾಸಭೆ (ಎಜಿಎಂ) ಕುರಿತ ಮಾಹಿತಿ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಯ 45ನೇ ವಾರ್ಷಿಕ ಮಹಾಸಭೆಯನ್ನು ("ಎಜಿಎಂ") ಗುರುವಾರ, 29ನೇ ಸೆಪ್ಟೆಂಬರ್, 2022 ರಂದು ಬೆಳಗ್ಗೆ 11.00 (ಐಎಸ್‌ಟಿ) ಗಂಟೆಗೆ ವಿಡಿಯೋ ಕಾನ್ಫರೆನ್ಸ್ (ವಿಸಿ)/ಇತರ ಆಡಿಯೋ ವಿಷುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಕೈಗೊಳ್ಳಲಾಗುತದೆ ಮತ್ತು ಸಭೆಯ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ವಹಿವಾಟುಗಳನ್ನು ಚರ್ಚಿಸಲಾಗುತದೆ. ಕಂಪನಿಯ ನೊಂದಾಯಿತೆ ಕಚೇರಿಯೆ ವಿಳಾಸದಲ್ಲಿ ಎಂದರೆ.. ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕುಂದಿ ಕೈಗಾರಿಕಾ ಪ್ರದೇಶ, ಹಂತ 1, ಮಹದೇವಪುರ ।ಅಂಚೆ, ಬೆಂಗಳೂರು–560048 ವಿಳಾಸವನ್ನು ಸಭೆ ಜರುಗುವ ಸ್ಥಳ ಎಂದು ಪರಿಗಣಿಸಲಾಗುತ್ತದೆ.

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಹೊರಡಿಸಿದ ಸುತ್ತೋಲೆ ನಂ. 20/2020 ದಿನಾಂಕ ಮೇ 05, 2020 ಮತ್ತು ಸುತ್ತೋಲೆ ನಂ. 02/2021 ದಿನಾಂಕ ಜನವರಿ 13, 2021 ಗಳನ್ನು ಸುತ್ತೋಲೆ ನಂ. 14/2020 ಹಾಗೂ 17/2020 ದಿನಾಂಕ ಏಪ್ರಿಲ್ 08, 2020, ಏಪ್ರಿಲ್ 13, 2020 ಮತ್ತು ಸುತ್ತೋಲೆ ನಂ: 2/2022 ದಿನಾಂಕ ಮೇ 5, 2022 (ಸಮಗ್ರವಾಗಿ **"ಎಂಸಿಎ ಸುತ್ತೋಲೆಗಳು"** ಎನ್ನಲಾಗುವ) ಇವುಗಳ ಮತ್ತು ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**"ಸೆಬಿ"**) ಹೊರಡಿಸಿದ, ಸುತ್ತೋಲೆ ನಂ. ಸೆಬಿ/ಹೆಚ್/ಸಿಎಫ್‌ಡಿ/ಸಿಎಂಡಿ1/ಸಿಐಆರ್/ಪಿ/2020/79 ದಿನಾಂಕ ಮೇ 12. 2020 ಮತ್ತು ಸುತ್ತೋಲೆ ನಂ. ಸೆಬಿ/ಹೆಚ್/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2021/11 ದಿನಾಂಕ ಜನವರಿ 15, 2021 ಮತ್ತು ಸೆಬಿ/ಹೆಚ್/ಸಿಎಫ್‌ಡಿ/ಸಿಎಂಡಿ2/ಸಿಐಆರ್/ಪಿ/2022/62 ದಿನಾಂಕ ಮೇ 13. 2022 (ಸಮಗ್ರವಾಗಿ **"ಸೆಬಿ ಸುತ್ತೋಲೆಗಳು"** ಎನ್ನಲಾಗುವ) ಇವುಗಳ ಅನುಸರಣೆಯ ಮೇರೆಗೆ, ಕಂಪನಿ ಅಥವಾ ದಿ ಡೆಪಾಸಿಟರಿ ಪಾರ್ಟಿಸಿಪಂಟ್‌ರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ ವಿದ್ಯುನ್ಮಾನ ವಿಧಾನದಲ್ಲಿ ಎಜಿಎಂ ಸೂಚನೆಯ ಜೊತೆಗೆ ವಾರ್ಷಿಕ ವರದಿ 2021–22 ಅನ್ನು ಕಳುಹಿಸಲಾಗುತ್ತದೆ.

45ನೇ ವಾರ್ಷಿಕ ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿ ಪ್ರತಿಗಳು ಕಂಪನಿಯ www.gpl.in ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ರವರ www.evotingindia.com ವೆಬ್‌ಸೈಟ್‌ನಲ್ಲಿ ಹಾಗೂ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜ್ www.bseindia.com ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರೊಂದಿಗೆ ಓದಿಕೊಂಡಂತೆ ಪ್ರದತವಾದ, ಕಾಲ ಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ, ಸೆಬಿ (ಲಿಸ್ಟಿಂಗ್ ಅಬ್ಲಿಗೇಶನ್ಸ್ ಅಂಡ್ ಡಿಸ್ ಕ್ಲೋಸರ್ ರಿಕ್ವೈರ್ ಮೆಂಟ್ಸ್) ನಿಯಮಾವಳಿಗಳು, 2015 ("ಲಿಸ್ಟಿಂಗ್ ರೆಗ್ಯುಲೇಶನ್ಸ್") ಪ್ರಕಾರ, ಕಂಪನಿಯು ತನ್ನ ಸದಸ್ಯರಿಗೆ ಎಜಿಎಂ ಸಭೆಯಲ್ಲಿ ಹೊರಡಿಸಲು ಪ್ರಸ್ತಾವಿಸಲಾಗಿರುವ ಠರಾವುಗಳಿಗೆ ತಮ್ಮ ಮತಗಳನ್ನು ಚಲಾಯಿಸುವ ಹಕ್ಕನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸುವ ಸೌಲಭ್ಯವನ್ನು ಕಲಿಸುತ್ತಿದೆ. ರಿಮೋಟ್ ಇ–ವೋಟಿಂಗ್ ಮುಖಾಂತರ ಮತ ಚಲಾಯಿಸುವ, ಎಜಿಎಂ ಸಭೆಯಲ್ಲಿ ವಿಸಿ/ಒಎವಿಎಂ ಮುಖಾಂತರ ಪಾಲ್ಗೊಳ್ಳುವ, ಮತ್ತು ಎಜಿಎಂ ಸಭೆಯಲ್ಲಿ ಇ–ವೋಟಿಂಗ್ ಮಾಡುವ ಸೌಲಭ್ಯವನ್ನು ಒದಗಿಸಲು ಕಂಪನಿಯು ಸಿಡಿಎಸ್‌ಎಲ್ ಇವರನ್ನು ನಿಯೋಜಿಸಿಕೊಂಡಿರುತ್ತದೆ. ಇದಕ್ಕೆ ಸಂಬಂಧಿತ ವಿವರಗಳು ಕೆಳಗನಂತಿರುತ್ತವೆ:

ಎ)	ರಿಮೋಟ್ ಇ–ವೋಟಿಂಗ್ ಆರಂಭವಾಗುವ ದಿನ, ದಿನಾಂಕ ಮತ್ತು ಸಮಯ	:	ಸೋಮವಾರ ಸೆಪ್ಟೆಂಬರ್ 26, 2022 ರಂದು ಬೆಳಗ್ಗೆ 09:00 ಗಂಟೆ
ಬಿ)	ರಿಮೋಟ್ ಇ–ವೋಟಿಂಗ್ ಮುಕ್ತಾಯವಾಗುವ ದಿನ, ದಿನಾಂಕ ಮತ್ತು ಸಮಯ	:	ಬುಧವಾರ, ಸೆಪ್ಟೆಂಬರ್ 28, 2022 ರಂದು ಸಂಜೆ 05:00 ಗಂಟೆ
ಸಿ)	ಕಟ್–ಆಫ್ ದಿನಾಂಕ	:	ಗುರುವಾರ, ಸೆಪ್ಟೆಂಬರ್ 22 , 2022,
ಡಿ)	ಯಾವುದೇ ವ್ಯಕ್ತಿಯು, ಎಜಿಎಂ ಸೂಚನೆಯು ರವಾನೆಗೊಂಡ ಬಳಿಕ ಕಂಪನಿಯ ಷೇರುಗಳನ್ನು ಪಡೆದು ಕಂಪನಿಯ ಸದಸ್ಯನಾಗಿದ್ದಲ್ಲಿ, ಕಟ್–ಆಫ್ ದಿನಾಂಕದಂದು ಎಂದರೆ, ಶುಕ್ರವಾರ ಸೆಪ್ಟೆಂಬರ್ 2, 2022 ರಂದು ಷೇರುಗಳನ್ನು ಪಡೆದುಕೊಂಡಿದ್ದಲ್ಲಿ, ಅಂಥವರು ಕಡ್ಡಾಯವಾಗಿ ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ಇ–ವೋಟಿಂಗ್ ಸೂಚನೆಗಳನ್ನು ಅನುಸರಿಸುವುದು.		
ಇ)	ವಿಸಿ/ಓಎವಿಎಂ ಮುಖಾಂತರ ಎಜಿಎಂ ಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ಮತ್ತು ರಿಮೋಟ್ ಇ–ವೋಟಿಂಗ್ ಮುಖಾಂತರ ಮತ ಚಲಾಯಿಸದಿರುವ ಸದಸ್ಯರು, ಎಜಿಎಂ ಸಭೆಯ ಅವಧಿಯಲ್ಲಿ ಒದಗಿಸಲಾಗುವ ಇ–ವೋಟಿಂಗ್ ವ್ಯವಸ್ಥೆಯ ಮುಖಾಂತರ ತಮ್ಮ ಮತದಾನ ಹಕ್ಕನ್ನು ಚಲಾಯಿಸಬಹುದಾಗಿರುತ್ತದೆ.		
ಎಫ್)	ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಕಳುಹಿಸಿದ ನಂತರ ಮತ್ತು ಕಟ್–ಆಫ್ ದಿನಾಂಕದ ಮೊದಲು ಷೇರುಗಳನ್ನು ಪಡೆದುಕೊಂಡಿರುವ ಸದಸ್ಯರು, helpdesk.evoting@cdslindia.com ಅಥವಾ secretarial@gujaratpetrosynthese.com ನಲ್ಲಿ ವಿನಂತಿಯನ್ನು ಕಳುಹಿಸುವ ಮೂಲಕ USER ID ಮತ್ತು ಪಾಸ್‌ವರ್ಡ್‌ಅನ್ನು ಪಡೆಯಬಹುದು. ಆದಾಗ್ಯೂ, ರಿಮೋಟ್ ಇ–ವೋಟಿಂಗ್‌ಗಾಗಿ ಸದಸ್ಯರು ಈಗಾಗಲೇ CDSL ನಲ್ಲಿ ನೋಂದಾಯಿಸಿದ್ದರೆ, ನಂತರ ಸದಸ್ಯರು ತಮ್ಮ ಅಸ್ತಿತ್ವದಲ್ಲಿರುವ USER ID ಮತ್ತು ಪಾಸ್‌ವರ್ಡ್ ಅನ್ನು ಬಳಸಬಹುದು ಮತ್ತು ಅವರ ಮತವನ್ನು ಚಲಾಯಿಸಬಹುದು.		
	ಸದಸ್ಯರು ಗಮನಿಸಬೇಕಾದುದು ಏನೆಂದರೆ: 1) ಬುಧವಾರ, ಸೆಪ್ಟೆಂಬರ್ 28, 2022 ರಂದು ಸಂಜೆ 5.00 ಗಂಟೆ ಬಳಿಕ, ರಿಮೋಟ್ ಇ–ವೋಟಿಂಗ್‌ಮಾಡ್ಯೂಲ್‌ನ್ನು ಸಿಡಿಎಸ್ ಎಲ್ ರವರಿಂದ ಸ್ಥಗಿತಗೊಳಿಸಲಾಗುತ್ತದೆ; ಮತ್ತು 2) ಈಗಾಗಲೇ ರಿಮೋಟ್ ಇ–ವೋಟಿಂಗ್ ಮುಖಾಂತರ ತಮ್ಮ ಮತ ಚಲಾಯಿಸಿರುವ ಸದಸ್ಯರು ಎಜಿಎಂ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿರುತ್ತದೆ, ಆದರೆ ಪುನ: ತಮ್ಮ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.		

ಸದಸ್ಯರು ತಮ್ಮ ಮತವನ್ನು ದೂರದಿಂದಲೇ ಚಲಾಯಿಸುವ ಅಥವಾ ಎಜಿಎಂ ಸಭೆಯ ಅವಧಿಯಲ್ಲಿ ಕೂಡ ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ವ್ಯವಹಾರ ವಹಿವಾಟುಗಳಿಗೆ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮುಖಾಂತರ ತಮ್ಮ ಮತ ಚಲಾಯಿಸುವ ಅವಕಾಶ ಹೊಂದಿರುತಾರೆ. ಡಿಮೆಟೀರಿಯಲೈಸ್ಡ್ ರೂಪದ ಷೇರುಗಳನ್ನು ಹೊಂದಿರುವ, ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರು, ದೂರದಿಂದಲೇ ಮತ ಚಲಾಯಿಸುವ ಅಥವಾ ಎಜಿಎಂ ಸಭೆಯ ಅವಧಿಯಲ್ಲಿ ಮತ ಚಲಾಯಿಸುವ ವಿಧಾನವನ್ನು ಎಜಿಎಂ ಸೂಚನಾ ಪತ್ರದಲ್ಲಿ ನೀಡಲಾಗಿದೆ.

ಕಂಪನಿಯು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯೋಚಿತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಲು ಕಂಪನಿ ಕಾರ್ಯದರ್ಶಿಗಳಾದ ಶ್ರೀ ಮಕರಂದ್ ಜೋಶಿ (ಮಕರಂದ್ ಎಂ. ಜೋಶಿ ಮತ್ತು ಕಂಪನಿಯಲ್ಲಿ ಪಾಲುದಾರ) ಇವರನ್ನು ನೇಮಿಸಿದೆ.

ಪರಿವೀಕ್ಷಕರ ವರದಿಯೊಂದಿಗೆ ಘೋಷಿಸಲಾದ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ (www.gpl.in) ಮತ್ತು ಸೇವಾ ಪೂರೈಕೆದಾರರ ವೆಬ್‌ಸೈಟ್‌ನಲ್ಲಿ (www.evotingindia.com) ಲಭ್ಯವಾಗುವಂತೆ ಮಾಡಲಾಗುತ್ತದೆ ಮತ್ತು ಅದನ್ನು ಸಭೆಯ ಮುಕ್ತಾಯವಾದ ಎರಡು ಕೆಲಸದ ದಿನಗಳಲ್ಲಿ BSE ಲಿಮಿಟೆಡ್‌ಗೆ ತಿಳಿಸಲಾಗುತ್ತದೆ.

ಇಮೇಲ್ ವಿಳಾಸಗಳನ್ನು ರಜಿಸ್ಟರ್/ಅಪ್ಡೇಟ್ ಮಾಡಿಕೊಳ್ಳುವ ವಿಧಾನ:

ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಮತ್ತು ಇನ್ನೂವರೆಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಣಿ / ಅಪ್ಡೇಟ್ ಮಾಡಿಕೊಳ್ಳದಿರುವ ಸದಸ್ಯರು, Investor@bigshareonline.com ವಿಳಾಸಕ್ಕೆ ಇಮೇಲ್ ಮನವಿ ಬರೆದು, ಸದಸ್ಯರು ಹೆಸರು, ವಿಳಾಸ ನಮೂದಿಸಿ ಸಹಿ ಹಾಕಿದ ಪತ್ರ ಲಗತ್ತಿಸಿ, ಸ್ವಯಂ ದೃಢೀಕೃತ ತಮ್ಮ ಪ್ಯಾನ್ ಕಾರ್ಡ್ ಪ್ರತಿ ಹಾಗೂ ಸದಸ್ಯರ ವಿಳಾಸ ಪುರಾವೆಗಾಗಿ ಇನ್ನಿತರ ಸ್ವಯಂ ದೃಢೀಕೃತ ದಾಖಲಾತಿಗಳ (ಉದಾ: ಡ್ರೈವಿಂಗ್ ಲೈಸನ್ಸ್, ಇಲೆಕ್ಷನ್ ಐಡೆಂಟಿಟಿ ಕಾರ್ಡ್, ಪಾಸ್‌ಪೋರ್ಟ್) ಸಮೇತ ಮನವಿ ಸಲ್ಲಿಸುವ ಮೂಲಕ, ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ಕಂಪನಿಯ ರಜಿಸ್ಟ್ರಾರ್ ಅಂಡ್ ಷೇರ್ ಟ್ರಾನ್ಸಫರ್ ಏಜೆಂಟ್ ("ಆರ್‌ಟಿಎ"), ಬಿಗ್‌ಶೇರ್ ಸರ್ವಿಸಸ್ ಪ್ರೈ. ಲಿ.. ಭಾರತ ಟಿನ್ ವರ್ಕ್ಸ್ ಬಿಲ್ಡಿಂಗ್, 1ನೇ ಮಹಡಿ, ವಸಂತ ಓಯಾಸಿಸ್ ಎದುರು, ಕೀಸ್ ಹೊಟೇಲ್ ಪಕ್ಕ, ಮಕವಾನಾ ರೋಡ್, ಅಂಧೇರಿ ಪೂರ್ವ, ಮುಂಬೈ–400059 ಇವರೊಂದಿಗೆ ನೊಂದಾಯಿಸಿಕೊಳ್ಳಬೇಕು.

ಕಂಪನಿಯು ಭೌತಿಕ ಷೇರುದಾರರಿಗೆ ತಿಳಿಸಿತು ಮತ್ತು ಕಂಪನಿಯೊಂದಿಗೆ ತಮ್ಮ ಇ–ಮೇಲ್ ವಿಳಾಸಗಳನ್ನು ನವೀಕರಿಸದ ಸದಸ್ಯರು ಸರಿಯಾಗಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಫಾರ್ಮ್ ISR–1 (PAN, KYC ವಿವರಗಳನ್ನು ನೋಂದಾಯಿಸಲು ಫಾರ್ಮ್ ಅನ್ನು ಕಳುಹಿಸುವ ಮೂಲಕ ತಮ್ಮ ಇಮೇಲ್ ವಿಳಾಸಗಳನ್ನು ನವೀಕರಿಸಲು ವಿನಂತಿಸಲಾಗಿದೆ ಅಥವಾ ಅದರ ಬದಲಾವಣೆಗಳು/ನವೀಕರಣಗಳು), ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ಗೆ – ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಎಸ್ 6–2, 6ನೇ ಮಹಡಿ ಪಿನಾಕಲ್ ಬ್ಯುಸಿನೆಸ್ ಪಾರ್ಕ್, ಅಹುರಾ ಸೆಂಟರ್ ಪಕ್ಕದಲ್ಲಿ, ಮಹಾಕಾಳಿ ಕೇವ್ ರಸ್ತೆ, ಅಂಧೇರಿ (ಪೂರ್ವ) ಮುಂಬೈ – 400093 ಅಥವಾ ತಮ್ಮ ನೋಂದಾಯಿತ ಇಮೇಲ್ ಐಡಿಯಿಂದ Investor@bigshareonline.com ಗೆ ಇಮೇಲ್ ಮೂಲಕ. ನವೆಂಬರ್ 3, 2021 ರ SEBI ಸುತ್ತೋಲೆ ಸಂಖ್ಯೆ SEBI/MIRSD/MIRSD_RTAMB /P/CIR/2021/655 ಮತ್ತು ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB /P/CIR/2021/687 ದಿನಾಂಕ ಡಿಸೆಂಬರ್ 14 , 2021 ರ ಅನುಸಾರವಾಗಿ ಕಳುಹಿಸತಕ್ಕದ್ದು.

ಡಿಮ್ಯಾಟ್‌ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳು ತಮ್ಮ ಇ–ಮೇಲ್ ಐ.ಡಿ ಮತ್ತು ಮೊಬೈಲ್ ನಂಬರ್‌ಅನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಮೂಲಕ ಡಿಪಾಸಿಟರಿಸ್‌ನೊಂದಿಗೆ ನೊಂದಾಯಿಸಿಕೊಳ್ಳಬೇಕು.

ಎಜಿಎಂ ನಲ್ಲಿ ಪಾಲ್ಗೊಳ್ಳುವ ವಿಧಾನ

ಸಿಡಿಎಸ್‌ಎಲ್ ಇ–ವೋಟಿಂಗ್ ಸಿಸ್ಟಮ್ ಮುಖಾಂತರ www.evotingindia.com ವೆಬ್‌ಸೈಟ್‌ನಲ್ಲಿ ಐಸಿ/ಒಎವಿಎಂ ಮೂಲಕ ಎಜಿಎಂನಲ್ಲಿ ಪಾಲ್ಗೊಳ್ಳುವ ಸೌಲಭ್ಯವಿರುತ್ತದೆ

ಸದಸ್ಯರು ತಮ್ಮ ಯಾವುದೇ ಸ್ಪಷ್ಟೀಕರಣ ಅಥವಾ ನೆರವಿಗಾಗಿ, ಆರ್‌ಟಿಎ ಬಿಗ್ ಷೇರ್ ಸರ್ವಿಸಸ್ ಪ್ರೈ. ಲಿ., ಇವರನ್ನು ಇಮೇಲ್ ಐಡಿ: investor@bigshareonline.com ನಲ್ಲಿ ಅಥವಾ secretarial@gujaratpetrosynthese.com ವಿಳಾಸದಲ್ಲಿ ಸಂಪರ್ಕಿಸಬಹುದು.

ಗುಜರಾತ್ ಪೆಟ್ರೋಸಿಂಥೆಸ್ ಲಿಮಿಟೆಡ್‌ನ ಪರವಾಗಿ
ಸಹಿ/– ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕ ಡಿ.ಐ.ಎನ್ : 00319482

ದಿನಾಂಕ : 07ನೇ ಸೆಪ್ಟೆಂಬರ್, 2022
ಸ್ಥಳ : ಮುಂಬೈ

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/41/2022–23 ದಿನಾಂಕ: 03.09.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಲಕ್ಷ್ಮಾರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನ ಹಳ್ಳಿ	71/2	1–01	ಕೃಷಿ	ವಸತಿ	
2	ಶ್ರೀ ಲಕ್ಷ್ಮಾರೆಡ್ಡಿ ಬಿನ್ ಚಿನ್ನಪ್ಪ ರೆಡ್ಡಿ	ಆನೇಕಲ್	ಸರ್ಜಾಪುರ	ಜಂತಗೊಂಡನ ಹಳ್ಳಿ	72/4	3–13	ಕೃಷಿ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ದೊರಕುತ್ತದೆ. ಮೂಲಭೂತ ಸೌಕರ್ಯಗಳುಳ್ಳ ಸುಸಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ದೊರಕುತ್ತವೆ ಹಾಗೂ ಕಾನೂನುಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/2103/2022–23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಪ್ರಧಾನ ಕಛೇರಿ: ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ದೂ: 26677552, 26506279, 42047786, 7411414285,
Email: gmcbho@yahoo.co.in, Website: gmcbank.net

ಚುನಾವಣಾ ನೋಟೀಸು

ಬ್ಯಾಂಕಿನ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ, ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು-27ರವರ ಆದೇಶ ಸಂಖ್ಯೆ: ಸಚುಪ್ರಾ/ಬೆಂ/ಉ.ನಿ/ಆಮಂಚು-ರಿಅನೇ/27/2022-23, ದಿ.13.07.2022 ರನ್ವಯ ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ಇದರ ಆಡಳಿತ ಮಂಡಳಿಯಲ್ಲಿ ನಿಧನ/ರಾಜೀನಾಮೆಯಿಂದ ತೆರವಾದ 2 ಸ್ಥಾನಗಳಿಗೆ ಆಡಳಿತ ಮಂಡಳಿ ಉಳಿದ ಅವಧಿಗೆ (ಸಾಮಾನ್ಯ ಸ್ಥಾನ-1 ಹಾಗೂ ಹಿಂದುಳಿದ ವರ್ಗಗಳ ಪ್ರವರ್ಗ "ಎ" ಮೀಸಲು ಸ್ಥಾನ-2) ಚುನಾವಣೆ ನಡೆಸಲು ಶ್ರೀ ಬಿ.ಎಸ್.ಹರೀಶ್ ಕುಮಾರ್, ಸಹಕಾರ ಅಭಿವೃದ್ಧಿ ಅಧಿಕಾರಿರವರನ್ನು ರಿಟರ್ನಿಂಗ್ ಆಫೀಸರ್‌ರನ್ನಾಗಿ ನೇಮಿಸಿರುತ್ತಾರೆ.

ಅದರಂತೆ ದಿನಾಂಕ **18.09.2022**ರ ಭಾನುವಾರ ಬೆಳಗ್ಗೆ **9.00** ಘಂಟೆಯಿಂದ ಸಂಜೆ **4.00** ಘಂಟೆಯವರೆಗೆ "ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಪ್ರಧಾನ ಕಛೇರಿ, ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18" ರಲ್ಲಿ ಚುನಾವಣೆಯನ್ನು ನಡೆಸಲಾಗುತ್ತದೆ.

ಈ ಸಂಬಂಧ ರಿಟರ್ನಿಂಗ್ ಆಫೀಸರ್‌ರವರು ದಿನಾಂಕ 01.09.2022ರನ್ವಯ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದು, (ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ 10.09.2022, ನಾಮಪತ್ರ ಪರಿಶೀಲನೆ ದಿನಾಂಕ 11.09.2022 ಹಾಗೂ ನಾಮಪತ್ರ ಹಿಂಪಡೆಯುವಿಕೆ ದಿನಾಂಕ 12.09.2022). ಎಲ್ಲಾ ಅರ್ಹ ಮತದಾರ ಸದಸ್ಯರಿಗೆ ವೈಯಕ್ತಿಕ ತಿಳುವಳಿಕೆಯನ್ನು ಸಾಮಾನ್ಯ ಅಂಚೆಯ ಮೂಲಕ ಈಗಾಗಲೆ ರವಾನಿಸಿದೆ. ತಲುಪದಿದ್ದ ಪಕ್ಷದಲ್ಲಿ, ಈ ಪ್ರಕಟಣೆಯನ್ನೆ ಅಧಿಕೃತ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕಾಗಿ ಕೋರಿದೆ. ಅರ್ಹ ಮತದಾರರ ಪಟ್ಟಿ ಹಾಗೂ ಚುನಾವಣಾ ವೇಳಾ ಪಟ್ಟಿಯನ್ನು ಬ್ಯಾಂಕಿನ ಪ್ರಧಾನ ಕಛೇರಿ, ಹಾಗೂ ಶಾಖೆಗಳ ಸೂಚನಾ ಫಲಕದಲ್ಲಿ ಪ್ರಕಟಿಸಿದೆ.

ಮತ ಚಲಾಯಿಸಲು ನಿಯಮಾನುಸಾರ ಬ್ಯಾಂಕ್ ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿದ್ದು, ಪಡೆಯದಿರುವ ಸದಸ್ಯರು 15.09.2022ರೊಳಗೆ ತಮ್ಮ ಭಾವಚಿತ್ರ, ಕೆ.ವೈ.ಸಿ ವಿವರ (ಆಧಾರ್/PAN) ಗಳ ಪ್ರತಿ ನೀಡಿ ಪ್ರಧಾನ ಕಛೇರಿಯಲ್ಲಿ ಪಡೆಯಲು ಕೋರಿದೆ. ಚುನಾವಣೆಯ ಹೆಚ್ಚಿನ ಮಾಹಿತಿಯನ್ನು ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಪಡೆಯತಕ್ಕದ್ದು.

ಸ್ಥಳ: ಬೆಂಗಳೂರು
ದಿನಾಂಕ: 01.09.2022

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಆನಂದ್ ಎಸ್.ಆರ್.
ಪ್ರಭಾರ ಕಾರ್ಯದರ್ಶಿ

ಸುದ್ದಿ 2 ನಿಮಿಷ

ಪಾಸ್‌ಪೋರ್ಟ್‌ಗೆ ತಂದೆ ಒಪ್ಪಿಗೆ ಬಲವಂತ ಸಲ್ಲ: ಹೈಕೋರ್ಟ್

ಬೆಂಗಳೂರು: 'ಪತಿ-ಪತ್ನಿ ಮಧ್ಯದ ಕೌಟುಂಬಿಕ ವ್ಯಾಜ್ಯದಲ್ಲಿ ಮಗು ಸಂಪೂರ್ಣವಾಗಿ ತಾಯಿಯ ಕಸ್ಟಡಿಯಲ್ಲಿದ್ದ ಸಂದರ್ಭದಲ್ಲಿ, ಪಾಸ್‌ಪೋರ್ಟ್ ನೀಡುವಾಗ ತಂದೆಯ ಒಪ್ಪಿಗೆ ಬೇಕು ಎಂದು ಪಾಸ್‌ಪೋರ್ಟ್ ಅಧಿಕಾರಿ ಬಲವಂತ ಮಾಡುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

'ಈ ಸಂಬಂಧ ಪಾಸ್‌ಪೋರ್ಟ್ ಅಧಿಕಾರಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ.

'ಪಾಸ್‌ಪೋರ್ಟ್ ಪಡೆದು ವಿದೇಶಕ್ಕೆ ತೆರಳಿದರೆ ಪ್ರತಿವಾದಿಯ ಭೇಟಿ ಹಕ್ಕು ಮೊಟಕಾಗುತ್ತದೆ ಎಂಬ ಪ್ರತಿವಾದಿಗಳ ಪರ ವಕೀಲರ ಆತಂಕವನ್ನು ತಳ್ಳಿ ಹಾಕಿರುವ ನ್ಯಾಯಪೀಠ, 'ಪಾಸ್‌ಪೋರ್ಟ್ ನೀಡುವುದರಿಂದ ಮಗುವಿನ ಭೇಟಿಯ ಹಕ್ಕನ್ನು ಸಂಪೂರ್ಣವಾಗಿ ನಿರಾಕರಿಸಿದಂತಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟಿದೆ.

'ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿಯು ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಮಾನ್ಯ ಮಾಡಬೇಕು. ಅರ್ಜಿದಾರರ ಮಾಜಿ ಪತಿಯ ಹಾಜರಿ ಅಥವಾ ಒಪ್ಪಿಗೆ ಕೇಳದೆ ಪಾಸ್ ಪೋರ್ಟ್ ಅರ್ಜಿಯನ್ನು ಪರಿಗಣಿಸಬೇಕು' ಎಂದು ನಿರ್ದೇಶಿಸಿದೆ.

ಗಡಿ ಭದ್ರತಾ ಪಡೆಗೆ ಸೇರಲು ಯುವಕರಿಗೆ ಕರೆ

ಬೆಂಗಳೂರು: 'ಬಾರ್ಡರ್ ಸೆಕ್ಯೂರಿಟಿ ಫೋರ್ಸ್ (ಬಿಎಸ್‌ಎಫ್) ಜಗತ್ತಿನ ಅತಿದೊಡ್ಡ ಗಡಿ ಭದ್ರತಾ ಪಡೆ. ದೇಶದ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುವ ಮುಂಚೂಣಿ ಪಡೆ. ಈ ದಳಕ್ಕೆ ನಮ್ಮ ದೇಶದ ಯುವಕರು ಹೆಚ್ಚಾಗಿ ಸೇರ್ಪಡೆ ಆಗಬೇಕು' ಎಂದು ಗಡಿ ಭದ್ರತಾ ಪಡೆಯ ಬೆಂಗಳೂರು ಘಟಕದ ಅಸಿಸ್ಟೆಂಟ್ ಕಮಾಂಡೆಂಟ್ ಪವನ್ ಕುಮಾರ್ ಸಿಂಗ್ ನುಡಿದರು.

ನಗರದ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ 'ಆಧುನಿಕ ಆಯುಧಗಳ ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆ' ಉದ್ಘಾಟಿಸಿ ಅವರು ಮಾತನಾಡಿದರು. ವಿಶೇಷ ಪಡೆ ಇದೀಗ ಮೂರು ಲಕ್ಷ ಸಿಬ್ಬಂದಿ ಹೊಂದಿದೆ ಎಂದು ಹೇಳಿದರು. ಸಂಸ್ಥೆಯಲ್ಲಿ ದೇಶದ ಬಗೆಗಿನ ಕಾಳಜಿಯನ್ನು ಯುವ ಜನರಲ್ಲಿ ಉದ್ದೀಪಿಸುವ ಕೆಲಸ ಮಾಡುತ್ತಿದೆ. ಇಲ್ಲಿನ ಎನ್‌ಸಿಸಿ ಕೆಡೆಟ್‌ಗಳು ಗಣನೀಯ ಸಂಖ್ಯೆಯಲ್ಲಿ ಸೇನೆ, ನೌಕಾಪಡೆ ಹಾಗೂ ವಾಯುಪಡೆಯಲ್ಲಿ ಅಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ ಎಂದರು.

ಮಹಾವಿದ್ಯಾಲಯದ ಹಿರಿಯ ಸಲಹೆಗಾರರಾದ ಎನ್.ಆರ್. ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್, ಸಂಸ್ಥೆಯ ಎನ್.ಸಿ.ಸಿ ಅಧಿಕಾರಿ ಡಾ.ರಾಜೇಶ್ ನಂದಳಿಕೆ, ಸಂಸ್ಥೆಯ ನೂರಾರು ಎನ್.ಸಿ.ಸಿ ಕೆಡೆಟ್‌ಗಳು ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಕನ್ನಡ ಕಡ್ಡಾಯಕ್ಕೆ ಮತ್ತೆ ಆದೇಶ

ಬೆಂಗಳೂರು: ಕೇಂದ್ರ, ರಾಜ್ಯ ಸರ್ಕಾರಗಳು ಆಯೋಜಿಸುವ ಕಾರ್ಯಕ್ರಮಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಯನ್ನು ಬಳಸದಿರುವ ಕುರಿತು ಆಕ್ಷೇಪಿಸಿದೆ. ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಕನ್ನಡ ಬಳಸಬೇಕು, ವೇದಿಕೆಯ ಪರದೆ, ಫಲಕಗಳಲ್ಲಿ ಕನ್ನಡ ಪ್ರದರ್ಶಿಸಬೇಕು ಎಂದು ಸರ್ಕಾರದ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮ ಆದೇಶಿಸಿದ್ದಾರೆ.

ಆಂಧ್ರಕ್ಕೆ ಬಸ್ ಸೇವೆ ಹೆಚ್ಚಿಸಲು ಚರ್ಚೆ

ಬೆಂಗಳೂರು: ಕರ್ನಾಟಕ ಮತ್ತು ಆಂಧ್ರಪ್ರದೇಶದ ನಡುವೆ ಸಾರಿಗೆ ಬಸ್‌ಗಳ ಸೇವೆ ಹೆಚ್ಚಿಸಲು ಎರಡೂ ರಾಜ್ಯಗಳ ಅಧಿಕಾರಿಗಳು ಮಂಗಳವಾರ ಮಾತುಕತೆ ನಡೆಸಿದರು.

ಆಂಧ್ರಪ್ರದೇಶದ ಸಾರಿಗೆ ಸಂಸ್ಥೆಯ ಅಧಿಕಾರಿಗಳ ಜತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬು ಕುಮಾರ್ ಅವರು ಸಾಧಕ–ಬಾಧಕಗಳ ಬಗ್ಗೆ ಚರ್ಚಿಸಿದರು. ತೆಲಂಗಾಣಕ್ಕೂ ಬಸ್‌ಗಳ ಸೇವೆ ವಿಸ್ತರಿಸುವ ಬಗ್ಗೆ ಈಚೆಗೆ ಅನ್ಬುಕುಮಾರ್ ಸಭೆ ನಡೆಸಿದ್ದರು.

ಜಿಆರ್‌ಟಿ ಜುವೆಲರ್ಸ್‌ಗೆ ಪ್ರಶಸ್ತಿ

ಬೆಂಗಳೂರು: ಚಿನ್ನಾಭರಣ ಮಾರಾಟ ಕಂಪನಿ ಜಿಆರ್‌ಟಿ ಜುವೆಲರ್ಸ್‌ಗೆ 'ಪ್ಲಾಟಿನಂ ಗಿಲ್ಡ್ ಇಂಟರ್‌ನ್ಯಾಷನಲ್ (ಪಿಜಿಐ) ಇಂಡಿಯಾ' ಸಂಸ್ಥೆಯು 'ಪ್ಲಾಟಿನಂ ಸೀಸನ್ ಆಫ್ ಹೋಪ್' ಮತ್ತು 'ಪ್ಲಾಟಿನಂ ಸೀಸನ್ ಆಫ್ ಲವ್' ಪ್ರಶಸ್ತಿಗಳನ್ನು ನೀಡಿದೆ.

'ಮತ್ತೆ ಪ್ರಶಸ್ತಿ ಪಡೆದುಕೊಂಡಿರುವುದು ಸಂತಸ ತಂದಿದೆ. ಜಿಆರ್‌ಟಿ ಕಂಪನಿಗೆ ಇದು ಸತತವಾಗಿ 7ನೇ ಪ್ರಶಸ್ತಿ. ಇದು ನಮ್ಮ ತಂಡದಲ್ಲಿ ಹೊಸ ಉತ್ಸಾಹ ತುಂಬಿದೆ' ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಡಿ ಜಿ.ಆರ್. 'ಅನಂತ್' ಅನಂತಪದ್ಮನಾಭನ್ ಹೇಳಿದ್ದಾರೆ.

PUBLIC NOTICE

NOTICE is hereby given to the public that we are investigating the right, title, interest, benefits, entitlements of whatsoever nature of the owners of the Survey Numbers, as mentioned hereinbelow, all are situated at Hagadur Village, K.R. Puram Hobli, Bangalore East Taluk, Bangalore Urban District, which is more particularly described in the Schedule hereunder written and hereinafter called "**Schedule Property**".

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, succession, possession, lease, tenancy, maintenance easement, license, bequeath, share, assignment, lien, attachment, development rights, right of way, lis pendens, reservation, agreement, FSI consumption, development rights, or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road Bengaluru 560 025 within a period of 07 (Seven) days from the date of publication of this notice, failing which, the claim or claims, if any, of such person or persons shall be considered to have been waived and/or abandoned.

SCHEDULE PROPERTY

Item No. 01: All that piece and parcel of residentially converted land bearing Sy No.180, measuring 02 Acres 07 Guntas, and 13 Guntas of kharab, situated at Hagadur Village, K.R.Puram Hobli, Bangalore East Taluk, Bangalore Urban District and bounded by
EAST: Sy No. 22, WEST: Sy No. 181, NORTH: Sy No. 9, SOUTH: Sy No.182

Item No. 02: All that piece and parcel of residentially converted land bearing Sy No. 181/2, measuring 01 Acre, and 04 Guntas of kharab, situated at Hagadur Village, K.R. Puram Hobli, Bangalore East Taluk, Bangalore Urban District and bounded by;
EAST: Road, thereafter Sy No.180, WEST:Sy No. 181/1,NORTH :Sy No.181/3, SOUTH: Sy No.182

Item No. 03: All that piece and parcel of residentially converted land bearing Sy No. 181/3, measuring 01 Acre 05 Guntas, and 01 Gunta of kharab, situated at Hagadur Village, K.R. Puram Hobli, Bangalore East Taluk, Bangalore Urban District and bounded by;
EAST: Road, thereafter Sy No. 180, WEST: Sy No. 181/1, NORTH :Sy No. 9,SOUTH :Sy No. 181/2

Item No. 04: All that piece and parcel of residentially converted land bearing Sy No. 182 (old Sy No. 9/P4), measuring 01 Acre 13 Guntas, and 07 Gunta of kharab, situated at Hagadur Village, K.R. Puram Hobli, Bangalore East Taluk, Bangalore Urban District and bounded by;
EAST: Sy No. 22, WEST: Sy No. 9, NORTH: Sy Nos. 180 and 181 SOUTH: Sy No. 9

Dated: 07/9/2022

Mr. S T Prashantha Kumar,
Partner,
Fox Mandal & Associates,
Solicitors & Advocates,
FM House, 6/12, Primrose Road,
Bangalore 560025, Karnataka, India
Phone: +91 80 2559 5911

ನಿಧನ ವಾರ್ತೆ

ಮೋಹಿನಿ ದಯಾನಂದ್ ರಾವ್



ಬೆಂಗಳೂರು: ರೆಮಿಡಿಕ್ಸ್ ಫಾರ್ಮಾದ ಆಡಳಿತದ ನಿರ್ದೇಶಕಿ ಮೋಹಿನಿ ದಯಾನಂದ್ ರಾವ್ (86) ಮಂಗಳವಾರ ನಿಧನರಾದರು. ಅವರಿಗೆ ಪುತ್ರ, ಪುತ್ರಿ ಇದ್ದಾರೆ. ತೋಕೂರು ಸುಬ್ರಹ್ಮಣ್ಯ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದು, ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ್ದಾರೆ.

ವಾಮನ ರಾವ್



ಬೆಂಗಳೂರು: ಚಿತ್ರ ಕಲಾವಿದ ವಾಮನ ರಾವ್ (78) ಅವರು ಹೃದಯಾಘಾತದಿಂದ ಮಂಗಳವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಬಿ.ಟಿ.ಎಂ. ಲೇಔಟ್‌ನಲ್ಲಿ ನೆಲೆಸಿದ್ದ ಅವರು, ತಮ್ಮ ನಿವಾಸದಲ್ಲಿ ಮೃತಪಟ್ಟಿದ್ದಾರೆ. ಅವರು 'ವಾಮನ್' ಎಂದು ಖ್ಯಾತರಾಗಿದ್ದರು. ಪ್ರಜಾಮತ, ಸಂಯುಕ್ತ ಕರ್ನಾಟಕ ಸೇರಿ ಅನೇಕ ಪತ್ರಿಕೆಗಳಲ್ಲಿ ಚಿತ್ರಕಲಾವಿದರಾಗಿ 50 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ.

ಪಿಎಸ್ಐ ನೇಮಕಾತಿ ಅಕ್ರಮ: ನ್ಯಾಯಾಂಗ ಬಂಧನಕ್ಕೆ ರಚನಾ • ವಿಚಾರಣೆ ವೇಳೆ ಹಲವು ಮಾಹಿತಿ ಬಯಲು

₹30 ಲಕ್ಷ ಒಪ್ಪಂದಕ್ಕೆ ಸಹೋದ್ಯೋಗಿ ಸಹಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಎಸಗಿ ರಾಜ್ಯಕ್ಕೆ ಮೊದಲ ರ್‍ಯಾಂಕ್ (ಮಹಿಳಾ ವಿಭಾಗ) ಪಡೆದಿದ್ದ ರಚನಾ ಹನುಮಂತ, ತಾನು ಕೆಲಸ ಮಾಡುತ್ತಿದ್ದ ಕಂಪನಿ ಸಹೋದ್ಯೋಗಿ ಸಹಾಯದಿಂದ ಪೊಲೀಸ್ ನೇಮಕಾತಿ ವಿಭಾಗದ ಸಿಬ್ಬಂದಿಯನ್ನು ಸಂಪರ್ಕಿಸಿ ಒಪ್ಪಂದ ಮಾಡಿಕೊಂಡಿದ್ದ ಮಾಹಿತಿ ಸಿಐಡಿ ತನಿಖೆಯಿಂದ ಗೊತ್ತಾಗಿದೆ.

ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ನಾಪತ್ತೆಯಾಗಿದ್ದ ರಚನಾ ಅವರನ್ನು ಇತ್ತೀಚೆಗಷ್ಟೇ ಬಂಧಿಸಿದ್ದ ಸಿಐಡಿ ಅಧಿಕಾರಿಗಳು, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಇದೀಗ, ರಚನಾ ಅವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ. ಸಿಐಡಿ ವಿಚಾರಣೆ ವೇಳೆ ಅಕ್ರಮದ ಬಗ್ಗೆ ಹಲವು ಮಾಹಿತಿಯನ್ನು ರಚನಾ ಅವರು ಬಾಯ್ಬಿಟ್ಟಿದ್ದಾರೆ.

‘ವಿಜಯಪುರದ ಬಸವನ ಬಾಗೇವಾಡಿಯ ರಚನಾ, ಎಂಜಿನಿಯರಿಂಗ್ ಪದವೀಧರೆ. ವ್ಯಾಸಂಗದ ಬಳಿಕ ಎರಡು ಬಾರಿ ಪಿಎಸ್ಐ ನೇಮಕಾತಿ ಪರೀಕ್ಷೆ ಎದುರಿಸಿದ್ದರು. ಆದರೆ, ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಲಿಲ್ಲ. ಹೀಗಾಗಿ, ಕಂಪನಿಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಸೇರಿದ್ದರು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಕೆಲಸಕ್ಕಿದ್ದ ಕಂಪನಿಯಲ್ಲಿ ರಚನಾ ಅವರಿಗೆ ಸಹೋದ್ಯೋಗಿಯೊಬ್ಬರ ಪರಿಚಯವಾಗಿತ್ತು. ಅವರ ಜೊತೆ ಹಲವು ವಿಷಯ ಹಂಚಿಕೊಳ್ಳುತ್ತಿದ್ದ ರಚನಾ, ಪಿಎಸ್ಐ ಆಗಬೇಕೆಂಬ ಆಸೆ ಹೇಳಿಕೊಂಡಿದ್ದರು. ಪ್ರಕರಣದ ಆರೋಪಿಯೂ ಆಗಿರುವ ರಿಸರ್ವ್ ಪೊಲೀಸ್ ಇನ್‌ಸ್ಪೆಕ್ಟರ್ (ಆರ್‌ಪಿಐ) ಗುರುವ ಬಸವರಾಜ ಸ್ನೇಹಿತರೇ ಆಗಿದ್ದ ಸಹೋದ್ಯೋಗಿ, ಪಿಎಸ್ಐ ಆಗಲು ಸಹಾಯ ಮಾಡುವುದಾಗಿ ಹೇಳಿದ್ದರು. ಬಸವರಾಜನ ಪರಿಚಯ ಸಹ ಮಾಡಿಸಿದ್ದರು.’

‘₹ 35 ಲಕ್ಷ ಕೊಟ್ಟರೆ ಪಿಎಸ್ಐ ಮಾಡಿಸುವುದಾಗಿ ಬಸವರಾಜ ಹೇಳಿದ್ದ. ‘ನನಗೆ ತಂದೆ ಇಲ್ಲ. ತಾಯಿ ಮಾತ್ರವಿದ್ದು, ಬಡ ಕುಟುಂಬ ನಮ್ಮದು’ ಎಂದು ರಚನಾ ಹೇಳಿದ್ದರು. ಅಂತಿಮವಾಗಿ ₹ 30 ಲಕ್ಷಕ್ಕೆ ಒಪ್ಪಂದವಾಗಿತ್ತು. ಸಂಬಂಧಿಕರು, ಸಹೋದರರ ಬಳಿ ₹ 15 ಲಕ್ಷ ಸಾಲ ಪಡೆದಿದ್ದ ರಚನಾ, ಅದನ್ನೇ ಬಸವರಾಜಗೆ ನೀಡಿದ್ದರು. ಅದೇ ಹಣ, ಇನ್ನೊಬ್ಬ ಆರೋಪಿಯಾದ ಆರ್‌ಪಿಐ ಎಸ್.ವಿ. ಮಧು ಮೂಲಕ ಪೊಲೀಸ್ ನೇಮಕಾತಿ ವಿಭಾಗದ ಎಫ್‌ಡಿಎ ಹರ್ಷನಿಗೆ ನೀಡಲಾಗಿತ್ತು. ನಂತರವೇ ರಚನಾ ಅವರ ಒಎಂಆರ್ ಪ್ರತಿ ತಿದ್ದುಪಡಿ ಮಾಡಿ ರ್‍ಯಾಂಕ್ ಬರುವಂತೆ ಮಾಡಲಾಗಿತ್ತು’ ಎಂದೂ ಮೂಲಗಳು ತಿಳಿಸಿವೆ.

‘ರಚನಾಗೆ ಸಹಾಯ ಮಾಡಿದ್ದ ಸಹೋದ್ಯೋಗಿ, ಯಾವುದೇ ಹಣ ಪಡೆದಿಲ್ಲ. ರಚನಾ ಹಾಗೂ ಬಸವರಾಜ ಅವರನ್ನು ಒಮ್ಮೆ ಮಾತ್ರ ಪರಿಚಯ ಮಾಡಿಕೊಂಡಿದ್ದರು. ಇದಾದ ನಂತರ, ಆರೋಪಿಗಳೇ ಹೆಚ್ಚು ಬಾರಿ ಮಾತನಾಡಿ ಅಕ್ರಮ ಎಸಗಿದ್ದರು. ಸಹೋದ್ಯೋಗಿಯನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ. ಅವರ ಹೇಳಿಕೆ ಪಡೆದು, ಪ್ರಕರಣದಲ್ಲಿ ಸಾಕ್ಷಿದಾರರಾಗಿ ಪರಿಗಣಿಸಲಾಗಿದೆ’ ಎಂದೂ ಹೇಳಿವೆ.

ಪಿಎಸ್ಐ: ಮತ್ತೊಬ್ಬ ಅಭ್ಯರ್ಥಿ ಬಂಧನ

ಬೆಂಗಳೂರು: ಪಿಎಸ್ಐ ಅಕ್ರಮ ನೇಮಕಾತಿ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ ಅಭ್ಯರ್ಥಿ ಎ.ಪಿ. ಮನೋಜ್ ಎಂಬುವವರನ್ನು ಸಿಐಡಿ ಅಧಿಕಾರಿಗಳು ಮಂಗಳವಾರ ಬಂಧಿಸಿದ್ದಾರೆ.

‘ಜೆ.ಪಿ.ನಗರದ ಮಾರೇನಹಳ್ಳಿ ನಿವಾಸಿ ಮನೋಜ್, ಪಿಎಸ್ಐ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ರಾಜ್ಯಕ್ಕೆ 46ನೇ ರ್‍ಯಾಂಕ್ ಪಡೆದಿದ್ದ. ಈತನ ಒಎಂಆರ್ ಪ್ರತಿ ಪರಿಶೀಲಿಸಿದಾಗ, ಅಕ್ರಮ ಎಸಗಿದ್ದು ಪತ್ತೆಯಾಗಿತ್ತು. ಈತನ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಏಪ್ರಿಲ್ 30ರಂದು ಎಫ್‌ಐಆರ್ ದಾಖಲಿಸಲಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಪ್ರಕರಣ ದಾಖಲಾಗುತ್ತಿದ್ದಂತೆ ಮನೋಜ್ ನಾಪತ್ತೆಯಾಗಿದ್ದ. ಹಲವು ಬಾರಿ ನೋಟಿಸ್ ನೀಡಿದರೂ ವಿಚಾರಣೆಗೆ ಬಂದಿರಲಿಲ್ಲ. ಹಲವೆಡೆ ಶೋಧ ನಡೆಸಿದರೂ ಈತನ ಸುಳಿವು ಪತ್ತೆ ಸಾಧ್ಯವಾಗಿರಲಿಲ್ಲ. ಈತನ ಬಂಧನಕ್ಕೆ ನ್ಯಾಯಾಲಯ ಸಹ ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು’ ಎಂದೂ ತಿಳಿಸಿವೆ.

10 ದಿನ ಕಸ್ಟಡಿಗೆ: ‘ಮನೋಜ್‌ನನ್ನು ನ್ಯಾಯಾಲಯಕ್ಕೆ ಮಂಗಳವಾರವೇ ಹಾಜರುಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 10 ದಿನ ಕಸ್ಟಡಿಗೆ ಪಡೆಯಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

ಅಕ್ಟೋಬರ್‌ನಲ್ಲೇ ವೇತನ ಆಯೋಗ ರಚನೆ: ಸಿ.ಎಂ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಏಳನೇ ವೇತನ ಆಯೋಗವನ್ನು ಅಕ್ಟೋಬರ್‌ನಲ್ಲಿ ರಚನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ರಾಜ್ಯ ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ರಾಜ್ಯ ಸರ್ಕಾರಿ ನೌಕರರ ದಿನಾಚರಣೆ’ ಉದ್ಘಾಟಿಸಿ ಅವರು ಮಾತನಾಡಿದರು.

‘ಸರ್ಕಾರಿ ನೌಕರರ ಬೇಡಿಕೆಗಳಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಲಿದೆ. ನೌಕರರಿಗೆ ಆರೋಗ್ಯ ವಿಮೆ ಒದಗಿಸುವ ಆರೋಗ್ಯ ಸಂಜೀವಿನಿ ಯೋಜನೆ ಅನುಷ್ಠಾನಕ್ಕೆ ಈಗಾಗಲೇ ಆದೇಶ ಹೊರಡಿಸಲಾಗಿದೆ’ ಎಂದರು.

ಹಿಂಬದಿ ಪ್ರಯಾಣಿಕರಿಗೂ ಸೀಟ್‌ಬೆಲ್ಟ್ ಕಡ್ಡಾಯ ಶೀಘ್ರ

ನವದೆಹಲಿ: ‘ಕಾರು ಮತ್ತು ಎಸ್‌ಯುವಿ ಗಳ ಹಿಂದಿನ ಆಸನಗಳಲ್ಲಿ ಕುಳಿತು ಪ್ರಯಾಣಿಸುವವರು ಕೂಡ ಸೀಟ್ ಬೆಲ್ಟ್ ಧರಿಸುವುದನ್ನು ಕಡ್ಡಾಯಗೊಳಿಸಲಾಗುವುದು. ಸೀಟ್ ಬೆಲ್ಟ್ ಧರಿಸದವರಿಗೆ ದಂಡ ಹಾಕಲಾಗುವುದು. ಈ ಕುರಿತ ಅಧಿಸೂಚನೆಯನ್ನು ಮೂರು ದಿನಗಳಲ್ಲಿ ಹೊರಡಿಸಲಾಗುವುದು’ ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಮಂಗಳವಾರ ಹೇಳಿದ್ದಾರೆ.

‘ಹಿಂದಿನ ಆಸನಗಳಲ್ಲಿ ಕುಳಿತವರು ಕೂಡ ಸೀಟ್ ಬೆಲ್ಟ್ ಧರಿಸುವುದರ ಮಹತ್ವದ ಬಗ್ಗೆ ಕ್ರಿಕೆಟ್ ಆಟಗಾರರು ಮತ್ತು ಬಾಲಿವುಡ್ ತಾರೆಯರನ್ನು ಬಳಸಿ ಜಾಗೃತಿ ಮೂಡಿಸಲಾಗುವುದು’ ಎಂದೂ ಹೇಳಿದ್ದಾರೆ.

ಕಾರ್ಯಕ್ರಮದಲ್ಲಿ ರೇವಾ ವಿಶ್ವವಿದ್ಯಾಲಯದ ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಸುನೀಲ್ ಕುಮಾರ್ ಮಾನ್ವಿ ಅವರಿಗೆ ‘ಉತ್ತಮ ಸಂಶೋಧಕ’ ಪ್ರಶಸ್ತಿ ನೀಡಲಾಯಿತು. ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಸಹ ಕುಲಪತಿಗಳಾದ ಡಾ.ವಿದ್ಯಾಶಂಕರ್ ಶೆಟ್ಟಿ, ಆರ್.ಸಿ.ಬಿರಾದಾರ್ ಇದ್ದರು

‘ಅಭಿವ್ಯಕ್ತಿ’ ಪ್ರಮಾಣಪತ್ರ ಕಾರ್ಯಕ್ರಮಕ್ಕೆ ಚಾಲನೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ‘ಅಭಿವ್ಯಕ್ತಿ ಪ್ರಮಾಣಪತ್ರ ಕಾರ್ಯಕ್ರಮ’ಕ್ಕೆ ಚಾಲನೆ ನೀಡಲಾಯಿತು.

ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ‘ಶಿಕ್ಷಣದಲ್ಲಿ ಸಂವಹನ ಶಕ್ತಿಯನ್ನು ಅರಿಯಲು ಮತ್ತು ಪರಿಣಾಮಕಾರಿ ಬೋಧನೆಗಾಗಿ ಹೊಸ-ಮಾರ್ಗಗಳನ್ನು ಕಂಡುಕೊಳ್ಳಲು ಈ ನೂತನ ಕೋರ್ಸ್ ಆರಂಭಿಸಲಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪರಸ್ಪರ ಸಂವಾದ ನಡೆಸುವ ಮೂಲಕ ಬೋಧನೆ ಕಲಿಕೆಯ ಹಾದಿಯನ್ನು ಆವಿಷ್ಕರಿಸಲು ನೆರವಾಗಲಿದೆ’ ಎಂದು ತಿಳಿಸಿದರು.

ಶಿಕ್ಷಣ, ಕಲೆ ಮತ್ತು ಯುವಜನರನ್ನು ಬೆಸೆಯುವ ಸಂವಾದವನ್ನು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಆರಂಭಿಸಬೇಕಾದ ಅಗತ್ಯವಿದ್ದು, ರಾಷ್ಟ್ರೀಯ ಶಿಕ್ಷಣ ಪಾಲಿಸಿಯಲ್ಲಿ ನಮ್ಮ ಕಲೆ, ಭಾಷೆ ಮತ್ತು ಸಂಸ್ಕೃತಿಯನ್ನು ಬೆಳೆಸುವುದರ ಜೊತೆಗೆ ಇತರೆ ದೇಶಗಳಿಗೂ ನೀಡಬೇಕೆಂಬ ಅಂಶಗಳಿದ್ದು, ಇದರ ಭಾಗವಾಗಿಯೇ ‘ಅಭಿವ್ಯಕ್ತಿ’ಯ ಮೂಲಕ ವಿಶ್ವವಿದ್ಯಾಲಯವು ಈ ಉಪಕ್ರಮ ಆರಂಭಿಸಿದೆ. ಕೋವಿಡ್ ಸಂದರ್ಭದಲ್ಲಿ ಕಡಿದು ಹೋಗಿದ್ದ ಮಕ್ಕಳು ಮತ್ತು ಶಿಕ್ಷಕರ ನಡುವಿನ ಸಂಪರ್ಕವನ್ನು ಪುನಃ ಆರಂಭಿಸಬೇಕೆಂಬ ಉದ್ದೇಶದಿಂದಲೂ ಈ ಕೋರ್ಸ್‌ಗೆ ಚಾಲನೆ ನೀಡಲಾಗಿದೆ ಎಂದರು.

‘ಮಧ್ಯವರ್ತಿಗಳಿಗೆ ಪ್ರವೇಶ ನೀಡಿಲ್ಲ’

ಬೆಂಗಳೂರು: ‘ವಿವಿಧ ಇಲಾಖೆಗಳಲ್ಲಿ ಆಯಕಟ್ಟಿನ ಹುದ್ದೆಗಳಿಗೆ ವರ್ಗಾವಣೆ ಮಾಡಿಸಲು ಮಧ್ಯವರ್ತಿಗಳ ದೊಡ್ಡ ಗುಂಪೇ ಇದೆ. ನಾನು ಸಚಿವನಾದ ಬಳಿಕ ಇಲಾಖೆಯಲ್ಲಿ ಮಧ್ಯವರ್ತಿಗಳಿಗೆ ಪ್ರವೇಶ ನೀಡಿಲ್ಲ’ ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ತಿಳಿಸಿದರು.

ವಿವಿಧ ಇಲಾಖೆಗಳಲ್ಲಿ ನೇಮಕಾತಿ ಮತ್ತು ವರ್ಗಾವಣೆ ದಂಧೆ ಕುರಿತ ಪ್ರಶ್ನೆಗೆ ಅವರು, ‘ಹಿಂದಿನಿಂದಲೂ ಮಧ್ಯವರ್ತಿಗಳ ಗುಂಪು ವಿಧಾನಸೌಧದಲ್ಲಿ ರೌಂಡ್ ಹೊಡೆಯುತ್ತಲೇ ಇದೆ’ ಎಂದು ಹೇಳಿದರು.

‘ನಾನು ಸಚಿವನಾದ ಬಳಿಕ 1,800 ಲೈನ್‌ಮನ್‌ಗಳ ನೇಮಕಾತಿ ಆಗಿದೆ. ಕೆಪಿಟಿಸಿಎಲ್‌ನ ಎಇ ಮತ್ತು ಜೆಇ ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಜಾಮರ್ ಅಳವಡಿಸಲಾಗಿತ್ತು. ಕಾಪಿ ಮಾಡಲು ಅವಕಾಶ ಇರಲಿಲ್ಲ ಎಂದು ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದಾರೆ’ ಎಂದರು.

ಸೇವೆ ಕಾಯಂಗೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಮುಷ್ಕರ

ವಿದ್ಯುತ್ ಪ್ರತಿನಿಧಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಸೇವೆಯನ್ನು ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿ ಗ್ರಾಮ ವಿದ್ಯುತ್ ಪ್ರತಿನಿಧಿಗಳು ನಗರದಲ್ಲಿ ಸೋಮವಾರದಿಂದ ಪ್ರತಿಭಟನೆ ಆರಂಭಿಸಿದ್ದಾರೆ.

ಅಖಿಲ ಕರ್ನಾಟಕ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

‘ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು 3,700 ಮಂದಿ ವಿದ್ಯುತ್ ಪ್ರತಿನಿಧಿಗಳಿದ್ದಾರೆ. ಗ್ರಾಹಕರಿಗೆ ವಿದ್ಯುತ್ ಬಿಲ್ ನೀಡುವುದು, ಹಣ ಸಂಗ್ರಹಿಸಿ ಕಂಪನಿಗಳಿಗೆ ಪಾವತಿಸುವುದು ಹಾಗೂ ಇಲಾಖೆ ಕೆಲಸಗಳ ನಿರ್ವಹಣೆಯಲ್ಲೂ ಸಹಾಯ ಮಾಡುತ್ತಿದ್ದಾರೆ’ ಎಂದು ಪ್ರತಿಭಟನಕಾರರು ತಿಳಿಸಿದರು.

‘ಪ್ರತಿನಿಧಿಗಳ ಸೇವೆಯನ್ನು ಕಾಯಂಗೊಳಿಸುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ, ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ಇದರ ನಡುವೆಯೇ ಸಚಿವರು ಕಾಯಂಗೊಳಿಸುವ ಭರವಸೆ ನೀಡುತ್ತಿದ್ದಾರೆ. ಈ ಬೆಳವಣಿಗೆಯಿಂದ ಪ್ರತಿನಿಧಿಗಳಲ್ಲಿ ಗೊಂದಲ ಉಂಟಾಗಿದೆ. ಸೇವೆ ಕಾಯಂ ಬಗ್ಗೆ ರಾಜ್ಯ ಸರ್ಕಾರ ಲಿಖಿತ ಭರವಸೆ ನೀಡಬೇಕು. ಈ ಬೇಡಿಕೆ ಈಡೇರಿಸುವವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ’ ಎಂದು ಎಚ್ಚರಿಸಿದರು.

‘ಕೆಲಸ ಕಾಯಂಗೊಳಿಸಬೇಕು’ ಎಂದು ಒತ್ತಾಯಿಸಿ ಗ್ರಾಮ ವಿದ್ಯುತ್ ಪ್ರತಿನಿಧಿಗಳು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿದರು — ಪ್ರಜಾವಾಣಿ ಚಿತ್ರ

ಉಚಿತ ವಿದ್ಯುತ್ ಯೋಜನೆ ಅನುಷ್ಠಾನಕ್ಕೆ ಆ್ಯಪ್

ಎಸ್ಸಿಎಸ್ಟಿ ಗ್ರಾಹಕರಿಗೆ ಮಾಸಿಕ 75 ಯೂನಿಟ್ ಯೋಜನೆ ರದ್ದುಪಡಿಸಿಲ್ಲ: ಬೆಸ್ಕಾಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಮಾಸಿಕ 75 ಯೂನಿಟ್ ಗೃಹ ಬಳಕೆಯ ‘ಅಮೃತ ಜ್ಯೋತಿ’ ಉಚಿತ ವಿದ್ಯುತ್ ಯೋಜನೆಯನ್ನು ರದ್ದು ಪಡಿಸಿಲ್ಲ ಎಂದು ಬೆಸ್ಕಾಂ ಸ್ಪಷ್ಟಪಡಿಸಿದೆ.

ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಆಗಸ್ಟ್ 24ರಂದು ಹೊರಡಿಸಿದ್ದ ಮಾರ್ಗಸೂಚಿ ಸುತ್ತೋಲೆಯನ್ನು ಇ-ಆಡಳಿತ ಇಲಾಖೆಯು ಭಾಗಶಃ ಪರಿಷ್ಕರಿಸಿದೆ. ಆದ್ದರಿಂದ, ಈ ಸುತ್ತೋಲೆಯನ್ನು ಸೆಪ್ಟೆಂಬರ್ 3ರಂದು ಹಿಂಪಡೆಯಲಾಗಿದೆಯೇ ಹೊರತು, ಯೋಜನೆಯನ್ನು ರದ್ದುಪಡಿಸಿಲ್ಲ ಎಂದೂ ಹೇಳಿದೆ.

ಬಿಪಿಎಲ್ ಕುಟುಂಬದ ಎಸ್ಸಿ-ಎಸ್ಟಿ ಗ್ರಾಹಕರಿಗೆ 75 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡುವ ಅಮೃತ ಜ್ಯೋತಿ ವಿದ್ಯುತ್ ಯೋಜನೆಯನ್ನು ರಾಜ್ಯ ಸರ್ಕಾರ ಮೇ 18ರಂದು ರಾಜ್ಯದಾದ್ಯಂತ ಜಾರಿಗೆ ತಂದಿತ್ತು.

ಈ ಯೋಜನೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಿಪಿಎಲ್ ಕುಟುಂಬಗಳಿಗೆ ಸುಲಭ ಮತ್ತು ಸುಲಲಿತವಾಗಿ ಅನುಷ್ಠಾನಗೊಳಿಸಲು ಇ-ಆಡಳಿತ ಇಲಾಖೆಯು ಹೊಸ ಆಪ್ ಅಭಿವೃದ್ಧಿಪಡಿಸುತ್ತಿದೆ. 39 ಲಕ್ಷ ಬಿಪಿಎಲ್ ಕುಟುಂಬಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗ್ರಾಹಕರಿಗೆ ಈ ಯೋಜನೆಯ ಲಾಭ ಸಿಗಲಿದೆ. ಈಗಾಗಲೇ 4 ಲಕ್ಷ ಫಲಾನುಭವಿಗಳನ್ನು ಗುರುತಿಸಲಾಗಿದೆ.

ಮೇ ಮತ್ತು ಜೂನ್ ತಿಂಗಳ ವಿದ್ಯುತ್ ಬಿಲ್ ಮೊತ್ತವನ್ನು ಸುಮಾರು 15 ಸಾವಿರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ಮರುಪಾವತಿಸಲಾಗಿದೆ. ಫಲಾನುಭವಿ ಗ್ರಾಹಕರಿಗೆ ತಾವು ಪಾವತಿಸಿದ ಒಟ್ಟು ವಿದ್ಯುತ್ ಬಿಲ್‌ನ ಮೊತ್ತದಲ್ಲಿ 75 ಯೂನಿಟ್‌ಗಳವರೆಗಿನ ವಿದ್ಯುತ್ ಶುಲ್ಕದ ಮೊತ್ತವನ್ನು ಅವರ ಬ್ಯಾಂಕ್ ಖಾತೆಗೆ ನೇರ ವರ್ಗಾವಣೆ ಮಾಡಲಾಗುತ್ತಿದೆ.

ಈ ಹಿಂದೆ ಸುವಿಧಾ ಆ್ಯಪ್ ಮೂಲಕ ಅರ್ಜಿ ಸಲ್ಲಿಸಬೇಕಿತ್ತು. ಅದರಲ್ಲಿ ಅರ್ಜಿ ಸಲ್ಲಿಕೆಗೆ ಕೆಲವು ಸಮಸ್ಯೆಗಳು ಇದ್ದವು. ಅವುಗಳನ್ನು ಸರಳೀಕರಿಸಿ ಹೆಚ್ಚು ಜನ ಇದರ ಪ್ರಯೋಜನ ಪಡೆಯಲು ನೆರವಾಗಲು ಹೊಸ ಆ್ಯಪ್ ಸಿದ್ಧಪಡಿಸಲೆಂದು ಸುತ್ತೋಲೆ ಹೊರಡಿಸಲಾಗಿತ್ತು ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಪ್ರತಿಕ್ರಿಯಿಸಿದ್ದಾರೆ.

ರಾಷ್ಟ್ರದಲ್ಲಿ ಬೇಡಿಕೆಯಷ್ಟು ಸಿಗದ ಕಣ್ಣು: ಭುಜಂಗಶೆಟ್ಟಿ

ಬೆಂಗಳೂರು: ‘ರಾಷ್ಟ್ರದಲ್ಲಿ ಪ್ರತಿವರ್ಷ 2 ಲಕ್ಷ ಕಣ್ಣುಗಳ ಸಂಗ್ರಹದ ಗುರಿಯಿದ್ದರೂ ಕೇವಲ 60 ಸಾವಿರದಷ್ಟು ಕಣ್ಣುಗಳನ್ನು ಮಾತ್ರ ಸಂಗ್ರಹಿಸಲು ಸಾಧ್ಯವಾಗುತ್ತಿದೆ’ ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ.ಕೆ.ಭುಜಂಗಶೆಟ್ಟಿ ಹೇಳಿದರು.

ನಗರದ ನಾರಾಯಣ ನೇತ್ರಾಲಯದಲ್ಲಿ ಮಂಗಳವಾರ ನಡೆದ 37ನೇ ನೇತ್ರದಾನ ಪಾಕ್ಷಿಕದಲ್ಲಿ ಅವರು ಮಾತನಾಡಿದರು.

‘ಕೊರೊನಾ ಕಾರಣಕ್ಕೆ ಕಣ್ಣುಗಳ ಸಂಗ್ರಹ ಕಡಿಮೆಯಾಗಿದೆ. ಆರಂಭದಲ್ಲಿ ಕೊರೊನಾ ಹೇಗೆ ಹಬ್ಬುತ್ತಿದೆ ಎಂಬ ಅರಿವು ಇರಲಿಲ್ಲ. ಮೃತಪಟ್ಟವರ ಕಣ್ಣುಗಳನ್ನು ಸಂಗ್ರಹಿಸದಂತೆ ಕೇಂದ್ರವೇ ತಿಳಿಸಿತ್ತು’ ಎಂದರು.

‘ಬೇಡಿಕೆಯಷ್ಟು ಕಣ್ಣುಗಳ ಸಂಗ್ರಹವಾಗುತ್ತಿಲ್ಲ. ಕಣ್ಣಿನಲ್ಲಿ ಗಾಯ, ಹುಣ್ಣುಗಳಾದರೆ ಶಾಶ್ವತವಾಗಿ ಕಣ್ಣನ್ನೇ ಕಳೆದುಕೊಳ್ಳುವ ಸಾಧ್ಯತೆ ಇದೆ. ಬೆಂಗಳೂರಿನಲ್ಲಿ ದಿನಕ್ಕೆ 300ರಿಂದ 400 ಮಂದಿ ಮೃತಪಡುತ್ತಿದ್ದಾರೆ. ಆದರೆ, ಇವುಗಳಲ್ಲಿ 8ಕ್ಕಿಂತ ಕಡಿಮೆ ಕಣ್ಣುಗಳನ್ನು ಮಾತ್ರ ಸಂಗ್ರಹಿಸಲಾಗುತ್ತಿದೆ. ಕಾರ್ನಿಯಾದ ಕುರುಡುತನವನ್ನು ನೇತ್ರದಾನದಿಂದ ಕಸಿ ಮಾಡುವ ಮೂಲಕ ಚಿಕಿತ್ಸೆ ನೀಡಬಹುದು. ಮಾನವ ಅಂಗಾಂಶಕ್ಕೆ ಪರ್ಯಾಯ ಇಲ್ಲ’ ಎಂದು ಹೇಳಿದರು.

‘ದೇಶದಲ್ಲಿ 15 ಲಕ್ಷ ಜನರಿಗೆ ಕಾರ್ನಿಯಾದ ಅಂಧತ್ವವಿದ್ದು, ಕಾರ್ನಿಯಾ ಕಸಿಗಾಗಿ ಕಾಯುತ್ತಿದ್ದಾರೆ. ನೇತ್ರದಾನದ ಮೂಲಕ ಅಂಧತ್ವ ಹೋಗಲಾಡಿಸಲು ಸಾಧ್ಯವಿದೆ. ನೇತ್ರದಾನಕ್ಕೆ ಹೆಸರು ನೋಂದಣಿ ಮಾಡಿದರೆ ಮರಣದ ನಂತರ ಆರು ಗಂಟೆಯಲ್ಲಿ ಕಣ್ಣು ಸಂಗ್ರಹಿಸಲಾಗುವುದು’ ಎಂದರು.

‘ನಮ್ಮ ನೇತ್ರ ಬ್ಯಾಂಕ್‌ನಲ್ಲಿ 28 ವರ್ಷಗಳಲ್ಲಿ 70 ಸಾವಿರ ಕಣ್ಣು ಸಂಗ್ರಹಿಸಲಾಗಿತ್ತು. ಪುನೀತ್ ರಾಜಕುಮಾರ್ ಅವರ ಕಣ್ಣು ಸಂಗ್ರಹದ ಬಳಿಕ ಜಾಗೃತಿ ಹೆಚ್ಚಾಗಿದೆ. 85 ಸಾವಿರ ಮಂದಿ ನೇತ್ರದಾನಕ್ಕೆ ಹೆಸರು ನೋಂದಣಿ ಮಾಡಿದ್ದಾರೆ’ ಎಂದರು.

ಇದೇ ವೇಳೆ ಹರೀಶ್ ನಂಜಪ್ಪ ಸ್ಮರಣಾರ್ಥ ಸ್ಥಾಪಿಸಿದ ವಾರ್ಷಿಕ ನೇತ್ರದಾನ ಪ್ರಶಸ್ತಿಯನ್ನು ಯಲಹಂಕದ ಸರ್ಕಾರಿ ಆಸ್ಪತ್ರೆಗೆ ನೀಡಲಾಯಿತು. ಗುರುದೇವ್, ಎಸ್.ಕೆ.ಮಿತಲ್, ಡಾ.ಯತೀಶ್, ಡಾ.ಶಾಂತಲಾ ಹಾಜರಿದ್ದರು.

ನಗರದ ನಾರಾಯಣ ನೇತ್ರಾಲಯದಲ್ಲಿ ಮಂಗಳವಾರ 37ನೇ ನೇತ್ರದಾನ ಪಾಕ್ಷಿಕದ ಅಂಗವಾಗಿ ನಡೆದ ಸೈಕ್ಲಥಾನ್‌ಗೆ ನೇತ್ರಾಲಯದ ಅಧ್ಯಕ್ಷ ಡಾ.ಭುಜಂಗಶೆಟ್ಟಿ ಅವರು ಚಾಲನೆ ನೀಡಿದರು

ಲಾಲ್‌ಬಾಗ್: ಪ್ರತಿ ಇಂಗುಗುಂಡಿಯಿಂದ 1.28 ಲಕ್ಷ ಲೀಟರ್ ಮಳೆ ನೀರು ಸಂಗ್ರಹದ ಗುರಿ

‘ಒನ್ ಬಿಲಿಯನ್ ಡ್ರಾಪ್ಸ್’ ಅಭಿಯಾನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಗು ಗುಂಡಿಗಳ (ಪರ್ಕೊಲೇಷನ್ ವೆಲ್) ಮೂಲಕ ಮಳೆ ನೀರು ಸಂಗ್ರಹಿಸುವ ‘ಒನ್ ಬಿಲಿಯನ್ ಡ್ರಾಪ್ಸ್ ಅಭಿಯಾನ’ಕ್ಕೆ ಮಂಗಳವಾರ ಲಾಲ್‌ಬಾಗ್‌ನಲ್ಲಿ ಚಾಲನೆ ನೀಡಲಾಯಿತು.

ತೋಟಗಾರಿಕೆ ಇಲಾಖೆ, ಯುನೈಟೆಡ್ ವೇ ಆಫ್ ಬೆಂಗಳೂರು ಮತ್ತು ಎಂಫಸಿಸ್ ಕಂಪನಿಯು ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ (ಸಿಎಸ್‌ಆರ್) ಸಹಭಾಗಿತ್ವದಲ್ಲಿ ಪರಿಸರ ಅರಣ್ಯೀಕರಣ ಮತ್ತು ಸಮಗ್ರ ಜಲಾನಯನ ಅಭಿವೃದ್ಧಿಯ ಮೂರು ವರ್ಷಗಳ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಯುನೈಟೆಡ್ ವೇ ಬೆಂಗಳೂರಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ಕೃಷ್ಣನ್ ಮಾತನಾಡಿ, ‘ಎಂಫಸಿಸ್ ಬೆಂಬಲದೊಂದಿಗೆ ಲಾಲ್‌ಬಾಗ್ ಆವರಣದಲ್ಲಿ 220 ಇಂಗುಗುಂಡಿಗಳನ್ನು ನಿರ್ಮಿಸಲಾಗುವುದು. ಇವುಗಳಿಂದ ನೀರಿನ ಹರಿವು, ಪ್ರವಾಹ, ಮತ್ತು ಅಂತರ್ಜಲದಂತಹ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ಜೊತೆಗೆ ಅಂತರ್ಜಲ ಮಟ್ಟವು ಗಣನೀಯವಾಗಿ ಏರಿಕೆಯಾಗುತ್ತದೆ’ ಎಂದರು.

ಲಾಲ್‌ಬಾಗ್‌ನಲ್ಲಿ ನಿರ್ಮಿಸಲು ಉದ್ದೇಶಿಸಿರುವ ಇಂಗು ಗುಂಡಿಯ (ಪರ್ಕೊಲೇಷನ್ ವೆಲ್) ಮಾದರಿಯನ್ನು ಅನಾವರಣಗೊಳಿಸಲಾಯಿತು –ಪ್ರಜಾವಾಣಿ ಚಿತ್ರ

‘ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರಿನ ವಿವಿಧ ಭಾಗಗಳಲ್ಲಿ 1,100 ಇಂಗುಗುಂಡಿಗಳನ್ನು ನಿರ್ಮಿಸುವ ಗುರಿ ಇದೆ. ತುಮಕೂರು ಜಿಲ್ಲೆಯ ಕೊರಟಗೆರೆಯ ದೊಡ್ಡಸಾಗ್ಗೆರೆಯಲ್ಲಿ 228 ಎಕರೆ ಸಸ್ಯೋದ್ಯಾನದ 11 ಎಕರೆ ಪ್ರದೇಶದಲ್ಲಿ 1 ಲಕ್ಷ ಒಣ ಎಲೆ ಉದುರುವ ಮರದ ಸಸಿಗಳನ್ನು ನೆಡಲಾಗುತ್ತದೆ. ಮೂರು ವರ್ಷಗಳವರೆಗೂ ಎಂಫಸಿಸ್ ಬೆಂಬಲದೊಂದಿಗೆ ಪೋಷಣೆ ಮಾಡಲಾಗುವುದು’ ಎಂದು ಮಾಹಿತಿ ನೀಡಿದರು.

ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ತೋಟಗಾರಿಕೆ ಇಲಾಖೆ ನಿರ್ದೇಶಕ ಕೆ. ನಾಗೇಂದ್ರ ಪ್ರಸಾದ್, ಎಂಫಸಿಸ್‌ನ ಸಿಎಚ್‌ಆರ್‌ಒ ಶ್ರೀಕಾಂತ್ ಕರ್ರಾ ಇದ್ದರು.

ಲಾಲ್‌ಬಾಗ್: ಇಂಗುಗುಂಡಿಗಳು ಸಹಕಾರಿ

ಲಾಲ್‌ಬಾಗ್‌ನಲ್ಲಿ ಈಗಾಗಲೇ 280 ಇಂಗು ಗುಂಡಿಗಳಿದ್ದು, ಭೌಗೋಳಿಕವಾಗಿ ದಕ್ಷಿಣ ಪ್ರದೇಶವು ಎತ್ತರದಿಂದ ಹಾಗೂ ಉತ್ತರ ಪ್ರದೇಶವು ಇಳಿಜಾರು ಪ್ರದೇಶದಿಂದ ಕೂಡಿದೆ. ಮಳೆ ಬಂದ ಸಂದರ್ಭದಲ್ಲಿ ನೀರು ಕಾಲುವೆಗಳ ಮೂಲಕ ಹಾದುಹೋಗಿ, ಪೋಲಾಗುತ್ತಿತ್ತು. ಇದನ್ನು ತಡೆಯಲು ಇಂಗುಗುಂಡಿಗಳು ಸಹಕಾರಿಯಾಗಿವೆ. ಉದ್ಯಾನದಲ್ಲಿ 1,850 ವಿವಿಧ ಜಾತಿಯ ಮರಗಳಿಗೆ ಸಂಗ್ರಹ ಮಾಡಿದ ನೀರನ್ನು ಬಳಸಲಾಗುತ್ತದೆ’ ಎಂದು ಲಾಲ್‌ಬಾಗ್ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು.

ಪ್ರಜಾವಾಣಿ
ಫೋನ್-ಇನ್ ಕಾರ್ಯಕ್ರಮ
ಕಾಲ್ ಮಾಡಿ ಸಮಸ್ಯೆ ಹೇಳ್ಕೊಳ್ಳಿ

- ಆಗಾಗ್ಗೆ ಕರೆಂಟ್ ಕೈ ಕೊಡುತ್ತಿದೆಯೇ?
- ವಿದ್ಯುತ್ ಬಳಕೆಯ ಶುಲ್ಕದಲ್ಲಿ ಏರುಪೇರು ಆಗುತ್ತಿದೆಯೇ?
- ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯುತ್ ಅವಘಡ ತಪ್ಪಿಸಲು ಕ್ರಮ ಏನು?
- ಪಂಪ್‌ಸೆಟ್‌ಗಳಿಗೆ ತ್ರಿಫೇಸ್ ವಿದ್ಯುತ್ ಪೂರೈಕೆಯಾಗುತ್ತಿಲ್ಲವೇ?

ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲಿದ್ದಾರೆ
ಮಹಾಂತೇಶ ಬೀಳಗಿ
ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

09-09-2022, ಶುಕ್ರವಾರ
ಸಮಯ: ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 11.30ರವರೆಗೆ
ದೂರವಾಣಿ: 080 45557261
LIVE /prajavani.net @prajavani /prajavani

‘ಆರ್ಟಿಸ್ಟ್ ಫಾರ್ ಹರ್’ ಸಂಸ್ಥೆಯ ಭಿತ್ತಿಪತ್ರವನ್ನು ಡಾ.ಹೇಮಾ ದಿವಾಕರ್ ಬಿಡುಗಡೆ ಮಾಡಿದರು. ಡಾ.ಅತುಲ್, ಡಾ.ಅಲೆಕ್ಸಾಂಡರ್ ಥಾಮಸ್, ಆಶೀಶ್ ಜೈನ್ ಮೊದಲಾದವರು ಹಾಜರಿದ್ದರು

ರಾಜ್ಯದ ಒಂದು ಸಾವಿರ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ

ಬೆಂಗಳೂರು: ‘ಆರ್ಟಿಸ್ಟ್ ಫಾರ್ ಹರ್’ ಸಂಸ್ಥೆಯು ರಾಜ್ಯದ ಒಂದು ಸಾವಿರ ತಾಯಿ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಲು ನಿರ್ಧರಿಸಿದೆ.

ಸಂಸ್ಥೆಯು ಹೆಲ್ತ್ ಕೇರ್ ಸೆಕ್ಟರ್ ಸ್ಕಿಲ್ ಕೌನ್ಸಿಲ್ ಮತ್ತು ಅಸೋಸಿಯೇಷನ್ ಆಫ್ ಹೆಲ್ತ್ ಕೇರ್ ಪ್ರೊವೈಡರ್ಸ್ ಇಂಡಿಯಾದೊಂದಿಗೆ ದೇಶದಲ್ಲಿ ಒಂದು ಲಕ್ಷ ಮುಂಚೂಣಿ ಆರೋಗ್ಯ ಕಾರ್ಯಕರ್ತರಿಗೆ ತರಬೇತಿ ನೀಡಲು ಒಪ್ಪಂದ ಮಾಡಿಕೊಂಡಿದೆ. ದೇಶದಾದ್ಯಂತ ಗರ್ಭಿಣಿಯರು, ತಾಯಂದಿರು ಮತ್ತು ನವಜಾತ ಶಿಶುಗಳಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ನಿಟ್ಟಿನಲ್ಲಿ ಈ ತರಬೇತಿ ನೀಡಲಾಗುತ್ತಿದೆ ಎಂದು ಆರ್ಟಿಸ್ಟ್ ಫಾರ್ ಹರ್‌ನ ಮುಖ್ಯಸ್ಥೆ ಡಾ.ಹೇಮಾ ದಿವಾಕರ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಗುಣಮಟ್ಟದ ಆರೋಗ್ಯ ಸೇವೆ ನೀಡುವಲ್ಲಿ ಅಗತ್ಯ ಮತ್ತು ಲಭ್ಯ ಕೌಶಲಗಳ ನಡುವೆ ಅಂತರವಿದೆ. ಒಂದು ಪ್ರಮುಖ ತರಬೇತಿ ಸಂಸ್ಥೆಯಾಗಿ, ಆರೋಗ್ಯ ವಿತರಣಾ ವ್ಯವಸ್ಥೆ ಬಲಪಡಿಸಲು ಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಆಶಾ ಕಾರ್ಯಕರ್ತೆಯರು, ಸ್ಟಾಫ್ ನರ್ಸ್‌ಗಳು ಹಾಗೂ ವೈದ್ಯರು ಸೇರಿ ತಾಯಿ ಆರೈಕೆಯ ಒಂದು ಸಾವಿರ ಮುಂಚೂಣಿ ಕಾರ್ಯಕರ್ತರಿಗೆ ಡಿಜಿಟಲ್ ವೇದಿಕೆ ಮೂಲಕ ತರಬೇತಿ ನೀಡುತ್ತೇವೆ. ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಅದ್ಭುತ ಕೌಶಲ ಹೊಂದಲು ನೆರವಾಗುತ್ತೇವೆ’ ಎಂದು ತಿಳಿಸಿದರು.

‘ದೇಶದಲ್ಲಿ 30 ಲಕ್ಷದಷ್ಟು ಹೆರಿಗೆಗಳಾಗುತ್ತವೆ. ಆದರೆ, ನಮ್ಮಲ್ಲಿ ಅದಕ್ಕೆ ಸಮಾನ ಪ್ರಮಾಣದಲ್ಲಿ ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿದ ಮಾನದಂಡದ ಸೇವೆ ನೀಡುವ ಕಾರ್ಯಕರ್ತರಿಲ್ಲ’ ಎಂದು ಹೇಳಿದರು.

ತರಬೇತಿ ಪಡೆದ ಕಾರ್ಯಕರ್ತರನ್ನು ಯಾವುದೇ ತಾಯಿ ಆರೋಗ್ಯ ಘಟಕ ಕೂಡ ಬಳಸಿಕೊಳ್ಳಬಹುದು ಎಂದು ಎಎಸ್‌ಪಿಐ ಅಧ್ಯಕ್ಷ ಡಾ.ಅಲೆಕ್ಸಾಂಡರ್ ಥಾಮಸ್ ತಿಳಿಸಿದರು.

ನಗರದಲ್ಲಿ ಇಂದು

ಒಂದು ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಿರುವ ಸಮುಚ್ಚಯಗಳ ಲೋಕಾರ್ಪಣೆ ಮತ್ತು ವಸತಿಗಳ ಹಸ್ತಾಂತರ: ಬಸವರಾಜ ಬೊಮ್ಮಾಯಿ, ವಿ.ಸೋಮಣ್ಣ, ಸ್ಥಳ: ಅಗ್ರಹಾರಪಾಳ್ಯ, ಯಲಹಂಕ, ಬೆಳಿಗ್ಗೆ 10.30

ಭಾರತ್@75 ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಅಧ್ಯಕ್ಷತೆ: ಜೆ.ಪಿ. ಸಿಂಘಾಲ್, ಅತಿಥಿಗಳು: ಶಾಂತಿಶ್ರೀ ಡಿ. ಪಂಡಿತ್, ಲಿಂಗರಾಜ ಗಾಂಧಿ, ಎಸ್. ಸಿ. ಶರ್ಮಾ, ಆಯೋಜನೆ: ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಶಿಕ್ಷಕ ಸಂಘ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 10.30

ಪುನರ್ ಮನನ ಕಾರ್ಯಕ್ರಮ: ಅತಿಥಿಗಳು: ಆರ್. ಪೂರ್ಣಿಮಾ, ಅಧ್ಯಕ್ಷತೆ: ಕೆ.ಪಿ. ನರಸಿಂಹಮೂರ್ತಿ, ಆಯೋಜನೆ: ಎಪಿಎಸ್ ಕಾಲೇಜ್ ಆಫ್ ಆರ್ಟ್ಸ್ ಆ್ಯಂಡ್ ಸೈನ್ಸ್, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

ಬೂಟ್ಸ್ ಏಟು: ಉದ್ಘಾಟನೆ: ಕೆ. ಆರ್. ರಮೇಶ್ ಕುಮಾರ್, ಅತಿಥಿಗಳು: ಅನುಪಮ ವಾಟಾಳ್ ನಾಗರಾಜ್, ರಾಮಚಂದ್ರೇಗೌಡ, ಅಧ್ಯಕ್ಷತೆ: ಸಾ.ರಾ. ಗೋವಿಂದು, ಆಯೋಜನೆ: ವಾಟಾಳ್ ಅಭಿಮಾನಿಗಳ ಸಂಘ, ಸ್ಥಳ: ಪುರಭವನ (ಟೌನ್‌ಹಾಲ್), ಬೆಳಿಗ್ಗೆ 11.30

‘ರಾವಿ ನದಿಯ ದಂಡೆಯಲ್ಲಿ’ ನಾಟಕ ಪ್ರದರ್ಶನ: ಹಿಂದಿ ಮೂಲ: ಅಸಗರ್ ವಜಾಹತ್, ಕನ್ನಡಕ್ಕೆ: ತಿಪ್ಪೇಸ್ವಾಮಿ, ನಿರ್ದೇಶನ: ಮಾಲತೇಶ್ ಬಡಿಗೇರ್, ಸಂಗೀತ: ವಿಜಯ ಬಡಿಗೇರ್, ಆಯೋಜನೆ: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್, ಸ್ಥಳ: ಚನ್ನಬಸಪ್ಪ ರಂಗಮಂದಿರ, ಕೆ.ಜಿ.ಎಸ್. ಕ್ಲಬ್, ಕಬ್ಬನ್ ಉದ್ಯಾನ, ಮಧ್ಯಾಹ್ನ 1.30

ಗಮನ ವಾಚನ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮ: ಅತಿಥಿಗಳು: ಆರ್.ಪಿ. ಮೋಹನ್, ಉಪಸ್ಥಿತಿ: ಗಂಗಮ್ಮ ವೆಂಕಟೇಶಮೂರ್ತಿ, ಹೇಮಾ. ಆರ್. ರಾವ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಾ ಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 6

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘ಪಿವಿ ಬ್ರ್ಯಾಂಡ್ ಸ್ಪಾಟ್’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad - 500028, CIN- L13100TG1958GOI001674

Invitation for Expression of Interest (EoI)

NMDC Limited intends to supply iron ore from its two mines viz Donimalai & Kumaraswamy in Karnataka under long-term agreements to interested end use parties who qualify the Eligibility Criteria for enlistment as long-term customer. NMDC Limited invites EOI from Integrated & Mini Steel Plants, Pellet Plants, Sponge Iron Plants and or any end use plants who wish to enter into long-term agreements with NMDC for supply of iron ore from Donimalai & Kumaraswamy mines.

The EOI document including Eligibility Criteria can be viewed and / or downloaded from NMDC's website http://www.nmdc.co.in, Any corrigendum to the above invitation will be uploaded only on NMDC website and will not be published. Prospective applicants should visit the above website from time to time to note the corrigendum, if any.

For further clarifications, Dy. General Manager (Commercial), NMDC Limited can be contacted on Cell No.: 9490759607 ; email: rajeevbagde@nmdc.co.in

Executive Director (Commercial)

हर एक काम देश के नाम इस्पाती इरादा

ಪೊಲೀಸ್ ತಪಾಸಣಾ ವರದಿ ಆಧರಿಸಿ ವಿಚಾರಣೆ ಆರಂಭಿಸಿದ ಲೋಕಾಯುಕ್ತ

ಆಸ್ಪತ್ರೆ ದುರವಸ್ಥೆ: ಮತ್ತೆ 4 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಿಂಟೊ ಕಣ್ಣಿನ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ ಮತ್ತು ಬಿಬಿಎಂಪಿ ಅಧೀನದ ಹತ್ತು ಆಸ್ಪತ್ರೆಗಳಲ್ಲಿನ ದುರವಸ್ಥೆ ಕುರಿತು ನಾಲ್ಕು ಸ್ವಯಂಪ್ರೇರಿತ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ವಿಚಾರಣೆ ಆರಂಭಿಸಿದ್ದಾರೆ.

ಬೆಂಗಳೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮಸ್ಯೆಗಳು, ದುರಾಡಳಿತ, ನಿಯಮ ಉಲ್ಲಂಘನೆ, ರೋಗಿಗಳಿಗೆ ಸೇವೆ ಒದಗಿಸುವುದರಲ್ಲಿನ ಲೋಪ ದೋಷಗಳ ಕುರಿತು ದಿಢೀರ್ ತಪಾಸಣೆ ನಡೆಸಿದ್ದ ಲೋಕಾಯುಕ್ತ ಪೊಲೀಸರು ವರದಿ ಸಲ್ಲಿಸಿದ್ದರು. ತನಿಖಾ ತಂಡಗಳು ಸಲ್ಲಿಸಿರುವ ವರದಿಗಳ ಆಧಾರದಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮುಖ್ಯಾಂಶಗಳು

- ತನಿಖಾ ತಂಡಗಳು ಸಲ್ಲಿಸಿರುವ ವರದಿಗಳ ಆಧಾರದಲ್ಲಿ ಪ್ರಕರಣ
- ಮಿಂಟೊ ಆಸ್ಪತ್ರೆಯಲ್ಲಿ ಸರಿಯಾಗಿ ಬೇಯಿಸದ ಆಹಾರ ಪೂರೈಕೆ
- ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿ ಕೊರತೆ

'ಮಿಂಟೊ ಆಸ್ಪತ್ರೆಯಲ್ಲಿ ರೋಗಿಗಳಿಗೆ ತಟ್ಟೆ, ಲೋಟ ಪೂರೈಸದೇ ಇರುವುದು, ಸರಿಯಾಗಿ ಬೇಯಿಸದ ಆಹಾರ ಪೂರೈಕೆ, ಸ್ಕ್ಯಾನಿಂಗ್ ಸೌಲಭ್ಯ ಇಲ್ಲದಿರುವುದು, ಆಸ್ಪತ್ರೆಯ ಹೊರಗಿನ ಕೊಠಡಿಯೊಂದರಲ್ಲಿ ವೈದ್ಯಕೀಯ ತ್ಯಾಜ್ಯ ಸಂಗ್ರಹಿಸಿ ಇಟ್ಟಿರುವುದು ಹಾಗೂ ವೈದ್ಯರು ಹೊರಗಿನ ಔಷಧಿ ಅಂಗಡಿಗಳಿಂದ ಔಷಧಿ ತರುವಂತೆ ಚೀಟಿ ಬರೆದುಕೊಡುತ್ತಿರುವುದು ಪತ್ತೆಯಾಗಿದೆ' ಎಂದು ಪೊಲೀಸರು ವರದಿಯಲ್ಲಿ ತಿಳಿಸಿದ್ದರು.

'ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಸಿಬ್ಬಂದಿ ಗುರುತಿನ ಚೀಟಿ ಧರಿಸುವುದಿಲ್ಲ. ವೈದ್ಯರು ಹೊರಗಡೆ ಖಾಸಗಿ ಸೇವೆ ಒದಗಿಸುತ್ತಿರುವ ದೂರುಗಳಿವೆ. ವೈದ್ಯರು ಮತ್ತು ಸಿಬ್ಬಂದಿ ಕೊರತೆ ಹೆಚ್ಚಿನ ಪ್ರಮಾಣದಲ್ಲಿದೆ. ಹಾಜರಾತಿ ವಹಿ ಮತ್ತು ನಗದು ಘೋಷಣಾ ವಹಿ ನಿರ್ವಹಿಸುತ್ತಿಲ್ಲ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

'ರಾಜೀವ್ ಗಾಂಧಿ ಆಸ್ಪತ್ರೆಯಲ್ಲಿ ಅಡುಗೆ ಕೋಣೆಯಲ್ಲಿ ಸ್ವಚ್ಛತೆ ಕಾಯ್ದುಕೊಂಡಿಲ್ಲ. ಅವಧಿ ಮೀರಿದ ಆಹಾರ ಪದಾರ್ಥಗಳು ಉಗ್ರಾಣದಲ್ಲಿ ಪತ್ತೆಯಾಗಿವೆ. ನಗದು ಘೋಷಣಾ ವಹಿ ನಿರ್ವಹಣೆ ಮಾಡುತ್ತಿಲ್ಲ. ವೈದ್ಯರು ಮತ್ತು ಸಿಬ್ಬಂದಿ ಕೊರತೆ ತೀವ್ರವಾಗಿದೆ' ಎಂದು ಪೊಲೀಸರು ವರದಿಯಲ್ಲಿ ತಿಳಿಸಿದ್ದರು.

'ಬಿಬಿಎಂಪಿ ಅಧೀನದ ಹತ್ತು ಹೆರಿಗೆ ಆಸ್ಪತ್ರೆಗಳು ಮತ್ತು ರೆಫರಲ್ ಆಸ್ಪತ್ರೆಗಳನ್ನು ತಪಾಸಣೆ ನಡೆಸಲಾಗಿದೆ. ರೋಗಿಗಳಿಗೆ ಸರಿಯಾದ ಊಟ ಒದಗಿಸದೇ ಇರುವುದು, ಸ್ವಚ್ಛತೆ ಕಾಯ್ದುಕೊಳ್ಳದಿರುವುದು, ಪ್ರಯೋಗಾಲಯ, ಎಕ್ಸ್‌ರೇ ಮತ್ತು ಸ್ಕ್ಯಾನಿಂಗ್ ಸೌಲಭ್ಯದ ಕೊರತೆ, ಖಾಸಗಿ ಔಷಧಿ ಅಂಗಡಿಗಳಿಂದ ಔಷಧಿ ತರುವಂತೆ ರೋಗಿಗಳಿಗೆ ಚೀಟಿ ಬರೆದು ಕೊಡುವುದು ಪತ್ತೆಯಾಗಿದೆ' ಎಂದು ತನಿಖಾ ತಂಡ ವರದಿ ಸಲ್ಲಿಸಿತ್ತು.

ಈ ಸಂಬಂಧ ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಲೋಕಾಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿ, ಆಯುಕ್ತರು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯದರ್ಶಿ, ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರು, ಎಲ್ಲ ಆಸ್ಪತ್ರೆಗಳ ಮುಖ್ಯಸ್ಥರು, ಬಿಬಿಎಂಪಿ ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು, ಆರೋಗ್ಯಾಧಿಕಾರಿ ಸೇರಿದಂತೆ ಹಲವರಿಗೆ ನೋಟಿಸ್ ಜಾರಿಗೆ ಆದೇಶಿಸಿದ್ದಾರೆ.

ಶಾಸಕ ಅರವಿಂದ ಲಿಂಬಾವಳಿ ಅವರು ಮಹಿಳೆಯರ ಆತ್ಮಗೌರವಕ್ಕೆ ಧಕ್ಕೆ ತಂದಿದ್ದು, ಅವರ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸಬೇಕು ಎಂದು ಆಗ್ರಹಿಸಿ ಮಹದೇವಪುರ ಕಾಂಗ್ರೆಸ್ ವತಿಯಿಂದ ವರ್ತೂರು ಕೋಡಿ ಬಳಿ ಪ್ರತಿಭಟನೆ ನಡೆಸಲಾಯಿತು. ಕೆಪಿಸಿಸಿ ಎಸ್‌ಸಿ ಘಟಕದ ಉಪಾಧ್ಯಕ್ಷ ನಲ್ಲೂರಹಳ್ಳಿ ನಾಗೇಶ್, ಪಾಲಿಕೆಯ ಮಾಜಿ ಸದಸ್ಯ ಉದಯಕುಮಾರ್, ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಬೆಳತೂರು ರಮೇಶ್, ವಿಟಿಬಿ ಬಾಬು, ನಾಗಪ್ಪ, ಅನಿಲ್, ರಾಮಕೃಷ್ಣಪ್ಪ ಇದ್ದರು.

ಕೆನರಾ ಬ್ಯಾಂಕ್ ಸಂಸ್ಥೆಯಿಂದ ಮೂರು ತಿಂಗಳ ತರಬೇತಿ

ಬೆಂಗಳೂರು: ಕೆನರಾ ಬ್ಯಾಂಕ್ ಸಂಸ್ಥೆ ನಿರುದ್ಯೋಗಿ ಯುವಕ-ಯುವತಿಯರಿಗೆ ಮೂರು ತಿಂಗಳ ಉಚಿತ ಕಂಪ್ಯೂಟರ್ ತರಬೇತಿ ನೀಡಲು ಮುಂದಾಗಿದೆ. ಅ.1ರಿಂದ ತರಬೇತಿ ಆರಂಭವಾಗಲಿದೆ.

ಅಭ್ಯರ್ಥಿಗಳು ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣಗೊಂಡಿರಬೇಕು. ಪಿಯುಸಿ, ಪದವಿ, ಡಿಪ್ಲೊಮಾ ಹೊಂದಿದವರಿಗೆ ಆದ್ಯತೆ. ವಯಸ್ಸು ಕನಿಷ್ಠ 18ರಿಂದ 27 ವರ್ಷದೊಳಗಿರಬೇಕು. ಪರಿಶಿಷ್ಟ ಜಾತಿ ಹಾಗೂ ವರ್ಗದವರಿಗೆ ಗರಿಷ್ಠ ವಯಸ್ಸು 30 ಆಗಿರಬೇಕು.

ತರಬೇತಿಗೆ ಸೇರಲು ಇಚ್ಛಿಸುವವರು ನೇರ ಸಂದರ್ಶನಕ್ಕೆ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯಲ್ಲಿ ಹಾಜರಾಗಬೇಕು. ಪ್ರತಿದಿನ ಬೆಳಿಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಮತ್ತು ಸಂದರ್ಶನಗಳು ನಡೆಯಲಿದ್ದು, ಪರೀಕ್ಷೆಗೆ ಹಾಜರಾಗುವ ಸಂದರ್ಭದಲ್ಲಿ ಅರ್ಜಿ ಫಾರಂ ಪಡೆಯಬಹುದಾಗಿದೆ.

ಹೆಚ್ಚಿನ ವಿವರಕ್ಕೆ ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರಂ, ಬೆಂಗಳೂರು, ದೂರವಾಣಿ: 23440036 ಹಾಗೂ 23463580 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಾಲಿಕೆ ಸಿಬ್ಬಂದಿಗೂ 'ಆರೋಗ್ಯ ಸಂಜೀವಿನಿ': ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ನೌಕರರಿಗೆ ಜಾರಿಗೊಳಿಸಿರುವ 'ಆರೋಗ್ಯ ಸಂಜೀವಿನಿ ಯೋಜನೆ'ಯನ್ನು ರಾಜ್ಯದ 11 ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೂ ಅನುಷ್ಠಾನಗೊಳಿಸಬೇಕು. ಇಲ್ಲದಿದ್ದರೆ ಸೆ.14ರಿಂದ ಮುಷ್ಕರ ನಡೆಸಲಾಗುತ್ತದೆ ಎಂದು ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ತಿಳಿಸಿದೆ.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ಮಂಗಳವಾರ ಪತ್ರ ಬರೆದಿರುವ ಸಂಘದ ಅಧ್ಯಕ್ಷ ಎ. ಅಮೃತ ರಾಜ್, 'ಮಹಾನಗರ ಪಾಲಿಕೆ ಸಿಬ್ಬಂದಿ ಸಾರ್ವಜನಿಕರೊಂದಿಗೆ ನೇರ ಒಡನಾಟದಲ್ಲಿ ಕೆಲಸ ಮಾಡುತ್ತಾರೆ. ತೆರಿಗೆ ವಸೂಲಿ, ಸ್ವಚ್ಛತೆ, ನಗರ ಅಭಿವೃದ್ಧಿ ಕಾಮಗಾರಿಗಳು, ಕೋವಿಡ್, ಚುನಾವಣೆ ಕೆಲಸ, ಜನನ-ಮರಣ ಪತ್ರ ಸೇರಿದಂತೆ ಮೂಲಸೌಕರ್ಯ ನೀಡುವ ಜವಾಬ್ದಾರಿ ಹೊಂದಿದ್ದಾರೆ. ಆದರೆ ಅವರೆಲ್ಲರ ಆರೋಗ್ಯ ರಕ್ಷಣೆಗೆ ಸರ್ಕಾರ ಹಿಂದೇಟು ಹಾಕಿದೆ' ಎಂದು ದೂರಿದ್ದಾರೆ.

'ಮಹಾನಗರ ಪಾಲಿಕೆ ಸಿಬ್ಬಂದಿ ತಮ್ಮ ಆರೋಗ್ಯ ಹದಗೆಟ್ಟಾಗ ಚಿಕಿತ್ಸೆಗಾಗಿ ಹಣ ಭರಿಸಲಾಗದೆ ಸಂಕಷ್ಟದಲ್ಲಿರುವ ಹಲವು ಉದಾಹರಣೆಗಳಿವೆ. ಆದ್ದರಿಂದ ಸರ್ಕಾರಿ ನೌಕರರಿಗೆ ಜಾರಿ ತಂದಿರುವ 'ಆರೋಗ್ಯ ಸಂಜೀವಿನಿ ಯೋಜನೆ'ಯನ್ನು ಯಥಾವತ್ತಾಗಿ ಮಹಾನಗರ ಪಾಲಿಕೆ ಸಿಬ್ಬಂದಿಗೂ ಅನುಷ್ಠಾನಗೊಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದರೆ ಬಿಬಿಎಂಪಿ ಹಾಗೂ ರಾಜ್ಯದ 10 ಮಹಾನಗರ ಪಾಲಿಕೆ ಸಿಬ್ಬಂದಿ, ಪೌರ ಕಾರ್ಮಿಕರು ಧರಣಿ ನಡೆಸಲಿದ್ದಾರೆ' ಎಂದು ಎಚ್ಚರಿಸಿದ್ದಾರೆ.

ಟ್ಯಾಂಕರ್ ಚಕ್ರ ಹರಿದು ಶುಶ್ರೂಷಕಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಾಜಿನಗರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಮಂಗಳವಾರ ಅಪಘಾತ ಸಂಭವಿಸಿದ್ದು, ನೀರಿನ ಟ್ಯಾಂಕರ್ ಚಕ್ರ ಮೈ ಮೇಲೆ ಹರಿದು ಎಚ್.ಎಸ್. ಆಶಾ (35) ಎಂಬುವರು ಮೃತಪಟ್ಟಿದ್ದಾರೆ.

'ಲಗ್ಗೆರೆ ನಿವಾಸಿ ಆಶಾ, ಕಿಮ್ಸ್ ಆಸ್ಪತ್ರೆಯಲ್ಲಿ ಶುಶ್ರೂಷಕಿ ಆಗಿ ಕೆಲಸ ಮಾಡುತ್ತಿದ್ದರು. ಮಂಗಳವಾರ ಬೆಳಿಗ್ಗೆ 10.30ರ ಸುಮಾರಿಗೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಆಶಾ ಅವರು ಕೆಲಸದ ನಿಮಿತ್ತ ಮನೆಯಿಂದ ಹೊರಗಡೆ ಬಂದಿದ್ದರು. ಕೆಲಸ ಮುಗಿಸಿ, ಲಗ್ಗೆರೆ ಬಸ್ ತಂಗುದಾಣ ಬಳಿಯ ಗ್ರೇಸ್ ಪಬ್ಲಿಕ್ ಸ್ಕೂಲ್ ಮುಂಭಾಗದ ರಸ್ತೆ ಮೂಲಕ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ಅದೇ ಮಾರ್ಗದಲ್ಲಿ ಬಂದ ನೀರಿನ ಟ್ಯಾಂಕರ್, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು.'

'ದ್ವಿಚಕ್ರ ವಾಹನದ ಸಮೇತ ಕೆಳಗೆ ಬಿದ್ದ ಆಶಾ ಅವರ ಮೈ ಮೇಲೆಯೇ ಟ್ಯಾಂಕರ್ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಮೊಬೈಲ್ ಬಳಕೆಯಿಂದ ಅಪಘಾತ: 'ಅಪಘಾತ ಸಂಭವಿಸುತ್ತಿದ್ದಂತೆ ಟ್ಯಾಂಕರ್ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದರ ಆಧಾರದಲ್ಲಿ ಚಾಲಕನನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿದರು.

'ಚಾಲಕ ಮೊಬೈಲ್ ನೋಡುತ್ತ ಚಾಲನೆ ಮಾಡುತ್ತಿದ್ದನೆಂದು ಸ್ಥಳೀಯರು ಹೇಳುತ್ತಿದ್ದಾರೆ. ಇದರಿಂದಲೇ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಾಲಕ ಪತ್ತೆಯಾದ ನಂತರ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದೂ ತಿಳಿಸಿದರು.

ಧರಣಿ ಕೈಬಿಟ್ಟ ಶಿಕ್ಷಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತವರು ಜಿಲ್ಲೆಗೆ ವರ್ಗಾವಣೆ ನೀಡಬೇಕು' ಎಂದು ಆಗ್ರಹಿಸಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಿಕ್ಷಕರು ನಗರದಲ್ಲಿ ನಡೆಸುತ್ತಿದ್ದ ಧರಣಿಯನ್ನು ಮಂಗಳವಾರ ಅಂತ್ಯಗೊಳಿಸಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಸೋಮವಾರ ಬಂದಿದ್ದ ಶಿಕ್ಷಕರು, ಸ್ವಾತಂತ್ರ್ಯ ಉದ್ಯಾನದಲ್ಲಿ ಕುಳಿತು ಧರಣಿ ನಡೆಸುತ್ತಿದ್ದರು. ಕೆಲ ಶಿಕ್ಷಕರು, ತಮ್ಮೊಂದಿಗೆ ಮಕ್ಕಳನ್ನೂ ಕರೆತಂದಿದ್ದರು.

ಪ್ರತಿಭಟನಾ ಸ್ಥಳಕ್ಕೆ ಮಂಗಳವಾರ ಭೇಟಿ ನೀಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, 'ವರ್ಗಾವಣೆ ಬೇಡಿಕೆ ಈಡೇರಿಕೆ ಬಗ್ಗೆ ಸರ್ಕಾರದ ಜೊತೆ ಮಾತುಕತೆ ನಡೆಸಲಾಗುವುದು. ನಿಮ್ಮೊಂದಿಗೆ ನಾನಿದ್ದೇನೆ. ಸದ್ಯ ಪ್ರತಿಭಟನೆ ಕೈಬಿಡಿ' ಎಂದರು. ಇದಕ್ಕೆ ಒಪ್ಪಿದ ಪ್ರತಿಭಟನಕಾರರು, ಪ್ರತಿಭಟನೆ ಅಂತ್ಯಗೊಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SRI REVANA SIDDESHWARA INSTITUTE OF TECHNOLOGY Affiliated to VTU Belgaum & Approved by AICTE, New Delhi and Govt. of Karnataka Chokkanahalli, Chikkajala, Bangalore-562157 Ph:9972856004/ 9108447635 Email: principal@srsect.edu.in Applications are Invited from eligible candidates for the following posts 1) Professors in the departments of Civil and Computer Science Engg 2) Associate Professors in the departments of CSE, ECE & CIVIL Engg 3) Foremen for the dept of ECE 4) Instructors for the dept of CSE, ECE, CV & Basic Science 5) Programmer for CSE dept 6) Helpers/Attenders, Qualification, Experience & Salary: As per AICTE Norms for Teaching positions Apply within a week from the date of advertisement to The Principal SRSIT Bangalore

Om Sai Ram
NEW BALDWIN GROUP OF SCHOOLS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
PRINCIPAL / VICE PRINCIPAL
Candidates possessing with brilliant academy records, Post Graduate with 5 to 10 Yrs. experience & leadership qualities in a reputed Institution.
PRIMARY/HIGH SCHOOL/COLLEGE
Hindi, Social, Maths, Comp, PT, Eng, Hist/Eco
Candidates with relevant qualification having experience in teaching in reputed Schools. (ICSE/CBSE streams)
APPLY IMMEDIATELY
Applying candidates should clearly specify the Position Applied for, branch Opted with updated resume
Contact : 080 25429441/ 98860 84799
centralhr.nbgi@gmail.com

"GOOD HOPE High School", Chinnappa Garden, Bangalore-46 Mobile:9844016267. Wanted Lady Teachers B.Sc B.Ed(Maths, Science),BA B.Ed.(Kannada, English, Social Science) 6th-10th.Std, Walkin Interview- Between 10-1pm with Originals

SSB INTERNATIONAL SCHOOL
Indiranagar, Bangalore - 38
Invites Applications from
FEMALE TGT & PGT
For Subjects: **English, Geography & Physics.**
Apply immediately in person to: The Secretary, SSB Education Society
No. 5/A, HAL II Stage, Indiranagar, Bangalore - 38
Ph: 41523548 Email: ssbinternationalschool@gmail.com

EXPERIENCED FACULTIES- Civil Engineering for a Reputed Coaching Institute to guide students preparing for Govt. Job. Salary Negotiable. Work place- Itanagar (A.P.). 8119866244. Email id: rapunglamgu973@gmail.com

WANTED EXPERIENCED LECTURERS M.Com/MCA/M.Sc (CS)/ M.Tech (CS), Reservation as per Government Norms, Attractive Salary, Contact Principal with original Certificates between 10.00 am and 1.00 pm SREE VENKATESHWARA DEGREE COLLEGE, Krishnarajapuram, Bangalore-36. Contact:9036068144, 7411135627

KNS INSTITUTE OF TECHNOLOGY
Approved by AICTE & Govt. of Karnataka, Affiliated to VTU
FACULTY / STAFF REQUIREMENT
Professors, Associate Professors & Asst. Professors in the following departments:
- CSE, ISE, ECE, AI&ML, Data Science
- Chemistry & Mathematics

Administrative Staff: Administrative Officer, Placement Officer, First Division Clerk,
Instructor / Asst. Instructor: Diploma in CSE, ISE, AI&ML, ECE.
Qualification & Salary as per AICTE norms & State Govt.
Email your updated CV within 07 days to: career@knsit.com, knsit.hr@gmail.com
KNS INSTITUTE OF TECHNOLOGY
Hegde Nagar, Kogilu Road, Thirumenahalli, Bangalore - 560 064.
www.knsit.com, 080-2856 7958

V.E.S. MODEL CONVENT
Affiliated to CISCE, New Delhi KA 212
No. 63, Magadi Main Road, Tavarekere, Bangalore South – 562 130. Mob: 8296194095/ 29772305
Required trained and experienced graduates for Nursery & Primary classes with minimum 2 years experience.
- Any degree with NTT to handle Nursery classes.
- Any degree with B.Ed to handle primary classes. (English & Social Science)

Candidates are requested to mail their resume to vesmodelconvent@gmail.com
Note: Selected candidates will be provided a very good package along with PF, ESI, Gratuity & Transport facility is available.

REQUIRED TEACHERS
for Primary & High School
TRAINED
Graduates / Post Graduates D.Ed./ TCH for English, Hindi & Mathematics
The candidates should have a good command over written and spoken English, basic computer skills and a progressive outlook towards education.
Experienced Teachers and freshers can apply.
The Director,
SAMVED SCHOOL
Managed by A.V.Education Society
13, 17th Cross, 20th Main, J.P.Nagar, V Phase, Bangalore - 78.
Ph: 2659 0952, 2659 0017
E-mail: aves1967@gmail.com
Website: www.samvedschool.com

IMPACT COLLEGE OF ENGINEERING
WANTED
ASSOCIATE/ASSISTANT PROFESSORS
For BE (Computer Science / Civil) MBA
Apply online: https://impact.ac.in/job-openings/
IMPACT Campus, Kodigehalli, Sahakaranagar, Bangalore-560092
Phone: 080-23334101
IMP-22315

WANTED
CONFIDENT DENTAL EQUIPMENT PVT. LTD.
India's largest Dental & Medical Equipment Manufacturer
Bidadi - Bengaluru
Civil Engineer / Diploma with 2/3 years of experience in AutoCad / Sketchup / 3D Max / V-ray, Software
Mechanical Engineer / Diploma with 2/3 years of experience in AutoCad / Solid Edge / Solid Work, Software
Attractive salary ESI / PF / other Incentive
Apply Immediately: E-Mail: cdel-md@confidental.org
: 99000 87942

Marketing & Sales

EDULAMP PUBLICATIONS: Urgently Requires Business Development Executives (M/F) (Exp/ Freshers). Good Salary. Call: 9886888175, 9739736664.

REQUIRE STENOGRAPHER: Shorthand with Computer knowledge, Office/Accounts Assistant with`Tally`and Computer knowledge: Experience 2-3Years,`Send Resume to:-sagarsteelblr@yahoo.co.in, Contact at`080-23469244, 080-23317353.

Security & Detectives

WANTED Business Partner for security & Housekeeping services agency Bangalore No Investment call 9743265995

A leading Publishing House requires qualified experienced candidates for **Sales & Marketing**. Attractive remuneration package offered.
Email your CV: info@goyal-books.com
Goyal Brothers Prakashan
+91-120-4655555

"TRAVEL CONSULTANT Customer Service &.Sales (Male)Looking for Immediate Joiner Only. Contact:"My Trip Holidays "J.P.Nagar 7th Phase,Mr.Raj- 09900123329

Placement Bureaus/Consultants

WANTED ALL OFFICE STAFFS/ FACTORY WORKERS, Bangalore, 08023443555, 8183046799, anzconsultants@yahoo.co.in

General

WANTED- EDUCATION OFFICER for Mission Rabies project, Bangalore.`To create Awareness on Rabies by Engaging communities and leading education campaign on ground level. Graduate,field experience with good communication skills in Kannada &.English preferred. Good salary based on skills and experience. Extensive driving by two wheeler required.One month training at`Goa project.`If interested, Call:9822168924

Part-Time Jobs

GOVERNMENT RECOGNISED Data Entry Typing Work From Home, Daily Payment, No Target, No Accuracy, With Govt Bond. For details M: 9742344447

Wanted

WANTED MALE Female Sales man, Sales girl, Accountant. Contact Navrang Silk Saree Showroom, M.G. Road Public Utility Building, Bangalore

Accounts & Finance

ACCOUNTS EXECUTIVE with over 5yrs. in handling accounts with excellent communication skill and knowledge of Tally. ISME, Sarjapur Road, jobs@isme.in, 080-28019800

Multiple Vacancy

WANTED RECEPTIONIST/TELECALLER (Female) for developers. Intermediate/Graduatewith Miniumum 2years experience. Good Communication skill. Contact:7406317236

OPPORTUNITY FOR Retired Officials,Bankers,NRI,Teachers, Professionals, Homemakers, CAs. Earn salary+ Incentives. CALL: 8095301555

Engg/ Production Technical

REQUIRED ELECTRICAL Engineer Diploma/ BE (electrical) 5 + years experience in Residential Project. Call: 9845865789

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

BUSINESS

Business Offers

Finance

OPPORTUNITY FOR Retired Officials, Bankers, Professionals, Teachers, Homemakers, CAs. Work part time/ full time. Earn unlimited income. Please call: 9008403686/ 9945114828.

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PUBLIC NOTICE

AANKIT GRANITES LIMITED
Reg. Office: 4th Floor, Salapuria Tower -1, No. 22, (#351) Salapuria Towers-1, Hosur Road, Koramangala, Bengaluru, Karnataka 560095
NOTICE
Notice is hereby given that the 33rd Annual General Meeting of the Company will be held on 30th of September 2022 at 1:00 pm at 4th Floor, Salapuria Tower -1, No. 22, (#351) Salapuria Towers-1, Hosur Road, Koramangala, Bengaluru, Karnataka 560095, to transact the business as per the notices being mailed to the shareholders.
Pursuant to section 91 of the Companies Act, 2013, please be informed that the Register of Member and the share transfer books will remain closed on 30.09.2022
By Order of the Board
Bangalore 07.09.2022
Dr. Adarsh Kumar, Managing Director

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಶ್ರೀ ಸುಮೇಶ ಕುಮಾರ್ ಬಿನ್ ಲೇಟ್ ಶ್ರೀ ರತನ್ ಲಾಲ್, ವಿಳಾಸ ನಂ.869, 12ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034 ವಿಳಾಸದಲ್ಲಿ ವಾಸವಾಗಿರುವ ಇವರಿಂದ ಮತ್ತು ಸ್ವತ್ತಿನ ಸಂಖ್ಯೆ 869 ಹೊಂದಿರುವ, ಪೂರ್ವ–ಪಶ್ಚಿಮ: 120 ಅಡಿ ಹಾಗೂ ಉತ್ತರ–ದಕ್ಷಿಣ: 80 ಅಡಿ, ಒಟ್ಟಾರೆ 9,600 ಚದರ ಅಡಿ ವಿಸ್ತೀರ್ಣದ ಸ್ವತ್ತಿನಲ್ಲಿ ನಿರ್ಮಿಸಲಾಗಿರುವ 4,200ಚದರ ಅಡಿ ವಿಸ್ತೀರ್ಣದ ಬಿಲ್ಟಪ್ ಪ್ರದೇಶವುಳ್ಳ (ಈ ಕೆಳಗಿನ ಷೆಡ್ಯೂಲ್‌ನಲ್ಲಿ ಇನ್ನೂ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿದೆ ಮತ್ತು ಇಲ್ಲಿ ಇನ್ನು ಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುತ್ತದೆ) ವಸತಿಯೋಗ್ಯ ಕಟ್ಟಡ ಸ್ವತ್ತನ್ನು ಖರೀದಿಸಲು ಉದ್ದೇಶಿಸಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿಗೆ ಮಾರಾಟ, ವಿನಿಮಯ, ಬಾಡಿಗೆ, ಭೋಗ್ಯ, ಲೈಸನ್ಸ್, ಅಡಮಾನ, ಅನುವಂಶಿಕ, ಉಡುಗೊರೆ, ಲೀನ್, ಚಾರ್ಜ್, ಮೈಂಟೇನನ್ಸ್, ಈಸ್‌ಮೆಂಟ್, ಟ್ರಸ್ಟ್, ಸ್ವಾಧೀನತೆ, ಹೈಪೊಥಿಕೇಶನ್, ಟೆನನ್ಸಿ, ಅಸೈನ್‌ಮೆಂಟ್, ಋಣಭಾರ, ಬಾಕಿ ವ್ಯಾಜ್ಯ, ಒಪ್ಪಂದ, ಇತ್ಯರ್ಥ ರೂಪದಲ್ಲಿ ಅಥವಾ ಯಾವುದೇ ಸ್ವರೂಪದಲ್ಲಿ ಯಾವುದೇ ಹಕ್ಕು, ಬಾಧ್ಯತೆ, ಕ್ಲೇಮ್ ಅಥವಾ ಹಿತಾಸಕ್ತಿ ಹೊಂದಿದ್ದಲ್ಲಿ, ಅಂತಹವರು ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕ ದಿಂದ 7 (ಏಳು) ದಿನಗಳೊಳಗೆ ದಾಖಲಾತಿ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಇನ್ನಿತರರ ಯಾವುದೇ ಹಕ್ಕು, ಬಾಧ್ಯತೆ, ಕ್ಲೇಮ್ ಅಥವಾ ಹಿತಾಸಕ್ತಿಗಳು ಇರುವುದಿಲ್ಲವೆಂದು ಪರಿಗಣಿಸಲಾಗುತ್ತದೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿ ಋಣಭಾರಮುಕ್ತವಾಗಿದೆ ಎಂದು ಪರಿಭಾವಿಸಿ ತಮ್ಮ ವ್ಯವಹಾರವನ್ನು ಮುಂದುವರಿಸುತ್ತಾರೆ.

ಷೆಡ್ಯೂಲ್

12ನೇ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034 ವಿಳಾಸದಲ್ಲಿರುವ ಮತ್ತು ನಂ. 869 ಹೊಂದಿರುವ, 9,600 ಚದರ ಅಡಿ (ಪೂರ್ವ–ಪಶ್ಚಿಮ: 120 ಅಡಿ ಮತ್ತು ಉತ್ತರ – ದಕ್ಷಿಣ: 80 ಅಡಿ) ವಿಸ್ತೀರ್ಣವುಳ್ಳ ಸ್ವತ್ತಿನಲ್ಲಿ ನಿರ್ಮಿಸಲಾಗಿರುವ 4,200 ಚದರ ಅಡಿ ಬಿಲ್ಟಪ್ ಪ್ರದೇಶವುಳ್ಳ ವಸತಿಯೋಗ್ಯ ಕಟ್ಟಡ ಸೇರಿದಂತೆ, ಸದರಿ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವಕ್ಕೆ: ರಸ್ತೆ
ಪಶ್ಚಿಮಕ್ಕೆ: ಪ್ರಾಪರ್ಟಿ ನಂ. 856
ಉತ್ತರಕ್ಕೆ: ಪ್ರಾಪರ್ಟಿ ನಂ. 868
ದಕ್ಷಿಣಕ್ಕೆ: ಪ್ರಾಪರ್ಟಿ ನಂ. 870

ರಾಜ್ ರಾಮಚಂದ್ರನ್, ಜೆಎಸ್ಎ ವಕೀಲರು ಮತ್ತು ಸಾಲಿಸಿಟರ್ಸ್
ಲೆವೆಲ್ 3, ಪ್ರೆಸ್ಟೀಜ್ ಒಬೆಲಿಸ್ಕ್
3 ಕಸ್ತೂರಬಾ ರಸ್ತೆ, ಬೆಂಗಳೂರು–560001
ದೂರವಾಣಿ: +91 80 435 03600
ಸ್ಥಳ: ಬೆಂಗಳೂರು ದಿ: 05.09.2022

PERSONAL

Change of Name

I, PRADEEP CHIDAMBAR KULKARNI S/o. Chidambar Kulkarni, residing at No.48 Ground Floor, 19th Cross 31st Main, 2nd Sector, HSR Layout, Bangalore-560102 have changed my name from PRADEEP KULKARNI to PRADEEP CHIDAMBAR KULKARNI vide affidavit dated 06-09-2022 sworn before notary L. Shankaranarayana Bangalore

I, MADHUSUDANRAO S/o Imamji Ankaskar residing at H.No 5 5 377/176 Shri Vidya Nilaya, 60 Feet Road, Opp Mailaralingeshwara Hospital, Mata Manikeshwari Nagar, Yadgiri, Karnataka- 585202, changed my name to Madhusudan Ankaskar for all purposes.

EDUCATIONAL

Language Classes

WANT TO LEARN FLUENT SPOKEN ENGLISH. SPEAK TO US IELTS COACHING ALSO AVAILABLE CONTACT: 9113883321

Tuitions

BEST HOME Tuitions: Maths/ Physics/ Chemistry/ French/Hindi, English Class 1st to 12th, Individual Tuition for CBSE/ICSE/ IIT/JEE/ BE/BSC, Available For All and Different Levels in All Major Areas of Bangalore, Contact: T.S.Shivashankar PHD (USA) (Maths and Physics) Living In Mahalaxmi Layout: 9743095715

REAL ESTATE SELLING

Commercial Land

Tumkur

PROPERTY FOR SALE IN TUMKUR
Within Municipal limits of Tumkur on NH4 Pune Bangalore National Highway 57000 Sqft Land With Compound wall on 4 side
9916056789

Industrial & Factory

Tumkur Road

SALE, 40000 Sqft Commercial Converted land, facing National Highway, North. Hotels/ Hospital/ Any showroom. 9141326819

DH DECCAN HERALD · ಪ್ರಜಾವಾಣಿ

Classifieds EDUCATION SPECIAL

For More Details Contact:
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

SPECIAL RATES FOR
Admission Notice
Education Success
Congratulation Ads

CONNECT ಕ್ಲಾಸಿಫೈಡ್ಸ್

Nursery Teacher Training Course
NTT / MTT : Nursery & Montessori Teacher Training
6 Months Course, Online & Offline Classes Available
Work in any ICSE, CBSE & State Board Schools
- *Eligibility: 10th / 12th / Any graduate*
- *100% Placement assistance*

New Batch Starting...
Branches at Vijaynagar, Rajajinagar, Jayanagar, Indiranagar, Yelahanka, Ullal Rd., Bommasandra, Tumkuru, Doddaballapura, Channapatna
NIECCE — NATIONAL INSTITUTE OF EARLY CHILD CARE & EDUCATION
9886855700, 8095811112
Certificate issued by N.I.E.C.C.E. (Regd. Govt. of India)

DEVANAHALLI AGRICULTURE LAND FOR SALE
5 to 50 acres near Nandi Hills & Surrounding.
CALL: 63641 12404

ಪೌರಾಡಳಿತ ಮತ್ತು ಸಣ್ಣ ಕೈಗಾರಿಕಾ ಇಲಾಖೆಗಳ ಕಾರ್ಯನಿರ್ವಹಣೆ ಮತ್ತಷ್ಟು ಜನಸ್ನೇಹಿ, ಪಾರದರ್ಶಕ ಆಡಳಿತ

ಹೊಸಕೋಟೆಯಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ

ಆರೋಗ್ಯ ಮೇಳ ಕಾರ್ಯಕ್ರಮದಲ್ಲಿ ಅತಿಥಿಗಳೊಂದಿಗೆ ಸಚಿವ ಎಂ.ಟಿ.ಬಿ. ನಾಗರಾಜ್

‘ಮಿಷನ್150’ ಗುರಿ ಸಾಧನೆಗೆ ಬದ್ಧತೆ; ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ತರುವ ಸಂಕಲ್ಪ

ರಾಜ್ಯದಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ‘ವಿಷನ್-150’ ಗುರಿ ಗುರಿಯನ್ನು ಬಿಜೆಪಿಯ ವರಿಷ್ಠರು, ರಾಜ್ಯದ ನಾಯಕರಿಗೆ ನೀಡಿದ್ದಾರೆ. ಪಕ್ಷದ ಈ ಆದೇಶವನ್ನು ಗಂಭೀರವಾಗಿ ಪರಿಗಣಿಸಿರುವ ಸಚಿವ ಎಂಟಿಬಿ ನಾಗರಾಜು ಅವರು ಬೂತ್‌ಮಟ್ಟದಿಂದ ಪಕ್ಷವನ್ನು ಸಂಘಟಿಸುವಲ್ಲಿ ನಿರತರಾಗಿದ್ದಾರೆ. ಪೂರಕವಾಗಿ ಕಾರ್ಯಕರ್ತರಲ್ಲಿ ಉತ್ಸಾಹ ತುಂಬುವ ಹೊಣೆ ನೀಡುತ್ತಿದ್ದಾರೆ.

ಪಕ್ಷದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆ ಬಲಪಡಿಸುವ ಎಂಟಿಬಿ ನಾಗರಾಜು ಅವರ ಸತತ ಶ್ರಮದಿಂದಾಗಿಯೇ ಬಿಜೆಪಿಯು ಮೊದಲ ಬಾರಿಗೆ ಹೊಸಕೋಟೆ ನಗರಸಭೆಯಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಇತ್ತೀಚೆಗೆ ವಿಧಾನ ಪರಿಷತ್ತಿಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯ ಗೆಲುವಿಗೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ರಾಜ್ಯ ಸರ್ಕಾರದ ಸಾಧನೆಗಳನ್ನು ಮನೆ ಮನೆಗಳಿಗೆ ಮುಟ್ಟಿಸುವ ಕೆಲಸವು ಹೊಸಕೋಟೆ ತಾಲ್ಲೂಕಿನಲ್ಲಿ ಭರದಿಂದ ಸಾಗಿದೆ.

ಪಕ್ಷ ಸಂಘಟನೆ ಮತ್ತು ಕಾರ್ಯಕರ್ತರನ್ನು ಹುರಿದುಂಬಿಸುವ ಕಾರ್ಯಕ್ರಮದ ಭಾಗವಾಗಿ ಇತ್ತೀಚೆಗೆ ಹೊಸಕೋಟೆ ನಗರದಲ್ಲಿ ನಡೆಸಿದ ಪಕ್ಷದ ಕಾರ್ಯಕರ್ತರ ಬೈಕ್ ರ್‍ಯಾಲಿಯು ಯುವ ಕಾರ್ಯಕರ್ತರಲ್ಲಿ ನವ ಚೈತನ್ಯವನ್ನು ತುಂಬಿರುವುದಲ್ಲದೇ, ಮತ್ತಷ್ಟು ಯುವಜನರನ್ನು ಪಕ್ಷದತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಹೊಸಕೋಟೆ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿ ಬಸರಾಜ ಬೊಮ್ಮಾಯಿ ಅವರಿಂದ ಚಾಲನೆ. ಸಚಿವ ಸುಧಾರರಕ್ ಸೇರಿ ಹಲವು ಪ್ರಮುಖರಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಂದು ವರ್ಷದ ಆಡಳಿತವನ್ನು ಯಶಸ್ವಿಯಾಗಿ ಪೂರೈಸಿದ್ದು, ಹಲವು ಸಾಧನೆ, ಯೋಜನೆಗಳ ಮೂಲಕ ಅಭಿವೃದ್ಧಿಗೆ ವೇಗ ನೀಡಿದೆ.ಈ ಸರ್ಕಾರದ ಒಂದು ವರ್ಷದ ಸಾಧನೆಗಳನ್ನು ಜನರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಜನೋತ್ಸವ ನಡೆಯುತ್ತಿದೆ.

ಹೊಸಕೋಟೆ ಕ್ಷೇತ್ರದ ಜನಪ್ರಿಯ ಶಾಸಕ, ಸಚಿವ ಎಂ.ಟಿ.ಬಿ. ನಾಗರಾಜು ಅವರ ನೇತೃತ್ವದಲ್ಲಿ ಪೌರಾಡಳಿತ ಮತ್ತು ಸಣ್ಣ ಕೈಗಾರಿಕಾ ಇಲಾಖೆಗಳು ಹಲವು ಜನಪರ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿವೆ. ಈ ಮೂಲಕ ಇನ್ನಷ್ಟು ಜನಸ್ನೇಹಿ ಮತ್ತು ಪಾರದರ್ಶಕ ಆಡಳಿತವನ್ನು ನೀಡಲು ಒತ್ತು ನೀಡಿವೆ.

ಎಂಟಿಬಿ ನಾಗರಾಜು ಅವರು ಪೌರಾಡಳಿತ, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರಾಗಿ ಅಧಿಕಾರವನ್ನು ಸ್ವೀಕರಿಸಿದ ನಂತರ ಈ ಇಲಾಖೆಗಳು ಹೆಚ್ಚು ಜನಸ್ನೇಹಿಯಾಗಿ ಹಾಗೂ ಪಾರದರ್ಶಕ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಒತ್ತು ನೀಡಿವೆ.

ತೆರಿಗೆ ಸಂಗ್ರಹ ಪ್ರಕ್ರಿಯೆಯಲ್ಲಿ ಆಗುತ್ತಿದ್ದ ಸೋರಿಕೆಯನ್ನು ತಡೆಯುವುದು ಮತ್ತು ಪಾರದರ್ಶಕತೆಯನ್ನು ತರುವ ಉದ್ದೇಶದಿಂದ ಪೌರಾಡಳಿತ ಇಲಾಖೆಯು ಆನ್‌ಲೈನ್ ಮೂಲಕ ಪಾವತಿ ವ್ಯವಸ್ಥೆಗೆ ವೇದಿಕೆಯನ್ನು ಸಜ್ಜುಗೊಳಿಸುತ್ತಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿರ್ದೇಶನದಂತೆ ಆಡಳಿತದಲ್ಲಿ ಮಹತ್ವದ ಸುಧಾರಣೆಯನ್ನು ತರುವ ಭಾಗವಾಗಿ ಆನ್‌ಲೈನ್ ಪಾವತಿಗೆ ಒತ್ತು ನೀಡುವ, ಪರಿಣಾಮಕಾರಿಯಾಗಿ ಜಾರಿಗೊಳಿಸುವ ಕಾರ್ಯ ನಡೆದಿದೆ.

ಈಗಾಗಲೇ ರಾಜ್ಯದ 302 ನಗರ ಸ್ಥಳೀಯ ಸಂಸ್ಥೆಗಳಲ್ಲಿ ₹ 3885 ಕೋಟಿ ಅಂದಾಜು ವೆಚ್ಚದಲ್ಲಿ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಗಳನ್ನು ಜಾರಿಗೊಳಿಸುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಕ್ತಾಯ ಹಂತದಲ್ಲಿದೆ. ಕಾಮಗಾರಿಗಳು ಪೂರ್ಣಗೊಂಡ ನಂತರ ನಗರ-ಪಟ್ಟಣಗಳಲ್ಲಿ ಮೂಲಸೌಕರ್ಯ ಮತ್ತಷ್ಟು ಉತ್ತಮಗೊಳ್ಳಲಿದೆ.

ಪೌರಕಾರ್ಮಿಕರ ಹಿತರಕ್ಷಣೆ ಮತ್ತು ಆರೋಗ್ಯ ಕುರಿತಂತೆಯೂ ಸಚಿವ ಎಂಟಿಬಿ ನಾಜರಾಜು ಅವರು ತೀವ್ರ ಕಾಳಜಿ ಹೊಂದಿದ್ದಾರೆ. ಸರ್ಕಾರದಿಂದಲೇ ಅವರಿಗೆ ನೇರವಾಗಿ ವೇತನ ಪಾವತಿ ಮಾಡಬೇಕೆಂಬ ಬೇಡಿಕೆಗೆ ಸ್ಪಂದಿಸಿದ್ದಾರೆ. ಆ ಕನಸು ಸದ್ಯದಲ್ಲೇ ಈಡೇರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇದರ ಜೊತೆಗೆ, ಪೌರಕಾರ್ಮಿಕ ಆರೋಗ್ಯ ರಕ್ಷಣೆಗೆ ಒತ್ತು ನೀಡಲು ಸಚಿವರು ಮಹತ್ವದ ಯೋಜನೆಯೊಂದನ್ನು ಜಾರಿಗೊಳಿಸುವ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುತ್ತಿದ್ದಾರೆ. ಸಣ್ಣ ಕೈಗಾರಿಕೆ ಇಲಾಖೆಗೆ ವಿಶೇಷ ಒತ್ತುನೀಡಿದ್ದು, ಕೆಐಎಡಿಬಿ ಹೊರತಾಗಿ ರಾಜ್ಯದಲ್ಲಿ ಖಾಸಗಿಯವರ ಸಹಬಾಗಿತ್ವದಲ್ಲಿ ಸಣ್ಣ ಕೈಗಾರಿಕೆ ಪ್ರಾಂಗಣವನ್ನು ಸ್ಥಾಪಿಸಲು ಇಲಾಖೆಯು ಮುಂದಾಗಿದೆ.

ಕೋವಿಡ್ ಕಾಲದಲ್ಲಿ ಸಂಕಷ್ಟಕ್ಕೆ ಸಿಲುಕಿದ ಸಣ್ಣ ಕೈಗಾರಿಕೆ ಉದ್ಯಮಗಳ ಪುನಶ್ಚೇತನ ನೀಡಲು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಿತಿ ಗತಿ ತಿಳಿಯಲೆಂದು ಸಮಗ್ರ ಸಮೀಕ್ಷೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಸೆಂಟರ್ ಫಾರ್ ಸ್ಮಾರ್ಟ್ ಗರ್ವನೆನ್ಸ್‌ಗೆ ಸರ್ವೆ ಜವಾಬ್ದಾರಿ ನೀಡಿದ್ದು, ಒಂಬತ್ತು ತಿಂಗಳಲ್ಲಿ ವರದಿ ಕೈ ಸೇರಲಿದೆ.

100 ಎಕರೆಗಿಂತ ಹೆಚ್ಚು ಖಾಸಗಿ ಜಮೀನು ಹೊಂದಿರುವವರ ಜತೆ ಒಪ್ಪಂದ ಮಾಡಿಕೊಂಡು ಶೇಕಡ 50ರ ಅನುಪಾತದಲ್ಲಿ ಸರ್ಕಾರದಿಂದಲೇ ಕೈಗಾರಿಕೆ ಪ್ರಾಂಗಣವನ್ನು ಸ್ಥಾಪಿಸುವುದು ಇದರ ಉದ್ದೇಶ. ಭೂ ಸ್ವಾಧೀನ, ಪರಿಹಾರ ನೀಡುವ ಸಮಸ್ಯೆ ಇಲ್ಲದೆ, ಸರ್ಕಾರಕ್ಕೆ ಆರ್ಥಿಕವಾಗಿ ಹೊರೆಯಾಗದಂತ ಯೋಜನೆಯಿದು.

ಎಲೆಕ್ಟ್ರಾನಿಕ್ ಸಿಟಿ ಪ್ರಾಧಿಕಾರದ ಮಾದರಿಯಲ್ಲಿ ಪೀಣ್ಯ ಕೈಗಾರಿಕಾ ಪ್ರಾಧಿಕಾರ ರಚಿಸುವ ಉದ್ದೇಶವನ್ನು ಇಲಾಖೆಯು ಹೊಂದಿದೆ. ರಾಜ್ಯದಲ್ಲಿ ಮೈಸೂರಿನ ಹೆಬ್ಬಾಳ, ಧಾರವಾಡದ ತಾರಿಹಾಳದಲ್ಲಿ ಪ್ರಾಧಿಕಾರವನ್ನು ರಚಿಸುವ ಕುರಿತಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

‘ಉದ್ಯಮಿಯಾಗು – ಉದ್ಯೋಗ ನೀಡು’ ಕಾರ್ಯಕ್ರಮವು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದೆ. ಈ ಯೋಜನಡಯೆಇ ಉದ್ಯಮ ಸ್ಥಾಪಿಸಲು ಮುಂದಾಗುವವರಿಗೆ ವಿದ್ಯುತ್, ತೆರಿಗೆ ವಿನಾಯಿತಿ, ಕಡಿಮೆ ಬಡ್ಡಿ ದರದ ಸಾಲ ಸೇರಿ 16 ಪ್ರಮುಖ ಸೌಲಭ್ಯಗಳನ್ನು ನೀಡಲಾಗುವುದು. ಏಕಗವಾಕ್ಷಿಯಡಿ ಜಿಲ್ಲಾಧಿಕಾರಿಗಳ ಸಮಿತಿ ಮತ್ತು ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿ ಅಧ್ಯಕ್ಷತೆಯ ಸಮಿತಿಗಳು ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಿವೆ. ಈ ಯೋಜನೆಯಿಂದ ಉದ್ಯೋಗಿಗಳೇ ಉದ್ಯಮಿಗಳಾಗಬಹುದು.

ಖಾದಿ ಉತ್ಪನ್ನಗಳಿಗೂ ಆಧುನಿಕತೆಯ ಸ್ಪರ್ಶ ನೀಡುವುದು ಈಗಿನ ಅನಿವಾರ್ಯವಾಗಿದೆ. ಅದಕ್ಕಾಗಿ ರಾಷ್ಟ್ರೀಯ ಫ್ಯಾಷನ್ ಟೆಕ್ನಾಲಜಿ ಸಂಸ್ಥೆಯ ಜೊತೆಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಇದರಿಂದ ಯುವ ಜನರನ್ನು ಖಾದಿ ಉತ್ಪನ್ನಗಳತ್ತ ಸೆಳೆದು ನೇಕಾರರಿಗೆ ನೆರವಾಗುವ ಉದ್ದೇಶವನ್ನು ಸಚಿವ ಎಂಟಿಬಿ ನಾಗರಾಜು ಹೊಂದಿದ್ದಾರೆ.

‘ಒಂದು ಜಿಲ್ಲೆ ಒಂದು ಉತ್ಪನ್ನ’ ಪರಿಕಲ್ಪನೆಯಡಿ ಕ್ಲಸ್ಟರ್‌ಗಳ ರಚನೆಗೆ ರಾಜ್ಯದ ಬಿಜೆಪಿ ಸರ್ಕಾರವು ವಿಶೇಷ ಒತ್ತು ನೀಡಿದೆ. ಬೀದರ್‌ನಲ್ಲಿ ಬಿದರಿ ಕಲೆ, ರಾಮನಗರದಲ್ಲಿ ಗೊಂಬೆಗಳ ತಯಾರಿ, ಕೋಲಾರ ಜಿಲ್ಲೆ ಶಿವಾರ ಪಟ್ಟಣದಲ್ಲಿ ಶಿಲ್ಪಕಲೆಗೆ ಪ್ರೋತ್ಸಾಹ ನೀಡಲು ವಿಶೇಷ ಯೋಜನೆಯನ್ನು ರೂಪಿಸಲಾಗಿದೆ.

ಆರೋಗ್ಯದ ಗುಟ್ಟೇನು? -ಪ್ರಧಾನಿ ಮೋದಿ ಕುಶಲೋಪರಿ

ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ರಾಜಧಾನಿ ಬೆಂಗಳೂರಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಚಿವ ಎಂಟಿಬಿ ನಾಗರಾಜು ಅವರು ಪ್ರಧಾನಿ ಅವರನ್ನು ಸ್ವಾಗತಿಸಲು ವಿಮಾನನಿಲ್ದಾಣಕ್ಕೆ ತೆರಳಿದ್ದರು. ಆಗ ಸಚಿವ ಎಂಟಿಬಿ ನಾಗರಾಜು ಅವರ ಬಳಿಗೆ ಬಂದ ಪ್ರಧಾನಿ ಸಚಿವರ ಭುಜ ತಟ್ಟಿ ಎರಡೂ ಕೈಗಳನ್ನು ಹಿಡಿದು ‘ನಿಮ್ಮ ಆರೋಗ್ಯದ ಗುಟ್ಟೇನು?‘ ಎಂದು ಕುಶಲೋಪರಿ ವಿಚಾರಿಸಿದರು. 70ರ ಹರೆಯದಲ್ಲೂ ಆರೋಗ್ಯವನ್ನು ಅತ್ಯುತ್ತಮವಾಗಿ ಕಾಯ್ದು ಕೊಂಡಿರುವ ಸಚಿವ ಎಂಟಿಬಿ ನಾಗರಾಜ್ ಅವರಿಗೆ ಪ್ರಧಾನಿ ನರೇಂದ್ರ ಮೋದಿಯವರಿಂದ ಸಿಕ್ಕ ಪ್ರಶಂಸೆ ಇದಾಗಿತ್ತು.

ಬೆಂಗಳೂರಿಗೆ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದ ಸಂದರ್ಭ

ಹೊಸಕೋಟೆಗೆ ಮೆಟ್ರೊ ರೈಲು

ಅಭಿವೃದ್ಧಿಪಥದಲ್ಲಿ ತ್ವರಿತಗತಿಯಲ್ಲಿ ಸಾಗುತ್ತಿರುವ ಹೊಸಕೋಟೆ ನಗರಕ್ಕೆ ಮೆಟ್ರೊ ರೈಲು ಸಂಪರ್ಕ ಬೇಕು ಎಂಬುದು ಈ ಭಾಗದ ಜನರ ಬಹುದಿನಗಳ ಬೇಡಿಕೆ. ಈ ಬೇಡಿಕೆಗೆ ಸಚಿವ ಎಂಟಿಬಿ ನಾಗರಾಜ್ ಅವರೂ ಧ್ವನಿಯಾಗಿದ್ದಾರೆ.

ಪೌರಾಡಳಿತ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಕೂಡಲೇ ಆದ್ಯತೆಯ ಮೇರೆಗೆ ಮೆಟ್ರೊ ರೈಲು ಸಂಪರ್ಕ ಬೇಕು ಎಂಬ ಹೊಸಕೋಟೆ ಜನರ ಬೇಡಿಕೆಗೆ ಸ್ಪಂದಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಹೀಗಾಗಿ, ಮೆಟ್ರೊ ರೈಲು ಸೇವೆ ಬೇಕು ಎಂಬ ಈ ಭಾಗದ ಜನರ ಕನಸಿಗೆ ಮರುಜೀವ ಬಂದಿದೆ.

ನಾಯಂಡಹಳ್ಳಿ-ಕೆಂಗೇರಿ ನಡುವಿನ ಮೆಟ್ರೊ ರೈಲು ಸಂಪರ್ಕ ಸೇವೆಗೆ ಉದ್ಘಾಟನೆ ವೇಳೆ ಸಚಿವ ಎಂಟಿಬಿ ನಾಗರಾಜ್ ಅವರು ಹೊಸಕೋಟೆ ನಗರಕ್ಕೆ ಮೆಟ್ರೊ ರೈಲು ಸೇವೆಯನ್ನು ವಿಸ್ತರಿಸಬೇಕು ಎಂದು ಒತ್ತಾಯಿಸುವ ಮನವಿ ಪತ್ರವನ್ನು ಕೇಂದ್ರ ನಗರಾಭಿವೃದ್ಧಿ ಸಚಿವ ಹರಿದೀಪ್ ಸಿಂಗ್ ಪುರಿ ಅವರಿಗೆ ಸಲ್ಲಿಸಿದ್ದರು. ಈ ಮೂಲಕ ಜನರ ಬೇಡಿಕೆ ಕುರಿತು ಕೇಂದ್ರ ಸಚಿವರ ಗಮನವನ್ನು ಸೆಳೆದರು. ಮೆಟ್ರೊ ಸೇವೆ ವಿಸ್ತರಿಸಬೇಕೆಂಬ ವಿಷಯ ಮತ್ತೆ ಮುನ್ನೆಲೆಗೆ ಬಂದಿತು. ಹಿಂದೆಯೇ, ಹೊಸಕೋಟೆ ನಗರಕ್ಕೆ ಮೆಟ್ರೊ ಯೋಜನೆಗೆ ಸಂಬಂಧಿಸಿದಂತೆ ಸಚಿವ ಎಂಟಿಬಿ ನಾಗರಾಜು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಜೊತೆಗೂ ಸಭೆ ನಡೆಸಿ ಜನರ ಬೇಡಿಕೆ ಈಡೇರಿಸುವ ನಿಟ್ಟಿನಲ್ಲಿ ಒತ್ತಡ ಹೇರಿದರು.

ಇದರ ಫಲವಾಗಿ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯ ಉನ್ನತ ಸಮಿತಿ ಬೆಂಗಳೂರು ಮೆಟ್ರೊ ರೈಲು ಸೇವೆಯ ಸಂಚಾರವನ್ನು ಕೆ.ಆರ್.ಪುರಂ ಮೆಟ್ರೊ ನಿಲ್ದಾಣದಿಂದ ಹೊಸಕೋಟೆಯವರೆಗೂ ವಿಸ್ತರಿಸುವ ಬಗೆಗಿನ ಕಾರ್ಯಸಾಧ್ಯತಾ ವರದಿ ರೂಪಿಸುವ ಸಂಬಂಧ ಸೂಕ್ತ ಆದೇಶಕ್ಕಾಗಿ ಮುಖ್ಯಮಂತ್ರಿಗಳ ಕಚೇರಿಗೆ ಕಡತವನ್ನು ಕಳುಹಿಸಿದೆ. ಈ ಭಾಗದ ಜನರ ಕನಸು ಈಡೇರಿಸುವ ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಂತಾಗಿದೆ.

ಹೊಸಕೋಟೆ ಶ್ರೇಯೋಭಿವೃದ್ಧಿಗೆ ಜೀವನ ಮುಡಿಪು -ಸಚಿವ ಎಂಟಿಬಿ ನಾಗರಾಜು

ದಿನದ ಬಹುತೇಕ ಹೊತ್ತು ಹೊಸಕೋಟೆ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ, ಜನರ ಹಿತರಕ್ಷಣೆ ಕುರಿತೇ ಚಿಂತಿಸುವ ಪೌರಾಡಳಿತ ಮತ್ತು ಸಣ್ಣ ಕೈಗಾರಿಕಾ ಸಚಿವ ಎಂಟಿಬಿ ನಾಗರಾಜು ಅವರು ರಾಜಕೀಯ ಹೊರತಾಗಿ ಸಮಾಜ ಸೇವೆಗೂ ಒತ್ತು ನೀಡಿದ್ದು, ‘ಎಂಟಿಬಿ ಚಾರಿಟೆಬಲ್ ಟ್ರಸ್ಟ್’ ಸ್ಥಾಪಿಸಿ ಆ ಮೂಲಕ ಸಮಾಜದ ನೆರವಿಗೆ ಮುಂದಾಗಿದ್ದಾರೆ.

ಟ್ರಸ್ಟ್ ಮೂಲಕ ಸರ್ವ ಧರ್ಮಗಳ ಸಮುದಾಯದ ಅಭಿವೃದ್ಧಿಗೆ ದೃಢ ಸಂಕಲ್ಪ ಮಾಡಿ ಶ್ರಮಿಸುತ್ತಿದ್ದಾರೆ. ಎಂಟಿಬಿ ಚಾರಿಟಬಲ್ ಟ್ರಸ್ಟ್ ಶಿಕ್ಷಣ, ಆರೋಗ್ಯ, ಕ್ರೀಡೆ ಸೇರಿದಂತೆಸ ಸಾಂಸ್ಕೃತಿಕ ಕ್ಷೇತ್ರಗಳಿಗೂ ನಿರಂತರವಾಗಿ ಆರ್ಥಿಕ ನೆರವು ಒದಗಿಸಿ, ಶ್ರೇಯೋಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ.

‘ತಾವು ರಾಜಕಾರಣ ಪ್ರವೇಶಿಸಿದ್ದೇ ಜನಸೇವೆಗಾಗಿ‘ ಎಂದು ನಂಬಿರುವ ಎಂಟಿಬಿ ನಾಗರಾಜು ಅವರು ಅದಕ್ಕಾಗಿ ತಾವು ಉದ್ಯಮಿಯಾಗಿ ಗಳಿಸಿದ್ದನ್ನು ಜನಪರ ಕೆಲಸಗಳಿಗಾಗಿ ನಿರಂತರವಾಗಿ ಬಳಸುತ್ತಿದ್ದಾರೆ. ಅನ್ನದಾನಕ್ಕೆ ಪ್ರಾಮುಖ್ಯತೆ ನೀಡುವ ಎಂಟಿಬಿ ನಾಗರಾಜುರವರು ಪ್ರತಿ ಹಬ್ಬಗಳಂದು ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸುವ ಮೂಲಕ ಹಸಿದದವರ ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಿ ತಾಲ್ಲೂಕಿನಾದ್ಯಂತ ಪ್ರತಿ ಹಳ್ಳಿಗಳಿಗೂ ತಾವೇ ಖುದ್ದಾಗಿ ತೆರಳಿ ಲಕ್ಷಾಂತರ ದಿನಸಿ ಕಿಟ್‌ಗಳನ್ನು, ಔಷಧಿ ಕಿಟ್‌ಗಳನ್ನು ವಿತರಿಸಿ ಅವರ ಬೆಂಬಲಕ್ಕೆ ನಿಂತಿದ್ದಾರೆ. ಜನತೆಗೆ ಲಸಿಕೆ ಹಾಕಿಸುವಲ್ಲಿ ಕಾಳಜಿ ತೋರಿಸಿದ್ದಾರೆ. ಆಶಾ ಕಾರ್ಯಕರ್ತೆಯರ ವಿಶೇಷ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ನೆರವು ನೀಡಿದ್ದಾರೆ.

ಪ್ರವಾಹದ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ವೈಯುಕ್ತಿಕವಾಗಿ ₹ 1 ಕೋಟಿ ಅನ್ನು ದೇಣಿಗೆಯಾಗಿ ನೀಡಿ ಮಾನವೀಯತೆ ಮೆರೆದಿದ್ದ ಸಚಿವ ಎಂಟಿಬಿ ನಾಗರಾಜು ರವರು ನಂತರ ಕೋವಿಡ್ ಸಂದರ್ಭದಲ್ಲಿ ಮತ್ತೇ ₹ 1 ಕೋಟಿ ದೇಣಿಗೆಯನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ನೀಡಿದ್ದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿರುವ ‘ಆಯುಷ್ಮಾನ್ ಭಾರತ್’ ಆರೋಗ್ಯ ಯೋಜನೆಯಡಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 4,42,510 ಮಂದಿಗೆ ಕಾರ್ಡುಗಳನ್ನು ವಿತರಿಸಲಾಗಿದೆ. ಬಿಪಿಎಲ್ ಕಾರ್ಡುಹೊಂದಿರುವ ಫಲಾನುಭವಿಗಳು ಯೋಜನೆಯಡಿ ತಲಾ ₹ 5 ಲಕ್ಷ ಮೌಲ್ಯದ ವೈದ್ಯಕೀಯ ವೆಚ್ಚ ಸರಿದೂಗಿಸಿಕೊಳ್ಳಲು ಅರ್ಹರಾಗಿರುತ್ತಾರೆ.

ಆಯುಷ್ಮಾನ್ ಭಾರತ ಯೋಜನೆ ಭಿತ್ತಿ ಪತ್ರವನ್ನು ಸಚಿವ ಸುಧಾಕರ್, ಎಂಟಿಬಿ ನಾಗರಾಜ್ ಬಿಡಗಡೆಗೊಳಿಸಿ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕೆ. ಶ್ರೀನಿವಾಸ್ ಇತರ ಅಧಿಕಾರಿಗಳು ಇದ್ದರು

ದೊಡ್ಡ ಅಮಾನಿಕೆರೆ ಕೆರೆಗೆ ಸಚಿವ ಎಂ.ಟಿ.ಬಿ ನಾಗರಾಜ್ ಅವರಿಂದ ಬಾಗಿನ ಅರ್ಪಣೆ

ವಿಧಾನಸಭಾ ಕಲಾಪದಲ್ಲಿ ಸಚಿವ ಎಂ.ಟಿ.ಬಿ.ನಾಗರಾಜ್ ಮಾತು

ಜಲ ಸಮೃದ್ಧಿ – ಕೆರೆಗಳು ಭರ್ತಿ

ರಾಜಧಾನಿ ಬೆಂಗಳೂರಿಗೆ ಸಮೀಪದಲ್ಲಿಯೇ ಇರುವ ಹೊಸಕೋಟೆ ತಾಲ್ಲೂಕಿನ ದೊಡ್ಡ ಅಮಾನಿಕೆರೆ 33 ವರ್ಷದ ಬಳಿಕ ತುಂಬಿದೆ. ಕೆರೆ ತುಂಬಿರುವುದು ಈ ಭಾಗದ ಜನರಲ್ಲಿ ಹರ್ಷ ಮೂಡಿಸಿದೆ. ಇದೇ ಹಿನ್ನೆಲೆಯಲ್ಲಿ ಪೌರಾಡಳಿತ ಸಚಿವವೂ ಆದ ಕ್ಷೇತ್ರದ ಮುಖಂಡ ಎಂಟಿಬಿ ನಾಗರಾಜು ಅವರು ಸಂಪ್ರದಾಯದಂತೆ ಪೂಜೆ ಸಲ್ಲಿಸಿ ಕೆರೆಗೆ ಬಾಗಿನ ಅರ್ಪಿಸಿದರು.

ಈ ಬಾರಿ ತಾಲ್ಲೂಕಿನಲ್ಲಿಯೂ ಉತ್ತಮ ಮಳೆಯಾಗಿದೆ. ತಾಲ್ಲೂಕಿ ಬಹುತೇಕ ಕೆರೆಗಳು ಭರ್ತಿಯಾಗಿವೆ. ಜಲಸಂರಕ್ಷಣೆ ಮತ್ತು ಕೃಷಿ ಚಟುವಟಿಕೆಗೆ ಪೂರಕವಾಗಿ ತಾಲ್ಲೂಕಿನಲ್ಲಿರುವ ವಿವಿಧ ಪ್ರಮುಖ 34 ಕೆರೆಗಳನ್ನು ₹ 16.10 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಕುರಿತಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರದಲ್ಲಿಯೇ ಟೆಂಡರ್ ಕರೆದು ಈ ಸಂಬಂಧಿತ ಕಾಮಗಾರಿಗಳಿಗೂ ಚಾಲನೆ ನೀಡಲಾಗುತ್ತದೆ.

ಪ್ರಮುಖವಾದ ದೊಡ್ಡದಾದ ಅಮಾನಿಕೆರೆಯನ್ನು ಪುನರುಜ್ಜೀವನಗೊಳಿಸುವ ಸಂಕಲ್ಪ ತೊಡಲಾಗಿದೆ. ಕೆರೆಗಳ ಏರಿಗಳು ಮತ್ತು ಕಾಲುವೆ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ₹ 5 ಕೋಟಿ ವೆಚ್ಚದಲ್ಲಿ ಕಾರ್ಯಗತಗೊಳಿಸಲ ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಎಲೆ ಮಲ್ಲಪ್ಪ ಶೆಟ್ಟಿ ಕೆರೆಯಿಂದ ಹೊಸಕೋಟೆಯ ದೊಡ್ಡ ಕೆರೆಗೆ ನೀರು ತುಂಬಿಸುವ ಯೋಜನೆಯು ಬಹಳ ವರ್ಷಗಳಿಂದಲೂ ನನೆಗುದಿಗೆ ಬಿದ್ದಿತ್ತು. ಈ ಹಿಂದೆ ಹಲವರು ಇದಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಆದರೆ, ಅನುಷ್ಠಾನ ಕಾರ್ಯ ಪೂರ್ಣವಾಗಿ ಕಾರ್ಯಗತವಾಗಿರಲಿಲ್ಲ. 2004ರಲ್ಲಿ ಎಂಟಿಬಿ ನಾಜರಾಜು ರವರು ಶಾಸಕರಾಗಿ ಆಯ್ಕೆಯಾದ ನಂತರ ಕೃಷಿ ಚಟುವಟಿಕೆಗೆ ಉತ್ತೇಜನ ನೀಡುವುದು ಮತ್ತು ಹೊಸಕೋಟೆ ನಗರದ ಜನರ ಕುಡಿಯುವ ನೀರಿನ ಅಗತ್ಯವನ್ನು ಈಡೇರಿಸಲು ಸರ್ಕಾರದ ಮೇಲೆ ಒತ್ತಡ ತಂದು ಕೆರೆಯನ್ನು ತುಂಬಿಸುವ ಕಾರ್ಯವನ್ನು ಕಾರ್ಯಗತಗೊಳಿಸಲಾಯಿತು ಎನ್ನುತ್ತಾರೆ ಸಚಿವ ಎಂಟಿಬಿ ನಾಗರಾಜು

ಹೊಸಕೋಟೆ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ತೀವ್ರ ಕೊರತೆ ಉಂಟಾಗಿತ್ತು. ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್.ಯಡಿಯೂರಪ್ಪ ಹಾಗೂ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನವನ್ನು ಸೆಳೆದು, ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿಯಲ್ಲಿನ ನೀರು ಹೊಸಕೋಟೆ ತಾಲ್ಲೂಕಿನ ಕೆರೆಗಳಿಗೆ ಹರಿಯುವಂತೆ ವ್ಯವಸ್ಥೆ ಮಾಡಲು ಸಚಿವ ಎಂಟಿಬಿ ನಾಗರಾಜು ಅವರು ಸತತ ಒತ್ತಡ ಹೇರಿದ್ದರು.

ಇದರ ಪರಿಣಾಮವಾಗಿ ಕೆ.ಸಿ.ವ್ಯಾಲಿಯಿಂದ ನೀರು ಬಳಸಿ ತಾವರೆಕೆರೆ, ಅಮಾತ್ತೂರು, ಮೂಗಬಾಳ, ದೊಡ್ಡ ನಲ್ಲೂರಹಳ್ಳಿ ಹಾಗೂ ಹುಲ್ಲೂರು ಕೆರೆ ಭರ್ತಿಗೆ ಕ್ರಮವಹಿಸಿದರೆ, ಎಚ್.ಎನ್.ವ್ಯಾಲಿ ಮೂಲದ ನೀರನ್ನು ಬೂದಿಗೆರೆ ಕೆರೆಯಿಂದ ಹೊಸಕೋಟೆ ದೊಡ್ಡ ಅಮಾನಿಕೆರೆಗೆ ಹರಿಸಲಾಗುತ್ತಿದೆ.

‘ನನ್ನ ಸತತ ಪ್ರಯತ್ನದಿಂದ ತಾಲ್ಲೂಕಿನ ಕೆರೆಗಳು ಭರ್ತಿಯಾಗಿವೆ. ನನ್ನ ಈ ಪ್ರಯತ್ನಕ್ಕೆ ನಿರಂತರ ಬೆಂಬಲ ಹಾಗೂ ಸಹಕಾರ ನೀಡಿದ ಮಾಜಿ ಮುಖ್ಯಮಂತ್ರಿಗಳು, ಮುಖಂಡರು ಆದ ಬಿ.ಎಸ್.ಯಡಿಯೂರಪ್ಪ ಹಾಗೂ ಇಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರಿಗೆ ನನ್ನ ವೈಯುಕ್ತಿಕ ಹಾಗೂ ತಾಲ್ಲೂಕಿನ ಜನತೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ’ ಎಂದು ಸಚಿವ ಎಂಟಿಬಿ ನಾಗರಾಜು ಅವರು ಹೇಳಿದರು.

ನಿಲ್ಲದ ಮಳೆ: ಪೂರ್ವಭಾಗ ಮತ್ತಷ್ಟು ಜಲಾವೃತ • ಹೈರಾಣಾದ ನಾಗರಿಕರು

ಏರಿದ ನೀರು... ತೊಂದರೆ ನೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿಯೂ ಮುಂದುವರಿದ ಮಳೆಯಿಂದಾಗಿ ಪೂರ್ವ ಭಾಗದಲ್ಲಿ ಮತ್ತಷ್ಟು ಸಂಕಷ್ಟ ಎದುರಾಗಿದೆ. ಕೆರೆಗಳ ಕೋಡಿ ಪ್ರಮಾಣದಲ್ಲಿ ಇನ್ನಷ್ಟು ಏರಿಕೆಯಾಗಿದ್ದು, ಬಡಾವಣೆಗಳು, ರಸ್ತೆಗಳಲ್ಲಿ ಜಲಮಟ್ಟ ಹೆಚ್ಚಾಗಿದೆ.

ಬಿಬಿಎಂಪಿ ಪೂರ್ವ ಹಾಗೂ ಮಹದೇವಪುರ ವಲಯ ವ್ಯಾಪ್ತಿಯಲ್ಲಿರುವ ದೊಡ್ಡನೆಕ್ಕುಂದಿ, ಶೀಲವಂತನಕೆರೆ, ಮುನ್ನೇಕೊಳಲು, ಕುಂದಲಹಳ್ಳಿ, ನೆಲ್ಲೂರಹಳ್ಳಿ, ಯಮಲೂರು, ಬೆಳ್ಳಂದೂರು, ಮಹದೇವಪುರ, ಹೂಡಿ, ವರ್ತೂರು, ಸವಳು, ಇಬ್ಬಲೂರು, ದೇವರಬಿಸನಹಳ್ಳಿ, ದೊಡ್ಡಕನ್ನಹಳ್ಳಿ, ಗುಂಜೂರು, ಭೋಗನಹಳ್ಳಿ ಕೆರೆ ಸೇರಿ ಬಹುತೇಕ ಎಲ್ಲ ಕೆರೆಗಳು ಕೋಡಿ ಹರಿಯುತ್ತಿವೆ. ಬೃಹತ್ ಪ್ರಮಾಣದಲ್ಲಿ ನೀರು ಬರುತ್ತಿರುವುದರಿಂದ ರಾಜಕಾಲುವೆ ಉಕ್ಕಿ ನೀರಿನ ಪ್ರಮಾಣ ಜನವಸತಿ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಮಹದೇವಪುರ ಭಾಗದ ಮಾರತ್ ಹಳ್ಳಿ, ಬೆಳ್ಳಂದೂರು, ಯಮಲೂರು, ಸರ್ಜಾಪುರ ಸುತ್ತಮುತ್ತಲಿನ ಪ್ರದೇಶಗಳು ಮಳೆಯಿಂದ ಮತ್ತಷ್ಟು ಸಂಕಷ್ಟಕ್ಕೆ ಒಳಗಾಗಿವೆ.

ವರ್ತೂರು ಮುಖ್ಯರಸ್ತೆಯಿಂದ ಯಮಲೂರಿಗೆ ಹೋಗುವ ರಸ್ತೆಯಲ್ಲಿರುವ 77 ಡಿಗ್ರಿ ಟೌನ್ ಸೆಂಟರ್, ಎಚ್‌ಎಎಲ್ ತೇಜಸ್ ವಿಭಾಗದ ಆವರಣದಲ್ಲಿ ಮಂಗಳವಾರ ಸುಮಾರು ಮೂರು ಅಡಿಯಷ್ಟು ನೀರು ನಿಂತಿತ್ತು. ಯಮಲೂರು ಕೆರೆಯಿಂದ ನೀರಿನ ಹರಿವು ಹೆಚ್ಚಾದ್ದರಿಂದ ರಾಜಕಾಲುವೆ ಉಕ್ಕಿ ಹರಿಯಿತು. ಈ ಮಧ್ಯೆಯೇ ಬಿಬಿಎಂಪಿ ವತಿಯಿಂದ ರಾಜಕಾಲುವೆ ತೆರವು ಕಾರ್ಯ ಈ ರಸ್ತೆಯಲ್ಲಿ ನಡೆಯುತ್ತಿದೆ. ಸಂಜೆ ವೇಳೆಗೆ ನೀರಿನ ಪ್ರಮಾಣ ಕಡಿಮೆಯಾಗಿತ್ತು. ಆದರೆ, ಮಂಗಳವಾರ ಸಂಜೆಯಿಂದ ಆರಂಭವಾದ ಮಳೆಯಿಂದ ಮತ್ತಷ್ಟು ಜಲಾವೃತವಾಯಿತು.

ಸರ್ಜಾಪುರ ರಸ್ತೆಯಲ್ಲಿರುವ ರೈನ್‌ಬೊ ಡ್ರೈವ್, ಸನ್ನಿ ಬ್ರೂಕ್ಸ್, ಕಂಟ್ರಿ ಸೈಡ್ ಐಷಾರಾಮಿ ಬಡಾವಣೆಗಳಿಗೆ ಮಂಗಳವಾರ ಇನ್ನಷ್ಟು ನೀರು ನುಗ್ಗಿದೆ. ಐಟಿ ಕಂಪನಿಗಳಿರುವ ಇಕೊಸ್ಪೇಸ್ ಪ್ರದೇಶದಲ್ಲೂ ನೀರಿನ ಹರಿವು ಹೆಚ್ಚಾಗಿದೆ.

‘ಬಿಬಿಎಂಪಿ ವತಿಯಿಂದ ರಾಜಕಾಲುವೆ ಒತ್ತುವರಿ ತೆರವು ಕಾಮಗಾರಿಯನ್ನು ಮುಂದುವರಿಸಲಾಗಿದೆ. ರಾಜಕಾಲುವೆ ತೆರವು ಮಾಡಿ, ನೀರು ಹರಿಯಲು ಅನುವು ಮಾಡಿಕೊಡುವ ಕೆಲಸ ಮಾಡುತ್ತಿದ್ದೇವೆ. ಒತ್ತುವರಿ ತೆರವು ಮಾಡಲು ಮಳೆ ಅಡ್ಡಿಯಾಗಿದ್ದರೂ ಕೆಲಸ ನಿಂತಿಲ್ಲ’ ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

‘ಎಚ್‌ಎಎಲ್ ಬಳಿಯ ದಿವ್ಯಶ್ರೀ ಅಪಾರ್ಟ್‌ಮೆಂಟ್‌ನಲ್ಲಿ ಮಾರ್ಪಾಟಾಗಿದ್ದ ಹಾಗೂ ಮುಚ್ಚಿಹೋಗಿದ್ದ ರಾಜಕಾಲುವೆಯನ್ನು ತೆರವು ಮಾಡಲಾಗಿದೆ. ಇದರಿಂದ ರಸ್ತೆ, ಬಡಾವಣೆಗಳಿಗೆ ನೀರು ಹರಿಯುವ ಪ್ರಮಾಣ ಕಡಿಮೆಯಾಗಿದೆ’ ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಹೇಳಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಳ್ಳಂದೂರಿನ ಕೆಕೆ ಗಾರ್ಡನ್ ಪ್ರದೇಶದಲ್ಲಿ ಜಲಾವೃತವಾಗಿದ್ದ ರಸ್ತೆಯಲ್ಲಿಯೇ ಫ್ರಿಡ್ಜ್‌ನೊಂದಿಗೆ ಸಾಗಿದ ಜನರು —ಪ್ರಜಾವಾಣಿ ಚಿತ್ರಗಳು

ನಗರದ ಕುಂಬ್ಳೆ ವೃತ್ತದಲ್ಲಿ ಮಂಗಳವಾರ ಸುರಿದ ಮಳೆಯಲ್ಲಿಯೇ ಸಾಗಿದ ವಾಹನ ಸವಾರ

ವರ್ಕ್ ಫ್ರಂ ಹೋಂಗೆ ಉತ್ತೇಜನ: ಒಆರ್‌ಆರ್‌ಸಿಎ

‘ಹೊರ ವರ್ತುಲ ರಸ್ತೆಯಲ್ಲಿ ಮೂಲ ಸೌಕರ್ಯವನ್ನು ಮರುಸ್ಥಾಪಿಸಲು ತುರ್ತು, ಮಧ್ಯಮ ಹಾಗೂ ದೀರ್ಘಕಾಲದ ಯೋಜನೆಗಳನ್ನು ಸಂಬಂಧಪಟ್ಟ ಇಲಾಖೆಗಳು ನಡೆಸುವಾಗ ಸಂಘ ಸಹಯೋಗ ನೀಡಲಿದೆ. ಪ್ರಸ್ತುತ ಸಮಯದಲ್ಲಿ ಇಲಾಖೆಗಳು ರಕ್ಷಣಾ ಕಾರ್ಯದಲ್ಲಿ ತೊಡಗಿರುವಾಗ ಅವರಿಗೆ ಸಹಕಾರ ನೀಡುವತ್ತ ನಮ್ಮ ಗಮನ ಕೇಂದ್ರೀಕೃತವಾಗಿದೆ. ರಸ್ತೆಗಳಲ್ಲಿ ಹೆಚ್ಚು ದಟ್ಟಣೆ ಉಂಟಾಗುತ್ತಿರುವುದರಿಂದ ಕಂಪನಿಗಳು ವರ್ಕ್ ಫ್ರಂ ಹೋಮ್‌ಗೆ ಹೆಚ್ಚು ಉತ್ತೇಜನ ನೀಡಲು ಅಸೋಸಿಯೇಷನ್ ಸಲಹೆ ನೀಡುತ್ತದೆ. ತುರ್ತು ರಕ್ಷಣೆ ಕಾರ್ಯ ಕೈಗೊಳ್ಳುವ ಸಿಬ್ಬಂದಿ ಅಗತ್ಯ ಸ್ಥಳ ತಲುಪಲು ನಾವು ಈ ಮೂಲಕ ನೆರವು ನೀಡಬಹುದು’ ಎಂದು ಹೊರ ವರ್ತುಲ ರಸ್ತೆ ಕಂಪನಿಗಳ ಸಂಘದ (ಒಆರ್‌ಆರ್‌ಸಿಎ) ಪ್ರಧಾನ ವ್ಯವಸ್ಥಾಪಕ ಕೃಷ್ಣಕುಮಾರ್ ಗೌಡ ತಿಳಿಸಿದ್ದಾರೆ.

ಬೆಂಗಳೂರಿನ ಬೆಳ್ಳಂದೂರು ಹೊರವರ್ತುಲ ರಸ್ತೆಯ 'ಇಕೋ ಸ್ಪೇಸ್' ಮುಂಭಾಗ ಮಂಗಳವಾರ ರಸ್ತೆಯಲ್ಲಿನ ನೀರಿನ ಪ್ರಮಾಣ ಹೆಚ್ಚಾಗಿ ವಾಹನ ಸವಾರರು ಪರದಾಡಿದರು

ಬೆಳ್ಳಂದೂರಿನ ಕೆಕೆ ಗಾರ್ಡನ್ ಪ್ರದೇಶ ಮಳೆಯಿಂದ ಜಲಾವೃತವಾಗಿರುವುದು

ಕಟ್ಟಡ ನಿಯಮ ಪುನರ್ ರಚನೆ ಅಗತ್ಯ: ಕಿರಣ್ ಮಜುಂದಾರ್ ಶಾ

‘ನಗರದಲ್ಲಿ ಈ ಹಿಂದೆ ಎಂದೂ ಕಾಣದಷ್ಟು ಪ್ರಮಾಣದಲ್ಲಿ ಮಳೆಯಾಗಿದೆ. ಸರ್ಕಾರ ಹಾಗೂ ಡೆವೆಲಪರ್‌ಗಳು ಒಟ್ಟಾಗಿ ಜವಾಬ್ದಾರಿ ತೆಗೆದುಕೊಂಡು, ಜಲಾವೃತ ಪ್ರದೇಶಗಳಲ್ಲಿ ಪರಿಹಾರ ಕಂಡುಕೊಳ್ಳಬೇಕು’ ಎಂದು ಬಯೊಕಾನ್ ಕಂಪನಿಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಹೇಳಿದ್ದಾರೆ.

‘ಕಟ್ಟಡಗಳ ನಿಯಮಗಳನ್ನು ಪುನರ್ ರಚಿಸಬೇಕಿದೆ. ಮೂಲ ಸಮಸ್ಯೆಯನ್ನು ಬಗೆಹರಿಸಲು ಸೂಕ್ತ ಹಾಗೂ ನಿಯಂತ್ರಿತ ಕ್ರಿಯಾಯೋಜನೆಯ ಅಗತ್ಯವಿದೆ. ಟೀಕೆ ಮಾಡುವುದರಿಂದ ಪ್ರಯೋಜನವಿಲ್ಲ’ ಎಂದು ಪ್ರತಿಕ್ರಿಯಿಸಿದ್ದಾರೆ.

ಎಲ್ಲೆಲ್ಲೂ ನೀರು; ಜೋಪಡಿಯೊಳಗೆ ಕಣ್ಣೀರು

ವಲಸೆ ಕಾರ್ಮಿಕರ ಬದುಕು ಬೀದಿಗೆ: ನಿದ್ರೆಯೂ ಇಲ್ಲ, ಊಟವೂ ಇಲ್ಲ

ಗುಳೆ ಬಂದವರ ಗೋಳು

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ‘ದಿನವೂ ಮಳೆ ನೀರು ಜೋಪಡಿ ತುಂಬುತ್ತಿದೆ, ನೆಮ್ಮದಿಯಿಂದ ನಿದ್ರೆ ಮಾಡಿ ವಾರಗಳೇ ಕಳೆದಿದೆ, ಊಟಕ್ಕೂ ಗತಿ ಇಲ್ಲ, ನೆರವಿನ ಹಸ್ತ ಚಾಚುವವರೇ ಇಲ್ಲ...’ ಇದು ವೈಟ್‌ಫೀಲ್ಡ್ ಮುಖ್ಯ ರಸ್ತೆಯಲ್ಲಿ ಬಿಇಎಂಎಲ್ ಲೇಔಟ್‌ನಲ್ಲಿರುವ ವಲಸೆ ಕಾರ್ಮಿಕರ ಗೋಳು.

ಈ ಲೇಔಟ್‌ನ ಖಾಲಿ ಜಾಗವೊಂದರಲ್ಲಿ ರಾಯಚೂರು ಜಿಲ್ಲೆಯ ವಲಸೆ ಕಾರ್ಮಿಕರ 100ಕ್ಕೂ ಹೆಚ್ಚು ಜೋಪಡಿಗಳಿವೆ. ಬಿಬಿಎಂಪಿ ಕಸ ನಿರ್ವಹಣೆ ಕೆಲಸ ಮಾಡುವ ಕಾರ್ಮಿಕರು, ಕುಟುಂಬ ಸಮೇತ ನೆಲೆಸಿದ್ದಾರೆ. ನಿರಂತರವಾಗಿ ಸುರಿಯುತ್ತಿರುವ ಮಳೆ ಇವರ ನೆಮ್ಮದಿ ಹಾಳು ಮಾಡಿದೆ.

‘ಸುತ್ತಲೂ ಅಪಾರ್ಟ್‌ಮೆಂಟ್ ಸಮುಚ್ಚಯ ಮತ್ತು ಐ.ಟಿ ಕಂಪನಿಗಳ ಕಟ್ಟಡಗಳಿವೆ. ಈ ಕಟ್ಟಡಗಳ ಆವರಣ, ನೆಲ ಮಹಡಿಗಳಿಗೆ ತುಂಬಿಕೊಳ್ಳುವ ನೀರನ್ನು ನಾಲ್ಕೈದು ಮೋಟರ್‌ಗಳ ಮೂಲಕ ಹೊರಹಾಕುತ್ತಾರೆ. ಆ ನೀರು ನಮ್ಮ ಜೋಪಡಿಗಳನ್ನು ತುಂಬಿಕೊಳ್ಳುತ್ತಿದೆ’ ಎಂದು ವಲಸೆ ಕಾರ್ಮಿಕ ಭೀಮೇಶ್ ಹೇಳುತ್ತಾರೆ.

‘ಜೋಪಡಿಗಳನ್ನು ನಿರ್ಮಿಸಿಕೊಂಡು ಹಲವು ವರ್ಷಗಳಿಂದ ಇದೇ ಜಾಗದಲ್ಲಿ ವಾಸವಿದ್ದೇವೆ. ಒಂದು ಗುಡಿಸಿಲಿಗೆ ₹2 ಸಾವಿರದಂತೆ ನೆಲ ಬಾಡಿಗೆ ಕೊಡುತ್ತಿದ್ದೇವೆ. ಪಕ್ಕದಲ್ಲಿ ದೊಡ್ಡ ಕಟ್ಟಡ ನಿರ್ಮಾಣವಾದ ಬಳಿಕ ಅಲ್ಲಿಂದ ಹೊರ ಹಾಕುವ ನೀರು ನಮ್ಮ ಗುಡಿಸಿಲು ತಲುಪುತ್ತಿದೆ’ ಎಂದು ಹೇಳಿದರು.

‘ಶಾಸಕ ಅರವಿಂದ ಲಿಂಬಾವಳಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಮಸ್ಯೆ ಸರಿಪಡಿಸುವ ಬದಲು ಈ ಜಾಗದಿಂದ ಖಾಲಿ ಮಾಡಿ ಎಂದು ನಮಗೇ ಸೂಚನೆ ನೀಡಿದರು’ ಎಂದು ಬೇಸರ ವ್ಯಕ್ತಪಡಿಸಿದರು.

‘ಬೀದಿಗಳಲ್ಲಿ ಕಸ ಗುಡಿಸುವ, ಕಸ ಸಂಗ್ರಹಿಸುವ ಕೆಲಸ ಮಾಡುತ್ತೇವೆ. ಈ ಕೆಲಸ ಮಾಡಲು ಪಾಲಿಕೆಗೆ ನಾವೇ ಬೇಕು. ಆದರೆ, ನಮ್ಮ ಸಮಸ್ಯೆ ಕೇಳಲು ಯಾರೂ ಮುಂದೆ ಬರುವುದಿಲ್ಲ. ಉಳ್ಳವರ ಪರವೇ ಎಲ್ಲರೂ ಮಾತನಾಡುತ್ತಾರೆ’ ಎಂದು ಅಳಲು ತೋಡಿಕೊಂಡರು.

ಬಿಇಎಂಎಲ್ ಲೇಔಟ್‌ನಲ್ಲಿ ನೀರು ತುಂಬಿದ ಜೋಪಡಿಯಿಂದ ಮಹಿಳೆಯೊಬ್ಬರು ವಸ್ತುಗಳನ್ನು ಹೊತ್ತು ತರುತ್ತಿರುವುದು– ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ನೀರು ತುಂಬಿದ ಜೊಪಡಿಯ ಮುಂದೆ ಮಕ್ಕಳು

‘ಹೊರಟಿದ್ದೇವೆ, ಎಲ್ಲಿಗೋ ಗೊತ್ತಿಲ್ಲ’

ಪ್ರತಿದಿನ ಮಳೆ ನೀರು ತುಂಬಿಕೊಳ್ಳುತ್ತಿದ್ದು, ಇದರಿಂದ ಬೇಸತ್ತ ಕೆಲವು ಕಾರ್ಮಿಕರು ಖಾಲಿ ಮಾಡಿ ಬೇರೆ ಜಾಗದ ಹುಡುಕಾಟದಲ್ಲಿದ್ದಾರೆ.

‘ಅಧಿಕಾರಿಗಳು, ಶಾಸಕರು ಸೇರಿ ಎಲ್ಲರೂ ನಮ್ಮದೇ ತಪ್ಪು ಎಂಬಂತೆ ನಡೆದುಕೊಳ್ಳುತ್ತಿದ್ದಾರೆ. ಬಡವರಿಗೆ ಯಾರ ನೆರವೂ ಸಿಗುವುದಿಲ್ಲ ಎಂಬುದು ಖಾತ್ರಿಯಾಗಿದೆ’ ಎಂದು ವಸ್ತುಗಳನ್ನು ಹೊತ್ತು ಹೊರಟಿದ್ದ ಶರಣಮ್ಮ ಹೇಳಿದರು.

‘ಯಾವುದೇ ಖಾಲಿ ಜಾಗದಲ್ಲೂ ಗುಡಿಸಿಲು ನಿರ್ಮಿಸಿಕೊಳ್ಳಲು ಅವಕಾಶ ನೀಡುವುದಿಲ್ಲ. ಸರ್ಕಾರದ ಜಾಗಕ್ಕೆ ಹೋದರೂ ಅಧಿಕಾರಿಗಳು ಖಾಲಿ ಮಾಡಿಸುತ್ತಾರೆ. ನೀರಿನಲ್ಲಿ ದಿನವೂ ಮುಳುಗಿ ಬೇಸತ್ತು ಹೊರಟಿದ್ದೇವೆ. ಬಾಡಿಗೆ ಮನೆ ಪಡೆಯುವಷ್ಟು ದುಡಿಮೆ ಇಲ್ಲ. ದುಡಿದು ತಿನ್ನುವ ನಮ್ಮನ್ನು ಬಡತನ ಕಿತ್ತು ತಿನ್ನುತ್ತಿದೆ. ಎಲ್ಲಿಗೆ ಹೋಗಬೇಕೋ ಗೊತ್ತಿಲ್ಲ’ ಎಂದು ಅವರು ಕಣ್ಣಾಲಿ ತುಂಬಿಕೊಂಡರು.

ದೇವಸ್ಥಾನದಲ್ಲಿ ಮಕ್ಕಳಿಗೆ ಆಶ್ರಯ

‘ಗುಡಿಸಿಲುಗಳ ಪಕ್ಕದಲ್ಲಿ ದೇವಸ್ಥಾನವೊಂದಿದ್ದು, ಮಳೆ ಬಂದ ಕೂಡಲೇ ಮಕ್ಕಳನ್ನು ಅಲ್ಲಿಗೆ ಕರೆದೊಯ್ದು ಕೂರಿಸುತ್ತೇವೆ’ ಎಂದು ಭೀಮೇಶ್ ಹೇಳಿದರು.

‘ಪ್ರತಿದಿನ ರಾತ್ರಿ ಮಳೆ ಬರುತ್ತಿದೆ. ಮಧ್ಯಾಹ್ನದ ತನಕ ನೀರು ಹೊರಹಾಕುವ ಕೆಲಸ ಮಾಡುತ್ತಿದ್ದೇವೆ. ನೀರು ಕಡಿಮೆ ಆಯಿತು ಎನ್ನುವಷ್ಟರಲ್ಲಿ ಮತ್ತೆ ರಾತ್ರಿ ಮಳೆ ಸುರಿಯುತ್ತಿದೆ. ವಾರದಿಂದ ಕೆಲಸವೂ ಇಲ್ಲ, ನೆಮ್ಮದಿಯೂ ಇಲ್ಲ. ಊಟಕ್ಕೂ ಪರದಾಡುವ ಸ್ಥಿತಿ ಇದೆ’ ಎಂದು ಗದ್ಗದಿತರಾದರು.

ವೈಟ್‌ಫೀಲ್ಡ್: ಬೆಸ್ಕಾಂ ವಿರುದ್ಧ ಎಫ್‌ಐಆರ್ ದಾಖಲು

ಮಳೆ: ವಿದ್ಯುತ್ ತಗುಲಿ ಯುವತಿ ಸಾವು

ಪ್ರಜಾವಾಣಿ ವಾರ್ತೆ



ಅಖಿಲಾ

ಬೆಂಗಳೂರು: ನಗರದ ವೈಟ್‌ಫೀಲ್ಡ್‌ನಲ್ಲಿ ಸೋಮವಾರ ರಾತ್ರಿ ಧಾರಾಕಾರ ಮಳೆ ಸುರಿಯುವ ವೇಳೆ ವಿದ್ಯುತ್ ತಗುಲಿ ಅಖಿಲಾ (23) ಎಂಬುವರು ಮೃತಪಟ್ಟಿದ್ದು, ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

‘ಸಿದ್ದಾಪುರದ 5ನೇ ಅಡ್ಡರಸ್ತೆಯ ನಿವಾಸಿ ಅಖಿಲಾ, ಬಿ.ಕಾಂ ಪದವೀಧರೆ. ಬಿ.ಎಂ.ಎಲ್ ಬಡಾವಣೆಯಲ್ಲಿರುವ ತ್ರಿಷನ್ ಸಂಗೀತ ಸಂಸ್ಥೆಯ ಆಡಳಿತ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ರಾತ್ರಿ ಕೆಲಸ ಮುಗಿಸಿ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ವೈಟ್‌ಫೀಲ್ಡ್ ಠಾಣೆ ಪೊಲೀಸರು ಹೇಳಿದರು.

‘ಮಗಳು ಅಖಿಲಾ ಸಾವಿಗೆ ಬೆಸ್ಕಾಂ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯ ಕಾರಣವೆಂದು ತಂದೆ ಸೋಮಶೇಖರ್ ದೂರು ನೀಡಿದ್ದಾರೆ. ಬೆಸ್ಕಾಂ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ, ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ. ಅಧಿಕಾರಿಗಳಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಬೇಕಿದೆ’ ಎಂದು ತಿಳಿಸಿದರು.

ಉರುಳಿಬಿದ್ದಿದ್ದ ಬೈಕ್: ‘ಕಚೇರಿ ಕೆಲಸ ಮುಗಿಸಿದ್ದ ಅಖಿಲಾ, ದ್ವಿಚಕ್ರ ವಾಹನದಲ್ಲಿ ವರ್ತೂರು ಮುಖ್ಯರಸ್ತೆ ಮೂಲಕ ಸಿದ್ದಾಪುರದ ಮನೆಗೆ ಹೊರಟಿದ್ದರು. ಮಯೂರ ಬೇಕರಿ ಬಳಿ ರಸ್ತೆಯಲ್ಲಿ ನೀರು ಹರಿಯುತ್ತಿತ್ತು. ಅದರಲ್ಲೇ ವಾಹನ ಚಲಾಯಿಸಿದ್ದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ನೀರಿನಲ್ಲಿ ಮುಂದಕ್ಕೆ ಹೋಗಲಾಗದೇ ದ್ವಿಚಕ್ರ ವಾಹನ ಉರುಳಿಬಿದ್ದಿತ್ತು. ನೀರಿನಲ್ಲಿ ಬಿದ್ದ ಅಖಿಲಾ, ರಕ್ಷಣೆಗಾಗಿ ರಸ್ತೆ ನಡುವೆ ಇದ್ದ ಕಂಬವೊಂದನ್ನು ಹಿಡಿದುಕೊಂಡಿದ್ದರು. ಆ ಕಂಬದಲ್ಲಿ ವಿದ್ಯುತ್ ತಂತಿಗಳು ತುಂಡರಿಸಿದ್ದವು. ಕಂಬ ಸ್ಪರ್ಶಿಸುತ್ತಿದ್ದಂತೆ ವಿದ್ಯುತ್ ತಗುಲಿ ಅಖಿಲಾ ಕುಸಿದು ಬಿದ್ದಿದ್ದರು.’

‘ರಕ್ಷಣೆಗೆ ಹೋಗಿದ್ದ ಸ್ಥಳೀಯರು, ಅಖಿಲಾ ಅವರನ್ನು ಜೀವಿಕಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೂ ಕರೆದೊಯ್ಯಲಾಗಿತ್ತು. ಆದರೆ, ಅಷ್ಟರಲ್ಲೇ ಅಖಿಲಾ ಮೃತಪಟ್ಟಿದ್ದರು’ ಎಂದು ತಿಳಿಸಿದರು.

ಮಗಳಿಗಾಗಿ ಕಾಯುತ್ತಿದ್ದ ತಂದೆ: ‘ಅಖಿಲಾ ನಿತ್ಯವೂ ಕೆಲಸ ಮುಗಿಸಿ ರಾತ್ರಿ 8.30ಕ್ಕೆ ಮನೆಗೆ ಬರುತ್ತಿದ್ದರು. ಆದರೆ, ಸೋಮವಾರ ರಾತ್ರಿ ನಿಗದಿತ ಸಮಯಕ್ಕೆ ಮನೆಗೆ ಬಂದಿರಲಿಲ್ಲ. ಮಳೆ ಇರುವುದರಿಂದ ತಡವಾಗಿ ಬರಬಹುದೆಂದು ಕಾಯುತ್ತಿದ್ದೆ. ಘಟನಾ ಸ್ಥಳದಲ್ಲಿದ್ದ ವ್ಯಕ್ತಿಯೊಬ್ಬರು ಕರೆ ಮಾಡಿ ವಿಷಯ ತಿಳಿಸಿದರು. ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲೇ ಮಗಳು ಮೃತಪಟ್ಟಿದ್ದಳು’ ಎಂದು ತಂದೆ ಸೋಮಶೇಖರ್ ಅಳಲು ತೋಡಿಕೊಂಡರು.

ಜಾಹೀರಾತು ಫಲಕದಿಂದ ಅವಘಡ: ಬೆಸ್ಕಾಂ

ಘಟನೆ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಬೆಸ್ಕಾಂ ಅಧಿಕಾರಿಗಳು, ‘ರಸ್ತೆ ವಿಭಜಕಕ್ಕೆ ಅಳವಡಿಸಿದ್ದ ಜಿ.ಎಸ್. ಮಿಡಿಯಾ ಕಂಪನಿಯ ಜಾಹೀರಾತು ಫಲಕದಿಂದ ವಿದ್ಯುತ್ ತಗುಲಿ ಯುವತಿ ಮೃತಪಟ್ಟಿದ್ದಾರೆ’ ಎಂದಿದ್ದಾರೆ.

‘ಘಟನಾ ಸ್ಥಳದಲ್ಲಿ ಬೆಸ್ಕಾಂನ ಯಾವುದೇ ವಿದ್ಯುತ್ ತಂತಿ ಇಲ್ಲ. ಇದೊಂದು ಇಲಾಖೇತರ ವಿದ್ಯುತ್ ಅವಘಡ’ ಎಂದೂ ತಿಳಿಸಿದ್ದಾರೆ.

ಕಾವೇರಿ ನೀರು ಪೂರೈಕೆ ಯಥಾಸ್ಥಿತಿ ಇಂದಿನಿಂದ

ಬೆಂಗಳೂರು: ನಗರದಲ್ಲಿ ಬುಧವಾರದಿಂದ ಎಂದಿನಂತೆ ಕಾವೇರಿ ನೀರು ಪೂರೈಕೆಯಾಗಲಿದೆ. ಮಂಡ್ಯ ಜಿಲ್ಲೆಯ ಟಿ.ಕೆ. ಹಳ್ಳಿಯಲ್ಲಿನ ಕಾವೇರಿ ನೀರು ಸರಬರಾಜು ಯೋಜನೆಯ 3 ಹಾಗೂ 4ನೇ ಹಂತದ ಎರಡನೇ ಘಟಕದಿಂದ ನೀರು ಸರಬರಾಜು ಮಾಡುವ ಯಂತ್ರಾಗಾರದಲ್ಲಿ ಸುಮಾರು 20 ಅಡಿಗಳಷ್ಟು ನೀರು ತುಂಬಿ ಯಂತ್ರಾಗಾರವು ಮುಳುಗಡೆಯಾಗಿತ್ತು.

ಯಂತ್ರಾಗಾರದಲ್ಲಿದ್ದ ನೀರನ್ನು ಸಂಪೂರ್ಣವಾಗಿ ಹೊರತೆಗೆಯಲಾಗಿದ್ದು, ಎಲೆಕ್ಟ್ರಿಕಲ್ ಪ್ಯಾನಲ್ ಗಳಲ್ಲಿನ ತೇವಾಂಶವನ್ನು ತೆಗೆದು ಪಂಪ್‌ಗಳನ್ನು ಯಥಾಸ್ಥಿತಿಗೆ ತರಲಾಗಿದೆ. ಸಾರ್ವಜನಿಕರ ಹಿತದೃಷ್ಟಿಯಿಂದ ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿರುವ ಪಂಪ್‌ಗಳನ್ನು ಬಳಸಿಕೊಂಡು ನಗರಕ್ಕೆ ನೀರು ಸರಬರಾಜಿಗೆ ಕ್ರಮ ಕೈಗೊಳ್ಳಲಾಗಿದೆ. ಕುಡಿಯುವ ನೀರಿಗೆ ತೊಂದರೆಯಾಗದಂತೆ ಜಲಮಂಡಳಿಯ ಮತ್ತು ಖಾಸಗಿ ಟ್ಯಾಂಕರ್‌ಗಳು ಸೇರಿ ಸುಮಾರು 200 ಟ್ಯಾಂಕರ್‌ಗಳ ಮೂಲಕ ನೀರು ವ್ಯತ್ಯಯವಾಗಿರುವ ಪ್ರದೇಶಗಳಿಗೆ ಸರಬರಾಜು ಮಾಡಲಾಗಿದೆ ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿ ದ್ದಾರೆ.

ಆದ್ಯತೆಯ ಮೇರೆಗೆ ಬಡವರು, ಕೊಳೆಗೇರಿ ನಿವಾಸಿಗಳು, ಮಧ್ಯಮ ವರ್ಗ, ಕಾರ್ಮಿಕ ವರ್ಗ ಹಾಗೂ ಕೂಲಿ-ಕಾರ್ಮಿಕರಿಗೆ ಉಚಿತವಾಗಿ ನೀರನ್ನು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡಿದೆ ಎಂದು ತಿಳಿಸಿದ್ದಾರೆ.

4ನೇ ಹಂತದ ಎರಡನೇ ಘಟಕದ ಯಂತ್ರಾಗಾರದಲ್ಲಿನ ಎರಡು ಪಂಪ್‌ಗಳನ್ನು ಪೂರ್ಣ ದುರಸ್ತಿಗೊಳಿಸಲಾಗಿದೆ. ಇದರಿಂದ ನಗರಕ್ಕೆ 220 ಎಂಎಲ್‌ಡಿ ನೀರು ಪೂರೈಕೆಯಾಗುತ್ತಿದ್ದು, ಉಳಿದ ಪಂಪ್‌ಗಳನ್ನು ಹಂತ ಹಂತವಾಗಿ ದುರಸ್ತಿಗೊಳಿಸಲಾಗುತ್ತಿದ್ದು, ಬುಧವಾರ ಬೆಳಿಗ್ಗೆ ಕಾರ್ಯಾರಂಭ ಮಾಡಲಿವೆ ಎಂದೂ ತಿಳಿಸಿದ್ದಾರೆ.

ಒಂದು ವಾರದಲ್ಲಿ ಪೂರ್ಣಗೊಳ್ಳಬೇಕಾದ ಕಾಮಗಾರಿಯನ್ನು ಯಾವುದೇ ವಿಶ್ರಾಂತಿ ಪಡೆಯದೆ ಅಧಿಕಾರಿಗಳು, ಎಂಜಿನಿಯರ್‌ಗಳು, ಸಿಬ್ಬಂದಿ ಮತ್ತು ಕಾರ್ಮಿಕರು ಹಗಲಿರುಳು ಶ್ರಮಿಸಿದ್ದರಿಂದ ಕೇವಲ 36 ಗಂಟೆಗಳ ಅವಧಿಯಲ್ಲಿ ಕಾವೇರಿ ನಾಲ್ಕನೇ ಹಂತ 2ನೇ ಘಟಕ ಮತ್ತು ಕಾವೇರಿ ಮೂರನೇ ಹಂತದ ಯಂತ್ರಗಳನ್ನು ದುರಸ್ತಿಗೊಳಿಸ ಲಾಗಿದೆ ಎಂದು ಅವರು ತಿಳಿಸಿದ್ದಾರೆ.

ನಗರಕ್ಕೆ ನೀರು ಪೂರೈಕೆಗೆ ಕ್ರಮ: ಬಸವರಾಜ ಬೊಮ್ಮಾಯಿ

ಮೈಸೂರು/ಬೆಂಗಳೂರು: ‘ಮಂಡ್ಯ ಜಿಲ್ಲೆಯ ಹಲಗೂರಿನಲ್ಲಿ ನೀರೆತ್ತುವ ಕಾರ್ಯಾಗಾರದ ದುರಸ್ತಿ ನಡೆದಿದೆ. ಬುಧವಾರ ಬೆಳಿಗ್ಗೆವರೆಗೆ 880 ಎಂ.ಎಲ್‌.ಡಿ. ಘಟಕ ಪ್ರಾರಂಭಿಸುತ್ತೇವೆ. ಬೆಂಗಳೂರಿಗೆ ನೀರು ಪೂರೈಕೆ ವ್ಯವಸ್ಥೆ ಸರಿಯಾಗಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿ ಹೇಳಿದರು.

‘ಬೆಂಗಳೂರಿನಲ್ಲಿ ಮಳೆಯಿಂದ ಆಗಿರುವ ಅವಾಂತರಕ್ಕೆ ಕಾಂಗ್ರೆಸ್ ನವರ ಕಾಲದಲ್ಲಿನ ಅತಿಕ್ರಮಣ, ಅಕ್ರಮಗಳು ಕಾರಣ. ಕಾಂಗ್ರೆಸ್‌ನವರ ಕಾಲದಲ್ಲಿ ಏನೇನಾಗಿದೆ ಎನ್ನುವುದನ್ನು ಮುಂದಿನ ಅಧಿವೇಶನದಲ್ಲಿ ಚರ್ಚಿಸಲು ಸಿದ್ಧ ವಿದ್ದೇವೆ’ ಎಂದರು. ಇಲ್ಲಿನ ಮಂಡಕಳ್ಳಿ ವಿಮಾನನಿಲ್ದಾಣ ದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಯಾವುದೇ ಆರೋಪವಿದ್ದರೂ ತನಿಖೆ: ಪಿಎಸ್‌ಐ ನೇಮಕಾತಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಯೊಬ್ಬರು ಹುದ್ದೆ ಪಡೆಯಲು ಬಿಜೆಪಿ ಶಾಸಕ ಬಸವರಾಜ ದಢೇಸೂಗೂರ್ ಅವರಿಗೆ ₹ 15 ಲಕ್ಷ ನೀಡಿದ್ದರೆಂಬ ಆರೋಪ ಕುರಿತಂತೆ, ‘ಪ್ರಕರಣದ ತನಿಖೆ ನಡೆಯುತ್ತಿದೆ. ಯಾವುದೇ ಹೊಸ ಆರೋಪಗಳು ಬಂದರೂ ಆ ಬಗ್ಗೆ ತನಿಖೆ ನಡೆಯುತ್ತದೆ’ ಎಂದರು.

ಕೆರೆ ಒತ್ತುವರಿಗೆ ಎಲ್ಲ ಪಕ್ಷದ ನಾಯಕರು ಹೊಣೆ: ಪಾಟೀಲ

ದಾವಣಗೆರೆ: ‘ಬೆಂಗಳೂರಿನಲ್ಲಿ ಕೆರೆಗಳು ಒತ್ತುವರಿ ಆಗಿರುವುದರಿಂದ ಮಳೆ ಹೆಚ್ಚು ಬಂದಾಗ ನೆರೆ ಉಂಟಾಗುತ್ತದೆ. ಇದಕ್ಕೆ ಬೆಂಗಳೂರಿನ ಸುತ್ತಮುತ್ತ ಇರುವ ಎಲ್ಲ ಪಕ್ಷಗಳ ನಾಯಕರು ಹೊಣೆ’ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಆರೋಪಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಹಿಂದಿನ ಕೆಲವು ಸರ್ಕಾರಗಳು ಚರಂಡಿ, ಕಾಲುವೆಗಳನ್ನು ಸರಿ ಮಾಡದೇ ಇರುವುದು ಕೂಡ ನೆರೆಗೆ ಕಾರಣ. ನಮ್ಮ ಸರ್ಕಾರ ಎಲ್ಲ ಒತ್ತುವರಿಗಳನ್ನು ತೆರವುಗೊಳಿಸುವ, ರಾಜಕಾಲುವೆ, ಚರಂಡಿಗಳನ್ನು ಸರಿಪಡಿಸುವ ಕೆಲಸ ಮಾಡುತ್ತಿದೆ’ ಎಂದರು.

‘ಬೆಂಗಳೂರು ಪ್ರವಾಹಕ್ಕೆ ಆ ಪಕ್ಷ, ಈ ಪಕ್ಷ ಕಾರಣ ಎಂದು ದೂಷಿಸುವುದು ಸರಿ ಯಲ್ಲ. ಈ ರೀತಿಯ ಅಕಾಲಿಕ ಮಳೆ ಬಂದಾಗ ಯಾವ ಸರ್ಕಾರವಾದರೂ ಏನು ಮಾಡಲು ಸಾಧ್ಯ’ ಎಂದು ಪ್ರಶ್ನಿಸಿದರು.

‘ಡಿ.ಕೆ. ಶಿವಕುಮಾರ್ ಅವರಿಗೆ ಕಾಮಾಲೆ ಕಣ್ಣು. ಆ ಕಣ್ಣಿಗೆ ನಾವು ಚೆನ್ನಾಗಿ ಕೆಲಸ ಮಾಡುತ್ತಿರುವುದು ಕಾಣುತ್ತಿಲ್ಲ. ಅದಕ್ಕೇ ನಮ್ಮನ್ನು ಟೀಕಿಸುತ್ತಿದ್ದಾರೆ’ ಎಂದು ಅವರು ವ್ಯಂಗ್ಯವಾಡಿದರು.

ಮಳೆ: ಪೂರ್ವ ತಾಲ್ಲೂಕಿನ ಶಾಲೆಗಳಿಗೆ ರಜೆ ಘೋಷಣೆ

ಬೆಂಗಳೂರು: ಮಳೆ ಸುರಿದು ಹಲವು ಪ್ರದೇಶಗಳು ಜಲಾವೃತಗೊಂಡಿರುವುದರಿಂದ ಪೂರ್ವ ತಾಲ್ಲೂಕಿನ ದಕ್ಷಿಣ ಶೈಕ್ಷಣಿಕ ವಲಯ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಸೆ. 7ರಂದು ರಜೆ ಘೋಷಣೆ ಮಾಡಲಾಗಿದೆ.

ನಗರ ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಈ ಸುತ್ತೋಲೆ ಹೊರಡಿಸಿದ್ದಾರೆ.

ಸ್ಮಶಾನ ಜಲಾವೃತ: ಅಂತ್ಯಕ್ರಿಯೆಗೆ ಪರದಾಟ

ವಿಜಯಪುರ (ಬೆಂ.ಗ್ರಾಮಾಂತರ): ಪಟ್ಟಣ ಸೇರಿದಂತೆ ಹೋಬಳಿಯಾದ್ಯಂತ ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಯಿಂದ ರೈತರ ಹೊಲಗಳು ಜಲಾವೃತಗೊಂಡಿವೆ. ಜೊತೆಗೆ, ಸ್ಮಶಾನಗಳು ನೀರಿನಲ್ಲಿ ಮುಳುಗಡೆಯಾಗಿದ್ದು, ಯಾರಾದರೂ ಮೃತಪಟ್ಟರೆ ಅಂತ್ಯಸಂಸ್ಕಾರ ಮಾಡಲು ಸ್ಥಳೀಯರು ಪರದಾಡುವಂತಾಗಿದೆ.

ಶಿಡ್ಲಘಟ್ಟ-ವಿಜಯಪುರ ಮುಖ್ಯರಸ್ತೆಯಲ್ಲಿರುವ ಸ್ಮಶಾನಗಳು ನೀರಿನಲ್ಲಿ ಮುಳುಗಡೆಯಾಗಿವೆ. ಶೃಂಗೇರಿ ಶಾರದ ವಿದ್ಯಾಸಂಸ್ಥೆ ಜಲಾವೃತಗೊಂಡಿದೆ. ಆಂಜನೇಯ ಸ್ವಾಮಿ ದೇವಾಲಯವೂ ಮುಳುಗಡೆಯಾಗಿದ್ದು, ಪೂಜೆ ಸಲ್ಲಿಕೆಗೆ ಜನರು ಹೋಗಲು ಸಾಧ್ಯವಾಗುತ್ತಿಲ್ಲ.

ರೈತರು ಇತ್ತೀಚೆಗೆ ಸಾವಿರಾರು ರೂಪಾಯಿ ಖರ್ಚು ಮಾಡಿ ಉಳುಮೆ ಮಾಡಿ, ಬಿತ್ತನೆ ಮಾಡಿದ್ದ ಹೊಲಗಳು ಸಂಪೂರ್ಣವಾಗಿ ನೀರಿನಲ್ಲಿ ಮುಳುಗಡೆಯಾಗಿವೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆರೋಪ

ಶೇ 40ರ ಕಮಿಷನ್‌ಗೆ ಬೆಂಗಳೂರು ತತ್ತರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಬಿಜೆಪಿ ಸರ್ಕಾರದ ಶೇಕಡ 40ರಷ್ಟು ಕಮಿಷನ್ ಹಾವಳಿಯಿಂದ ಬೆಂಗಳೂರು ನಗರವೂ ತತ್ತರಿಸಿ ಹೋಗಿದೆ. ಮಳೆಯಿಂದ ಆಗಿರುವ ಅನಾಹುತಗಳೇ ಇದಕ್ಕೆ ಸಾಕ್ಷಿ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆರೋಪಿಸಿದರು.

ಪ್ರವಾಹ ನಿಯಂತ್ರಣದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಬೆಂಗಳೂರು ಕೇಂದ್ರ, ಉತ್ತರ ಮತ್ತು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ನೇತೃತ್ವದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶೇ 40ರ ಕಮಿಷನ್‌ನಲ್ಲಿ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೂ ಪಾಲು ಕೊಡುತ್ತಿರಬಹುದು. ಅದಕ್ಕಾಗಿಯೇ ಇಷ್ಟೆಲ್ಲಾ ಅನಾಹುತಗಳು ನಡೆದರೂ ಆರಾಮದಿಂದ ಸುಮ್ಮನೆ ಇದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಪ್ರವಾಹ ನಿಯಂತ್ರಣದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ವತಿಯಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ನಡೆದ ಪ್ರತಿಭಟನೆಯಲ್ಲಿ ಶಾಸಕ ಕೃಷ್ಣ ಬೈರೇಗೌಡ ಮಾತನಾಡಿದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಸಲೀಂ ಅಹ್ಮದ್, ರಾಮಲಿಂಗಾ ರೆಡ್ಡಿ ಇದ್ದರು

ಉತ್ತರ ಪ್ರದೇಶ ಮಾದರಿ ತರುವುದಾಗಿ ಬೊಮ್ಮಾಯಿ ಹೇಳುತ್ತಿದ್ದರು. ಬೆಂಗಳೂರಿನಲ್ಲಿ ಜನರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ತೆರಳಲು ಟ್ರ್ಯಾಕ್ಟರ್ ಬಳಸಬೇಕಾದ ಸ್ಥಿತಿ ಯಾವತ್ತೂ ಇರಲಿಲ್ಲ. ಈಗ ಬಿಜೆಪಿ ಸರ್ಕಾರ ಅಂತಹ ದುಃಸ್ಥಿತಿ ತಂದಿದೆ. ಇದೇ ಉತ್ತರ ಪ್ರದೇಶ ಮಾದರಿಯಾ ಎಂದು ಪ್ರಶ್ನಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಮಾತನಾಡಿ, 'ಚುನಾವಣೆಯ ಉದ್ದೇಶದಿಂದ ಪ್ರತಿ ತಿಂಗಳೂ ಕರ್ನಾಟಕಕ್ಕೆ ಬರುತ್ತೇನೆ ಎಂದು ಪ್ರಧಾನಿ ಹೇಳಿದ್ದರು. ಈಗ ಇಷ್ಟೆಲ್ಲ ಅನಾಹುತಗಳು ಸಂಭವಿಸಿದರೂ ಬೆಂಗಳೂರಿನತ್ತ ತಿರುಗಿ ನೋಡಿಲ್ಲ. ಬಿಜೆಪಿಯವರಿಗೆ ಬೆಂಗಳೂರಿನ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಮೊದಲು ರಾಜೀನಾಮೆ ನೀಡಿ ಆಡಳಿತ ಬಿಟ್ಟು ಹೋಗಬೇಕು' ಎಂದು ಆಗ್ರಹಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, 'ಈ ಸರ್ಕಾರ ಯಾವುದೇ ಕೆಲಸ ಮಾಡದೆ ಜನರಿಗೆ ಕಷ್ಟ ನೀಡುತ್ತಿದೆ. ಬಿಜೆಪಿ ಸರ್ಕಾರವನ್ನು ಕಿತ್ತೊಗೆಯದಿದ್ದರೆ ಬೆಂಗಳೂರಿಗೆ ಭವಿಷ್ಯ ಇರುವುದಿಲ್ಲ. ಬೆಂಗಳೂರಿನ ಘನತೆ ನಾಶವಾಗುತ್ತದೆ. ಇವರು ನಮ್ಮ ರಾಜಧಾನಿಯನ್ನು ಸಾಯುವ ನಗರವನ್ನಾಗಿ ಮಾಡುತ್ತಿದ್ದಾರೆ' ಎಂದು ಹೇಳಿದರು.

ಶಾಸಕ ಕೃಷ್ಣ ಬೈರೇಗೌಡ ಅವರು ಮಾತನಾಡಿ, 'ಬಿಜೆಪಿ ದುರಾಡಳಿತದಿಂದ ಬೆಂಗಳೂರು ನಗರ ಸಂಕಷ್ಟಕ್ಕೆ ಸಿಲುಕಿದೆ. ನಗರದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನ ಭ್ರಷ್ಟಾಚಾರದಲ್ಲಿ ಸೋರಿ ಹೋಗುತ್ತಿದೆ. ಬಿಜೆಪಿಯವರ ಡಬ್ಬಲ್ ಎಂಜಿನ್ ಸರ್ಕಾರ ಬೆಂಗಳೂರಿನ ಭವಿಷ್ಯ ಹಾಳು ಮಾಡುತ್ತಿದೆ' ಎಂದು ದೂರಿದರು.

ಮಳೆ: ಹಲವೆಡೆ ವಿದ್ಯುತ್ ವ್ಯತ್ಯಯ

ಕಾಡುಬೀಸನಹಳ್ಳಿಯ ಪವರ್ ಸ್ಟೇಷನ್‌ಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸತತ ಎರಡು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಬೆಸ್ಕಾಂನ ಒಂದು ವಿದ್ಯುತ್ ಸ್ಟೇಷನ್ ನೀರಿನಲ್ಲಿ ಮುಳುಗಡೆಯಾಗಿದ್ದು, ಹೊರ ವರ್ತುಲ ರಸ್ತೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಭಾರಿ ಮಳೆಗೆ ಕಾಡುಬೀಸನಹಳ್ಳಿಯಲ್ಲಿರುವ ಪವರ್ ಸ್ಟೇಷನ್‌ಗೆ ನೀರು ನುಗ್ಗಿದ್ದು, ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಜತೆಗೆ, ಎರಡು ವಿದ್ಯುತ್ ಪರಿವರ್ತಕಗಳು ಮಳೆಯಿಂದ ಹಾನಿಗೊಳಗಾಗಿರುವ ವರದಿಯಾಗಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಕಾಡುಬೀಸನಹಳ್ಳಿಯಲ್ಲಿ ಇರುವ ಪವರ್ ಸ್ಟೇಷನ್ ಸಮೀಪವಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕೊಳಚೆ ನೀರು ಶುದ್ಧೀಕರಣ ಘಟಕದ ನೀರು ಉಕ್ಕಿ ಹರಿದ ಪರಿಣಾಮ ಬೆಸ್ಕಾಂ ಪವರ್ ಸ್ಟೇಷನ್‌ಗೆ ನೀರು ನುಗ್ಗಿದೆ ಎಂದು ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ (ಗ್ರಾಹಕ ಸಂಬಂಧ) ಎಸ್.ಆರ್. ನಾಗರಾಜ ತಿಳಿಸಿದ್ದಾರೆ.

ಜಯದೇವ ಪವರ್ ಸ್ಟೇಷನ್ ಮತ್ತು ಹೊಸಕೋಟೆ ಕೈಗಾರಿಕಾ ಪ್ರದೇಶದಲ್ಲಿರುವ ಟ್ರಾನ್ಸ್‌ಫಾರ್ಮರ್ ಟ್ರಿಪ್ ಆದ ಪರಿಣಾಮ ಹೊಸಕೋಟೆ ಪ್ರದೇಶದಲ್ಲಿ ಸುಮಾರು 8ರಿಂದ 10 ತಾಸು ವಿದ್ಯುತ್ ವ್ಯತ್ಯಯ ಉಂಟಾಗಿತ್ತು ಎಂದು ನಾಗರಾಜ ತಿಳಿಸಿದ್ದಾರೆ.

ಬೆಂಗಳೂರಿನ ಸರ್ಜಾಪುರ, ಯಮಲೂರು, ರೈನ್ ಬೋ ಬಡಾವಣೆ ಪ್ರದೇಶಗಳಲ್ಲಿನ ಅಪಾರ್ಟ್‌ಮೆಂಟ್‌ಗಳ ನೆಲಮಹಡಿಗಳಲ್ಲಿ ನೀರು ನುಗ್ಗಿರುವ ಪರಿಣಾಮ ಈ ಪ್ರದೇಶಗಳ ಅಪಾರ್ಟ್‌ಮೆಂಟ್‌ಗಳ ವಿದ್ಯುತ್ ಸಂಪರ್ಕವನ್ನು ಸುರಕ್ಷತೆ ದೃಷ್ಟಿಯಿಂದ ಕಡಿತಗೊಳಿಸಲಾಗಿದೆ ಎಂದು ನಾಗರಾಜ ತಿಳಿಸಿದ್ದಾರೆ.

ಹಾನಿ ವಿವರ: ಆಗಸ್ಟ್ ತಿಂಗಳಲ್ಲಿ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ವ್ಯಾಪಕ ಮಳೆಯಾಗಿದ್ದು, ಈ ಅವಧಿಯಲ್ಲಿ ಒಟ್ಟು 1,823 ವಿದ್ಯುತ್ ಕಂಬಗಳು ಮುರಿದಿದ್ದು, 1341 ಮರಗಳು ಮತ್ತು ಕೊಂಬೆಗಳು ವಿದ್ಯುತ್ ತಂತಿ ಮೇಲೆ ಬಿದ್ದಿವೆ. ಒಟ್ಟು174 ವಿದ್ಯುತ್ ಪರಿವರ್ತಕಗಳು ಹಾನಿಗೊಳಗಾಗಿವೆ ಸುಮಾರು 55 'ಡಬಲ್ ಪೋಲ್ ಸ್ಟ್ರಕ್ಚರ್'ಗಳು ಹಾನಿಗೊಂಡಿವೆ.

ಜುಲೈ ತಿಂಗಳಲ್ಲಿ ಸುರಿದ ಮಳೆಗೆ 703 ವಿದ್ಯುತ್ ಕಂಬಗಳು ಮುರಿದಿದ್ದು, 486 ಮರಗಳು ಮತ್ತು ಕೊಂಬೆಗಳು ವಿದ್ಯುತ್ ತಂತಿಯ ಮೇಲೆ ಉರುಳಿ ಬಿದ್ದಿವೆ. ಹಾಗೆಯೇ 104 ವಿದ್ಯುತ್ ಪರಿವರ್ತಕಗಳು ಮತ್ತು 23 'ಡಬಲ್ ಪೋಲ್ ಸ್ಟ್ರಕ್ಚರ್' ಹಾನಿಗೊಳಗಾಗಿವೆ.

ಸಹಾಯವಾಣಿಗೆ ದೂರುಗಳ ಸುರಿಮಳೆ

ಭಾನುವಾರ ಮತ್ತು ಸೋಮವಾರ ಬೆಸ್ಕಾಂ ಸಹಾಯವಾಣಿ 1912ಗೆ 32,049 ದೂರುಗಳು ಬಂದಿದ್ದು, ಇವುಗಳ ಪೈಕಿ 22560 ದೂರುಗಳನ್ನು ದಾಖಲಿಸಿಕೊಳ್ಳಲಾಗಿದೆ.

ಇವುಗಳಲ್ಲಿ 16,389 ದೂರುಗಳನ್ನು ಸಂಬಂಧಪಟ್ಟ ಉಪ ವಿಭಾಗಗಳಿಗೆ ರವಾನಿಸಿ ವಿದ್ಯುತ್ ಸಂಪರ್ಕ ನೀಡಲಾಗಿದ್ದು, 6171 ದೂರುಗಳು ವಿಲೇವಾರಿಗೆ ಬಾಕಿ ಉಳಿದಿವೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ನಿರ್ವಾಹಕ ವೆಂಕಟೇಶ್ ಮತ್ತು ಚಾಲಕ ಲಿಂಗರಾಜು ಅವರಿಗೆ ವಿ.ಅನ್ಬುಕುಮಾರ್ ಪ್ರಶಂಸನಾ ಪತ್ರ ನೀಡಿದರು

ಪ್ರಯಾಣಿಕರ ರಕ್ಷಣೆ: ಕೆಎಸ್‌ಆರ್‌ಟಿಸಿ ಪ್ರಶಂಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ರೈಲ್ವೆ ಅಂಡರ್ ಪಾಸ್‌ನಲ್ಲಿ ಬಸ್ ನೀರಿನಲ್ಲಿ ಮುಳುಗಿದಾಗ ತಮ್ಮ ಪ್ರಾಣ ಲೆಕ್ಕಿಸದೆ ಪ್ರಯಾಣಿಕರನ್ನು ರಕ್ಷಿಸಿದ ಚಾಲಕ ಮತ್ತು ನಿರ್ವಾಹಕರಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ.ಅನ್ಬುಕುಮಾರ್ ಪ್ರಶಂಸನಾ ಪತ್ರ ನೀಡಿ ಅಭಿನಂದಿಸಿದರು.

ಬೆಂಗಳೂರು- ಮೈಸೂರು ಹೆದ್ದಾರಿಯಲ್ಲಿ ರಾಮನಗರದ ರೈಲ್ವೆ ಅಂಡರ್ ಪಾಸ್‌ನಲ್ಲಿ ಆ.29ರಂದು ಬಸ್ ಸಿಲುಕಿಕೊಂಡಿತ್ತು. ಈಜು ಬಾರದಿದ್ದರೂ ನೀರಿನಲ್ಲಿ ಇಳಿದು ಏಣಿಯನ್ನು ಹುಡುಕಿ ತಂದು ಪ್ರಯಾಣಿಕರನ್ನು ಚಾಲಕ ಲಿಂಗರಾಜು ಮತ್ತು ನಿರ್ವಾಹಕ ವೆಂಕಟೇಶ್ ರಕ್ಷಣೆ ಮಾಡಿದ್ದರು. ಧೈರ್ಯ ತೋರಿದ ಚಾಲನಾ ಸಿಬ್ಬಂದಿಯ ಕಾರ್ಯವನ್ನು ವಿ.ಅನ್ಬುಕುಮಾರ್ ಅವರು ಪ್ರಶಂಸಿದರು.

ಅಪಾರ್ಟ್‌ಮೆಂಟ್ ತೊರೆದು ಲಾಡ್ಜ್ ಸೇರಿದ ನಿವಾಸಿಗಳು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸತತವಾಗಿ ಸುರಿಯುತ್ತಿರುವ ಮಳೆಯಿಂದ ಇಲ್ಲಿನ ನಿವಾಸಿಗಳು ಅಪಾರ್ಟ್‌ಮೆಂಟ್ ತೊರೆದು ಲಾಡ್ಜ್, ಹೋಟೆಲ್, ಪಿಜಿ ಹಾಗೂ ಸಂಬಂಧಿಕರ ಮನೆಗಳಿಗೆ ತೆರಳುತ್ತಿದ್ದಾರೆ.

ಗುರುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಡಿಎನ್‌ಎ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ, ಸಮಸ್ಯೆ ಪರಿಹರಿಸುವ ಭರವಸೆ ನೀಡಿದ್ದರು. ಆದರೆ, ಸತತ ಮಳೆಯಿಂದ ಅಪಾರ್ಟ್‌ಮೆಂಟ್ ನುಗ್ಗಿದ ಮಳೆ ನೀರು ತಗ್ಗದೆ ಇಲ್ಲಿನ ಸಮಸ್ಯೆ ಬಗೆಹರಿದಿಲ್ಲ.

ನಲ್ಲೂರಹಳ್ಳಿಯ ಡಿಎನ್‌ಎ ಅಪಾರ್ಟ್‌ಮೆಂಟ್‌ನ ಶೇ 90 ನಿವಾಸಿಗಳು ಮನೆಗಳನ್ನು ತೊರೆದು ಬೇರಡೆ ಹೋಗಿದ್ದಾರೆ. ಎಡಬಿಡದೇ ಕಾಡುತ್ತಿರುವ ಮಳೆಯಿಂದ ನಿವಾಸಿಗಳು ಮುನ್ನೆಚ್ಚರಿಕೆ ಕ್ರಮವಾಗಿ ತಮ್ಮ ತಮ್ಮ ಊರುಗಳಿಗೆ ತೆರಳಿದಿದ್ದಾರೆ. ಕೆಲವರು ಲಾಡ್ಜ್, ತಮ್ಮ ನೆಂಟರುಗಳ ಮನೆಯಲ್ಲಿ ವಾಸ ಮಾಡಿ ಕೆಲಸ ಕಾರ್ಯಗಳಿಗಾಗಿ ತೆರಳುತ್ತಿದ್ದಾರೆ.

'ಅಪಾರ್ಟ್‌ಮೆಂಟ್ ಜಲಾವೃತಗೊಂಡಿರುವುದರಿಂದ ವಿದ್ಯುತ್ ಕಡಿತಗೊಂಡಿದೆ. ಅಪಾರ್ಟ್‌ಮೆಂಟ್‌ನಲ್ಲಿ ಕುಡಿಯುವ ನೀರು, ಮೂಲ ಸಮಸ್ಯೆಗಳು ಸಾಮಾನ್ಯವಾಗಿರುವುದರಿಂದ ಫ್ಲ್ಯಾಟ್‌ಗಳನ್ನು ತೊರೆದು ಬೇರೆ ಪ್ರದೇಶಗಳಲ್ಲಿ ನೆಲೆಸಿರುವ ಸಂಬಂಧಿಕರು ಹಾಗೂ ಸ್ನೇಹಿತರ ಮನೆಗಳಿಗೆ ತೆರಳುತ್ತಿದ್ದೇವೆ' ಎಂದು ನಿವಾಸಿ ಮಹೇಶ್ ಅವರು ಹೇಳಿದರು.

'ಇತ್ತೀಚಿಗೆ ಮಳೆಗೆ ಮಳೆಯ ಅವಾಂತರ ಕಂಡು ಅಧಿಕಾರಿಗಳು, ಶಾಸಕ ಸೇರಿ ಮುಖ್ಯಮಂತ್ರಿ ಭೇಟಿ ನೀಡಿ ಹೋದರೂ ಸಮಸ್ಯೆ ಬಗೆಹರಿದಿಲ್ಲ. ಅದರಿಂದ ಫ್ಲ್ಯಾಟ್ ತೊರೆಯುತ್ತಿದ್ದೇವೆ' ಎಂದು ಅಪಾರ್ಟ್‌ಮೆಂಟ್ ನಿವಾಸಿ ಸುರೇಂದ್ರ ಹೇಳಿದರು.

'ಸ್ಥಳದಲ್ಲೇ ಬೀಡುಬಿಟ್ಟಿದ್ದೇವೆ. ಸಹಜವಾಗಿ ಮಳೆ ಕಡಿಮೆಯಾಗದ ಹೊರತು ನಾವು ನೀರನ್ನು ಹೊರಹಾಕುವುದು ಕಷ್ಟ. ಕೆಲಸ ಕಾರ್ಯಗಳಿಗೆ ತೆರಳುವ ಜನರು, ಶಾಲಾ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಮನೆಗಳಿಂದ ಹೊರಬರಲಾಗದ ಸ್ಥಿತಿಯಲ್ಲಿದ್ದು, ಅವರ ಮನೆಗಳ ಬಳಿಗೆ ಟ್ರ್ಯಾಕ್ಟರ್ ಮೂಲಕ ಊಟ ಸೇರಿ ಅಗತ್ಯ ವಸ್ತುಗಳನ್ನು ತಲುಪಿಸುವ ಕಾರ್ಯ ಮಾಡಲಾಗುತ್ತದೆ' ಎಂದು ಅಗ್ನಿಶಾಮಕ ಸಿಬ್ಬಂದಿ ಹೇಳಿದರು.

ನಲ್ಲೂರಹಳ್ಳಿ ಡಿಎನ್‌ಎ ಅಪಾರ್ಟ್‌ಮೆಂಟ್ ತೊರೆದು ಬೇರೆಡೆಗೆ ತೆರಳುತ್ತಿರುವ ನಿವಾಸಿಗಳು

ತಾತ್ಕಾಲಿಕವಾಗಿ ಕಡಿಮೆ ಬಾಡಿಗೆಗೆ ಹೋಟೆಲ್ ರೂಮ್‌ಗಳು ಲಭ್ಯ

ಬೆಂಗಳೂರು: ಎರಡು ದಿನಗಳಿಂದ ಸುರಿದ ಭಾರಿ ಮಳೆಯಿಂದಾಗಿ ಜಲಾವೃತಗೊಂಡಿರುವ ಬಡಾವಣೆಗಳ ಜನರಿಗೆ ತಾತ್ಕಾಲಿಕವಾಗಿ ಕಡಿಮೆ ಬಾಡಿಗೆಗೆ ಹೋಟೆಲ್ ರೂಮ್‌ಗಳನ್ನು ನೀಡಲಾಗುವುದು ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ತಿಳಿಸಿದೆ.

ನಗರದಲ್ಲಿ ಅತಿಯಾದ ಮಳೆ ಸುರಿದಿರುವುದರಿಂದ ಬಹಳಷ್ಟು ಪ್ರದೇಶಗಳು ಜಲಾವೃತಗೊಂಡಿವೆ. ಇದರಿಂದ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಅಲ್ಲಿನ ನಿವಾಸಿಗಳು ತೊಂದರೆ ಅನುಭವಿಸುತ್ತಿದ್ದಾರೆ. ಅಗತ್ಯವಿರುವವರಿಗೆ ತಾತ್ಕಾಲಿಕವಾಗಿ ಅಂದಾಜು ಶೇ 40-50ರಷ್ಟು ಕಡಿಮೆ ಬಾಡಿಗೆಗೆ ರೂಮ್‌ಗಳನ್ನು ವ್ಯವಸ್ಥೆ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ 9844494630ಗೆ ಸಂಪರ್ಕಿಸಿ

ಭಾರಿ ಮಳೆಗೆ ಕುಸಿದ ಮನೆ

ಕೆಂಗೇರಿ: ಭಾರಿ ಮಳೆಗೆ ವಾಜರಹಳ್ಳಿ ಬಳಿ ಹಳೆಯ ಮನೆಯೊಂದು ಕುಸಿದುಬಿದ್ದಿದೆ.ಹದಿನೈದು ದಿನಗಳಿಂದ ಸತತವಾಗಿ ಮಳೆ ಸುರಿಯುತ್ತಿರುವ ಪರಿಣಾಮ, ಯಶವಂತಪುರ ಕ್ಷೇತ್ರ ವ್ಯಾಪ್ತಿಯ ಬಯ್ಯನಹಳ್ಳಿಯ ಗ್ರಾಮದ ಗೌರಮ್ಮ ಎಂಬುವರಿಗೆ ಸೇರಿದ ಹಳೆಯ ಮನೆಯೊಂದು ಹಾನಿಗೀಡಾಗಿದೆ.

ಮನೆಯ ಒಂದು ಪಾರ್ಶ್ವದ ಗೋಡೆಯು ನೆಲ ಸಮವಾಗಿದೆ. ಮನೆಯ ಪಾತ್ರೆ, ಹಾಸಿಗೆ ಇನ್ನಿತರೆ ಗೃಹೋಪಯೋಗಿ ವಸ್ತುಗಳು ಹಾಳಾಗಿವೆ. ಮನೆಯಲ್ಲಿ 6 ಮಂದಿ ವಾಸವಿದ್ದರು. ಯಾವುದೇ ರೀತಿಯ ಪ್ರಾಣ ಹಾನಿ ಸಂಭವಿಸಿಲ್ಲ. ಖಾಸಗಿ ಆಸ್ಪತ್ರೆಯೊಂದರಲ್ಲಿ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಗೌರಮ್ಮ, ಮನೆಯ ದುಃಸ್ಥಿತಿ ಕಂಡು ಅನಾರೋಗ್ಯಕ್ಕೆ ತುತ್ತಾಗಿದ್ದಾರೆ. ರಕ್ತದೊತ್ತಡದಲ್ಲಿ ವ್ಯತ್ಯಾಸ ಕಂಡು ಬಂದ ಕಾರಣ ಸೋಮವಾರ ಆಸ್ಪತ್ರೆಗೆ ಎಂದು ತಿಳಿದುಬಂದಿದೆ.

ಮನೆ ಬಿದ್ದು ಎರಡು ದಿನ ಕಳೆದರೂ ಯಾವುದೇ ಬಿಬಿಎಂಪಿ ಅಧಿಕಾರಿಗಳು ಮನೆಯತ್ತ ಸುಳಿದಿಲ್ಲ. ಹಾನಿಗೀಡಾದ ಮನೆಯ ಸಮೀಕ್ಷೆಯನ್ನೂ ನಡೆಸಿಲ್ಲ. ಸಂತ್ರಸ್ತರಿಗೆ ಯಾವುದೇ ಬದಲಿ ವ್ಯವಸ್ಥೆ ಮಾಡಿಲ್ಲ ಎಂದು ಗೌರಮ್ಮ ಅವರ ಪುತ್ರ ಮಹೇಶ್ ಬೇಸರ ವ್ಯಕ್ತಪಡಿಸಿದರು.

ಮಳೆಯಿಂದಾಗಿ ಹಾನಿಗೀಡಾಗಿರುವ ಮನೆ

ನಿಧನ ವಾರ್ತೆ

ಮೋಹಿನಿ ದಯಾನಂದ ರಾವ್

ಉಡುಪಿ: ರೆಮಿಡಿಕ್ಸ್ ಫಾರ್ಮಾ ನಿರ್ದೇಶಕಿ ಮೋಹಿನಿ ದಯಾನಂದ ರಾವ್ (86) ಅಲ್ಪ ಕಾಲದ ಅನಾರೋಗ್ಯದಿಂದ ಮಂಗಳವಾರ ಬೆಂಗಳೂರಿನಲ್ಲಿ ನಿಧನರಾದರು.

ಅವರಿಗೆ ಪುತ್ರ ಸನಂದ್ ಹಾಗೂ ಪುತ್ರಿ ಡಾ.ನೀಲಿಮಾ ರಾವ್ ಇದ್ದಾರೆ. ತೋಕೂರು ಸುಬ್ರಹ್ಮಣ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾಗಿ, ಅಳದಂಗಡಿಯು ಸುದ್ಧೆರಿಮೊಗರು ಮಹಿಷ ಮರ್ಧಿನಿ ದೇವಸ್ಥಾನದ ಅಭಿವೃದ್ಧಿಗಾಗಿ ಮೋಹಿನಿ ದಯಾನಂದ ರಾವ್ ಶ್ರಮಿಸಿದ್ದರು. ದೇವಸ್ಥಾನಗಳ ಅಭಿವೃದ್ಧಿಗೆ ದೇಣಿಗೆ ಹಾಗೂ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರುಣಮ್ಮ

ಬೆಂಗಳೂರು: ಅಬಕಾರಿ ಗುತ್ತಿಗೆದಾರ, ದೊಡ್ಡಬಳ್ಳಾಪುರದ ಆರ್. ಕೇಶವಮೂರ್ತಿ ಅವರ ಪತ್ನಿ ಅರುಣಮ್ಮ (70 ವರ್ಷ) ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ನಿಧನರಾದರು

ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಮಾಗಡಿ ರಸ್ತೆಯ ಚಿತಾಗಾರದಲ್ಲಿ ಸಂಜೆ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹೃದಯಾಘಾತ: ಸಚಿವ ಉಮೇಶ್ ವಿ. ಕತ್ತಿ ನಿಧನ

ಒಂದನೇ ಪುಟದಿಂದ...

ಮೂಲತಃ ಜನತಾ ಪರಿವಾರದವರಾದ ಕತ್ತಿ ಅವರು ನಂತರ ಬಿಜೆಪಿ ಸೇರಿದ್ದರು. 1996ರಿಂದ 1999ರವರೆಗೆ ಸಕ್ಕರೆ ಸಚಿವರಾಗಿ, 2008ರಿಂದ ಕೃಷಿ ಸಚಿವರಾಗಿ ಮತ್ತು 2010ರಿಂದ 2013ರವರೆಗೆ ಕೃಷಿ ಸಚಿವರಾಗಿದ್ದರು. 2021ರ ಆಗಸ್ಟ್‌ನಿಂದ ಅವರು ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಅರಣ್ಯ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಉಮೇಶ ಕತ್ತಿ ಅವರು ಬೆಳಗಾವಿಯ ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಯ ಮಾಲೀಕರೂ ಆಗಿದ್ದರು.

ಶಾಂತವಾಯಿತು 'ಉತ್ತರ'ದ ಧ್ವನಿ

ಬೆಳಗಾವಿ: ಸಚಿವ ಉಮೇಶ ಕತ್ತಿ ಅವರ ಅಗಲಿಕೆಯಿಂದಾಗಿ ಉತ್ತರ ಕರ್ನಾಟಕದ ಜನಪರ ಧ್ವನಿಯೊಂದು ಶಾಂತವಾದಂತಾಗಿದೆ. ಈ ಭಾಗವು ಅಭಿವೃದ್ಧಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ, ಈ ತಾರತಮ್ಯ ಅಸಹನೀಯ. ಹಾಗಾಗಿ, ಪ್ರತ್ಯೇಕ ರಾಜ್ಯ ಮಾಡಬೇಕು ಎಂದು ಅವರು ಪದೇಪದೇ ಧ್ವನಿ ಎತ್ತಿದ್ದರು.

ಹುಕ್ಕೇರಿ ವಿಧಾನಸಭೆ ಕ್ಷೇತ್ರದಲ್ಲಿ ಒಂಬತ್ತು ಬಾರಿ ಸ್ಪರ್ಧಿಸಿದ್ದ ಅವರು ಪ್ರಸಕ್ತ ಅವಧಿ ಸೇರಿದಂತೆ ಎಂಟು ಬಾರಿ ಗೆದ್ದಿದ್ದರು. ಒಮ್ಮೆ ಕೇವಲ 800 ಮತಗಳ ಅಂತರದಿಂದ ಸೋಲು ಕಂಡಿದ್ದರು. ಎಂಟು ಬಾರಿ ಶಾಸಕರಾಗಿ, ಮೂರು ಅವಧಿಯಲ್ಲಿ ವಿವಿಧ ಖಾತೆಗಳನ್ನು ನಿಭಾಯಿಸಿದ್ದರು.

62 ವರ್ಷದ ವಯಸ್ಸಿನ ಉಮೇಶ ಕತ್ತಿ ಅವರು ಜನಪರ ನಿಲುವು, ಗಟ್ಟಿಧ್ವನಿ ಹಾಗೂ ಮುತ್ಸದ್ದಿ ಗುಣಗಳ ಕಾರಣಕ್ಕಾಗಿ ಸೋಲರಿಯದ ಸರದಾರ ಎಂದೇ ಖ್ಯಾತರಾಗಿದ್ದರು. ಸಹಕಾರ ಕ್ಷೇತ್ರ ಹಾಗೂ ಸಕ್ಕರೆ ಕಾರ್ಖಾನೆಗಳನ್ನು ಅಭಿವೃದ್ಧಿಯಲ್ಲಿಯೂ ಅವರದು ಎತ್ತಿದ ಕೈ.

ವಾರದ ಹಿಂದಷ್ಟೇ ಬೆಳಗಾವಿಗೆ ಬಂದಿದ್ದರು. ನಗರದಲ್ಲಿ ಅವಿತ ಚಿರತೆ ಸೆರೆ ಕಾರ್ಯಾಚರಣೆಯಲ್ಲೂ ಗಮನ ಹರಿಸಿದ್ದರು. ಇದು ಅವರು ಬೆಳಗಾವಿ ಕೊನೆಯ ಭೇಟಿ. 'ಸರ್ ಚಿರತೆ ಹೇಗೆ ಮತ್ತು ಏಕೆ ಬೆಳಗಾವಿಗೆ ಬಂದಿದೆ' ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗೆ ತಮಾಷೆಯಾಗಿ ಉತ್ತರಿಸಿದ್ದ ಅವರು 'ನಾನು ಹುಲಿ, ಅದು ಚಿರತೆ. ನನ್ನ ಭೇಟಿ ಆಗಲು ಬಂದಿದೆ ಮಾರಾಯಾ' ಎಂದು ಹಾಸ್ಯ ಚಟಾಕಿ ಹಾರಿಸಿದ್ದರು.

ಯಾವತ್ತೂ ಕೋಪ, ಒತ್ತಡ, ದುಡುಕು ಸ್ವಭಾವಗಳನ್ನು ಅವರು ಎಲ್ಲಿಯೂ ಎಂದೂ ಪ್ರದರ್ಶಿಸಲಿಲ್ಲ. ಬದಲಾಗಿ ತಮ್ಮ ಮೊಣಚಾದ ಮಾತುಗಳಿಂದಲೇ ತಿವಿಯುತ್ತಿದ್ದರು.

ಉತ್ತರ ಕರ್ನಾಟಕದ ಗಟ್ಟಿ ಧ್ವನಿ: ಉತ್ತರ ಕರ್ನಾಟಕದ ಪ್ರಗತಿಗಾಗಿ ಆಗಾಗ ದನಿ ಎತ್ತಿ ಕಾಳಜಿ ಪ್ರದರ್ಶಿಸುವ ಮತ್ತು ಸಹಕಾರ ತಳಹದಿಯ ಕ್ಷೇತ್ರ ಹುಕ್ಕೇರಿ ಪ್ರತಿನಿಧಿಸುವ ಶಾಸಕ ಉಮೇಶ ಕತ್ತಿ ವಿಶಿಷ್ಟ ರಾಜಕಾರಣಿ.

ದಿವಂಗತ ಜೆ.ಎಚ್. ಪಟೇಲ್ ಅವರ ಸಂಪುಟದಲ್ಲಿ ಅವರು ಮೊದಲ ಬಾರಿಗೆ ಮಂತ್ರಿಯಾಗಿದ್ದರು. ನಂತರ ಬಿ.ಎಸ್. ಯಡಿಯೂರಪ್ಪ ಮಂತ್ರಿಮಂಡಲದಲ್ಲಿ ಸಕ್ಕರೆ, ಲೋಕೋಪಯೋಗಿ, ತೋಟಗಾರಿಕೆ ಹಾಗೂ ಬಂದಿಖಾನೆ



ಹಾಗೂ ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಆಡಳಿತದಲ್ಲಿ ಅಪಾರ ಅನುಭವ ಹೊಂದಿದವರು.

ಯಡಿಯೂರಪ್ಪ ಅವರ ಅವಧಿಯಲ್ಲಿ ಕೃಷಿ ಮಂತ್ರಿಯಾಗಿದ್ದ ಅವರು ದೇಶದಲ್ಲೇ ಮೊದಲ ಬಾರಿಗೆ 'ಕೃಷಿ ಬಜೆಟ್' ಮಂಡಿಸಿದ್ದರು. ರೈತರು ಅಭಿವೃದ್ಧಿಯಾಗಬೇಕೆಂದರೆ ಅವರಿಗೆ ಅವರದೇ ಆದ ಕಾನೂನುಗಳು ಬೇಕು, ಅವರದೇ ಆದ ಆರ್ಥಿಕ ನೀತಿ ಬೇಕು, ಅದರ ಅನುಷ್ಠಾನಕ್ಕೆ ಪ್ರತ್ಯೇಕ ಬಜೆಟ್ ಬೇಕು ಎಂದು ವಿಧಾನಸೌಧದಲ್ಲಿ ಧ್ವನಿ ಎತ್ತಿದ್ದರು. ಅದನ್ನು ಅವರು ಸಾಧಿಸಿಯೂ ತೋರಿಸಿದ ಛಲಗಾರ.

ಸಾಹುಕಾರ ಎಂದೇ ಖ್ಯಾತಿ: 1960ರ ಮಾರ್ಚ್ 14ರಂದು ಆಗರ್ಭ ಶ್ರೀಮಂತ ಕತ್ತಿ ಮನೆತನದಲ್ಲಿ ಹಿರಿಯ ಸಹಕಾರಿ ದಿ.ವಿಶ್ವನಾಥ–ರಾಜೇಶ್ವರಿ ದಂಪತಿ ಜೇಷ್ಠ ಪುತ್ರನಾಗಿ ಜನಿಸಿದರು. ಸ್ವಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಪಡೆದು, ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಪಿಯು ಶಿಕ್ಷಣ ಪಡೆದರು.

ವಿಶ್ವ ಕನ್ನಡ ಸಮ್ಮೇಳದ ರೂವಾರಿ: ಬೆಳಗಾವಿ ಜಿಲ್ಲಾ ಉಸ್ತುವಾರಿ ಮತ್ತು ಕೃಷಿ ಸಚಿವರಾಗಿ 2011 ಮಾರ್ಚ್ 11ರಿಂದ 13ರವರೆಗೆ ವಿಶ್ವಕನ್ನಡ ಸಮ್ಮೇಳನವನ್ನು ಅಭೂತಪೂರ್ವವಾಗಿ ಆಯೋಜಿಸಿ, ಮರಾಠಿಗರಿಂದಲೂ ಭೇಷ್ ಎನಿಸಿಕೊಂಡ ಧುರೀಣ. 86 ಸ್ಥಾನಗಳ ಪೈಕಿ 64 ಸ್ಥಾನಗಳನ್ನು ಗೆಲ್ಲಿಸಿ ಪ್ರಥಮ ಬಾರಿಗೆ ಜಿಲ್ಲಾ ಪಂಚಾಯ್ತಿಯಲ್ಲಿ ಬಿಜೆಪಿ ಅಧಿಕಾರ ಚುಕ್ಕಾಣಿ ಹಿಡಿಯುವಲ್ಲಿ ಕಾರಣರಾದವರು.

1985ರಲ್ಲಿ ತಂದೆ ವಿಶ್ವನಾಥ ಕತ್ತಿ ಅವರ ಅಕಾಲಿಕ ನಿಧನದಿಂದ ತೆರವಾದ ಹುಕ್ಕೇರಿ ಕ್ಷೇತ್ರದಿಂದ ಜನತಾ ಪಕ್ಷದಿಂದ ಶಾಸಕರಾಗಿ ಪ್ರಥಮ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ಆಗ ಅವರಿಗೆ 25ರ ಹರೆಯ. 1989, 1994ರಲ್ಲಿ ಶಾಸಕರಾಗಿ ಪುನರಾಯ್ಕೆಯಾದ ನಂತರ ರಾಜಕೀಯ ಜೀವನದಲ್ಲಿ ಅನೇಕ ಬದಲಾವಣೆಗಳಾದವು. 2008ರಲ್ಲಿ ಜೆಡಿಎಸ್ ಪಕ್ಷದಿಂದ ಆಯ್ಕೆಯಾಗಿದ್ದರು. ಈ ನಡುವೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿ ಮತ್ತೆ ಶಾಸಕರಾದರು.

1995ರಲ್ಲಿ ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಗೆ ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿ ಇಂದಿನವರೆಗೂ ಮಾರ್ಗದರ್ಶನ ಮಾಡುತ್ತಿದ್ದಾರೆ. ಒಮ್ಮೆ ಸೋತರೂ ಧೃತಿಗೆಡದೆ ತಂದೆ ಹೆಸರಿನಲ್ಲಿ ಬೆಲ್ಲದ ಬಾಗೇವಾಡಿಯಲ್ಲಿ 'ವಿಶ್ವನಾಥ ಸಕ್ಕರೆ ಕಾರ್ಖಾನೆ' ಸ್ಥಾಪಿಸಿ ಈ ಭಾಗದ ಸಾವಿರಾರು ರೈತರು ಮತ್ತು ಕಾರ್ಮಿಕರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಆರ್ಥಿಕ ಏಳಿಗೆಗೆ ಕಾರಣರಾಗಿದ್ದಾರೆ. ಕಾರ್ಖಾನೆಯ ಆಡಳಿತವನ್ನು ಈಗ ಪುತ್ರ ನಿಖಿಲ್ ಕತ್ತಿಗೆ ವಹಿಸಿದ್ದಾರೆ.

2017ರಲ್ಲಿ ಹಿರಾ ಶುಗರ್ಸ್ ಚುನಾವಣೆಯಲ್ಲಿ ಅವಿರೋಧ ಆಯ್ಕೆ ಪ್ರಕ್ರಿಯೆಗೆ ಮಾರ್ಗದರ್ಶನ ನೀಡಿದವರು. ಪುತ್ರ ನಿಖಿಲ್ ಕತ್ತಿ ಅವರನ್ನು ಅಮ್ಮಣಗಿ ಜಿಲ್ಲಾ ಪಂಚಾಯ್ತಿಗೆ ಆಯ್ಕೆಯಾಗಿದ್ದರು. ಸಹೋದರ ರಮೇಶ ಕತ್ತಿ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದಾರೆ.

'ನಾನೇ ಸಿ.ಎಂ ಎಂದಿದ್ದರು'

ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯದ ಬಗ್ಗೆ ಆಗಾಗ ಧ್ವನಿ ಎತ್ತಿದ್ದ ಅವರು ವಿಶೇಷ ಗುಣದಿಂದಲೇ ಹೆಸರುವಾಸಿ. 'ಮುಂದೆ ನಾನೇ ಸಿ.ಎಂ' ಎಂದು ಗಟ್ಟಿಯಾಗಿ ಹೇಳಿಕೊಳ್ಳುವ ಮೂಲಕ ರಾಜಕೀಯ ಚರ್ಚೆಗೂ ಇಂಬು ನೀಡಿದ್ದರು.

'ಜನಸಂಖ್ಯೆಗೆ ಅನುಗುಣವಾಗಿ ಕರ್ನಾಟಕವನ್ನು ಮೂರು ರಾಜ್ಯಗಳಾಗಿ ಮಾಡಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ' ಎಂಬ ಮಾಹಿತಿಯನ್ನು ಬಹಿರಂಗ ಸಭೆಯಲ್ಲಿ ನೀಡುವ ಮೂಲಕ ಜನರ ಗಮನ ಸೆಳೆದಿದ್ದರು.

ಜೆಡಿಎಸ್‌ಗೆ ಮುಖಭಂಗ, ಬಿಜೆಪಿಗೆ ಧಮಾಕಾ!

ಪ್ರಜಾವಾಣಿ ವಾರ್ತೆ

ಮೈಸೂರು: ರೋಚಕ ತಿರುವು ಪಡೆದುಕೊಂಡ ಮೈಸೂರು ಮಹಾನಗರಪಾಲಿಕೆ ಮೇಯರ್ ಮತ್ತು ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿಗೆ ಡಬಲ್ ಧಮಾಕಾ ದೊರೆತರೆ, ಜೆಡಿಎಸ್ ಮುಖಭಂಗ ಅನುಭವಿಸಿತು.

'ಮೈತ್ರಿ' ಮಾಡಿಕೊಂಡರೂ, ಕೊನೆ ಕ್ಷಣದ ಎಡವಟ್ಟಿನಿಂದ ಜೆಡಿಎಸ್‌ಗೆ ಒಂದು ಸ್ಥಾನವೂ ದಕ್ಕಲಿಲ್ಲ. ಎರಡು ಸ್ಥಾನಗಳು ಬಿಜೆಪಿಗೆ ಒಲಿದವು. ಮೇಯರ್ ಆಗಿ ಶಿವಕುಮಾರ್, ಉಪ ಮೇಯರ್ ಆಗಿ ಜಿ.ರೂಪಾ ಅವರು ಸೋಮವಾರ ಆಯ್ಕೆಯಾದರು.

ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಜೆಡಿಎಸ್ ಅಭ್ಯರ್ಥಿ ಕೆ.ವಿ.ಶ್ರೀಧರ್ ಅವರು ನಾಮಪತ್ರ

ಜಿ.ರೂಪಾ

ಶಿವಕುಮಾರ್

ವಾಪಸ್ ಪಡೆದಿದ್ದರಿಂದ ಬಿಜೆಪಿ–ಕಾಂಗ್ರೆಸ್ ನಡುವೆ ಸ್ಪರ್ಧೆ ನಡೆಯಿತು. ಕಾಂಗ್ರೆಸ್‌ನ ಸೈಯದ್ ಹಸರತ್ ಉಲ್ಲಾ 28, ಬಿಜೆಪಿಯ ಶಿವಕುಮಾರ್ 47 ಮತ ಗಳಿಸಿ ಗೆದ್ದರು. ಜೆಡಿಎಸ್‌ನ ರೇಷ್ಮಾ ಬಾನು ಸಲ್ಲಿಸಿದ್ದ ನಾಮಪತ್ರ ತಿರಸ್ಕೃತವಾದ್ದರಿಂದ ಉಪಮೇಯರ್ ಸ್ಥಾನವೂ ಬಿಜೆಪಿ ಪಾಲಾಯಿತು. ಬಿಜೆಪಿಯ ಜಿ.ರೂಪಾ 45 ಮತ ಗಳಿಸಿ ಗೆದ್ದರು.

'ರೇಷ್ಮಾ ಸಾಮಾನ್ಯ ಕ್ಷೇತ್ರದಿಂದ ಗೆದ್ದಿದ್ದಾರೆ. ಉಪ ಮೇಯರ್ ಸ್ಥಾನ ಹಿಂದುಳಿದ ವರ್ಗ 'ಎ' ಮಹಿಳೆಗೆ ಮೀಸಲಾಗಿದೆ. ಆ ಜಾತಿ ಪ್ರಮಾಣಪತ್ರ ನೀಡದಿದ್ದರಿಂದ ನಾಮಪತ್ರ ತಿರಸ್ಕರಿಸಲಾಗಿದೆ' ಎಂದು ಚುನಾವಣಾಧಿಕಾರಿ, ಪ್ರಾದೇಶಿಕ ಆಯುಕ್ತ ಡಾ.ಜಿ.ಸಿ.ಪ್ರಕಾಶ್ ಹೇಳಿದರು.

ಮೇಯರ್ ಚುನಾವಣೆಯಲ್ಲಿ ಜೆಡಿಎಸ್ ಬಂಡಾಯ ಅಭ್ಯರ್ಥಿ ನಿರ್ಮಲಾ ಅವರಿಗೆ ಕಾಂಗ್ರೆಸ್ ಬೆಂಬಲ ನೀಡಿತು. ಅವರು, 27 ಮತ ಪಡೆದರು. ಅಭ್ಯರ್ಥಿ, ಜೆಡಿಎಸ್ ಶಾಸಕರಾದ ಜಿ.ಟಿ. ದೇವೇಗೌಡ, ಸಿ.ಎನ್.ಮಂಜೇಗೌಡರ ಆಕ್ಷೇಪಕ್ಕೆ ಚುನಾವಣಾಧಿಕಾರಿ ಮನ್ನಣೆ ನೀಡಲಿಲ್ಲ. 'ಸಮಯ ಮುಗಿದಿದೆ. ಈಗ ಜಾತಿ ಪ್ರಮಾಣಪತ್ರ ಪರಿಗಣಿಸಲಾಗದು' ಎಂದರು. ನಂತರ ಚುನಾವಣೆ ನಡೆಯಿತು.

ಕನ್ನಡ ಶಾಲೆಗೆ ಪ್ರಶಸ್ತಿ ಮೊತ್ತ ನೀಡಿದ ಡಾ.ವಿವೇಕ ರೈ

ಪ್ರಜಾವಾಣಿ ವಾರ್ತೆ

ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿಯನ್ನು ಜಾನಪದ ವಿದ್ವಾಂಸ ಡಾ.ಬಿ.ಎ.ವಿವೇಕ ರೈ ಅವರಿಗೆ ಪ್ರದಾನ ಮಾಡಲಾಯಿತು.

ಬಿ.ಎ.ವಿವೇಕ ರೈ

ಪ್ರಶಸ್ತಿಯೊಂದಿಗೆ ನೀಡಿರುವ ₹ 1ಲಕ್ಷ ನಗದನ್ನು ಶಾಲೆಗೆ ದೇಣಿಗೆ ನೀಡುವುದಾಗಿ ಅವರು ಘೋಷಿಸಿದರು.

'1952ರಿಂದ 60ರವರೆಗೆ ಪ್ರಾಥಮಿಕ ಶಿಕ್ಷಣ ಪಡೆದ ಬಂಟ್ವಾಳ ತಾಲ್ಲೂಕಿನ ಪುಣಚಾ ಗ್ರಾಮದ ಪರಿಯಾಲ್ತಡ್ಕ ಹಿರಿಯ ಪ್ರಾಥಮಿಕ ಶಾಲೆಗೆ ಪ್ರಶಸ್ತಿಯ ಮೊತ್ತವನ್ನು ನೀಡಲು ನಿರ್ಧರಿಸಿದ್ದೇನೆ. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಲೇಖನ ಸಾಮಗ್ರಿ, ಅತಿಥಿ ಶಿಕ್ಷಕರಿಗೆ ಗೌರವ ಧನ ಸೇರಿದಂತೆ ಅಗತ್ಯ ಸೌಲಭ್ಯಗಳಿಗೆ ಮಾತ್ರ ದೇಣಿಗೆಯನ್ನು ಬಳಸುವಂತೆ ಷರತ್ತು ವಿಧಿಸಿ ನೀಡುತ್ತೇನೆ' ಎಂದರು.

'ಪರಿಯಾಲ್ತಡ್ಕ ಕನ್ನಡ ಮಾಧ್ಯಮ ಶಾಲೆಯು ಅನುದಾನ ಹಾಗೂ ಶಿಕ್ಷಕರ ಕೊರತೆಯಿಂದ ನರಳುತ್ತಿದೆ. ಪ್ರಶಸ್ತಿಯ ಹಣದಿಂದ ಪರಿಸ್ಥಿತಿ ಸ್ವಲ್ಪ ಸುಧಾರಿಸುವ ವಿಶ್ವಾಸದಿಂದ ದೇಣಿಗೆ ನೀಡುತ್ತಿದ್ದೇನೆ' ಎಂದು ಡಾ.ಬಿ.ಎ.ವಿವೇಕ ರೈ ತಿಳಿಸಿದರು.

2 ವಿ.ವಿ, 24 ಸಾಧಕರಿಗೆ ಎನ್‌ಎಸ್‌ಎಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಮಟ್ಟದ 2020-21ನೇ ಸಾಲಿನ ಎನ್‌ಎಸ್‌ಎಸ್ ಪ್ರಶಸ್ತಿ ಪುರಸ್ಕೃತರ ಪಟ್ಟಿಯನ್ನು ಯುವ ಸಬಲೀಕರಣ ಇಲಾಖೆ ಮಂಗಳವಾರ ಪ್ರಕಟಿಸಿದೆ.

2 ಅತ್ಯುತ್ತಮ ವಿಶ್ವವಿದ್ಯಾಲಯ, 12 ಅತ್ಯುತ್ತಮ ಘಟಕ ಹಾಗೂ ಕಾರ್ಯಕ್ರಮ ಸಂಯೋಜನಾಧಿಕಾರಿಗಳು, 12 ಅತ್ಯುತ್ತಮ ಸ್ವಯಂಸೇವಕ, ಸೇವಕಿಯರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸೆ.10ರಂದು ರಾಜಭವನದ ಗಾಜಿನಮನೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡುವರು. ದಶಕದ ನಂತರ ಈ ಕಾರ್ಯಕ್ರಮ ರಾಜಭವನದಲ್ಲಿ ನಡೆಯುತ್ತಿದೆ ಎಂದು ಸಚಿವ ಡಾ.ನಾರಾಯಣಗೌಡ ಮಾಹಿತಿ ನೀಡಿದರು.

ವಿಶ್ವವಿದ್ಯಾಲಯಗಳು: ಬೆಂಗಳೂರು ವಿಶ್ವವಿದ್ಯಾಲಯ (ಕುಲಪತಿ ಎಸ್.ಎಂ. ಜಯಕರ, ಕಾರ್ಯಕ್ರಮ ಸಂಯೋಜನಾಧಿಕಾರಿ ಎನ್.ಸತೀಶ್ ಗೌಡ), ಬೆಂಗಳೂರು ನಗರ ವಿಶ್ವವಿದ್ಯಾಲಯ (ಕುಲಪತಿ ಲಿಂಗರಾಜ ಗಾಂಧಿ, ಕಾರ್ಯಕ್ರಮ ಸಂಯೋಜನಾಧಿಕಾರಿ ಎಚ್.ಜಿ.ಗೋವಿಂದ ಗೌಡ).

ಅತ್ಯುತ್ತಮ ಪುರುಷ ಕಾರ್ಯಕ್ರಮಾಧಿಕಾರಿಗಳು: ಎಂ.ಎಸ್. ಹಲಗೂರ, ಜೈನ್ ಪದವಿ ಕಾಲೇಜು, ಹುಬ್ಬಳ್ಳಿ, (ಮಾಯಾ ಕಲ್ಲಳ್ಳಿ, ಪ್ರಾಂಶುಪಾಲರು). ಎಚ್. ಎಸ್.ಯಲ್ಲೇಶ್‌ಕುಮಾರ್, ತೋಟಗಾರಿಕಾ ಕಾಲೇಜು, ಮೂಡಿಗೆರೆ (ನಾರಾಯಣ ಎಸ್.ಮಾವಾರ್ಕರ, ಪ್ರಾಂಶುಪಾಲ). ಸೋಮಶೇಖರ್ ಸಿ.ಕರಿಮನಿ, ಅಗಡಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಕಾಲೇಜು, ಲಕ್ಷ್ಮೇಶ್ವರ, ಗದಗ (ಉದಯ ಕುಮಾರ್ ಎಸ್.ಹಂಪಣ್ಣನವರ್, ಪ್ರಾಂಶುಪಾಲ). ರೋಷನ್ ವಿನ್ಸಿ ಸಾಂತು ಮಾಯಾರ್, ಪಾದುವಾ ಕಾಲೇಜ್, ನಂತೂರು, ಮಂಗಳೂರು (ಅರುಣ ವಿಲ್ಸನ್ ಲೊಬೊ, ಪ್ರಾಂಶುಪಾಲ). ಎಂ.ಇಮ್ರಾನ್ ಪಾಶಾ, ಯೆನೆಪೊಯಾ ದಂತ ಕಾಲೇಜು, ದೇರಳಕಟ್ಟೆ, ಮಂಗಳೂರು (ಅಖ್ತರ್ ಹುಸೇನ್, ಪ್ರಾಂಶುಪಾಲ). ಸಿ.ಆರ್.ಕಿರಣ್ ಕುಮಾರ್, ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು (ವೆಂಕಟೇಶಯ್ಯ, ಪ್ರಾಂಶುಪಾಲ). ಕೆ.ಲೋಕೇಶ್ ನಾಯ್ಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭರಮಸಾಗರ (ಆರ್. ಮಹೇಶ್, ಪ್ರಾಂಶುಪಾಲ). ಎಂ.ವೆಂಕಟೇಶ್, ಡಿವಿಎಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ, (ವೆಂಕಟೇಶ್, ಪ್ರಾಂಶುಪಾಲ).

ಅತ್ಯುತ್ತಮ ಮಹಿಳಾ ಕಾರ್ಯಕ್ರಮಾಧಿಕಾರಿಗಳು: ಜಿ.ಜ್ಯೋತಿ, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು (ರಾಮ ಕೃಷ್ಣ ರೆಡ್ಡಿ, ಪ್ರಾಂಶುಪಾಲ). ಕೆ.ಮಧುರಾ, ಕಾರ್ಮೆಲ್ ಕಾಲೇಜು, ಮೊಂಡಂಕಾಪು, ದ.ಕ (ಲತಾ ಫರ್ನಾಂಡಿಸ್, ಪ್ರಾಂಶುಪಾಲರು). ಬಿ.ಎನ್.ಹೇಮಲತಾ, ಡಿ ಪಾಲ್ ಪ್ರಥಮದರ್ಜೆ ಕಾಲೇಜು, ಅವ್ವೇರಹಳ್ಳಿ, ಶ್ರೀರಂಗಪಟ್ಟಣ (ಸಿ.ಎಂ.ಬೈಜು ಆಂಟೊನಿ, ಪ್ರಾಂಶುಪಾಲ). ಬಿ.ಎನ್.ತಾರಾ, ಕೆಎಲ್ಇ ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಕಾಲೇಜು, ಧಾರವಾಡ (ನೀಲಕ್ಕಾ ಸಿ.ಪಾಟೀಲ, ಪ್ರಾಂಶುಪಾಲರು).

ಅತ್ಯುತ್ತಮ ಸ್ವಯಂ ಸೇವಕರು: ಆರ್. ಪವನ್, ಎಎಸ್‌ಸಿ ಪದವಿ ಕಾಲೇಜು, ರಾಜಾಜಿ ನಗರ, ಬೆಂಗಳೂರು. ನಳಿನ್ ಪಟೀಲ್, ಗೋಗಟೆ ಎಂಜಿನಿಯರಿಂಗ್ ಕಾಲೇಜು, ಬೆಳಗಾವಿ. ಎಂ.ಮಲ್ಲಿಕಾರ್ಜುನ್, ಶೇಷಾದ್ರಿಪುರಂ ಸಂಜೆ ಕಾಲೇಜು, ಬೆಂಗಳೂರು. ಭಾನುಪ್ರಕಾಶ್, ವಿಶ್ವಶಾಂತಿ ಪ್ರಥಮ ದರ್ಜೆ ಕಾಲೇಜು, ಸಾಧನಪುರ, ಮೈಸೂರು. ಪ್ರದೀಪ, ರುಕ್ಮಿಣಿ ಶೆಡ್ತಿ ಕಾಲೇಜು, ಬಾರ್ಕೂರು, ಉಡುಪಿ. ಶಿವಯೋಗಿ ಹಾವೇರಿ, ಕಿಟೆಲ್ ವಿಜ್ಞಾನ ಕಾಲೇಜು, ಧಾರವಾಡ.

ಅತ್ಯುತ್ತಮ ಸ್ವಯಂ ಸೇವಕಿಯರು: ಪಿ.ಭಾವನಾ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಮಂಡ್ಯ. ಸಿ.ಡಿ. ರಕ್ಷಿತಾ, ಕಟೀಲ್ ಅಶೋಕ್ ಪೈ ಸ್ಮಾರಕ ಕಾಲೇಜು, ಶಿವಮೊಗ್ಗ. ರಶ್ಮಿ ಜೆ.ಅಂಚನ್, ಗೋವಿಂದದಾಸ ಕಾಲೇಜು, ಸುರತ್ಕಲ್. ಅರ್ಪಣಾ ಎಸ್.ಪಾಟೀಲ, ಕೆಎಲ್ಇ ಔಷಧ ವಿಜ್ಞಾನ ಕಾಲೇಜು, ಬೆಳಗಾವಿ. ದೀಪಾ ಎನ್.ಅಂಗಡಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಡಗೇರಿ, ಧಾರವಾಡ, ಎನ್.ವಿದ್ಯಾ, ತೋಟಗಾರಿಕಾ ಕಾಲೇಜು, ಮೂಡಿಗೆರೆ.

ಶ್ರೀಧರ ಹಂದೆಗೆ ಮುದ್ದಣ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಕೋಟ (ಉಡುಪಿ): ಬೆಂಗಳೂರಿನ ಹೋಟೆಲ್ ಉದ್ಯಮದಾರರ ಸಹಕಾರ ಬ್ಯಾಂಕ್ ವಾರ್ಷಿಕವಾಗಿ ನೀಡುವ ಮಹಾಕವಿ ಮುದ್ದಣ ಪ್ರಶಸ್ತಿಗೆ ಈ ಬಾರಿ ಸಾಲಿಗ್ರಾಮ ಮಕ್ಕಳ ಮೇಳದ ಸ್ಥಾಪಕ, ನಿರ್ದೇಶಕ, ರಂಗಭೂಮಿ ಕಲಾವಿದ ಕೋಟದ ಎಚ್.ಶ್ರೀಧರ ಹಂದೆ ಭಾಜನರಾಗಿದ್ದಾರೆ.

2021ನೇ ಸಾಲಿನ ಈ ಪ್ರಶಸ್ತಿಯು ₹ 25 ಸಾವಿರ ನಗದನ್ನು ಒಳಗೊಂಡಿದೆ. ಸೆ.18ರಂದು ಬೆಂಗಳೂರಿನ ಬಸವನಗುಡಿ ಬುಲ್ ಟೆಂಪಲ್ ರಸ್ತೆಯಲ್ಲಿರುವ ಮರಾಠ ಹಾಸ್ಟೆಲ್‌ನ ಸಭಾ ವೇದಿಕೆಯಲ್ಲಿ ನಡೆಯುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

86ರ ಇಳಿವಯಸ್ಸಿನ ಎಚ್.ಶ್ರೀಧರ ಹಂದೆ ಅವರು ಮೂರು ದಶಕಗಳ ಕಾಲ ಶಿಕ್ಷಕರಾಗಿ, ಶಿಕ್ಷಣದಲ್ಲಿ ರಂಗಕಲೆಗಳನ್ನೂ ಅಳವಡಿಸಿಕೊಂಡು ಇತಿಹಾಸ, ವಿಜ್ಞಾನ ಮತ್ತು ಭಾಷಾ ಪಠ್ಯಗಳನ್ನು ಬೋಧನೆ ಮಾಡಿದವರು. ಕಾರ್ಕಡ ಶ್ರೀನಿವಾಸ ಉಡುಪರೊಂದಿಗೆ 1975ರಲ್ಲಿ ಸಾಲಿಗ್ರಾಮ ಮಕ್ಕಳ ಮೇಳವನ್ನು ಕಟ್ಟಿ, ಯಕ್ಷಗಾನವನ್ನು ಮೊದಲು ವಿದೇಶಕ್ಕೆ ಕೊಂಡೊಯ್ದ ದಾಖಲೆಗೆ ಪಾತ್ರರಾದವರು. ಯಕ್ಷ ಸಂಘಟಕ ಮಾತ್ರವಲ್ಲದೆ ಸ್ವತಃ ವೇಷಧಾರಿ, ಭಾಗವತ, ಪ್ರಸಂಗ ಕವಿಯೂ ಆಗಿ ಗುರುತಿಸಿಕೊಂಡಿದ್ದಾರೆ.





ಆರ್ಟೆಮಿಸ್ 1 ನೌಕೆಯನ್ನು ಹೊತ್ತು ತನ್ನ ಉಡಾವಣಾ ವೇದಿಕೆಯ ಮೇಲೆ ನಿಂತಿರುವ ಎಸ್ ಎಲ್ ಎಸ್ ರಾಕೆಟ್‌ನ ಭವ್ಯ ನೋಟ (ಚಿತ್ರಕೃಪೆ: 'ನಾಸಾ')

ಚಂದ್ರನ ಅನ್ವೇಷಣೆ

ಅಂದು ಅಪಾಲೋ ಇಂದು ಆರ್ಟೆಮಿಸ್

ಬಿ. ಆರ್. ಗುರುಪ್ರಸಾದ್

ಇತ್ತೀಚಿನ ದಶಕಗಳಲ್ಲಿ ದೊಡ್ಡ ರಾಕೆಟ್ ವಾಹನಗಳು ತಮ್ಮ 'ಪ್ರಯಾಣಿಕ'ರನ್ನು ಚಂದ್ರನತ್ತ ಹಾರಿಬಿಟ್ಟಿವೆ. ಆದರೆ ಈ ಪ್ರಯಾಣಿಕರೆಲ್ಲರೂ ಮಾನವನ ಪ್ರತಿನಿಧಿಗಳಾದ ರೋಬಾಟ್ ನೌಕೆಗಳೇ ಆಗಿವೆ. ಅದಕ್ಕೆ ನಮ್ಮ ಚಂದ್ರಯಾನ 1 ಮತ್ತು 2 ನೌಕೆಗಳನ್ನು ಕ್ರಮವಾಗಿ ಉಡಾಯಿಸಿದ ಪಿ. ಎಸ್. ಎಲ್. ವಿ. ಹಾಗೂ ಜಿ. ಎಸ್. ಎಲ್. ವಿ .ಮಾರ್ಕ್ 3 ರಾಕೆಟ್‌ಗಳು ಉತ್ತಮವಾದ ಉದಾಹರಣೆಯೆನ್ನಬಹುದು.

ಆದರೆ ಚಂದ್ರನತ್ತ ಮಾನವಪ್ರಯಾಣಿಕನನ್ನು ಉಡಾಯಿಸುವುದನ್ನು ಗುರಿಯಾಗಿಟ್ಟುಕೊಂಡು ನಿರ್ಮಿಸಲಾದ ಬೃಹತ್ ರಾಕೆಟ್ ಒಂದು ತನ್ನ ಶಿರದ ಮೇಲೆ 'ಆರ್ಟೆಮಿಸ್ 1' ಎಂಬ ಅಂತರಿಕ್ಷನೌಕೆಯನ್ನು ಹೊತ್ತು ಅಮೆರಿಕದ ಕೆನಡಿ ಅಂತರಿಕ್ಷ ನಿಲ್ದಾಣದಲ್ಲಿ ತನ್ನ ಉಡಾವಣಾ ವೇದಿಕೆಯ ಮೇಲೆ ಭವ್ಯವಾಗಿ ಇತ್ತೀಚೆಗೆ, ಅಂದರೆ ಕಳೆದ ಆಗಸ್ಟ್‌ನ ಉತ್ತರಾರ್ಧದಲ್ಲಿ ನಿಂತಿತ್ತು. ಒಂದಲ್ಲಾ ಎರಡಲ್ಲಾ, ಮೂವತ್ತೆರಡು ಮಹಡಿಗಳಷ್ಟು ಎತ್ತರವಿದ್ದ ಆ ರಾಕೆಟ್‌ನ ಹೆಸರು ಉಪಗ್ರಹ ಉಡಾವಣಾ ವ್ಯವಸ್ಥೆ, ಸಂಕ್ಷಿಪ್ತವಾಗಿ 'ಎಸ್ ಎಲ್ ಎಸ್'.

ಸುಮಾರು ಇದೇ ಬಗೆಯ ಉದ್ದೇಶವನ್ನು ಹೊಂದಿದ ಇಂತಹ ಒಂದು ದೈತ್ಯ ರಾಕೆಟ್ ನಿಂತದ್ದು ಐವತ್ತು ವರ್ಷಗಳ ಹಿಂದಷ್ಟೆ. ಅದೇ ಒಂದಲ್ಲ, ಎರಡಲ್ಲ, ಒಂಬತ್ತು ಬಾರಿ ಮಾನವನ್ನು ಚಂದ್ರನತ್ತ ಯಶಸ್ವಿಯಾಗಿ ಉಡಾಯಿಸಿದ 'ಸ್ಯಾಟರ್ನ್-5' ರಾಕೆಟ್ ವಾಹನ. ಸ್ಯಾಟರ್ನ್-5ಗಳ ಮೇಲಿದ್ದ ಅಪಾಲೋ ನೌಕೆಗಳಲ್ಲಿ ಕುಳಿತ ಒಟ್ಟು 27 ಅಮೆರಿಕದ ಗಗನಯಾತ್ರಿಗಳು 1968-72ರ ನಡುವೆ ಭೂಮಿಯಿಂದ ಸುಮಾರು ನಾಲ್ಕು ಲಕ್ಷ ಕಿಲೋಮೀಟರ್ ದೂರದಲ್ಲಿರುವ ಚಂದ್ರನತ್ತ ತೆರಳಿದರು. ಆ ಪೈಕಿ 12 ಮಂದಿ ಚಂದ್ರನ ಮೇಲೆ ವಿಹರಿಸಿ ಸುರಕ್ಷಿತವಾಗಿ ಹಿಂತಿರುಗಿದರು. ಅದಾದ ಐದು ದಶಕಗಳ ಬಳಿಕ ಮತ್ತೆ ಬೃಹತ್ ರಾಕೆಟ್ಟೊಂದರಲ್ಲಿ ಮಾನವರನ್ನು ಕೊಂಡೊಯ್ಯಬಲ್ಲ ನೌಕೆಯೊಂದನ್ನು ತಮ್ಮ ದೇಶದ ಅಂತರಿಕ್ಷ ಸಂಸ್ಥೆ 'ನಾಸಾ' ಚಂದ್ರನತ್ತ ಉಡಾಯಿಸುವ ಸಮಯ ಸನ್ನಿಹಿತವಾದಾಗ ಅಮೆರಿಕನ್ನರೂ ಸೇರಿದಂತೆ ಜಗತ್ತಿನಾದ್ಯಂತ ಅನೇಕರು ಸಹಜವಾಗಿಯೇ ಪುಲಕಿತರಾಗಿದ್ದರು. ಆದರೆ ಆಗಸ್ಟ್ 29ರಂದು ಭಾರತೀಯ ಕಾಲಮಾನ ಸಂಜೆ 6:03ಕ್ಕೆ ಜರುಗಬೇಕಾಗಿದ್ದ ಆರ್ಟೆಮಿಸ್ 1ರ ಉಡಾವಣೆ ಸೆಪ್ಟೆಂಬರ್ 3ಕ್ಕೆ ಮುಂದೂಡಲ್ಪಟ್ಟಾಗ ಅವರಿಗೆ ಸಹಜವಾಗಿಯೇ ನಿರಾಸೆಯಾಯಿತು. ಅದಾದ ಬಳಿಕ ಮತ್ತಷ್ಟು ಗಂಭೀರವಾದ ತಾಂತ್ರಿಕ ಕಾರಣವೊಂದರಿಂದಾಗಿ ಆ ಯಾನ ಸೆಪ್ಟೆಂಬರ್ 3ರಂದು ಮತ್ತೆ ಮುಂದೂಡಲ್ಪಟ್ಟಿದೆ. ಇದರಿಂದಾಗಿ ಆರ್ಟೆಮಿಸ್ ಕಾರ್ಯಕ್ರಮದ ಮೊದಲ ನೌಕೆ ಚಂದ್ರನತ್ತ ತೆರಳುವುದು ಇನ್ನು ಕೆಲವು ವಾರಗಳ ನಂತರವೇ.



ಕನಿಷ್ಠ ಪಕ್ಷ ಒಂದು ವಾರವಾದರೂ ಇಬ್ಬರು ಗಗನಯಾತ್ರಿಗಳು ಚಂದ್ರನ ಮೇಲೆ ತಂಗುವಂತೆ ಮಾಡುವುದು ಮತ್ತು ಭವಿಷ್ಯದಲ್ಲಿ ಮಾನವರು ಅಲ್ಲಿ ಕಾಯಂ ಆಗಿ ನೆಲೆಸುವ ಕಾರ್ಯಕ್ಕೆ ನೆರವಾಗುವುದು ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶಗಳಾಗಿವೆ.

ಚಂದ್ರನ ಸಮೀಪದಲ್ಲಿ ಆರ್ಟೆಮಿಸ್ ನೌಕೆ, ಕಲಾವಿದನ ಕಲ್ಪನೆಯಲ್ಲಿ (ಚಿತ್ರಕೃಪೆ:'ನಾಸಾ')

ಆರ್ಟೆಮಿಸ್ ನೌಕೆಯಲ್ಲಿ ಯಾನ ಮಾಡಲು ನಾಲ್ವರು ಗಗನಯಾತ್ರಿಗಳಿಗೆ ಅವಕಾಶವಿದೆ. ಆದರೆ ಈ ಬಾರಿ ಅದರಲ್ಲಿ ಮಾನವರ ಬದಲು ದೊಡ್ಡ ಬಟ್ಟೆಯ ಅಂಗಡಿಗಳ ಮುಂದೆ ನಿಲ್ಲಿಸಿರುವ ಬೊಂಬೆಗಳನ್ನು ಹೋಲುವ ಮೂರು ಮಾನವರೂಪದ ಬೊಂಬೆಗಳು (ಮ್ಯಾನಿಕ್ವಿನ್ಸ್) ಇದ್ದವು. ಇವುಗಳಲ್ಲಿ ಒಂದು ಗಂಡುಬೊಂಬೆಯಾಗಿದ್ದರೆ ಮತ್ತೆರಡು (ಕೈಕಾಲಿಲ್ಲದ!) ಹೆಣ್ಣುಬೊಂಬೆಗಳಾಗಿದ್ದವು.

ಆರ್ಟೆಮಿಸ್ ನೌಕೆಯ ಯಾನದ ವೇಳೆಯಲ್ಲಿ ಉಂಟಾಗುವ ವೇಗದ ಏರಿಳಿತಗಳು (ಆಕ್ಸಿಲರೇಷನ್ಸ್), ನೌಕೆಯ ಒಳಭಾಗದ ಉಷ್ಣತೆ, ಅಂತರಿಕ್ಷದಲ್ಲಿನ ಮಾರಕ ವಿಕಿರಣ (ರೇಡಿಯೇಷನ್) ಪರಿಸರ - ಇವುಗಳನ್ನು ದಾಖಲುಮಾಡಿಕೊಳ್ಳುವ ಅನೇಕ ಸಂವೇದಕಗಳನ್ನು ಆ ಮಾನವಬೊಂಬೆಗಳಲ್ಲಿ ಅಳವಡಿಸಲಾಗಿತ್ತು. ಇದು ಚಂದ್ರನತ್ತ ಆರ್ಟೆಮಿಸ್ ನೌಕೆಯ ಮೊದಲ ಯಾನವಾಗಿದ್ದರಿಂದ ಅದನ್ನು ಕೂಲಂಕಷವಾಗಿ ಪರೀಕ್ಷಿಸುವ ಅಗತ್ಯವಿದ್ದದ್ದೇ ಇದಕ್ಕೆ ಕಾರಣ.

ಆಗಸ್ಟ್ 29, ಇಲ್ಲವೇ ಸೆಪ್ಟೆಂಬರ್ 3ರಂದು ಆರ್ಟೆಮಿಸ್ 1 ಭೂಮಿಯಿಂದ ಹೊರಟಿದ್ದಲ್ಲಿ ಅದಾದ ಒಂದು ವಾರದ ನಂತರ ಅದು ಚಂದ್ರನನ್ನು ಸಮೀಪಿಸಿದಾಗ ಆ ನೌಕೆಯ ಹಿಂಭಾಗದಲ್ಲಿರುವ ದೊಡ್ಡ ರಾಕೆಟ್ ಯಂತ್ರವನ್ನು ಉರಿಸುವ ಮೂಲಕ ಅದರ ವೇಗಕ್ಕೆ ಕಡಿವಾಣ ಹಾಕಿ ಆ ನೌಕೆ ಚಂದ್ರನನ್ನು ಸುತ್ತುವಂತೆ ಮಾಡುವ ಕಾರ್ಯಕ್ರಮವಿತ್ತು. ಕೆಲಕಾಲದ ನಂತರ ಅಂತಿಮವಾಗಿ ಆ ನೌಕೆ ಭೂಮಿಗೆ ಕಾಣದ ಚಂದ್ರನ 'ಹಿಂಭಾಗ'ದ ಮೇಲ್ಮೈಯಿಂದ ಅರವತ್ತು ಸಾವಿರ ಕಿಲೋಮೀಟರ್ ದೂರಕ್ಕೆ ಧಾವಿಸಿ ಒಂದು ದಾಖಲೆಯನ್ನು ನಿರ್ಮಿಸಬೇಕಿತ್ತು. ಇದುವರೆಗೂ ಮಾನವರನ್ನು ಹೊತ್ತೊಯ್ಯಬಲ್ಲ ಯಾವುದೇ ನೌಕೆ ಚಂದ್ರನಿಂದ ಇಷ್ಟು ದೂರ ತೆರಳಿಲ್ಲ. ಇದಕ್ಕೆ ಹೋಲಿಸಿದಲ್ಲಿ ಐವತ್ತೆರಡು ವರ್ಷಗಳ ಹಿಂದೆ ಮೈ ನಡುಗಿಸುವಂತಹ ಅಪಾಯಕ್ಕೆ ಸಿಲುಕಿಕೊಂಡು ಭೂಮಿಗೆ ಸುರಕ್ಷಿತವಾಗಿ ಮರಳುವ ಕಾರ್ಯದಲ್ಲೇ ಮಗ್ನರಾಗಿದ್ದ ಅಪಾಲೋ 13ರ ಮೂವರು ಗಗನಯಾತ್ರಿಗಳು ಚಂದ್ರನ ಹಿಂಭಾಗದ ಮೇಲೆ ಸುಮಾರು 254 ಕಿಲೋಮೀಟರ್ ಎತ್ತರದಲ್ಲಿ ಹಾದುಹೋಗಿದ್ದರಷ್ಟೆ.

ಚಂದ್ರನ ಸಮೀಪದಲ್ಲಿದ್ದಾಗ ಆರ್ಟೆಮಿಸ್ 1 ಹತ್ತು ಪುಟ್ಟ 'ಕ್ಯೂಬ್ ಸ್ಯಾಟ್'ಗಳನ್ನು ಉಡಾಯಿಸಲಿತ್ತು. ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯ ಮೂಲಕ ನಿರ್ಮಾಣವಾದ ಆ ಅತ್ಯಂತ ಪುಟ್ಟ ಉಪಗ್ರಹಗಳ ಉದ್ದೇಶ ತಂತ್ರಜ್ಞಾನಗಳ ಪರೀಕ್ಷೆ ಹಾಗೂ ವೈಜ್ಞಾನಿಕ ಸಂಶೋಧನೆಗಳಾಗಿವೆ. ಇಂದು ಇಂತಹ ಪುಟ್ಟ ಉಪಗ್ರಹಗಳು ಅನೇಕ ಅದ್ಭುತವಾದ ಕಾರ್ಯಗಳನ್ನು ನಿರ್ವಹಿಸಿ ಮಾನವನಿಗೆ ನೆರವಾಗುತ್ತಿವೆ. ಹೀಗೆ ಚಂದ್ರನನ್ನು ಕೆಲಕಾಲ ಸುತ್ತಿದ ನಂತರ ಆರ್ಟೆಮಿಸ್ 1 ಭೂಮಿಯತ್ತ ಮರುಪಯಣವನ್ನು ಕೈಗೊಳ್ಳಬೇಕಿತ್ತು. ಚಂದ್ರನಿಂದ ವಿಮೋಚನೆ ಹೊಂದಿದ ಸುಮಾರು ಒಂದು ವಾರದ ನಂತರ ಭೂಮಿಯನ್ನು ಸಮೀಪಿಸುವ ಆರ್ಟೆಮಿಸ್ 1 ಗಂಟೆಗೆ ನಲವತ್ತು ಸಾವಿರ ಕಿಲೋಮೀಟರ್ ವೇಗದಲ್ಲಿ ಭೂವಾತಾವಣವನ್ನು ಪ್ರವೇಶಿಸಲಿತ್ತು. ನಂತರ ವಾತಾವರಣದ ಗಾಳಿಯ ಅಣುಗಳ ಜೊತೆ ಉಂಟಾಗುವ ಘರ್ಷಣೆಯಿಂದಾಗಿ 2700 ಡಿಗ್ರಿ ಸೆಲ್ಷಿಯಸ್ ಉಷ್ಣತೆಯನ್ನು ಅನುಭವಿಸುವ ಸ್ಥಿತಿ ಅದರ ಪಾಲಿಗಿತ್ತು. ಮೈನಡುಗಿಸುವ ಆ ಉಷ್ಣತೆಯಿಂದ ನೌಕೆಯ ಒಳಭಾಗವನ್ನು ರಕ್ಷಿಸುವ ಕಾರ್ಯವನ್ನು ನಿರ್ವಹಿಸಲಿದ್ದದ್ದು ಹೊಸಬಗೆಯ ತಂತ್ರಜ್ಞಾನದ ಬಳಕೆಯಿಂದ ನಿರ್ಮಾಣವಾದ ನೌಕೆಯ ಶಾಖಕವಚ.

ಅಂತಿಮವಾಗಿ ಪ್ಯಾರಾಚ್ಯೂಟ್‌ಗಳ ನೆರವಿನೊಡನೆ ಆರ್ಟೆಮಿಸ್ 1 ಕ್ಯಾಲಿಫೋರ್ನಿಯಾ ರಾಜ್ಯದ ಕರಾವಳಿಯ ಸಮೀಪದಲ್ಲಿ ಶಾಂತ (ಪೆಸಿಫಿಕ್) ಸಾಗರದ ಮೇಲೆ ಇಳಿಯುವ ಕಾರ್ಯಕ್ರಮವಿತ್ತು. ಆದರೆ ಈ ಕಾರ್ಯಗಳೆಲ್ಲವೂ ಬರುವ ಕೆಲವು ವಾರಗಳಲ್ಲಿ ಯಾವಾಗ ಸಾಧಿಸುವುವೋ ಎಂಬ ಬಗ್ಗೆ ಖಚಿತವಾಗಿ ಹೇಳಲು ಇಂದು ಸಾಧ್ಯವಿಲ್ಲ.

ಈಗ ಈ ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶವೇನು? ಐದು ದಶಕಗಳ ಬಳಿಕ ಮಾನವ ಮತ್ತೆ ಈ ಕಾರ್ಯಕ್ರಮದ ಮೂಲಕ ಚಂದ್ರನತ್ತ ತೆರಳಲು ಹಪಹಪಿಸುತ್ತಿರುವುದಕ್ಕೆ ಕಾರಣವೇನು? ಈ ಆರ್ಟೆಮಿಸ್ ಎಂಬ ಪದದ ಅರ್ಥವೇನು?

2025ರಲ್ಲಿ ಚಂದ್ರನಲ್ಲಿಗೆ ಹಿಂದಿರುಗಿ 'ಮೊದಲ ಮಹಿಳೆ'ಯನ್ನು ಅಲ್ಲಿ ಇಳಿಸುವುದು ಮತ್ತು ಹಿಂದಿನ ಅಪಾಲೋ ಗಗನಯಾತ್ರಿಗಳಂತೆ ಚಂದ್ರನಲ್ಲಿ ಕೇವಲ ಎರಡು ಮೂರು ದಿನ ತಂಗಿ ನಂತರ ಮತ್ತೆ ಭೂಮಿಯತ್ತ ಪಯಣ ಮಾಡುವುದಷ್ಟನ್ನೇ ಸಾಧ್ಯಮಾಡದೇ ಕನಿಷ್ಠ ಪಕ್ಷ ಒಂದು ವಾರವಾದರೂ ಇಬ್ಬರು ಗಗನಯಾತ್ರಿಗಳು ಚಂದ್ರನ ಮೇಲೆ ತಂಗುವಂತೆ ಮಾಡುವುದು ಮತ್ತು ಭವಿಷ್ಯದಲ್ಲಿ ಮಾನವರು ಅಲ್ಲಿ ಕಾಯಂ ಆಗಿ ನೆಲೆಸುವ ಕಾರ್ಯಕ್ಕೆ ನೆರವಾಗುವುದು ಆರ್ಟೆಮಿಸ್ ಕಾರ್ಯಕ್ರಮದ ಉದ್ದೇಶಗಳಾಗಿವೆ.

ಚಂದ್ರನ ಅನ್ವೇಷಣೆಯನ್ನು, ಅದರಲ್ಲೂ ಚಂದ್ರನ ಧ್ರುವ ಪ್ರದೇಶಗಳ ಅನ್ವೇಷಣೆಯನ್ನು ಮುಂದುವರಿಸುವುದು, ಅಲ್ಲಿನ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಹಾಗೂ ಚಂದ್ರನನ್ನು ಒಂದು ಜಿಗಿಯುವ ಹಲಗೆಯಂತೆ ಬಳಸಿಕೊಂಡು ಮಾನವನ ಮುಂದಿನ ಗುರಿಯಾದ ಮಂಗಳಗ್ರಹದತ್ತ ಪಯಣಿಸುವುದು, ಈ ಕಾರ್ಯಗಳಿಗೂ ಆರ್ಟೆಮಿಸ್ ಕಾರ್ಯಕ್ರಮ ಎಡೆಮಾಡಿಕೊಡಲಿದೆ.

ಪ್ರಾಚೀನ ಗ್ರೀಕ್ ಪುರಾಣದಲ್ಲಿ 'ಆರ್ಟೆಮಿಸ್' ಎಂಬುವಳು ಪ್ರಾಚೀನ ಗ್ರೀಕ್ ಸೂರ್ಯದೇವತೆ ಅಪಾಲೋನ ಅವಳಿ ಸೋದರಿ. ಚಂದ್ರನಲ್ಲಿಗೆ ಮಾನವರನ್ನು ಮೊದಲ ಬಾರಿಗೆ ಯಶಸ್ವಿಯಾಗಿ ಕಳುಹಿಸಿದ ಅಮೆರಿಕದ ಕಾರ್ಯಕ್ರಮ 'ಅಪಾಲೋ'. ಹೀಗಾಗಿ 'ಅಪಾಲೋ' ಕಾರ್ಯಕ್ರಮದ ನಂತರದ ಚಂದ್ರ ಅನ್ವೇಷಣಾ ಕಾರ್ಯಕ್ರಮಕ್ಕೆ 'ಆರ್ಟೆಮಿಸ್' ಎಂದು ಅಮೆರಿಕ ಹೆಸರಿಟ್ಟಿರುವುದು ಸಮಂಜಸವಾಗಿದೆ.

(ಲೇಖಕರು 'ಇಸ್ರೊ'ನ ನಿವೃತ್ತ ವಿಜ್ಞಾನಿ)

ಚಾರ್ಜ್ ನಿಲ್ಲದ ಬ್ಯಾಟರಿ ಇನ್ಮುಂದೆ ಸಮಸ್ಯೆ ಇಲ್ಲರೀ!

ಕ್ಷಮಾ ವಿ. ಭಾನುಪ್ರಕಾಶ್

ಒಬ್ಬೊಬ್ಬರಿಗೆ ಒಂದೊಂದರ ಖಯಾಲಿ; ಕೆಲವರಿಗೆ ಹೊಸ ಪುಸ್ತಕಗಳ ಹುಚ್ಚು, ಓದಲು ಸಮಯವಿದೆಯೋ ಇಲ್ಲವೋ ತಂದು ಮನೆಯಲ್ಲಿ ತುಂಬಿಸುವುದೇ ಕೆಲಸ. ಇದಾದರೂ ವಾಸಿ; ಇನ್ನೂ ಕೆಲವರಿಗೆ ಹೊಸ ಒಡವೆಯ, ಹೊಸ ಬಗೆಯ ದಿರಿಸುಗಳ ಹುಚ್ಚು; ಕಪಾಟು ತುಂಬಿ ತುಳುಕುತ್ತಿದ್ದರೂ ಹೊಸ ದಿರಿಸುಗಳ ಜೊತೆಗೆ ಮತ್ತೊಂದು ಹೊಸ ಕಪಾಟನ್ನೂ ಆರ್ಡರ್ ಮಾಡಿಬಿಡುತ್ತಾರೆ.

ಇತ್ತೀಚೆಗೆ ಇಂಥವರಿಗಿಂತಲೂ ಹೆಚ್ಚಿಗೆ ಕಾಣಸಿಗುವುದು ಮೊಬೈಲ್‌ಪ್ರಿಯರು; ಹೊಸ ಮೊಬೈಲ್ ಕೈಗೆ ಬಂದು ತಿಂಗಳೂ ಕಳೆದಿರುವುದಿಲ್ಲ, ಮತ್ತೊಂದು ಹೊಸ ಅಪ್ಡೇಟ್ ಇದೆ ಎಂದು ತಿಳಿದ ಕೂಡಲೇ ಎಕ್ಸ್‌ಚೇಂಜ್ ಮಾಡಿ ಸುಧಾರಿತ ಆವೃತ್ತಿಯ ಮೊಬೈಲ್ ಫೋನನ್ನು ಕೊಳ್ಳುತ್ತಾರೆ; ಎಲ್ಲರೂ ಇವರಷ್ಟು ಸ್ಥಿತಿವಂತರಿಲ್ಲದಿರಬಹುದು ಅಥವಾ ಅನವಶ್ಯಕವಾಗಿ ವೆಚ್ಚ ಮಾಡಬಾರದು ಎಂಬ ಪರಿಜ್ಞಾನವಿರುವ ವಿವೇಕಿಗಳಿರಬಹುದು.

ಆದರೆ ಸಾಮಾನ್ಯವಾಗಿ ಎಲ್ಲರೂ ತಮ್ಮ ಹಳೆಯ ಮೊಬೈಲನ್ನು ಕೊಟ್ಟು ಹೊಸದನ್ನು ಕೊಳ್ಳುವುದು ಅದರ ಪರದೆ ಅಥವಾ ಬ್ಯಾಟರಿಗೆ ಸಮಸ್ಯೆ ಬಂದಾಗ. ಫೋನಿನಲ್ಲಿ ಏನೂ ಕಾಣುತ್ತಿಲ್ಲ ಅಥವಾ ಬ್ಯಾಟರಿಯಲ್ಲಿ ಚಾರ್ಜ್ ನಿಲ್ಲುತ್ತಿಲ್ಲ ಎಂದಾಗ ಉಪಯೋಗಿಸಲು ಹೇಗೆ ಸಾಧ್ಯ ಅಲ್ಲವೇ? ಮೊಬೈಲ್ ಫೋನುಗಳಲ್ಲಿ ಸಾಮಾನ್ಯವಾಗಿ ಬಳಕೆಯಾಗುವ ಲಿಥಿಯಮ್ ಅಯಾನ್ ಬ್ಯಾಟರಿಗಳಲ್ಲಿ ಏಕೆ ಹೆಚ್ಚು ಸಮಯ ಚಾರ್ಜ್ ನಿಲ್ಲುವುದಿಲ್ಲ ಮತ್ತು ಅದನ್ನು ಮತ್ತಷ್ಟು ಸುಧಾರಿತ ರೂಪದಲ್ಲಿ ತಯಾರಿಸುವುದು ಹೇಗೆ ಎಂಬುದರ ಮೇಲೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಸಂಶೋಧನೆ ನಡೆಸಿದ್ದಾರೆ ಹಾಗೂ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ.

ಈ ಲಿಥಿಯಂ ಅಯಾನ್ ಬ್ಯಾಟರಿಗಳು ನೋಡಲು 'ಇಷ್ಟೇ' ಅಗಲವಿದ್ದರೂ ಅದರ ಒಳಗೆ ಎಷ್ಟೆಲ್ಲಾ ರಾಸಾಯನಿಕ ಕ್ರಿಯೆಗಳು ನಡೆಯುತ್ತವೆ ಗೊತ್ತೇ? ಮುಖ್ಯವಾಗಿ ಈ ಬ್ಯಾಟರಿಯಲ್ಲಿ ಒಂದು ದ್ರವರೂಪದ 'ಎಲೆಕ್ಟ್ರೊಲೈಟ್' ಇದ್ದು ಲಿಥಿಯಂ ಅಯಾನ್‌ಗಳು ಈ ದ್ರವದೊಳಗೆ ಉಪಸ್ಥಿತವಿರುತ್ತವೆ. ಅಯಾನ್‌ಗಳೆಂದರೆ ಧನಾತ್ಮಕ ಅಥವಾ ಋಣಾತ್ಮಕ ಚಾರ್ಜ್ ಹೊಂದಿರುವ ಪರಮಾಣು ಎಂದರ್ಥ. ಹೋಳಿಗೆಯಲ್ಲಿರುವ ಹೂರಣದಂತೆ ಈ ಎಲೆಕ್ಟ್ರೊಲೈಟ್ ದ್ರವವಿದ್ದರೆ, ಅದರ ಮೇಲೂ ಮತ್ತೂ ಕೆಳಗೂ ಹಿಟ್ಟಿನ ಪದರದಂತೆ ಎಲೆಕ್ಟ್ರೋಡ್‌ಗಳಿರುತ್ತವೆ; ಮೇಲಿನ ಪದರ ಕಬ್ಬಿಣದ ಅಥವಾ ಕೊಬಾಲ್ಟ್‌ನಂತಹ ಲೋಹಗಳ ಆಕ್ಸೈಡ್‌ನಿಂದ ಮಾಡಲಾಗಿದ್ದು, ಇದು ಬ್ಯಾಟರಿಯ ಋಣಾತ್ಮಕ (ನೆಗೆಟಿವ್) ಭಾಗ, ಅಂದರೆ 'ಕ್ಯಾಥೋಡ್' ಆಗಿ ವರ್ತಿಸುತ್ತದೆ; ಕೆಳಗಿನ ಪದರವು ಇಂಗಾಲದ ಒಂದು ರೂಪವಾದ ಗ್ರಾಫೈಟ್‌ನಿಂದ ಮಾಡಲಾಗಿದ್ದು, ಇದು ಬ್ಯಾಟರಿಯ ಧನಾತ್ಮಕ (ಪಾಸಿಟಿವ್) ಭಾಗ, ಅಂದರೆ 'ಆನೋಡ್' ಆಗಿ ವರ್ತಿಸುತ್ತದೆ.

ಬ್ಯಾಟರಿಯು, ಚಾರ್ಜ್ ಮತ್ತು ಡಿಸ್ಚಾರ್ಜ್ ಆಗುವಾಗ, ಈ ಪಾಸಿಟಿವ್-ನೆಗೆಟಿವ್ ಕೊನೆಗಳ ನಡುವೆ ನಮ್ಮ ಲಿಥಿಯಂ ಅಯಾನ್‌ಗಳದ್ದು ಅತ್ತಿಂದಿತ್ತ ಇತ್ತಿಂದತ್ತ ನಿಲ್ಲದ ನರ್ತನ; ಆದರೆ ಇಲ್ಲೇನೋ ಸಮಸ್ಯೆ ಇದೆ ಎಂದು ಎನಿಸಿದ್ದು ಮೇಲಿಂದ ಮೇಲೆ ಬ್ಯಾಟರಿಗಳು ಬೆಂಕಿಗಾಹುತಿಯಾದಾಗ, ಸ್ಫೋಟಗಳಿಗೆ ಕಾರಣವಾದಾಗ. ಉಷ್ಣವಲಯದ ನಮ್ಮಂತಹ ದೇಶಗಳಲ್ಲಂತೂ ಇದು ಮತ್ತೂ ಹೆಚ್ಚು. ಇದರ ಹಿಂದಿರುವ ಸಮಸ್ಯೆಯೇ ದ್ರವರೂಪದ ಎಲೆಕ್ಟ್ರೊಲೈಟ್; ಅದನ್ನು ಘನರೂಪಕ್ಕೆ ಮಾರ್ಪಡಿಸುವುದು ಸಾಧ್ಯವೇ ಎಂದು ಅಧ್ಯಯನ ನಡೆಸಿದ ಸಂಶೋಧಕರಿಗೆ ಹೊಳೆದದ್ದು ಪಿಂಗಾಣಿಯಂತಹ ಸಾಮಗ್ರಿ, ಅಂದರೆ ಸೆರಾಮಿಕ್‌ನ ಬಳಕೆ.

ಸೆರಾಮಿಕ್‌ನ ವಿವಿಧ ರೂಪಗಳು ನಮ್ಮ ಅಡುಗೆಕೋಣೆಯಿಂದಾ ಬಚ್ಚಲಿನ ಟೈಲ್ಸ್‌ನವರೆಗೂ ನಮ್ಮ ದಿನನಿತ್ಯದ ಬಳಕೆಯಲ್ಲಿ ಹಾಸುಹೊಕ್ಕಾಗಿದೆ ಎನ್ನಬಹುದು. ಪಿಂಗಾಣಿ ಕಪ್ಪುಬಸಿ, ಉದ್ಯಾನದಲ್ಲಿನ ಚೆಂದದ ಕಲಾಕೃತಿಗಳು, ಫಳಫಳ ಹೊಳೆಯುವ ವಾಶ್‌ಬೇಸಿನ್ – ಎಲ್ಲೆಲ್ಲೂ ಪಿಂಗಾಣಿಯೇ; ಅದರ ಸುಧಾರಿತ ರೂಪವು ಇನ್ನು ನಮ್ಮ ಮೊಬೈಲ್ ಒಳಗೂ ಬರಬಹುದು. ಇದಕ್ಕೆ ಕಾರಣ, ಇದು ದ್ರವರೂಪೀ ಎಲೆಕ್ಟ್ರೊಲೈಟ್‌ನಂತೆ ಬೆಂಕಿಗಾಹುತಿಯಾಗದು, ಸುರಕ್ಷಿತ ಎಂಬುದೇ; ಇದಕ್ಕೆ ಒಂದು ಚೂರು ಗ್ರಾಫೈಟ್ ಆನೋಡ್‌ನ ಬದಲು ಲಿಥಿಯಂ ಲೋಹದ ಆನೋಡ್ ಸೇರಿಸಿದರೆ, ಕೆಲಸ ಮುಗೀತು ಎಂದು ಯೋಚಿಸಿ, ತಯಾರಿಸಿದ್ದೂ ಆಯಿತು.

ಗ್ರಾಫೈಟ್‌ನ ಬದಲಿಗೆ ಲಿಥಿಯಂ ಲೋಹವನ್ನು ಬಳಸಿದಾಗ ಬ್ಯಾಟರಿಯ ಭಾರ ಕಡಿಮೆಯಾಗುತ್ತದೆ ಮತ್ತು ಚಾರ್ಜ್ ಹೆಚ್ಚು ಹೊತ್ತು ಉಳಿಯುತ್ತದೆ ಕೂಡ. ಆದರೆ, ಇಷ್ಟು ಅನುಕೂಲಕರ ಅಂಶಗಳಿರುವ ಘನರೂಪೀ ಬ್ಯಾಟರಿಗಳ ಬಳಕೆಯ ಆರಂಭಕ್ಕೆ ಹಸಿರುನಿಶಾನೆ ದೊರೆಯುವ ಮುನ್ನ, ಮತ್ತೊಂದು ಸಮಸ್ಯೆ ಎದುರಾಯಿತು. ಅದೇ ಲಿಥಿಯಂನ ಹೊರಚಾಚುವಿಕೆಗಳು.

ಈ ಘನಸ್ಥಿತಿಯ ಎಲೆಕ್ಟ್ರೊಲೈಟ್ ಇರುವ ಬ್ಯಾಟರಿಯನ್ನು ಚಾರ್ಜ್ ಮಾಡುವಾಗ, ಲಿಥಿಯಂನ ಹೊರಚಾಚುವಿಕೆಗಳು ಉತ್ಪತ್ತಿಯಾಗಿ, ಅದು ಪಿಂಗಾಣಿಯ ಪದರದೊಳಗೆ ಚಾಚಿಕೊಂಡು, ಆನೋಡ್ ಮತ್ತು ಕ್ಯಾಥೋಡ್‌ಗಳ ನಡುವೆ ಹಸ್ತಕ್ಷೇಪ ಮಾಡುತ್ತವೆ. ಇದರಿಂದ ಶಾರ್ಟ್‌ಸರ್ಕೀಟ್ ಆಗಿ, ಬ್ಯಾಟರಿಯು ಬಳಕೆಗೆ ಅನರ್ಹವಾಗುತ್ತದೆ. ಈ ಸಮಸ್ಯೆಯ ಮೂಲ ಕಂಡುಹಿಡಿಯಲು ಸೂಕ್ಷ್ಮದರ್ಶಕಗಳನ್ನು ಬಳಸಿ, ಈ ಲಿಥಿಯಂ ಹೊರಚಾಚುವಿಕೆಗಳನ್ನು ಕೂಲಂಕಷವಾಗಿ ಅಭ್ಯಸಿಸಿದಾಗ, ಇಲ್ಲಿ ನಡೆದಿರುವ ಮತ್ತೊಂದು ವಿದ್ಯಮಾನವು ಕಣ್ಣಿಗೆ ಬಿತ್ತು. ಅದೇನು ಗೊತ್ತೇ? ಹೀಗೆ ಲಿಥಿಯಂ ಪದರದಿಂದ ಉದ್ದುದ್ದ ಗೋಪುರಗಳಂತೆ ಹೊರಚಾಚುವಿಕೆಗಳು ಉತ್ಪತ್ತಿಯಾಗುವ ಮುನ್ನ, ಪುಟಾಣಿ ಗುಹೆಗಳಂತಹ ಕಂದರಗಳು ಉತ್ಪತ್ತಿಯಾಗಿವೆ; ಅದಕ್ಕೆ ಉತ್ತರವಾಗಿ ಈ ಹೊರಚಾಚುವಿಕೆಗಳು ಉತ್ಪಾದನೆಯಾಗಿವೆ. ಬ್ಯಾಟರಿಯು ಡಿಸ್ಚಾರ್ಜ್ ಆಗುವಾಗ ಪುಟ್ಟ ರಂಧ್ರಗಳು, ಸೂಕ್ಷ್ಮ ಕಂದರಗಳು ಉಂಟಾಗಿ, ಮತ್ತೆ ಬ್ಯಾಟರಿಯು ಚಾರ್ಜ್ ಆಗುವಾಗ ಈ ಹಿಂದೆ ನಡೆದ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಹೊರಚಾಚುವಿಕೆಗಳು ಉಂಟಾಗಿವೆ. ಹಾಗಾಗಿ, ಆ ಕಂದರಗಳು ಮತ್ತು ಹೊರಚಾಚುವಿಕೆಗಳು ಉಂಟಾಗದಂತೆ ತಡೆದರೆ ಸಮಸ್ಯೆ ಪರಿಹಾರವಾದಂತೆಯೇ.

ಇದಕ್ಕಾಗಿ ಜಗತ್ತಿನ ಅನೇಕ ತಜ್ಞರೊಂದಿಗೆ ಸಮಾಲೋಚಿಸಿ, ಆಗ ದೊರೆತ ಪರಿಹಾರಗಳ ಮೇಲೆ ಮತ್ತಷ್ಟು ಅಧ್ಯಯನ ನಡೆಸಿದಾಗ ದೊರೆತ ಉತ್ತರ ಹೀಗಿದೆ. ಲಿಥಿಯಂ ಲೋಹದ ಪದರ ಮತ್ತು ಸೆರಾಮಿಕ್‌ನ ಪದರದ ನಡುವೆ, ಶಕ್ತಲೋಹದ ಅತ್ಯಂತ ತೆಳುವಾದ ತಡೆಗೋಡೆಯನ್ನು ನಿರ್ಮಿಸಬೇಕು; ಆಗ, ಸೆರಾಮಿಕ್‌ನ ಪದರವನ್ನು ಲಿಥಿಯಂನ ಹೊರಚಾಚುವಿಕೆಗಳಿಂದ, ಕಂದರಗಳಿಂದ ಕಾಪಾಡಿ, ಬ್ಯಾಟರಿಯ ಸ್ಥಿರತೆ ಮತ್ತು ಸಾಮರ್ಥ್ಯ ಕಾಪಾಡಬಹುದು. ಇದನ್ನು ಮತ್ತಷ್ಟು ಆಳವಾದ ಅಧ್ಯಯನಕ್ಕೆ ಒಳಪಡಿಸಿದಾಗ, ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಕಂಡುಕೊಂಡಿದ್ದೆಂದರೆ, ಲಿಥಿಯಂನೊಂದಿಗೆ ಸುಲಭವಾಗಿ ಮಿಶ್ರಲೋಹ ಅಥವಾ 'ತವರ'ವಾಗದ ಟಂಗ್‌ಸ್ಟನ್ ಅಥವಾ ಮಾಲಿಬ್ಡಿನಮ್‌ನಂತಹ ಲೋಹಗಳನ್ನು ಬಳಸಿದರೆ, ಮುಂದೆ ಉಂಟಾಗಬಹುದಾದ ಇತರ ಸಮಸ್ಯೆಗಳನ್ನೂ ತಡೆಯಬಹುದು.

ಇಂತಹ ಸಂಶೋಧನೆಗಳ ಹಿಂದಿರುವ ಸಮರ್ಥ ವಿಜ್ಞಾನಿಗಳು ಹಾಗೂ ಅವರ ಎಲ್ಲೆಯಿಲ್ಲದ ಪರಿಶ್ರಮದ ಫಲವನ್ನು ಅನುಭವಿಸುವ ಪುಣ್ಯ ನಮ್ಮಂತಹ ಜನಸಾಮಾನ್ಯರದ್ದು.

ಸ್ಯಾಮ್‌ಸಂಗ್ ಗ್ಯಾಲಕ್ಸಿ Z ಫೋಲ್ಡ್-4

ಅವಿನಾಶ್ ಬಿ.

ಪರದೆ ಅಥವಾ ಸ್ಕ್ರೀನ್ ಮಡಚಬಹುದೇ? ಹೇಗೆ ಕೆಲಸ ಮಾಡುತ್ತದೆ? ಇಂಥ ಆತಂಕಗಳು ದೂರವಾಗಿ ಕೆಲವು ಸಮಯವೇ ಕಳೆದಿದೆ. ಇದೀಗ ಸ್ಯಾಮ್‌ಸಂಗ್ ಕಂಪನಿಯು ತನ್ನ ಗ್ಯಾಲಕ್ಸಿ ಝಡ್ ಫೋಲ್ಡ್ ಸರಣಿಯಲ್ಲಿ 4ನೇ ಆವೃತ್ತಿಯನ್ನು ಹೊರತಂದಿದ್ದು, ಬಿಡುಗಡೆಗೆ ಮುನ್ನ ಪ್ರಜಾವಾಣಿಗೆ ರಿವ್ಯೂಗೆ ದೊರೆತ 'ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫೋಲ್ಡ್ 4' ಮಾಹಿತಿ ಇಲ್ಲಿದೆ.

ಅತ್ಯುತ್ತಮವಾದ ಬಿಲ್ಡ್ ಗುಣಮಟ್ಟ, ಅಗಲವಾದ ಪರದೆ, ಮಡಚಿದರೆ ಜೇಬಿನೊಳಗೆ ಕೂರುವ ಈ ಅದ್ಭುತ ಫೋನ್, ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ತೂಕವನ್ನೂ ಹೊಂದಿದೆ.

ವಿನ್ಯಾಸ

ಮಡಚಿದ್ದಾಗ ಸಾಮಾನ್ಯ, ಆದರೆ ಶಕ್ತಿಶಾಲಿ ಫೋನ್‌ನಂತೆ ಗೋಚರಿಸುತ್ತದೆ, ಬಿಡಿಸಿದರೆ ವಿಶಾಲ ಸ್ಕ್ರೀನ್. ಶಕ್ತಿಶಾಲಿ ಅಲ್ಯೂಮಿನಿಯಂ ಅಂಚುಗಳು ಇದರ ಅಂದವನ್ನು ಹೆಚ್ಚಿಸಿದೆ. ವಿಮರ್ಶೆಗೆ ದೊರೆತದ್ದು 12ಜಿಬಿ RAM ಹಾಗೂ 256ಜಿಬಿ ಸ್ಟೋರೇಜ್ ಸಾಮರ್ಥ್ಯದ ಫೋನ್. ಹಿಂಭಾಗದಲ್ಲಿ (ಮಡಚಿದಾಗ) ಮ್ಯಾಟ್ ಫಿನಿಶಿಂಗ್ ಇರುವ ಗಾಜಿನ ಪ್ಯಾನೆಲ್‌ನಲ್ಲಿ ತ್ರಿವಳಿ ಕ್ಯಾಮೆರಾಗಳು ಮತ್ತು ಫ್ಲ್ಯಾಶ್ ಇದೆ. ಮಡಚಿರುವಾಗ ಮುಂಭಾಗದಲ್ಲಿ ಮತ್ತು ತೆರೆದಾಗ ಕೇಂದ್ರಭಾಗದಲ್ಲಿ ಗೊರಿಲ್ಲಾ ಗ್ಲಾಸ್ ವಿಕ್ಟಸ್ ಪ್ಲಸ್ - ಮಾದರಿಯ ಗಾಜಿನ ಪ್ಯಾನೆಲ್‌ಗಳಿದ್ದು, ಪ್ರತ್ಯೇಕವಾಗಿ ಎರಡು ಸೆಲ್ಫೀ ಕ್ಯಾಮೆರಾಗಳಿವೆ. ಐಪಿಎಕ್ಸ್8 ಜಲನಿರೋಧಕ ರೇಟಿಂಗ್ ಇರುವುದರಿಂದ, ಮಳೆಗಾಲದಲ್ಲಿ ನೀರಿನ ಹನಿಗಳಿಂದ ರಕ್ಷಣೆಯಿದೆ. ಮಡಚಲು ಅಥವಾ ತೆರೆಯಲು ಯಾವುದೇ ಸಮಸ್ಯೆಯಾಗದ ರೀತಿಯಲ್ಲಿ ಹಿಂಜ್ (ಬಿಜಾಗರಿ) ರೂಪುಗೊಂಡಿದೆ.

ಡಿಸ್‌ಪ್ಲೇಗಳು

ಮಡಚಿದಾಗ 6.2 ಇಂಚು ಅಮೋಲೆಡ್ 120Hz ಡಿಸ್‌ಪ್ಲೇ, ಅತ್ಯುತ್ತಮವಾದ ವೀಕ್ಷಣೆಯನ್ನು ಸಾಧ್ಯವಾಗಿಸುತ್ತದೆ. ತೆರೆದಾಗ 7.6 ಇಂಚಿನ ಸ್ಕ್ರೀನ್. ಎರಡೂ ಡಿಸ್‌ಪ್ಲೇಗಳಲ್ಲಿ ಕಂಡೂ ಕಾಣದಂತಿರುವ ಸೆಲ್ಫೀ ಕ್ಯಾಮೆರಾಗಳಿವೆ. ವರ್ಣವೈವಿಧ್ಯ, ಬೆಳಕಿನ ಪ್ರಖರತೆ ಎಲ್ಲವೂ ಅಚ್ಚುಕಟ್ಟಾಗಿದ್ದು, ಚಿತ್ರಗಳು, ವಿಡಿಯೊಗಳ ವೀಕ್ಷಣೆ ಕಣ್ಣಿಗೆ ಹಬ್ಬ.

ಕ್ಯಾಮೆರಾಗಳು

ತೆರೆದಾಗ ವಿಶಾಲವಾದ ಡಿಸ್‌ಪ್ಲೇ ಒಳಗಿರುವ ಕ್ಯಾಮೆರಾ 4 ಮೆಗಾಪಿಕ್ಸೆಲ್ ಸಾಮರ್ಥ್ಯದ್ದಾಗಿದ್ದರೂ, ಸೆಲ್ಫೀ ಚಿತ್ರಗಳು ಸ್ಫುಟವಾಗಿ ಗೋಚರಿಸುತ್ತವೆ. ಮುಚ್ಚಿರುವಾಗಿನ ಸೆಲ್ಫೀ ಕ್ಯಾಮೆರಾದ ಲೆನ್ಸ್ (ಕವರ್ ಕ್ಯಾಮೆರಾ) ಸಾಮರ್ಥ್ಯ 10 ಮೆಗಾಪಿಕ್ಸೆಲ್. ಹಿಂಭಾಗದಲ್ಲಿ 50 ಮೆಗಾಪಿಕ್ಸೆಲ್ ಸಾಮರ್ಥ್ಯದ ವೈಡ್ ಆ್ಯಂಗಲ್ ಪ್ರಧಾನ ಸೆನ್ಸರ್, 12MP ಅಲ್ಟ್ರಾ-ವೈಡ್ ಹಾಗೂ 10 ಮೆಗಾಪಿಕ್ಸೆಲ್ ಸಾಮರ್ಥ್ಯದ ಟೆಲಿಫೋಟೋ ಸೆನ್ಸರ್ ಇದೆ. 3x ಆಪ್ಟಿಕಲ್ ಝೂಮ್ ಸಾಮರ್ಥ್ಯವಿದ್ದು, ಆಪ್ಟಿಕಲ್ ಇಮೇಜ್ ಸ್ಟೆಬಿಲೈಸೇಶನ್ (ಒಐಎಸ್) ಹಾಗೂ ವಿಡಿಯೊ ಸ್ಟೆಬಿಲೈಸೇಶನ್ ತಂತ್ರಜ್ಞಾನ ಉತ್ತಮವಾಗಿ ಕೆಲಸ ಮಾಡುತ್ತದೆ. ರಾತ್ರಿ ಫೋಟೋಗ್ರಫಿ ಇಷ್ಟಪಡುವವರಿಗೆ ಅತ್ಯಂತ ಖುಷಿ ತರಬಲ್ಲ ಸಾಧನವಿದು.ಸ್ಯಾಮ್‌ಸಂಗ್‌ನ ಸ್ಪೇಸ್ ಝೂಮ್ ತಂತ್ರಜ್ಞಾನದೊಂದಿಗೆ 3x ಆಪ್ಟಿಕಲ್ ಝೂಮ್, ಜೊತೆಗೆ 20x ನಷ್ಟು ಡಿಜಿಟಲ್ ಝೂಮ್ ಮಾಡಬಹುದಾಗಿದ್ದು, ವೃತ್ತಿಪರ ಛಾಯಾಗ್ರಾಹಕರಿಗೆ ಸೂಕ್ತ. ಡಿಜಿಟಲ್ ಝೂಮ್‌ನಲ್ಲಿ ದೂರದ ಚಿತ್ರಗಳ ಗುಣಮಟ್ಟ ಸಹಜವಾಗಿ ಕಡಿಮೆಯಿರುತ್ತದೆ.

ಸ್ಯಾಮ್‌ಸಂಗ್ ಗ್ಯಾಲಕ್ಸಿ ಝಡ್ ಫೋಲ್ಡ್ 4 - ಮಡಚುವ ಫೋನ್

ಕಾರ್ಯಾಚರಣೆ

ಸ್ಯಾಮ್‌ಸಂಗ್ ಗ್ಯಾಲಕ್ಸಿ ಫೋಲ್ಡ್‌ನಲ್ಲಿ ಅತ್ಯಾಧುನಿಕ ಆಂಡ್ರಾಯ್ಡ್ 12L ಆಧಾರಿತ ಒನ್ ಯುಐ 4.1.1 ಕಾರ್ಯಾಚರಣಾ ವ್ಯವಸ್ಥೆಯಿದೆ. ಕಂಪ್ಯೂಟರಿನಂತೆಯೇ ಟಾಸ್ಕ್ ಬಾರ್ (ಸ್ಕ್ರೀನ್ ಕೆಳಭಾಗದಲ್ಲಿ ಇತ್ತೀಚೆಗೆ ಬಳಸಿದ ಆ್ಯಪ್‌ಗಳ ಸಾಲು, ಕ್ಷಿಪ್ರವಾಗಿ ಪುನಃ ಅಲ್ಲಿಗೆ ಹೋಗಲು ಅನುಕೂಲ) ಕೂಡ ಇರುವುದರಿಂದ, ಬಹುತೇಕ ಡೆಸ್ಕ್‌ಟಾಪ್‌ನಲ್ಲಿ ಕೆಲಸ ಮಾಡಿದಂತಾಗುತ್ತದೆ. 120Hz ರೀಫ್ರೆಶ್ ರೇಟ್ ಇರುವುದರಿಂದ, ದೊಡ್ಡ ಪರದೆಯಲ್ಲಿ ಸುಲಲಿತವಾದ ಬ್ರೌಸಿಂಗ್ ಅನುಭೂತಿ ಅನುಭವಕ್ಕೆ ಬರುತ್ತದೆ.

ಫೋನನ್ನು 90 ಡಿಗ್ರಿಯಷ್ಟು ತೆರೆದು ಅಡ್ಡವಾಗಿರಿಸಿದರೆ (ಹಾರಿಜಾಂಟಲ್), ಈ ಫ್ಲೆಕ್ಸ್ ಮೋಡ್‌ನಲ್ಲಿ ಸ್ಕ್ರೀನ್‌ನ ಕೆಳಾರ್ಧಭಾಗವು ಟ್ರ್ಯಾಕ್ ಪ್ಯಾಡ್ ರೂಪದಲ್ಲಿ ಕೆಲಸ ಮಾಡುತ್ತದೆ. ಕ್ವಾಲ್‌ಕಂ ಸ್ನ್ಯಾಪ್‌ಡ್ರ್ಯಾಗನ್ 8 + 1ನೇ ಪೀಳಿಗೆಯ ಚಿಪ್‌ಸೆಟ್ ವೇಗಕ್ಕೆ ಆಧಾರವಾಗಿದೆ. ಮೈಕ್ರೋಎಸ್‌ಡಿ ಕಾರ್ಡ್ ಸ್ಲಾಟ್ ಇಲ್ಲ ಎಂಬುದನ್ನು ಗಮನಿಸಬೇಕು. ಪವರ್ ಬಟನ್‌ನಲ್ಲಿ ಫಿಂಗರ್‌ಪ್ರಿಂಟ್ ಸ್ಕ್ಯಾನರ್ ಇದ್ದು, ಮುಖ ಗುರುತಿಸುವ ತಂತ್ರಜ್ಞಾನವೂ ವೇಗವಾಗಿ ಕೆಲಸ ಮಾಡುತ್ತದೆ.

ಬ್ಯಾಟರಿ

4,400 mAh ಸಾಮರ್ಥ್ಯದ ಬ್ಯಾಟರಿ, ಸಾಮಾನ್ಯ ಬಳಕೆಯಲ್ಲಿ ಎರಡು ದಿನಗಳಿಗೆ ಯಾವುದೇ ಸಮಸ್ಯೆಯಾಗದು. ವೈಫೈ ಬಳಸಿದರೆ ಹೇಗೂ ಇನ್ನೂ ಒಂದು ದಿನ ಹೆಚ್ಚು ಚಾರ್ಜ್ ಇರುತ್ತದೆ. ದೊಡ್ಡ ಸ್ಕ್ರೀನ್ ಇರುವುದರಿಂದ, ಹೆಚ್ಚಿನ ಬ್ಯಾಟರಿ ಸಾಮರ್ಥ್ಯ ಇರಿಸಬಹುದಿತ್ತು ಅನಿಸುತ್ತದೆ. ಆದರೆ, ಇದರ ಪ್ರಸ್ತುತ ಸಾಮರ್ಥ್ಯ ಗಮನಿಸಿದರೆ, ನಾನು ಬಳಸಿದ ಯಾವುದೇ ಸ್ಯಾಮ್‌ಸಂಗ್ ಸಾಧನಗಳಿಗಿಂತಲೂ ಹೆಚ್ಚು ದೀರ್ಘ ಕಾಲ ಬ್ಯಾಟರಿ ಚಾರ್ಜ್ ಬಳಕೆಗೆ ಲಭ್ಯವಾಗಿದೆ. ಇದಕ್ಕೆ ಪ್ರಧಾನ ಕಾರಣವೆಂದರೆ ಇದರ ಚಿಪ್‌ಸೆಟ್ ಹಾಗೂ ತತ್ಸಂಬಂಧಿತ ಹಾರ್ಡ್‌ವೇರ್-ಸಾಫ್ಟ್‌ವೇರ್ ಸಂಯೋಗ.

ಒಟ್ಟಾರೆ ಹೇಗಿದೆ?

ವೈವಿಧ್ಯಮಯವಾದ ಟಾಸ್ಕ್‌ಗಳಿಗೆ, ದೊಡ್ಡ ಪರದೆಯಲ್ಲಿ ಚಿತ್ರ, ವಿಡಿಯೊಗಳನ್ನು ಸೆರೆಹಿಡಿಯಲು, ವೀಕ್ಷಣೆಯ ಆನಂದ ಪಡೆಯಲು ಶಕ್ತಿಶಾಲಿಯಾದ ಐಷಾರಾಮಿ ಫೋನ್ ಇದು. ನಿಜವಾದ ಫ್ಲ್ಯಾಗ್‌ಶಿಪ್ ಫೋನ್ ಎನ್ನಬಹುದು. ಇದರ ಗರಿಷ್ಠ ಮಾರಾಟ ಬೆಲೆ ₹1,54,999 ರಿಂದ ಆರಂಭವಾಗುತ್ತದೆ. 512GB ಗೆ ₹1,64,999 ಹಾಗೂ 1TB ಸಾಮರ್ಥ್ಯದ ಫೋನ್ ಬೆಲೆ ₹1,84,999 (ಸಾಕಷ್ಟು ಕೊಡುಗೆಗಳೂ ಇವೆ). ಇದರ ನಿಜವಾದ ಸಾಮರ್ಥ್ಯ ಕಾಣಸಿಗುವುದು ನಮಗೆ 5ಜಿ ಇಂಟರ್ನೆಟ್ ತಂತ್ರಜ್ಞಾನ ಲಭ್ಯವಾದಾಗ.

‘ಇಂಧನ ಇಲಾಖೆ ನಷ್ಟಕ್ಕೆ ತಂದ ಸಿದ್ದರಾಮಯ್ಯ’

2013–2019ರ ಅವಧಿಯಲ್ಲಿ ₹8,479 ಕೋಟಿ ಹೊರೆ: ಸಚಿವ ಸುನಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘2013 ರಿಂದ 2019 ರ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಸಮ್ಮಿಶ್ರ ಸರ್ಕಾರಗಳು ಇಂಧನ ಇಲಾಖೆ ಮೇಲೆ ₹8,479 ಕೋಟಿ ಹೊರೆ ಹೊರಿಸಿ ಎಸ್ಕಾಂಗಳನ್ನು ನಷ್ಟದ ಸುಳಿಗೆ ಸಿಲುಕಿಸಿದ್ದವು. ಇದರ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ’ ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಹೇಳಿದ್ದಾರೆ.

‘ತಾವೊಬ್ಬ ಸಮರ್ಥ ವಿತ್ತ ಸಚಿವ ಎಂದು ಸಿದ್ದರಾಮಯ್ಯ ಹೇಳಿಕೊಳ್ಳುತ್ತಾರೆ. ಆದರೆ, ಅವರು ಮುಖ್ಯಮಂತ್ರಿಯಾಗಿ ಎಸ್ಕಾಂಗಳನ್ನು ನಷ್ಟಕ್ಕೆ ತಳ್ಳಿ, ನಷ್ಟ ತುಂಬಿಸಿಕೊಳ್ಳಲು ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಿ ಹಣ ವಸೂಲಿ ಮಾಡುವ ಆಲೋಚನೆ ಹೊಂದಿದ್ದರು. ಮತ್ತೆ ಅವರೇ ಮುಖ್ಯಮಂತ್ರಿಯಾದರೆ ಮೀಟರ್ ಅಳವಡಿಸುವುದು ಖಚಿತ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಇವೆರಡೂ ಸರ್ಕಾರಗಳ ಅವಧಿಯಲ್ಲಿ ರೈತರ ಪಂಪ್‌ಸೆಟ್ ಸಬ್ಸಿಡಿ ಹಣ ₹3,479 ಕೋಟಿ ಮತ್ತು ವಿವಿಧ ಇಲಾಖೆಗಳಿಂದ ಇಂಧನ ಇಲಾಖೆಗೆ ಪಾವತಿಸಬೇಕಿದ್ದ ₹5,000 ಕೋಟಿಯನ್ನು ಪಾವತಿಸಲಿಲ್ಲ. ಅದಕ್ಕಾಗಿ ಪಿಕೆಸಿಎಲ್‌ನಿಂದ ಸಾಲ ಮಾಡಿದರು. ಹೀಗಾಗಿ ಇಂಧನ ಇಲಾಖೆ ನಷ್ಟಕ್ಕೆ ಸಿಲುಕಿತು. ಬಿಜೆಪಿ ಸರ್ಕಾರ ಬಂದ ಮೇಲೆ ಹಣಕಾಸು ಇಲಾಖೆಯಿಂದ ₹8,064 ಕೋಟಿ ಬಿಡುಗಡೆ ಮಾಡಿಸಿ ಇಂಧನ ಇಲಾಖೆಯನ್ನು ನಷ್ಟದ ಸುಳಿಯಿಂದ ಪಾರು ಮಾಡಿತು’ ಎಂದರು.

‘ಬಿಜೆಪಿ ಸರ್ಕಾರದ ಮೇಲೆ ಸಿದ್ದರಾಮಯ್ಯ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ. ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವ ಚಿಂತನೆ ಸರ್ಕಾರಕ್ಕೆ ಇಲ್ಲ. ರೈತರ ಮೇಲೆ ಹೊರೆ ಹಾಕುವುದಿಲ್ಲ. ಸಬ್ಸಿಡಿ ಮೊತ್ತ ಹೆಚ್ಚಾದರೂ ಅದನ್ನು ಸರ್ಕಾರವೇ ಭರಿಸುತ್ತದೆ. ಚುನಾವಣೆ ಬರುತ್ತಿರುವುದರಿಂದ ವ್ಯವಸ್ಥಿತವಾಗಿ ವದಂತಿಗಳನ್ನು ಹಬ್ಬಿಸಿ ರೈತರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ’ ಎಂದೂ ಕಿಡಿಕಾರಿದರು.

‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೆಚ್ಚುವರಿಯಾಗಿ 6,37,883 ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಿದೆ. ಒಟ್ಟು 40 ಲಕ್ಷ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಇದಕ್ಕೆ ಸರ್ಕಾರ ವರ್ಷಕ್ಕೆ ₹14,000 ಕೋಟಿ ಸಹಾಯಧನ ನೀಡುತ್ತಿದೆ’ ಎಂದು ವಿವರಿಸಿದರು.

ಡಿಕೆಶಿ ಸವಾಲು ಸ್ವೀಕಾರ: ‘ವಿದ್ಯುತ್ ಖರೀದಿ ಒಪ್ಪಂದಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಕಿರುವ ಸವಾಲನ್ನು ಸ್ವೀಕರಿಸಿದ್ದೇನೆ, ಇದರ ಬಗ್ಗೆ ತನಿಖೆ ನಡೆಸಲಾಗುವುದು. ಈ ಒಪ್ಪಂದಗಳಿಂದ ಸರ್ಕಾರದ ಬೊಕ್ಕಸಕ್ಕೆ ಆಗುತ್ತಿರುವ ನಷ್ಟವನ್ನು ತಪ್ಪಿಸಲಾಗುವುದು’ ಎಂದು ಸುನಿಲ್‌ಕುಮಾರ್ ಹೇಳಿದರು.

‘ಪ್ರತಿ ಯುನಿಟ್‌ಗೆ ₹5 ರಿಂದ ₹11 ರಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದು ಅವಾಸ್ತವಿಕ ಮೊತ್ತ. ಪ್ರತಿ ಯುನಿಟ್‌ಗೆ ₹2.80 ರಿಂದ ₹3 ಕ್ಕೆ ಒಪ್ಪಂದ ಮಾಡಿಕೊಂಡಿದ್ದರೆ ಸೂಕ್ತ ದರವಾಗಿರುತ್ತಿತ್ತು. ಬೊಕ್ಕಸಕ್ಕೆ ಆಗುತ್ತಿದ್ದ ಹಾನಿಯನ್ನು ತಪ್ಪಿಸಿದಂತಾಗುತ್ತಿತ್ತು. ಈ ಒಪ್ಪಂದಗಳಿಂದ ವರ್ಷಕ್ಕೆ ₹2,000 ಕೋಟಿ ನಷ್ಟವಾಗುತ್ತಿದೆ’ ಎಂದರು.

₹5,875 ಕೋಟಿ ಆದಾಯ

ರಾಜ್ಯದಲ್ಲಿ ಸೌರ ವಿದ್ಯುತ್ ಮಾರಾಟದಿಂದ ಇದೇ ಮೊದಲ ಬಾರಿಗೆ ಒಂದು ವರ್ಷದಲ್ಲಿ ₹5,875 ಕೋಟಿ ಆದಾಯ ಬಂದಿದೆ ಎಂದು ಸಚಿವ ಸುನಿಲ್ ಕುಮಾರ್ ತಿಳಿಸಿದರು.

ಈ ಅವಧಿಯಲ್ಲಿ ಒಟ್ಟು 13,118 ದಶಲಕ್ಷ ಯುನಿಟ್ ವಿದ್ಯುತ್ ಮಾರಾಟ ಮಾಡಲಾಗಿದೆ. ಈ ಹಿಂದೆ ಆದಾಯವೇ ಬರುತ್ತಿರಲಿಲ್ಲ ಎಂದು ಅವರು ವಿವರಿಸಿದರು.

ಇನ್ಫೊಸಿಸ್ ಜತೆ ಒಪ್ಪಂದ: 12,300 ಕೋರ್ಸ್‌ಗಳು ಉಚಿತ

ಬೆಂಗಳೂರು: ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯು ಇನ್ಫೊಸಿಸ್ ಜತೆ ಮಂಗಳವಾರ ಒಡಂಬಡಿಕೆ ಮಾಡಿಕೊಂಡಿದ್ದು, 6ನೇ ತರಗತಿಯಿಂದ ಸ್ನಾತಕೋತ್ತರದವರೆಗಿನ ವಿದ್ಯಾರ್ಥಿಗಳಿಗೆ 12,300 ಕೋರ್ಸ್‌ಗಳು ಆನ್‌ಲೈನ್‌ನಲ್ಲಿ ಉಚಿತವಾಗಿ ಲಭ್ಯವಾಗಲಿವೆ.

ಈ ಕೋರ್ಸ್‌ಗಳು ಬಾಲ್ಯದಿಂದಲೇ ವಿದ್ಯಾರ್ಥಿಗಳನ್ನು ಜೀವನೋಪಾಯ ಹಾಗೂ ಬದುಕಿಗೆ ಸಜ್ಜುಗೊಳಿಸಲು ಸಹಕಾರಿಯಾಗಿವೆ. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ರಾಜ್ಯ ಸರ್ಕಾರದ ಇತರೆ ವಿಶ್ವವಿದ್ಯಾಲಯಗಳ ಮುಖ್ಯಸ್ಥರು, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಆಧುನಿಕ ತಂತ್ರಜ್ಞಾನದ ನೆರವಿನಿಂದ ಇನ್ಫೊಸಿಸ್ ಸಿದ್ಧಪಡಿಸಿದ ಸ್ಪ್ರಿಂಗ್‌ಬೋರ್ಡ್ (https://infyspringboard.onwingspan.com) ಮೂಲಕ ಕೋರ್ಸ್‌ಗಳನ್ನು ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಇನ್ಫೊಸಿಸ್ ಸಂಸ್ಥೆಯ ಶಿಕ್ಷಣ ಮತ್ತು ತರಬೇತಿ ವಿಭಾಗದ ಮುಖ್ಯಸ್ಥ ತಿರುಮಲ ಆರೋಹಿ, 10ರಿಂದ 22 ವರ್ಷದ ವಿದ್ಯಾರ್ಥಿಗಳತ್ತ ಗಮನ ಕೇಂದ್ರೀಕರಿಸಿದ್ದೇವೆ. ಇದು ಭಾರತೀಯ ಭಾಷೆಗಳಲ್ಲೂ ಲಭ್ಯವಿದೆ. 23 ಲಕ್ಷ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಎಂದರು.

ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕ ಗೋಪಾಲಕೃಷ್ಣ ಜೋಶಿ, ಉಪಾಧ್ಯಕ್ಷ ಪ್ರೊ.ಬಿ.ತಿಮ್ಮೇಗೌಡ, ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಮಹೇಶ್, ಇನ್ಫೊಸಿಸ್ ಕಾರ್ಪೊರೇಟ್ ವ್ಯವಹಾರಗಳ ಮುಖ್ಯಸ್ಥ ಸಂತೋಷ ಅನಂತಪುರ, ಸ್ಪ್ರಿಂಗ್‌ಬೋರ್ಡ್ ವಿಭಾಗದ ಮುಖ್ಯಸ್ಥ ವಿಕ್ಟರ್ ಸುಂದರ ರಾಜ್ ಉಪಸ್ಥಿತರಿದ್ದರು.

ಭಯ ಹುಟ್ಟಿಸುವ ಸಂಚು ರೂಪಿಸಿದ್ದ ಪಿಎಫ್‌ಐ: ಎನ್‌ಐಎ

ಪ್ರಜಾವಾಣಿ ವಾರ್ತೆ

ಸುಳ್ಯ/ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ಯುವ ಮೋರ್ಚಾದ ದಕ್ಷಿಣ ಕನ್ನಡ ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ತಂಡ ದಕ್ಷಿಣ ಕನ್ನಡ, ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಒಟ್ಟು 33 ಕಡೆ ಮಂಗಳವಾರ ದಿಢೀರ್ ದಾಳಿ ನಡೆಸಿದೆ.

‘ಪ್ರಕರಣದಲ್ಲಿ ಬಂಧನಕ್ಕೊಳಗಾದ ಆರೋಪಿಗಳು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಸಕ್ರಿಯ ಕಾರ್ಯಕರ್ತರಾಗಿದ್ದರು. ಸಮಾಜದ ಒಂದು ವರ್ಗದವರಲ್ಲಿ ಭಯ ಉಂಟು ಮಾಡುವ ಉದ್ದೇಶದಿಂದಲೇ ಯೋಜನೆ ರೂಪಿಸಿ ಪ್ರವೀಣ್ ನೆಟ್ಟಾರು ಅವರ ಈ ಹತ್ಯೆ ನಡೆಸಿದ್ದಾರೆ. ಈ ಹತ್ಯೆ ಭಾರಿ ಸಂಚಿನ ಭಾಗ’ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಆರೋಪಿಗಳ ಮನೆಯ ಪರಿಸರದಲ್ಲಿ ಹಾಗೂ ಶಂಕಿತರ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಕೆಲವೊಂದು ಡಿಜಿಟಲ್ ಸಾಧನಗಳು, ಸುಧಾರಿತ ಶಸ್ತ್ರಾಸ್ತ್ರಗಳು, ಹಳೆಯ ಶಸ್ತ್ರಾಸ್ತ್ರಗಳು, ನಗದು, ಆರೋಪಗಳಿಗೆ ಪೂರಕವಾದ ದಾಖಲೆಗಳು, ಕರಪತ್ರಗಳು ಹಾಗೂ ಕೆಲವೊಂದು ಬರಹಗಳಿದ್ದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪ್ರಕರಣ ತನಿಖೆ ಮುಂದುವರಿಯಲಿದೆ’ ಎಂದು ಎನ್‌ಐಎ ತಿಳಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ/ಕರಾಸಾ/ಕೆಂಬನಿ/ವಾ–1/689/2022–23 ದಿನಾಂಕ : 06.09.2022
ವಾಣಿಜ್ಯ ಮಳಿಗೆ ಇ–ಟೆಂಡರ್/ ಸಂಧಾನ ಪ್ರಕಟಣೆ ಸಂಖ್ಯೆ–03// 2022–23
ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು 3 ರಲ್ಲಿ ಖಾಲಿ ಇರುವ/ ಖಾಲಿಯಾಗಲಿರುವ ಸಾಮಾನ್ಯ ಮಳಿಗೆ ಸಂಖ್ಯೆ–59 (ಟರ್ಮಿನಲ್–1), ದ್ವಿಚಕ್ರ ವಾಹನ ನಿಲ್ದಾಣ (ಪೀಣ್ಯ ಬಸ್ ನಿಲ್ದಾಣ), ದೂರವಾಣಿ ಬೂತು (ಟರ್ಮಿನಲ್ –2) ಮಳಿಗೆ ಸಂಖ್ಯೆ–02 (ಟರ್ಮಿನಲ್–3) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಸಾಮಾನ್ಯ ಮಳಿಗೆ ಸಂಖ್ಯೆ–19, 15 ಮತ್ತು ಕಛೇರಿ/ಬ್ಯಾಂಕ್/ ವಾಣಿಜ್ಯ ಚಟುವಟಿಕೆಗಳ ಸ್ಥಳಾವಕಾಶಕ್ಕೆ ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡಲು ಹಾಗೂ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 25 (ಟರ್ಮಿನಲ್–01) , 113 (ಟರ್ಮಿನಲ್ –02) ಹಾಗೂ ಮೈಸೂರು ರಸ್ತೆ ಬಸ್ ನಿಲ್ದಾಣದ ಸಾಮಾನ್ಯ ಮಳಿಗೆ ಸಂಖ್ಯೆ 14 ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ಮತ್ತು ಕನಿಷ್ಠ ಮಾಸಿಕ ಪರವಾನಗಿ ಶುಲ್ಕ ನಿಗಧಿಪಡಿಸದೇ ಟರ್ಮಿನಲ್–1 ರಲ್ಲಿನ ಮಳಿಗೆ ಸಂಖ್ಯೆ 44, 46, ಎ.ಟಿ.ಎಂ ಕೌಂಟರ್, ಟರ್ಮಿನಲ್ 2 ರಲ್ಲಿನ 115, ದ್ವಿಚಕ್ರ ವಾಹನ ನಿಲ್ದಾಣ, ಟರ್ಮಿನಲ್–3 ರಲ್ಲಿನ ದ್ವಿಚಕ್ರ ವಾಹನ ನಿಲ್ದಾಣ ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ 06, 30, 31, ಎಟಿಎಂ ಕೌಂಟರ್ ಮತ್ತು ತೆರೆದ ಸ್ಥಳ–02 ಕ್ಕೆ ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿ/ವಿವರಗಳಿಗಾಗಿ https:/www.eproc.karnataka.gov.in ನಿಂದ ಹಾಗೂ ನಿಗಮದ ವೆಬ್ ಸೈಟ್ ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು 560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 7760990557, 7760960554 ಮತ್ತು ಹೆಚ್.ಪಿ ಸಹಾಯವಾಣಿ ಸಂಖ್ಯೆ 03 +91-0846010000/+91-8068948777.
ಸಹಿ/–
DIPR/CP/2104/Zenkar/2022-23 ವಿಭಾಗ ನಿಯಂತ್ರಣಾಧಿಕಾರಿ

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
2ನೇ ಮಹಡಿ, ಟಿಟಿಎಂಸಿ, ‘ಎ’ ಬ್ಲಾಕ್, ಬಿಎಂಟಿಸಿ ಕಾಂಪ್ಲೆಕ್ಸ್, ಶಾಂತಿನಗರ, ಕೆ.ಹೆಚ್. ರಸ್ತೆ, ಬೆಂಗಳೂರು–560027. ಫ್ಯಾಕ್ಸ್: 080–22232652, 22225645
ಸಂಖ್ಯೆ: ಕೆಎಸ್‌ಇಡಿಸಿ/ಐಟಿಎಸ್/ಇಒಐ–ಪಿಕ್ಯೂಬಿಎ/002/2022–23 ದಿನಾಂಕ: 06–09–2022
ಐಟಿ ಸೇವೆಗಳನ್ನು / ಸರಬರಾಜುಗಳನ್ನು ಪೂರೈಸಲು ವಹಿವಾಟು ಸಹವರ್ತಿಗಳ (ಬ್ಯುಸಿನೆಸ್ ಅಸೋಸಿಯೇಟ್ಸ್) ಪೂರ್ವಭಾವಿ ಅರ್ಹತೆಗಾಗಿ – ಪ್ರಕಟಣೆ – ಏಕ ಲಕೋಟೆ ಪದ್ಧತಿ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಐಟಿ ಸೇವೆಗಳನ್ನು / ಸರಬರಾಜುಗಳನ್ನು ಪೂರೈಸಲು ವಹಿವಾಟು ಸಹವರ್ತಿಗಳ (ಬ್ಯುಸಿನೆಸ್ ಅಸೋಸಿಯೇಟ್ಸ್) ಪೂರ್ವಭಾವಿ ಅರ್ಹತೆಗಾಗಿ **“ಮಾಲೀಕತ್ವ, ಪಾಲುದಾರಿಕೆ, ಸಾರ್ವಜನಿಕ/ಖಾಸಗಿ ನಿಯಮಿತ ಕಂಪನಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಆಹ್ವಾನಿಸಿದೆ”**. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಸಲ್ಲಿಸಲು ಕೊನೆಯ ದಿನಾಂಕ: **15.09.2022ರ ಮಧ್ಯಾಹ್ನ 2.00 ಗಂಟೆಯವರೆಗೆ.** ಹೆಚ್ಚಿನ ವಿವರಗಳನ್ನು **www.eproc.karnataka.gov.in** ಗೆ ಲಾಗಿನ್ ಆಗಿ ಅಥವಾ ಸಹಾಯವಾಣಿ ಸಂ: 080–25501216/25501227ನಲ್ಲಿ ಅಥವಾ ಶ್ರೀ ಮಾರುತಿ.ಎಂ, ಸಹಾಯಕ ವ್ಯವಸ್ಥಾಪಕರು–ತಾಂತ್ರಿಕ, ದೂ: 080–22225645 ಮತ್ತು ಮೊ: 9731560711ಗೆ ಸಂಪರ್ಕಿಸಿ ಪಡೆಯಬಹುದು.
ಸಹಿ/–
ನಿರ್ದೇಶಕರು (ಆಪರೇಷನ್ಸ್)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ
ನಂ. ಗ್ರಾಕುನೀ&ನೈವಿ/ಹಾವೇರಿ/ಪಿಬಿ–1/ಟೆಂಡರ್:23/2022–23/1242
ದಿನಾಂಕ : 06–09–2022.
ಅಲ್ಪಾವಧಿ ಟೆಂಡರ ಪ್ರಕಟಣೆ
(E-GOK ಇ–ಪ್ರೊಕ್ಯೂರಮೆಂಟ ಮುಖಾಂತರ ಮಾತ್ರ)
NRDWP JJM ಯೋಜನೆಯಡಿ ರಾಣೇಬೆನ್ನೂರ, ಹಿರೇಕೆರೂರ ಮತ್ತು ಹಾವೇರಿ ತಾಲೂಕುಗಳಲ್ಲಿ ಈ ಕೆಳಕಂಡ ಗಾಮಗಳಲ್ಲಿ ಟೆಂಡರ್ ಕರೆಯಲಾಗಿದೆ. (1) E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : 19–09–2022 ರ 17:30 ಗಂಟೆವರೆಗೆ (2) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 1 ರಿಂದ 5) ತಾಂತ್ರಿಕ ಬಿಡ್ ತೆರೆಯುವ (ಕ್ರ.ಸಂ 6 ರಿಂದ 16) (ಸಾಧ್ಯವಾದಲ್ಲಿ) ದಿನಾಂಕ : **20–09–2022**ರ 17:31 ಗಂಟೆ ನಂತರ (3) ಇ–ಪ್ರೊಕ್ಯೂರ್‌ಮೆಂಟ್ ಆರ್ಥಿಕ ಬಿಡ್ ತೆರೆಯುವ (ಕ್ರ.ಸಂ 6 ರಿಂದ 16) (ಸಾಧ್ಯವಾದಲ್ಲಿ) ದಿನಾಂಕ : **22–09–2022**ರ 10:00 ಗಂಟೆ ನಂತರ (4) ಪ್ರೀ ಬಿಡ್ ಮೀಟಿಂಗ್ ಸ್ಥಳ : **Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110.** ದಿನಾಂಕ : 15–09–2022 ರಂದು ಬೆಳಿಗ್ಗೆ 11:00 ಗಂಟೆಗೆ ಇಂಡೆಂಟ್ ನಂ : **(1) 45374 (2) 45375 (3) 43548 (4) 45376 (5) 45429 (SC) (6) 45370 (7) 45368 (8) 44745 (9) 45369 (10) 45371, (11) 44595, (12) 44746, (13) 45373, (14) 45372, (15) 44569, (16) 45377.**
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E.GOK ಇ–ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರ್(ಪ್ರಭಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/246/2022–23

ಕರ್ನಾಟಕ ಸರ್ಕಾರ
ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,
ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101.
ದೂರವಾಣಿ ಸಂಖ್ಯೆ : 08392–273479/278168 ಫ್ಯಾಕ್ಸ್: 08392–273477
ವೆಬ್‌ಸೈಟ್ : www.ballaricity.mrc.gov.in ಇ–ಮೇಲ್: bellarycommissioner@yahoo.co.in
ಸಂಖ್ಯೆ: ಮನಪಾಬ/ತಾಂ/ಡಿ.ಎಂ/ ಡಿ.ಎಂ.ಎಫ್/10/38 ಬದಲಿ ಕಾಮಗಾರಿಗಳು/ 2021–22 ದಿನಾಂಕ:05.09.2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಕಾಲ್–2
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಬಳ್ಳಾರಿ ಮಹಾನಗರಪಾಲಿಕೆವತಿಯಿಂದ **2020–21 ನೇ ಸಾಲಿನ ಅವಧಿಗಾಗಿ ಅನುಮೋದನೆಗೊಂಡ ಪರಿಷ್ಕೃತ ಕ್ರಿಯಾಯೋಜನೆಯ 6 ರಲ್ಲಿನ ಬಳ್ಳಾರಿ ಜಿಲ್ಲೆ ಗಣಿಗಾರಿಕೆ ಪ್ರದೇಶಗಳ ಅಭಿವೃದ್ಧಿ (ಜಿಲ್ಲಾ ಖನಿಜ ಫೌಂಡೇಶನ್ ನಿಧಿ) (District Mineral Foundation Fund)** ರಲ್ಲಿ ಕಾಮಗಾರಿಗಳ ಗುತ್ತಿಗೆ ಇಟ್ಟ ಮೊತ್ತ ರೂ. **100.00** ಲಕ್ಷಗಳು ಇರುತ್ತದೆ. ಇಂಡೆಂಟ್ ಸಂಖ್ಯೆ:**133584/ CALL2,** ಟೆಂಡರ್ ಸಲ್ಲಿಸಲು ದಿನಾಂಕ:**07.09.2022** ರಿಂದ **14.09.2022** ರ **16.30** ಗಂಟೆಯೊಳಗಾಗಿ ಡೌನ್‌ಲೋಡ್ ಮಾಡಿಕೊಂಡು, ದಿನಾಂಕ:**14.09.2022** ರಂದು **17.30** ಗಂಟೆಯೊಳಗಾಗಿ ಸಲ್ಲಿಸಬಹುದು, ಪ್ರಿ–ಬಿಡ್ ಮೀಟಿಂಗ್ ದಿನಾಂಕ:**12.09.2022** ರಂದು ಬೆಳಿಗ್ಗೆ **11.00** ಗಂಟೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**16.09.2022** ಬೆಳಿಗ್ಗೆ **11.00** ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: **20.09.2022** ಬೆಳಗ್ಗೆ **11.30** ಗಂಟೆಗೆ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ, ಮೀಸಲಾತಿ ಟೆಂಡರ್ ಕುರಿತಂತೆ ಹಾಗೂ ಯಾವುದೇ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್: http://eproc.karnataka.gov.in ಅನ್ನು ಮತ್ತು www.ballaricity.mrc.gov.in ಅನ್ನು ಗಮನಿಸಲು ಹಾಗೂ ಬಳ್ಳಾರಿ ಮಹಾನಗರಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.
ಸಹಿ/–ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ
ಡಿಐಪಿಆರ್/ಬಳ್ಳಾರಿ/414/ಎಂಸಿಎ/2022–23

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕ.ನೀ.ನಿ.ನಿ., ಮಬದಕಾನಿ ವಿಭಾಗ ನಂ. 3 ಬ್ಯಾಹಟ್ಟಿ, ತಾ : ಹುಬ್ಬಳ್ಳಿ ಜಿ : ಧಾರವಾಡ 580023
ಫೋನ್ : 0836–2315225 ಫ್ಯಾಕ್ಸ್ : 2315226 e-mail : eemrbcc3byt@gmail.com
ಸಂ.ಕನೀನಿನಿ/ಮಬದವಿ–3/ಎ.ಇ–1/ಇ–ಟೆಂಡರ/2022–23/1175 ದಿನಾಂಕ : 06-09-2022
ಅಲ್ಪಾವಧಿ ಟೆಂಡರ ಪ್ರಕಟಣೆ
(ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್ ಕನೀನಿನಿ, ಮಬದಕಾನಿ ವಿಭಾಗ ಸಂ.3, ಬ್ಯಾಹಟ್ಟಿ ವ್ಯಾಪ್ತಿಯ 4701 M & MI ಲೆಕ್ಕಶೀರ್ಷಿಕೆ ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ ನಂಬರಿನ 02 ಕಾಮಗಾರಿಗಳಿಗೆ ಶೇಕಡಾವಾರು ಟೆಂಡರನ್ನು ದ್ವಿಲಕೋಟೆ ಪದ್ಧತಿಯಲ್ಲಿ ಇ–ಪ್ರೋಕ್ಯೂರಮೆಂಟ ಮೂಲಕ ಆಹ್ವಾನಿಸಲಾಗಿದೆ.
Work Indent No :-33672 & 33670
ಕಾಮಗಾರಿಯ ಅಂದಾಜು ಮೊತ್ತ: ರೂ. **300.00** ಲಕ್ಷಗಳಿಂದ ರೂ. **200.00** ಲಕ್ಷಗಳು
ಇ.ಎಂ.ಡಿ ಮೊತ್ತ:– ರೂ. **3.16** ಲಕ್ಷಗಳಿಂದ ರೂ. **4.75** ಲಕ್ಷಗಳು
ಇ–ಪೋರ್ಟಲ್ ಮೂಲಕ ಟೆಂಡರಗಳನ್ನು ದಿನಾಂಕ : **21/09/2022** ರ 4.00 pm ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **23/09/2022** ರಂದು ಮುಂಜಾನೆ: 11.00 am ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ ಪೋರ್ಟಲ್ ವೆಬಸೈಟ್ ಮುಖೇನ **http://eproc.karnataka.gov.in** ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: **0836–2315225** ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ಮಬದಕಾನಿ ವಿಭಾಗ ನಂ.3 ಬ್ಯಾಹಟ್ಟಿ
ವಾಸಾಸಂಇ/ಧಾ/ಎಂಸಿಎ/531/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಚಾಮರಾಜಪೇಟೆ ವಿಭಾಗ, ಬಿ.ಬಿ.ಎಂ.ಪಿ. ಅಂಗನವಾಡಿ ಕೇಂದ್ರ, ನಂಜಾಂಬ ಅಗ್ರಹಾರ, 2ನೇ ಮುಖ್ಯ ರಸ್ತೆ, ಟಿ. ಆರ್. ಮಿಲ್ ರಸ್ತೆ, ಬೆಂಗಳೂರು–560 018.
ಸಂಖ್ಯೆ. ಕಾ.ಅ/ಚಾ.ಪೇ/ಪಿಆರ್/330/2022–23 ದಿನಾಂಕ: 06–09–2022
ಟೆಂಡರ್ ಹಿಂಪಡೆಯುವ ಪ್ರಕಟಣೆ
ವಿಷಯ: ಈ ಕಛೇರಿಯ ಟೆಂಡರ್ ಸಂಖ್ಯೆ: EE/CMP/TEND/E-PROC/10/ 2022-23, ದಿನಾಂಕ: 01–09–2022 ರ **ಪ್ರಕಟಣೆ ಹಿಂಪಡೆಯುವ ಬಗ್ಗೆ.**
ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಈ ಕಛೇರಿಯಿಂದ ಕರೆಯಲಾದ ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಪ್ರಕಟಣೆ ಸಂಖ್ಯೆ: **EE/CMP/TEND/E-PROC/10/ 2022-23,** ದಿನಾಂಕ: 01–09–2022 ರ ಟೆಂಡರ್ ಪ್ರಕಟಣೆಯನ್ನು ತಾಂತ್ರಿಕ ಕಾರಣದಿಂದ ಹಿಂಪಡೆಯಲಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬಿಬಿಎಂಪಿ.
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ–ರೈಡ್ K RIDE
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಕೆ–ರೈಡ್, ಸಂಪರ್ಕ ಸೌಧ, 1ನೇ ಮಹಡಿ, ಓರಿಯನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010
ಟೆಲಿಫ್ಯಾಕ್ಸ್: 080–22370581/ 2; ಇ–ಮೇಲ್: dgm@kride.in
CIN: U60100KA2000PLC028171
ಸಂ: ಕೆ–ರೈಡ್/ಡಿಎಲ್/ಎಸ್&ಟಿ/13/2022 ದಿ: 06.09.2022
ಇ–ಟೆಂಡರ್ ಪ್ರಕಟಣೆ
ಈ ಕೆಳಕಂಡ ಜೋಡಿಮಾರ್ಗ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅನುಭವವುಳ್ಳ ಏಜೆನ್ಸಿಗಳಿಂದ ಆನ್‌ಲೈನ್ ಟೆಂಡರ್ ಆಹ್ವಾನಿಸಲಾಗಿದೆ.

ಕೆಲಸದ ಹೆಸರು	ಮೊತ್ತ
ಬೆಂಗಳೂರು ವಿಭಾಗದ ಯಶವಂತಪುರ–ಚನ್ನಸಂದ್ರ ಭಾಗದ ಜೋಡಿಮಾರ್ಗಕ್ಕೆ ಸಂಬಂಧಿಸಿದಂತೆ ಯಶವಂತಪುರ ಜಂಕ್ಷನ್‌ನಲ್ಲಿ ಡಿಸ್ಟ್ರಿಬ್ಯೂಟೆಡ್ ಎಲೆಕ್ಟ್ರಾನಿಕ್ ಇಂಟರ್‌ಲಾಕಿಂಗ್ (ಇಐ)ನೊಂದಿಗೆ ಔಟ್‌ಡೋರ್ ಮತ್ತು ಇಂಡೋರ್ ಸಿಗ್ನಲಿಂಗ್ ಕಾಮಗಾರಿ	ರೂ.26.78 ಕೋಟಿಗಳು

ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 10.10.2022**
ಹೆಚ್ಚಿನ ವಿವರಗಳಿಗೆ ಭೇಟಿನೀಡಿ **www.kride.in** ಮತ್ತು **“Tenders”**ನ್ನು ಕ್ಲಿಕ್‌ಮಾಡಿ ಮತ್ತು ಬಿಡ್ ಸಲ್ಲಿಸಲು ಭೇಟಿನೀಡಿ: **https://eproc.karnataka.gov.in**
ಸಹಿ/–ಪ್ರಧಾನ ವ್ಯವಸ್ಥಾಪಕರು (ಎಸ್&ಟಿ),ಕೆ–ರೈಡ್
ವಾಸಾಸಂಇ/ಉನಿ-ಸಿ.ಪಿ/2078/ಎಂಸಿಎ/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ, ಕ್ವೀನ್ಸ್ ರಸ್ತೆ, ಬೆಂಗಳೂರು – 560052.
ಸಂಖ್ಯೆ: ಕಾಅ/ಶಿನ/ಟೆಂಡರ್/16/2022–23 ದಿನಾಂಕ: 06–09–2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ವಿಭಾಗ), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ವಾರ್ಡ್ ಸಂಖ್ಯೆ. 91 ರಲ್ಲಿನ ಭಾರತಿನಗರದಲ್ಲಿರುವ ತಿಮ್ಮಯ್ಯ ರಸ್ತೆಯ ಅಡ್ಡರಸ್ತೆಗಳಲ್ಲಿನ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ ಮಾಡುವಿಕೆ. 4ನೇ ಕರೆ – (ಇಂಡೆಂಟ್ ಸಂಖ್ಯೆ: 51224)	99.00	1,98,000.00

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in** ನಲ್ಲಿ ದಿನಾಂಕ: **07–09–2022** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **13–09–2022ರಂದು 12.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು – 560052 ಇಲ್ಲಿ ನಡೆಯುವುದು.** 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: **15–09–2022ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **16–09–2022ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇಲ್ಲಿ ತೆರೆಯಲಾಗುವುದು (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಬಿಎಂಪಿ.
ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 26096832/910/832/854 Email: purchase@kmf.coop
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಸಂಖ್ಯೆ.ಕಹಾಮ/ಖರೀದಿ/ ಟೆಂಡರ್–479/2022–23 ದಿನಾಂಕ: 24.08.2022
ಕರ್ನಾಟಕ ಹಾಲು ಮಹಾಮಂಡಳಿ ವತಿಯಂದ ಮದರ್ ಡೇರಿ ಮಾರುಕಟ್ಟೆ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ರೀಟೇಲ್/ಏಜೆನ್ಸಿದಾರರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಮತ್ತು ಕಛೇರಿ ಉಪಯೋಗಕ್ಕಾಗಿ ಟ್ಯಾಕ್ಸಿ ಸೇವೆಯನ್ನು ಒದಗಿಸಲು ಎರಡು ವರ್ಷಗಳ ಅವಧಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರ್ ದಾಸ್ತಾವೇಜುಗಳನ್ನು eProcurement website https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಕ್ರ ಸಂ	ಸೇವೆಯ ವಿವರ	ವಾಹನಗಳ ಸಂಖ್ಯೆ	ಇ.ಎಮ್.ಡಿ ಪ್ರತಿ ವಾಹನಕ್ಕೆ (ರೂ)
01	3 ಟನ್ ಸಾಮರ್ಥ್ಯದ ಸ್ಯಾಚೆಟ್ ಮಾರ್ಗಗಳು	17	25,000/–
02	6 ಟನ್ ಸಾಮರ್ಥ್ಯದ ಸ್ಯಾಚೆಟ್ ಮಾರ್ಗಗಳು	11	50,000/–
03	ಟ್ಯಾಕ್ಸಿ (4+1) ಸೆಡಾನ್ ಮಾದರಿ	01	10,000/–

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ: 02.09.2022 ರಿಂದ, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 07.09.2022 ರಂದು ಪೂರ್ವಾಹ್ನ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 12.09.2022 ರಂದು ಸಂಜೆ 5.00 ಗಂಟೆಯವರೆಗೆ, ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ: 14.09.2022 ರಂದು ಪೂರ್ವಾಹ್ನ 11.00 ಗಂಟೆಗೆ, ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ. ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗ, ಬೃ.ಬೆಂ.ಮ.ಪಾಲಿಕೆ ಅಂಗನವಾಡಿ ಕೇಂದ್ರ, 2ನೇ ಮುಖ್ಯ, ಟಿ.ಆರ್.ಮಿಲ್ ರಸ್ತೆ, ಬೆಂಗಳೂರು – 18
ಸಂಖ್ಯೆ: ಕಾಪಾಅ/ಚಾಪೇ/ಟೆಂಡರ್/ಇ–ಪ್ರೊಕ್/13/2022–23 ದಿನಾಂಕ: 06.09.2022
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ, ಬೆಂಗಳೂರು ಇವರು, ಕೆಪಿಡಬ್ಲ್ಯೂಡಿ/ಬೃ.ಬೆಂ.ಮ.ಪಾಲಿಕೆ ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ 1ನೇ ದರ್ಜೆಯಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ–ಕೆಡಬ್ಲ್ಯೂ–4**)

ಕ್ರ ಸಂ	ಕಾಮಗಾರಿಗಳ ಹೆಸರು	ಟೆಂಡರಿ–ಗಿಟ್ಟ ಮೊತ್ತ (₹. ಲಕ್ಷಗಳಲ್ಲಿ)	ಇಎಂಡಿ (₹. ಲಕ್ಷಗಳಲ್ಲಿ)
1.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆ.ಜೆ.ಆರ್ ನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನ ಮತ್ತು ಕಟ್ಟಡಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು. (**ಹಳೆ ವಾರ್ಡ್ ಸಂಖ್ಯೆ.135 & 136) ಪ್ಯಾಕೇಜ್–1**ರಂತೆ ಒಳಗೊಂಡಿದೆ. (**2ನೇ ಕರೆ**)	1732.00	17.32 (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)
2.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಜೆ.ಜೆ.ಆರ್ ನಗರ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ವಿವಿಧ ಇಲಾಖೆಗಳಿಗಾಗಿ ಬೃ.ಬೆಂ.ಮ.ಪಾಲಿಕೆ ಕಟ್ಟಡ ನಿರ್ಮಾಣ ಮಾಡುವುದು. (**ಹಳೆ ವಾರ್ಡ್ ಸಂಖ್ಯೆ.137 & 138) ಪ್ಯಾಕೇಜ್–2**ರಂತೆ ಒಳಗೊಂಡಿದೆ. (**2ನೇ ಕರೆ**)	1350.00	15.00 (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)
3.	ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಉಪ ವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಪಾದಚಾರಿ ಮಾರ್ಗಗಳು, ಉದ್ಯಾನವನಗಳು, ಆಟದ ಮೈದಾನಗಳನ್ನು ಸಮಗ್ರ ಅಭಿವೃದ್ಧಿ ಮಾಡುವುದು ಮತ್ತು ವಿವಿಧ ಇಲಾಖೆಗಳಿಗಾಗಿ ಬೃ.ಬೆಂ.ಮ.ಪಾಲಿಕೆ ಕಟ್ಟಡ ನಿರ್ಮಾಣ ಮಾಡುವುದು. (**ಹಳೆ ವಾರ್ಡ್ ಸಂಖ್ಯೆ.139, 140 & 141) ಪ್ಯಾಕೇಜ್–3**ರಂತೆ ಒಳಗೊಂಡಿದೆ. (**2ನೇ ಕರೆ**)	3500.00	35.00 (ರೂ. 1.00 ಲಕ್ಷ ಆನ್‌ಲೈನ್ ಮತ್ತು ಉಳಿದ ಮೊತ್ತ ಬಿಜಿ/ಎಫ್‌ಡಿಆರ್ ಮೂಲಕ)

ಟೆಂಡರ್ ವೇಳಾಪಟ್ಟಿ: (1) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ **17.09.2022**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **09.09.2022**ರ ಬೆಳಿಗ್ಗೆ **11:00** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, (ಪಶ್ಚಿಮ) ಬಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ನಡೆಸಲಾಗುವುದು. (3) ತಾಂತ್ರಿಕ ಬಿಡ್‌ಗಳನ್ನು ಕಾರ್ಯಪಾಲಕ ಅಭಿಯಂತರರ ಕಚೇರಿ, ಚಾಮರಾಜಪೇಟೆ ವಿಭಾಗದಲ್ಲಿ ದಿನಾಂಕ **19.09.2022**ರ ಬೆಳಿಗ್ಗೆ **11:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in**ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಚಾಪ್ಟರ್ ಕಟ್ಟಡ, ನಂ. 16/ಜೆ, 1ನೇ ಮಹಡಿ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052. ದೂರವಾಣಿ : 080–299093994
ಸಹಾಯವಾಣಿ 8867537799 (ಬೆ. 10.30 ರಿಂದ ಸ. 5.00ರವರೆಗೆ ಮಾತ್ರ)
ವೆಬ್‌ಸೈಟ್: https://kmcdc.karnataka.gov.in ಇ–ಮೇಲ್: mdmarathanigama@gmail.com
ಸಂಖ್ಯೆ: ಕಮಸನಿನಿ/ಪತ್ರಿಕಾ ಪ್ರಕಟಣೆ/ಸಿಆರ್–06/2022–23 ದಿನಾಂಕ: 06.09.2022
ಪ್ರಕಟಣೆ
ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ (ನಿ.) ದ ವತಿಯಿಂದ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ:30.03.2002 ರಲ್ಲಿನ **ಪ್ರವರ್ಗ–3–ಬಿ ಅಡಿಯಲ್ಲಿ 2(ಎ) ಯಿಂದ 2(ಎಫ್)ವರೆಗೆ ಬರುವ** (ಎ)ಮರಾಠ, ಮರಾಠ, (ಬಿ)ಅರೆಕ್ಷತ್ರಿ, ಅರೆ ಮರಾಠ, ಆರ್ಯಮರಾಠ (ಸಿ)ಆರ್ಯ, ಆರ್ಯರು (ಡಿ)ಕೊಂಕಣ ಮರಾಠ (ಇ)ಕ್ಷತ್ರಿಯ ಮರಾಠ/ಕ್ಷತ್ರಿಯ ಮರಾಠ (ಎಫ್) ಕುಳವಾಡಿ ಜನರ ಶೈಕ್ಷಣಿಕ ಹಾಗೂ ಆರ್ಥಿಕಾಭಿವೃದ್ಧಿಗಾಗಿ 2022–23 ಅನುಷ್ಠಾನಗೊಳಿಸಲಾಗುತ್ತಿರುವ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯ ಪಡೆಯಬಯಸುವವರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಜೀಜಾವು–ಜಲಭಾಗ್ಯ ಯೋಜನೆ (ಗಂಗಾ ಕಲ್ಯಾಣ ನೀರಾವರಿ ಯೋಜನೆ)
- **ವೈಯಕ್ತಿಕ ಕೊಳವೆಬಾವಿ ಯೋಜನೆ:** ಸಣ್ಣ ಮತ್ತು ಅತಿ ಸಣ್ಣರೈತರ ಜಮೀನುಗಳಿಗೆ ಒಂದು ಕೊಳವೆ ಬಾವಿ ಕೊರೆಯಿಸಿ, ಪಂಪ್‌ಸೆಟ್, ಉಪಕರಣಗಳನ್ನು ಸರಬರಾಜು ಮಾಡಿ ವಿದ್ಯುತ್ ಸಂಪರ್ಕ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸುವುದು. ಘಟಕ ವೆಚ್ಚ ರೂ.2.00 ಲಕ್ಷಗಳು ಹಾಗೂ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.3.50 ಲಕ್ಷಗಳು. ಈ ವೆಚ್ಚದಲ್ಲಿ, ಪ್ರತಿ ಕೊಳವೆ ಬಾವಿಗೆ ವಿದ್ಯುದ್ದೀಕರಣಕ್ಕಾಗಿ ರೂ.50,000/–ಗಳನ್ನು ವಿದ್ಯುತ್ ಸರಬರಾಜು ಕಂಪನಿಗೆ ಪಾವತಿಸಲಾಗುವುದು.
- ಮಲೆನಾಡು ಪ್ರದೇಶಗಳಲ್ಲಿ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚದಲ್ಲಿ ತೆರೆದ ಬಾವಿಗಳ ಮೂಲಕ ನೀರಾವರಿ ಸೌಲಭ್ಯ ಒದಗಿಸಲು ಅವಕಾಶವಿರುತ್ತದೆ.

ಈ ಸೌಲಭ್ಯವನ್ನು ಪಡೆಯಲು ಅರ್ಜಿದಾರರು ಕೆಳಕಂಡಂತೆ ಅರ್ಹತೆ ಹೊಂದಿರಬೇಕಾಗಿರುತ್ತದೆ:
- ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 2 ಎಕರೆ ಹಾಗೂ ಗರಿಷ್ಠ 5 ಎಕರೆ ಜಮೀನು ಹೊಂದಿರಬೇಕು;
- ಉಡುಪಿ, ದಕ್ಷಿಣಕನ್ನಡ, ಕೊಡಗು, ಉತ್ತರಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು.
- ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿಲ್ಲದೆ ಇರುವ ಸಣ್ಣ ಮತ್ತು ಅತಿ ಸಣ್ಣ ರೈತರಾಗಿರಬೇಕು.
- ಅರ್ಜಿದಾರರ ಕುಟುಂಬ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳ ಒಳಗಿರಬೇಕು.
- 18–60 ವರ್ಷಗಳ ವಯಸ್ಸಿನ ಮಿತಿಯಲ್ಲಿರಬೇಕು.

2022–23ರ ಸಾಲಿನ ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸತು)
ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ 2022–23ನೇ ಸಾಲಿನಲ್ಲಿ ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ, ಖಾಸಗಿ ಕಾಲೇಜುಗಳಲ್ಲಿ ವೃತ್ತಿಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ ಮೂಲಕ ಆಯ್ಕೆಯಾದ, 18 ರಿಂದ 35 ವರ್ಷ ವಯೋಮಿತಿಯ ಹಾಗೂ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ರಾಜಶ್ರೀ ಶಾಹುಮಹಾರಾಜ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿರಹಿತ ಸಾಲ ಯೋಜನೆ
ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ವತಿಯಿಂದ 2022–23ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ **(1) ಇಂಜಿನಿಯರಿಂಗ್ & ಟೆಕ್ನಾಲಜಿ (2) ಮ್ಯಾನೇಜ್‌ಮೆಂಟ್ & ಕಾಮರ್ಸ್ (3) ಸೈನ್ಸ್ & ಟೆಕ್ನಾಲಜಿ, (4) ಅಗ್ರಿಕಲ್ಚರ್ & ಅಲೈಡ್ ಸೈನ್ಸಸ್ / ಟೆಕ್ನಾಲಜಿ, (5) ಮೆಡಿಸಿನ್ ಮತ್ತು (6) ಹ್ಯುಮ್ಯಾನಿಟೀಸ್& ಸೋಸಿಯಲ್ ಸೈನ್ಸಸ್** (ಈ 6 ಕೋರ್ಸ್‌ಗಳ, ಕ್ಷೇತ್ರಗಳಿಗೆ (Category) ಬಡ್ಡಿರಹಿತ ಸಾಲ ಸೌಲಭ್ಯ ಒದಗಿಸಲಾಗುತ್ತದೆ). ಈ ಕೋರ್ಸ್‌ಗಳಲ್ಲಿ ಉನ್ನತ ವ್ಯಾಸಂಗ ಮಾಡುವ ಹಾಗೂ 18 ರಿಂದ 35 ವರ್ಷ ವಯೋಮಿತಿಯ ಮತ್ತು ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.8.00 ಲಕ್ಷಗಳಿರುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ವಾರ್ಷಿಕ ಗರಿಷ್ಠ ರೂ.7.50 ಲಕ್ಷಗಳಂತೆ ಎರಡು ವರ್ಷಗಳ ಅವಧಿಗೆ ಗರಿಷ್ಠ ರೂ.15,00 ಲಕ್ಷಗಳ ಸಾಲವನ್ನು ಮಂಜೂರು ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. **ವಿಸೂ:– ಈ ಯೋಜನೆಯು ರೂ.25.00 ಲಕ್ಷಗಳಿಗೆ ಅನುದಾನವನ್ನು ಹೆಚ್ಚಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಆದೇಶವನ್ನು ನಿರೀಕ್ಷಿಸಿದೆ.**

❖ **ಮೇಲಿನ ಎಲ್ಲಾ ಯೋಜನೆಗಳಿಗೆ ಅರ್ಜಿಗಳನ್ನು ಸಲ್ಲಿಸಬಯಸುವವರು ದಿನಾಂಕ: 07–09–2022 ರಿಂದ 21–10–2022 ರವರೆಗೆ ಅರ್ಜಿಗಳನ್ನು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿರುತ್ತದೆ.**
❖ ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು ಆಧಾರ್ ಕಾರ್ಡ್‌ನಲ್ಲಿರುವಂತೆಯೇ ಅರ್ಜಿದಾರರ ಹೆಸರು (**ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು**) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್ ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.
❖ ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ https://kmcdc.karnataka.gov.in ನಲ್ಲಿ ಸಂಪರ್ಕಿಸಿ ಅಥವಾ ಸಂಬಂಧಪಟ್ಟ ವೆಬ್‌ಸೈಟ್‌ನ್ನು ಅಥವಾ ನಿಗಮದ ದೂರವಾಣಿ 080–299093994 / ಸಹಾಯವಾಣಿ 8867537799 (ಬೆ. 10.30 ರಿಂದ ಸ. 5.30 ರವರೆಗೆ ಮಾತ್ರ) ಸಂಪರ್ಕಿಸುವುದು.
ವಿ.ಸೂ.: ಅರ್ಜಿದಾರರ ಆಧಾರ್ ಸಂಖ್ಯೆಯು ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಜೋಡಣೆಯೊಂದಿಗೆ ಸೀಡ್ ಆಗಿರಬೇಕು.
ಸಹಿ/–
(ಡಾ: ಪ್ರಕಾಶ್ ಆರ್. ಪಾಗೋಜಿ)
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ವಾಪ್ರ/ಜಿಎ/2076/2022–23
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಡೆಯಲರಿಯದೆ ನುಡಿಯಲರಿಯದೆ ಲಿಂಗವ ಪೂಜಿಸಿ ಫಲವೇನು?

-ಬಸವಣ್ಣ

ಬೆಂಗಳೂರು 'ನಗರ ಮಹಾಪೂರ' ಬಿಬಿಎಂಪಿ–ಬಿಡಿಎ ಪಾಪದ ಫಲ

ಒಂದು ವಾರದಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಬೆಂಗಳೂರಿನ ಪೂರ್ವಭಾಗದ ಹಲವು ಪ್ರದೇಶಗಳು ಜಲಾವೃತ ಆಗಿವೆ. ರಸ್ತೆಗಳು ಹೊಳೆಯ ರೂಪವನ್ನು ತಾಳಿದ್ದರೆ, ಬಡಾವಣೆಗಳು ಕೆರೆಗಳಂತಾಗಿವೆ. ಬೆಳ್ಳಂದೂರು–ಸರ್ಜಾಪುರ ಮುಖ್ಯರಸ್ತೆಯ ಸುತ್ತಲಿನ ಕೆಲವು ಪ್ರಮುಖ ಬಡಾವಣೆಗಳಲ್ಲಿ ಸಹ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಅಲ್ಲಿನ ವಿಲ್ಲಾಗಳು ಈಗ ಈಜುಕೊಳದ ರೂಪ ತಾಳಿವೆ. ಕೋಟ್ಯಂತರ ರೂಪಾಯಿ ಸುರಿದು ಕಟ್ಟಿದ ಮನೆಯನ್ನು ಸುರಿವ ಮಳೆಯಲ್ಲೇ ತೊರೆದು ಬರುವಂತಾಗಿದೆ. ತುತ್ತು ಅನ್ನ ಅರಸಿ ರಾಜಧಾನಿಗೆ ಬಂದ ವಲಸೆ ಕಾರ್ಮಿಕರ ಜೋಪಡಿಗಳೆಲ್ಲ ಮಳೆನೀರಿನಲ್ಲಿ ತೇಲಿಹೋಗಿವೆ. ಹಲವು ಬಡಾವಣೆಗಳಲ್ಲಿ ಜನರ ಬದುಕು ಮೂರಾಬಟ್ಟೆಯಾಗಿದೆ. ಮಳೆಯ ಹೊಡೆತಕ್ಕೆ ಸಿಲುಕಿ ಉಂಟಾದ ಆಘಾತದಿಂದ ಹೊರಬರಲು ಅವರಿಗೆ ಇನ್ನೂ ಸಾಧ್ಯವಾಗಿಲ್ಲ. ದೇಶದ ದೊಡ್ಡ ದೊಡ್ಡ ಐ.ಟಿ. ಕಂಪನಿಗಳು ಇದೇ ಭಾಗದಲ್ಲಿ ನೆಲೆ ಕಂಡುಕೊಂಡಿದ್ದು, ಮಳೆಯ ಹೊಡೆತವನ್ನು ಅವುಗಳೂ ಅನುಭವಿಸಿವೆ. ಕೆಲವು ಕಂಪನಿಗಳ ಉದ್ಯೋಗಿಗಳು ಕಚೇರಿಗೆ ದೋಣಿಯಲ್ಲಿ ಹೋಗುವಂತಹ ಸ್ಥಿತಿ ನಿರ್ಮಾಣವಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆ ಆಗುತ್ತಿರುವುದು ಉತ್ಪ್ರೇಕ್ಷೆಯ ಮಾತಲ್ಲ. ಮಳೆ ಮತ್ತು ಪ್ರವಾಹ ಪರಿಸ್ಥಿತಿಯಿಂದಾಗಿ ಮಾಹಿತಿ ತಂತ್ರಜ್ಞಾನ ಸಂಸ್ಥೆಗಳ ಉದ್ಯೋಗಿಗಳು ಸಕಾಲಕ್ಕೆ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗಿಲ್ಲ. ಇದರಿಂದಾಗಿ ಐ.ಟಿ. ಕಂಪನಿಗಳು ನೂರಾರು ಕೋಟಿ ರೂಪಾಯಿ ನಷ್ಟ ಅನುಭವಿಸಿವೆ. ಮಳೆನೀರಿನಲ್ಲಿ ಮುಳುಗಿ ಸಾವಿರಾರು ವಾಹನಗಳು ಹಾನಿಗೀಡಾಗಿವೆ.

ನಗರ ಮಹಾಪೂರದಿಂದ ಸಂಕಷ್ಟ ಹೆಚ್ಚಿದಷ್ಟೂ ಬ್ರ್ಯಾಂಡ್ ಬೆಂಗಳೂರು ಹಿರಿಮೆಗೆ ಪೆಟ್ಟು ಬೀಳಲಿದೆ ಎಂಬುದನ್ನು ಆಡಳಿತದ ಹೊಣೆ ಹೊತ್ತವರು ನೆನಪಿಡಬೇಕು

ನಗರದ ಪ್ರವಾಹ ಪರಿಸ್ಥಿತಿಗೆ ಮಳೆಯ ಅಟಾಟೋಪವೇ ಕಾರಣವಾದರೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪಾಪದ ಪಾಲೂ ಅದರಲ್ಲಿದೆ. ನದಿಯಂತಹ ಜಲಮೂಲದಿಂದ ಬಹುದೂರದಲ್ಲಿರುವ ನಗರ ಬೆಂಗಳೂರು. ಮಳೆ ನೀರನ್ನು ಸಂಗ್ರಹಿಸಲು ನಗರ ನಿರ್ಮಾತೃಗಳು ನೂರಾರು ಕೆರೆಗಳನ್ನು ನಿರ್ಮಿಸಿದ್ದರು. ಒಂದು ಕೆರೆ ತುಂಬಿ ಮತ್ತೊಂದು ಕೆರೆಗೆ ನೀರು ಹರಿಯಲು 'ಸರಪಳಿ ರಾಜಕಾಲುವೆ'ಗಳ ವ್ಯವಸ್ಥೆಯನ್ನೂ ಮಾಡಿದ್ದರು. ಅಂತಹ ಕೆರೆ–ಕಟ್ಟೆ, ಕಾಲುವೆಗಳೆಲ್ಲ ಒತ್ತುವರಿ ಆಗುವಾಗ ಬಿಬಿಎಂಪಿ ಕಣ್ಮುಚ್ಚಿಕೊಂಡು ಕುಳಿತಿತ್ತು. ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಜಲಮೂಲಗಳನ್ನು ಅದು ಧಾರೆ ಎರೆದು ಕೊಟ್ಟಿದ್ದನ್ನು ಎ.ಟಿ. ರಾಮಸ್ವಾಮಿ ಸಮಿತಿ ವರದಿಯು ಎತ್ತಿತೋರಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 1,848 ಎಕರೆಯಷ್ಟು ಕೆರೆ ಅಂಗಳ ಪ್ರದೇಶ ಒತ್ತುವರಿಯಾಗಿದೆ ಎಂದು ಈ ವರದಿ ತಿಳಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಂತೂ ಪಾಪಕೃತ್ಯದಲ್ಲಿ ಒಂದು ಹೆಜ್ಜೆ ಮುಂದೆಹೋಗಿ ಕೆಲವು ಕೆರೆಗಳ ಪಾತ್ರದಲ್ಲೇ ಬಡಾವಣೆಗಳನ್ನು ನಿರ್ಮಿಸಿದೆ. ಅದರ ಪರಿಣಾಮವನ್ನು ನಗರದ ನಾಗರಿಕರು ಅನುಭವಿಸಬೇಕಿದೆ. ಬಡಾವಣೆ ಇರುವುದು ಕೆರೆ ಪಾತ್ರದಲ್ಲಿಯೋ ಇಲ್ಲವೆ ರಾಜಕಾಲುವೆಯ ಸಮಾಧಿಯ ಮೇಲೋ ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡದೆ ನಿವೇಶನ ಖರೀದಿಸಿದವರು ಈಗ ದಂಡ ತೆರುತ್ತಿದ್ದಾರೆ. ಬೆಂಗಳೂರಿನ ಇಂದಿನ ದುಃಸ್ಥಿತಿಗೆ ಬಿಲ್ಡರ್‌ಗಳು, ಕಾರ್ಪೊರೇಟರುಗಳು, ಬಿಬಿಎಂಪಿ ಅಧಿಕಾರಿಗಳು ಮತ್ತು ರಾಜಕಾರಣಿಗಳ ನಡುವಿನ ಕೆಟ್ಟ ಮೈತ್ರಿಯೂ ಒಂದು ಮುಖ್ಯ ಕಾರಣ. ಈ ಮೈತ್ರಿಯನ್ನು ಕೊನೆಗಾಣಿಸದಿದ್ದರೆ ಬೆಂಗಳೂರಿನ ಸಮಸ್ಯೆಗಳು ನಿವಾರಣೆಯಾಗಲಿಕ್ಕಿಲ್ಲ.

ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಇದೇ ಪೂರ್ವಭಾಗದಲ್ಲಿ 'ನಗರ ಮಹಾಪೂರ' ಕಾಣಿಸಿಕೊಂಡಾಗ ಬಿಬಿಎಂಪಿಯಿಂದ ಒತ್ತುವರಿ ತೆರವು ಕಾರ್ಯಾಚರಣೆಯ ನಾಟಕ ನಡೆದಿತ್ತು. ದಿನಗಳು ಕಳೆದಂತೆ, ವಿಷಯವೂ ತಣ್ಣಗಾದಂತೆ ಭೂಮಾಪಕರ ಕೊರತೆಯ ನೆಪವೊಡ್ಡಿ ಕಾರ್ಯಾಚರಣೆಯನ್ನು ಸಂಪೂರ್ಣ ಸ್ಥಗಿತಗೊಳಿಸಿತು. ಪ್ರಭಾವಿಗಳ ಒತ್ತಡಕ್ಕೆ ಮಣಿಯದೆ ಆಗ ಕಾರ್ಯಾಚರಣೆ ಪೂರ್ಣಗೊಳಿಸಿದ್ದರೆ ಸಮಸ್ಯೆ ಈಗ ಇಷ್ಟೊಂದು ಗಂಭೀರ ಸ್ವರೂಪವನ್ನು ಪಡೆಯುತ್ತಿರಲಿಲ್ಲ. ಯಾವೆಲ್ಲ ಕೆರೆ, ಕಾಲುವೆಗಳು ಒತ್ತುವರಿಯಾಗಿವೆ ಎಂಬ ವಿವರ ಬಿಬಿಎಂಪಿ ಬಳಿ ಇದೆ. ಈಗಲಾದರೂ ಒತ್ತುವರಿ ತೆರವಿಗೆ ಇಚ್ಛಾಶಕ್ತಿ ಪ್ರದರ್ಶಿಸದಿದ್ದರೆ ಮುಂದೆ ಎದುರಾಗಬಹುದಾದ ಅನಾಹುತಗಳಿಗೆಲ್ಲ ಬಿಬಿಎಂಪಿಯೇ ಹೊಣೆ ಹೊರಬೇಕಾಗುತ್ತದೆ. ನಗರ ಮಹಾಪೂರದಿಂದ ಸಂಕಷ್ಟ ಹೆಚ್ಚಿದಷ್ಟೂ ಬ್ರ್ಯಾಂಡ್ ಬೆಂಗಳೂರು ಹಿರಿಮೆಗೆ ಪೆಟ್ಟು ಬೀಳಲಿದೆ ಎಂಬುದನ್ನು ಆಡಳಿತದ ಹೊಣೆ ಹೊತ್ತವರು ನೆನಪಿಡಬೇಕು. ಪ್ರತಿವರ್ಷ 15 ಟಿಎಂಸಿ ಅಡಿಯಷ್ಟು ಮಳೆನೀರು ವ್ಯರ್ಥವಾಗಿ ಹರಿದುಹೋಗುತ್ತಿದೆ. ಮಳೆನೀರು ಸಂಗ್ರಹದ ವ್ಯವಸ್ಥೆ ಮಾಡಿದರೆ ಮಹಾಪೂರದ ತೀವ್ರತೆ ಕಡಿಮೆ ಆಗುತ್ತದೆ. ಮಳೆನೀರು ಸಂಗ್ರಹ ಕಡ್ಡಾಯಗೊಳಿಸಿ ರೂಪಿಸಿರುವ ಕಾಯ್ದೆಯಿಂದ ನುಣುಚಿಕೊಳ್ಳಲು ಯತ್ನಿಸುವ ನಾಗರಿಕರೆಲ್ಲರೂ ಈ ದಿಸೆಯಲ್ಲಿ ಗಂಭೀರವಾಗಿ ಯೋಚಿಸಬೇಕು.

ದಿನದ ಟ್ವೀಟ್

ಸಮಸ್ಯೆಯ ಮೂಲ ಸರಿಪಡಿಸಿ

ಪ್ರತಿವರ್ಷ ಮೂರ್ನಾಲ್ಕು ಚಂಡಮಾರುತಗಳ ದಾಳಿಗೆ ತುತ್ತಾಗುವ ಒಡಿಶಾದಿಂದ ಬಂದವನು ನಾನು. ಅಲ್ಲಿ ಮಳೆಯ ಪ್ರಮಾಣ ಎಷ್ಟಿರಬಹುದು ಎಂಬುದನ್ನು ಊಹಿಸಿ. ಆದರೆ, ಒಡಿಶಾದ ರಾಜಧಾನಿಯಲ್ಲಿ ಬೆಂಗಳೂರಿನಂತೆ ನೀರು ನಿಲ್ಲುವ ಸಮಸ್ಯೆಯನ್ನು ನಾನು ಎಂದಿಗೂ ಕಂಡಿಲ್ಲ.

ನಿರಂಜನ್ ಪಾತ್ರ, ಯುವಕ

ಕಿಡಿನುಡಿ

ಒಬ್ಬ ಚಾಲಕಿಯಾಗಿ ಹೆದ್ದಾರಿಗಳಲ್ಲಿ ಆಗಾಗ ವಾಹನ ಚಾಲನೆ ಮಾಡುವ ನನ್ನ ಅನುಭವದಂತೆ, ಭಾರತದಲ್ಲಿ ಲೇನ್‌ಗಳು 6ರಿಂದ 4ಕ್ಕೆ ಅಥವಾ 4ರಿಂದ 2ಕ್ಕೆ ವಿಲೀನಗೊಳ್ಳುವಾಗ ಹೆಚ್ಚು ಗೊಂದಲ ಸೃಷ್ಟಿಸುವಂತೆ ಇರುತ್ತವೆ. ಎರಡು ಕಿ.ಮೀ ದೂರ ಇರುವಾಗಲೇ ಕಾಣಿಸಬೇಕಾದ ವಿಲೀನಕ್ಕೆ ಸಂಬಂಧಿಸಿದ ಎಚ್ಚರಿಕೆ ಸಂದೇಶಗಳು ಕೆಲವೆಡೆ ಮಾತ್ರ ಕಾಣಸಿಗುತ್ತವೆ. ಡಾ. ಅನಾಹಿತಾ ಪಾಂಡೋಲೆ ಅವರನ್ನು ದೂಷಿಸುವುದು ಪರಿಹಾರವಲ್ಲ. ಹೆದ್ದಾರಿಗಳ ಸೂಚನಾ ಫಲಕಗಳಲ್ಲಿ ಸುಧಾರಣೆ ತರಬೇಕಾದ ಅಗತ್ಯವಿದೆ.

(ಉದ್ಯಮಿ ಸೈರಸ್ ಮಿಸ್ತ್ರಿ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿಕ್ರಿಯೆ)

ವೀಣಾ ಬಕ್ಷಿ, ಚಲನಚಿತ್ರ ನಿರ್ದೇಶಕಿ

25 ವರ್ಷಗಳ ಹಿಂದೆ

ಭಾನುವಾರ, 7-9-1997

● ಮಾನವತೆಯ ಮಹಾಸಾಗರ ಮದರ್ ತೆರೇಸಾ ಇನ್ನಿಲ್ಲ

ಕಲ್ಕತ್ತಾ, ಸೆಪ್ಟೆಂಬರ್ 6 (ಪಿಟಿಐ)– ಜಗತ್ತಿನ ಲಕ್ಷಾಂತರ ಮಕ್ಕಳಿಗೆ ತಾಯಿಯಾಗಿ, ಅವರ ಬದುಕಿನಲ್ಲಿ ಸುಖ– ಸಂತೋಷ ತಂದುಕೊಟ್ಟ ಮದರ್ ತೆರೇಸಾ ಶುಕ್ರವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ತೆರೇಸಾ ಅವರು ರಾತ್ರಿ 9.30ರಲ್ಲಿ ತಮ್ಮ ಮನೆಯಲ್ಲಿ ಕೊನೆಯುಸಿರೆಳೆದರು. ಆ ಸಮಯದಲ್ಲಿ ಹಿರಿಯ ಕ್ರೈಸ್ತ ಸನ್ಯಾಸಿನಿಯರು ಅವರ ಪಕ್ಕದಲ್ಲಿದ್ದರು ಎಂದು 'ಮಿಷನರೀಸ್ ಆಫ್ ಚಾರಿಟಿ'ಯ ಮೂಲಗಳು ತಿಳಿಸಿವೆ. ಮದರ್ ಅವರು ಎದೆನೋವು ಎಂದು ಹೇಳಿದ ತಕ್ಷಣ ವೈದ್ಯರನ್ನು ಕರೆಸಲಾಯಿತು. ಆದರೆ ಕೆಲವೇ ಕ್ಷಣದಲ್ಲಿ ಅವರು ಪ್ರಾಣತ್ಯಾಗ ಮಾಡಿದರು.

● ಡಯಾನಾಗೆ ಲಕ್ಷಾಂತರ ಅಭಿಮಾನಿಗಳ ಅಶ್ರುತರ್ಪಣ

ಲಂಡನ್, ಸೆಪ್ಟೆಂಬರ್ 6 (ಎ.ಪಿ., ರಾಯಿಟರ್ಸ್)– ಲಂಡನ್ನಿನ ರಸ್ತೆಗಳಲ್ಲಿ ಸಾಲುಗಟ್ಟಿ ನಿಂತಿರುವ ಲಕ್ಷಾಂತರ ಅಭಿಮಾನಿಗಳ ಅಶ್ರುತರ್ಪಣದ ನಡುವೆ ವೇಲ್ಸ್‌ನ ರಾಜಕುಮಾರಿ ಡಯಾನಾ ಅವರ ಪಾರ್ಥಿವ ಶರೀರದ ಅಂತಿಮಯಾತ್ರೆ ಆರಂಭವಾಯಿತು. 'ವಿ ಲವ್ ಯು ಡಯಾನಾ', 'ಬ್ಲೆಸ್ ಯು' ಎಂದು ಕೂಗುತ್ತಿದ್ದ ಜನಸ್ತೋಮ ಡಯಾನಾ ಕಳೇಬರ ಹೊತ್ತ ವಾಹನ ತಮ್ಮ ಮುಂದೆ ಸಾಗುತ್ತಿದ್ದಂತೆ ಹೂಗುಚ್ಛಗಳನ್ನು ಎಸೆಯುತ್ತಿತ್ತು.

50 ವರ್ಷಗಳ ಹಿಂದೆ

ಗುರುವಾರ, 7-9-1972

● ಶುದ್ಧೀಕರಿಸಬೇಕಾದ ವಿಷಯ ಏನೆಂಬುದು ಕೆಂಗಲ್‌ಗೇ ಇನ್ನೂ ಅಸ್ಪಷ್ಟ: ಇಂದಿರಾ

ತಿರುವನಂತಪುರ, ಸೆಪ್ಟೆಂಬರ್ 6– ಮೈಸೂರು ಕಾಂಗ್ರೆಸ್‌ನಲ್ಲಿ ಶುದ್ಧೀಕರಿಸಬೇಕಾದ ವಿಷಯಗಳಿವೆಯೆಂದು ಮನವರಿಕೆಯಾಗಿದ್ದರೆ, ಕೆಂಗಲ್ ಹನುಮಂತಯ್ಯನವರು ಆ ವಿಚಾರವನ್ನು ಇನ್ನೂ ಮೊದಲೇ ಕೇಂದ್ರ ನಾಯಕತ್ವದ ಗಮನಕ್ಕೆ ತರಬೇಕಾಗಿದ್ದಿತೆಂದು ಪ್ರಧಾನಿ ಇಂದಿರಾ ಗಾಂಧಿಯವರು ಇಲ್ಲಿ ಇಂದು ಪತ್ರಕರ್ತರಿಗೆ ತಿಳಿಸಿದರು.

ಮಾಜಿ ರೈಲ್ವೆ ಸಚಿವ ಕೆಂಗಲ್‌ರವರ 'ವ್ಯಾಪಕ (ಗುಡಿಸಿ ಚೊಕ್ಕಟ ಮಾಡುವ) ಸುಧಾರಣೆ' ಕುರಿತು ಕೇಳಿದ ಪ್ರಶ್ನೆಗೆ ಪ್ರಧಾನಿ ಉತ್ತರವಿತ್ತು, 'ಅವರು ಏನು ಗುಡಿಸಿ ಚೊಕ್ಕಟ ಮಾಡಬೇಕೆಂದಿದ್ದಾರೋ ನನಗೆ ತಿಳಿಯದು. ಅವರೂ ತಾವೇನು ಗುಡಿಸಿ ಶುಚಿ ಮಾಡಲಿದ್ದೇವೆಂಬುದನ್ನು ನಿರ್ದಿಷ್ಟಪಡಿಸಿಲ್ಲ' ಎಂದರು.

● ಅರಬ್ ಕೈಬಾಂಬ್– ಗುಂಡಿಗೆ 9 ಸ್ಪರ್ಧಿಗಳು ಬಲಿ

ಮ್ಯೂನಿಕ್, ಸೆಪ್ಟೆಂಬರ್ 6– ಇಲ್ಲಿಗೆ ಸಮೀಪದಲ್ಲಿರುವ ಮಿಲಿಟರಿ ವಿಮಾನ ನಿಲ್ದಾಣದಲ್ಲಿ ಮಂಗಳವಾರ ರಾತ್ರಿ ಪಶ್ಚಿಮ ಜರ್ಮನಿ ಪೊಲೀಸರು ಮತ್ತು ಅರಬ್ ಗೆರಿಲ್ಲಾಗಳ ನಡುವೆ ನಡೆದ ಗುಂಡಿನ ಕಾಳಗದ ಫಲವಾಗಿ ಭಯೋತ್ಪಾದಕರು ಹಿಡಿದಿಟ್ಟುಕೊಂಡಿದ್ದ ಎಲ್ಲ ಒಂಬತ್ತು ಮಂದಿ ಇಸ್ರೇಲಿ ಆಟಗಾರರೂ ಹತರಾದರು. ಚಕಮಕಿಯಲ್ಲಿ ಐವರು ಅರಬ್ ಕಮಾಂಡೋಗಳೂ ಮಡಿದರು. ಮೂವರು ಅರಬ್ ಗೆರಿಲ್ಲಾಗಳನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ.

ದೇಶದ ಘನತೆ ಹೆಚ್ಚಿಸುವ ಕ್ರೀಡಾತಾರೆಗಳಿಗೂ ತಪ್ಪದ ಕಿರಿಕಿರಿ

ಕ್ರೀಡೆ: ಕಾಡುತ್ತಿದೆ ಲೈಂಗಿಕ ದೌರ್ಜನ್ಯದ ಪೀಡೆ

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಫ್ರಾನ್ಸ್ ದೇಶದ ಟೆನಿಸ್ ಆಟಗಾರ್ತಿ ಫಿಯೊನಾ ಫೆರೊ ಈಚೆಗೆ ನೀಡಿರುವ ಹೇಳಿಕೆಯೊಂದು ಮಹಿಳಾ ಕ್ರೀಡಾಲೋಕದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಕಾಲ ಎಷ್ಟೇ ಬದಲಾಗಿದ್ದರೂ, ವನಿತೆಯರು ಕ್ರೀಡಾಕ್ಷೇತ್ರದಲ್ಲಿ ಉತ್ತುಂಗ ಸಾಧನೆ ಮಾಡಿದ್ದರೂ ಲೈಂಗಿಕ ದೌರ್ಜನ್ಯದ ಆಕ್ಟೋಪಸ್‌ನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

'2012ರಿಂದ 2015ರವರೆಗಿನ ಅವಧಿಯಲ್ಲಿ ಕೋಚ್ ಪಿಯರ್ ಬೊಟೆಯರ್ ಮೂರು ವರ್ಷಗಳ ಕಾಲ ನನ್ನ ಮೇಲೆ ಅತ್ಯಾಚಾರ ಎಸಗಿದ್ದ. ಅಲ್ಲದೇ ಹಲ್ಲೆ ಕೂಡ ಮಾಡಿದ್ದ' ಎಂದು ಫಿಯೊನಾ ಹೋದವಾರ ಬಹಿರಂಗಪಡಿಸಿದ್ದರು. ಅವರಿಗೆ ಈಗ ಹಲವು ತಾರಾ ಆಟಗಾರ್ತಿಯರು ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸಲು ಒತ್ತಾಯಿಸುತ್ತಿದ್ದಾರೆ. ಇದರ ಬೆನ್ನಹಿಂದೆಯೇ ಬೆಲಾರಸ್ ದೇಶದ ತಾರಾ ಆಟಗಾರ್ತಿ ವಿಕ್ಟೋರಿಯಾ ಅಜರೆಂಕಾ ಅವರು, ಡಬ್ಲ್ಯುಟಿಎ ಟೂರ್‌ಗಳಲ್ಲಿ ಯುವ ಆಟಗಾರ್ತಿಯರ ಮೇಲೆ ತರಬೇತುದಾರರು ಲೈಂಗಿಕ ದೌರ್ಜನ್ಯ ನಡೆಸುತ್ತಿರುವುದು ಹೊಸದೇನಲ್ಲ. ಆದರೆ ಈ ಪಿಡುಗನ್ನು ತಡೆಯಲು ಆದ್ಯತೆ ನೀಡಬೇಕು ಎಂದಿದ್ದಾರೆ.

ಆಟಗಾರ್ತಿಯರ ಕೌನ್ಸಿಲ್ ಸದಸ್ಯೆಯೂ ಆಗಿರುವ ಅಜರೆಂಕಾ ಹೇಳಿಕೆಯು ನಿಜಕ್ಕೂ ಟೆನಿಸ್ ಕ್ರೀಡೆಯ ಭವಿಷ್ಯದ ದೃಷ್ಟಿಯಿಂದ ಆತಂಕಕಾರಿಯಾಗಿದೆ. ಏಕೆಂದರೆ, ಭವಿಷ್ಯದ ತಾರೆಯರು ಸಿದ್ಧವಾಗುವುದೇ ಈ ಡಬ್ಲ್ಯುಟಿಎ ಟೂರ್ನಿಗಳಲ್ಲಿ. ಇದು ಹೊಸಪ್ರತಿಭೆಗಳಿಗೆ ಚಿಮ್ಮುಹಲಗೆಯೂ ಹೌದು. ಆದರೆ ಈ ಹಂತದಲ್ಲಿಯೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುವ ಈ ಎಳೆಯ ಮನಸ್ಸುಗಳ ಮೇಲಾಗುವ ಪರಿಣಾಮ ಏನು?

ಹೋದ ಮಾರ್ಚ್‌ನಲ್ಲಿ ಅಮೆರಿಕದ ಕೈಲಿ ಮೆಕೆಂಜಿಯವರ ಪ್ರಕರಣವನ್ನೇ ನೋಡಿ. ಕೋಚ್ ಅನಿಬಾಲ್ ಅರಂದಾ ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆಂದು ದೂರು ನೀಡಿದರೂ ಯು.ಎಸ್. ಟೆನಿಸ್ ಸಂಘಟನೆಯು (ಯುಎಸ್‌ಟಿಎ) ಕ್ರಮ ಕೈಗೊಂಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ್ದರು. ಯುಎಸ್‌ಟಿಎ ಮೇಲೆ ಕೋರ್ಟ್‌ನಲ್ಲಿ ಮೊಕದ್ದಮೆಯನ್ನೂ ಹೂಡಿದ್ದಾರೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ದೂರಿನ ಪ್ರತಿಯಲ್ಲಿ ತಮ್ಮ ಮೇಲೆ ನಡೆದ ದೌರ್ಜನ್ಯದ ಕುರಿತು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿಯೂ ಅದನ್ನೇ ಹೇಳಿದ್ದರು. ಸಂತ್ರಸ್ತೆಯೆಂಬ ಕಾರಣಕ್ಕೆ ಹೆಸರು ಮುಚ್ಚಿಡಬೇಡಿ, ತಮ್ಮ ಹೆಸರಿನೊಂದಿಗೆ ಸುದ್ದಿ ಪ್ರಕಟಿಸಿ ಎಂದೂ ಅಸೋಸಿಯೇಟೆಡ್ ಪ್ರೆಸ್ (ಎಪಿ) ಸುದ್ದಿಸಂಸ್ಥೆಗೆ ಮೆಕೆಂಜಿ ತಿಳಿಸಿದ್ದರು.

'ಆತ ನನ್ನ ಗುಪ್ತಾಂಗಕ್ಕೆ ಕೈಹಾಕಿದ್ದ. ಪ್ರತಿದಿನ ನನ್ನ ಮೈಕೈ ಮುಟ್ಟಿ ಅಸಭ್ಯವಾಗಿ ವರ್ತಿಸುತ್ತಿದ್ದ. ಇಂತಹ ನಡವಳಿಕೆಗಳಿಂದ ನಾನು ಆತಂಕಿತಳಾಗಿದ್ದೆ. ಅಲ್ಲದೇ ಅವಾಚ್ಯ ಪದಗಳಿಂದ ನಿಂದಿಸುತ್ತಿದ್ದ. ಇಂತಹ ನಡವಳಿಕೆಗಳಿಂದ ನಮ್ಮ ಆತ್ಮಗೌರವ ಹಾಗೂ ಆತ್ಮವಿಶ್ವಾಸ ಕುಂದುತ್ತವೆ' ಎಂದು ಮೆಕೆಂಜಿ ಹೇಳಿದ್ದರು.

ಯುರೋಪ್ ದೇಶಗಳು, ಅಮೆರಿಕ ಹಾಗೂ ಆಸ್ಟ್ರೇಲಿಯಾದಲ್ಲಿ ಟೆನಿಸ್ ಆಟಕ್ಕೆ ಅನುಗಾಲದಿಂದಲೂ ರಾಜಮರ್ಯಾದೆ ಇದೆ. ಕಟ್ಟುನಿಟ್ಟಿನ ನಿಯಮಗಳು ಇವೆ. ಗ್ರ್ಯಾನ್‌ಸ್ಲಾಂ ಟೂರ್ನಿಗಳೆಂದರೆ ಪ್ರತಿಷ್ಠಿತವಾದವುಗಳು. ಮಾರ್ಗರೆಟ್ ಕೋರ್ಟ್, ಸ್ಟೆಫಿ ಗ್ರಾಫ್, ಮೋನಿಕಾ ಸೆಲೆಸ್, ಮಾರ್ಟಿನಾ ನವ್ರಾಟಿಲೊವಾ, ಸೆರೆನಾ ವಿಲಿಯಮ್ಸ್, ವೀನಸ್ ವಿಲಿಯಮ್ಸ್ ಅವರಂತಹ ದಿಗ್ಗಜ ಆಟಗಾರ್ತಿಯರ ಸಾಧನೆಗಳು ಸ್ಫೂರ್ತಿ ತುಂಬುತ್ತವೆ. ಅವರಂತೆ ಆಗಬೇಕು ಎಂದು ಟೆನಿಸ್ ಅಂಕಣಕ್ಕೆ ಬರುವ ಪ್ರತಿಭೆಗಳಿಗೆ ಸುರಕ್ಷತೆ ಎಲ್ಲಿದೆ ಎಂಬ ಚರ್ಚೆ ನಡೆಯುತ್ತಿದೆ.

ಈ ಪಿಡುಗು ಟೆನಿಸ್‌ಗಷ್ಟೇ ಸೀಮಿತವಾಗಿಲ್ಲ. ಒಲಿಂಪಿಕ್ಸ್ ಜಿಮ್ನಾಸ್ಟಿಕ್ಸ್‌ನ ಚಿನ್ನದ ಹುಡುಗಿ ಸಿಮೊನಾ ಬೈಲ್ಸ್ ಹೋದ ವರ್ಷ ನ್ಯಾಯಾಂಗ ಸಮಿತಿಯ ಮುಂದೆ ನೀಡಿದ್ದ ಹೇಳಿಕೆಗಳು ನಿಜಕ್ಕೂ ಮೈನಡುಗಿಸಿದ್ದವು. ತಮ್ಮ ತಂಡದ ವೈದ್ಯ ಲ್ಯಾರಿ ನಾಸರ್ ಮಾಡಿದ ದೌರ್ಜನ್ಯಗಳ ಕುರಿತು ತಾವು ದೂರು ಕೊಟ್ಟಾಗ ಎಫ್‌ಬಿಐ ಅಧಿಕಾರಿಗಳು ಮತ್ತು ಅಮೆರಿಕ ಜಿಮ್ನಾಸ್ಟಿಕ್ಸ್ ಫೆಡರೇಷನ್ ಅಧಿಕಾರಿಗಳು ತೋರಿದ ನಿರ್ಲಕ್ಷ್ಯ ಧೋರಣೆಯ ಬಗ್ಗೆಯೂ ಆಕ್ರೋಶ ವ್ಯಕ್ತಪಡಿಸಿದ್ದರು. ಬೈಲ್ಸ್ ಹಾಗೂ ಅವರೊಂದಿಗೆ ಇದ್ದ ಮೂವರು ಜಿಮ್ನಾಸ್ಟ್‌ಗಳೂ ತಮ್ಮ ಮೇಲಿನ ದೌರ್ಜನ್ಯದ ಘಟನೆಗಳನ್ನು ಆಗ ಬಹಿರಂಗಪಡಿಸಿದರು. 58 ವರ್ಷದ ಲ್ಯಾರಿ ನಾಸರ್‌ಗೆ 2018ರಲ್ಲಿಯೇ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಜೈಲಿಗೆ ತಳ್ಳಲಾಗಿದೆ.

'ನಾನು ಲ್ಯಾರಿಯನ್ನು ಖಂಡಿಸುವಷ್ಟೇ, ಇಡೀ ವ್ಯವಸ್ಥೆಯನ್ನೂ ದೂಷಿಸುತ್ತೇನೆ. ಅವನ ವಿಕೃತ ಕಾರ್ಯಗಳಿಗೆ ಕಡಿವಾಣ ಹಾಕದ ವ್ಯವಸ್ಥೆಗೆ ಧಿಕ್ಕಾರ' ಎಂದು 24 ವರ್ಷದ ಬೈಲ್ಸ್ ಆಕ್ರೋಶ ವ್ಯಕ್ತಪಡಿಸಿದ್ದರು.

ಅಮೆರಿಕ ಜಿಮ್ನಾಸ್ಟಿಕ್ಸ್ ಮತ್ತು ಮಿಷಿಗನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ (ಎಂಎಸ್‌ಯು) ವೈದ್ಯನಾಗಿದ್ದ ಲ್ಯಾರಿ ಮೇಲೆ 70ಕ್ಕೂ ಹೆಚ್ಚು ಹೆಣ್ಣುಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ್ದ ಆರೋಪ ಇತ್ತು. ಈ ಬಗ್ಗೆ ಎಫ್‌ಬಿಐಗೆ ಅಮೆರಿಕ ಜಿಮ್ನಾಸ್ಟಿಕ್ಸ್ 2015ರಲ್ಲಿಯೇ ದೂರು ನೀಡಿತ್ತು. ಆದರೂ ಲ್ಯಾರಿ ತನ್ನ ಹುದ್ದೆಯಲ್ಲಿ ಮುಂದುವರಿದಿದ್ದ. 2016ರಲ್ಲಿ ಸುದ್ದಿಪತ್ರಿಕೆಯೊಂದು ಆತನ ಕರ್ಮಕಾಂಡಗಳ ಲೇಖನ ಪ್ರಕಟಿಸಿದಾಗ ಎಫ್‌ಬಿಐ ಗಂಭೀರ ಕ್ರಮಕ್ಕೆ ಮುಂದಾಯಿತು.

ಅಮೆರಿಕದಂತಹ ಮುಂದುವರಿದ ದೇಶದಲ್ಲಿಯೇ ಈ ಪರಿಸ್ಥಿತಿ ಇದ್ದರೆ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೇಗಿದ್ದೀತು?

ಕ್ರೀಡಾಪಟುಗಳನ್ನು ಪೋಷಿಸಿ ಬೆಳೆಸಬೇಕಾದ ಭಾರತ ಕ್ರೀಡಾ ಪ್ರಾಧಿಕಾರದ ವ್ಯಾಪ್ತಿಯಲ್ಲಿಯೇ ಹೆಣ್ಣುಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳು ವರದಿಯಾಗಿವೆ. 2010ರಿಂದ 2019ರವರೆಗೆ 24 ಎಸ್‌ಎಐಗಳಲ್ಲಿ 45 ಪ್ರಕರಣಗಳು ವರದಿಯಾಗಿದ್ದವು. ಅದರಲ್ಲಿ 29 ಕೋಚ್‌ಗಳ ಮೇಲೆ ದೂರುಗಳು ದಾಖಲಾಗಿದ್ದವು.

ಈ ಪೈಕಿ ಐವರು ಕೋಚ್‌ಗಳಿಗೆ ಸಂಬಳ ಕಡಿತದ ಶಿಕ್ಷೆ ನೀಡಲಾಗಿತ್ತು. ಇಬ್ಬರು ಕೋಚ್‌ಗಳ ಗುತ್ತಿಗೆಯನ್ನು ರದ್ದು ಮಾಡಲಾಗಿತ್ತು. ಒಬ್ಬ ಕೋಚ್ ಸಸ್ಪೆಂಡ್ ಆಗಿದ್ದರೆ, ಐವರು ಖುಲಾಸೆಯಾಗಿದ್ದರು. ಹೋದ ವರ್ಷ ಒಬ್ಬ ಕೋಚ್ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಲೋಕಸಭೆಗೆ ಸಲ್ಲಿಸಿದ್ದ ವರದಿಯನ್ನು ಆಧರಿಸಿ ಫೈನಾನ್ಷಿಯಲ್ ಎಕ್ಸ್‌ಪ್ರೆಸ್ ವೆಬ್‌ಸೈಟ್ ವರದಿ ಮಾಡಿತ್ತು.

ಕ್ರೀಡೆಗಳ ಬೆಳವಣಿಗೆ ಹಾಗೂ ಕ್ರೀಡಾಪಟುಗಳ ಏಳ್ಗೆಯಲ್ಲಿ ಕ್ರೀಡಾ ತರಬೇತುದಾರರು, ದೈಹಿಕ ಶಿಕ್ಷಣ ಶಿಕ್ಷಕರ ಪಾತ್ರ ಬಹಳ ದೊಡ್ಡದು. ಆದರೆ, ಹೆಣ್ಣುಮಕ್ಕಳ ವಿಷಯದಲ್ಲಿ ಅವರು ತಪ್ಪಾಗಿ ನಡೆದುಕೊಂಡಾಗ ಇಡೀ ವ್ಯವಸ್ಥೆ ಅಸ್ಥಿರಗೊಳ್ಳುತ್ತದೆ. ಕ್ರೀಡೆಯಲ್ಲಿ ಮಹಿಳೆಯರ ಸಾಧನೆಗೆ ಹಿನ್ನಡೆಯಾಗುತ್ತದೆ.

ಅತ್ಯಾಚಾರ, ಲೈಂಗಿಕ ದೌರ್ಜನ್ಯಗಳಷ್ಟೇ ಅಲ್ಲ. ಲಿಂಗತಾರತಮ್ಯ ಮತ್ತು ನಿರ್ಲಕ್ಷ್ಯ ಧೋರಣೆಗಳೂ ಕ್ರೀಡೆಗೆ ಅಂಟಿರುವ ಶಾಪ. ಇದು ಕ್ರೀಡಾಕ್ಷೇತ್ರದೊಳಗಿನ ಸಂಕಷ್ಟಗಳಾದರೆ, ಸಮಾಜ ಹಾಗೂ ಕೌಟುಂಬಿಕವಾಗಿಯೂ ಭಾರತದ ಮಹಿಳೆಯರು ಹಲವು ಸವಾಲುಗಳನ್ನು ಎದುರಿಸುತ್ತಿದ್ದಾರೆ. ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರ ಜೀವನಗಾಥೆಯೇ ಇದಕ್ಕೆ ಉದಾಹರಣೆ. ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ ಹಾಕಿ ತಂಡದ ಆಟಗಾರ್ತಿ ವಂದನಾ ಕಟಾರಿಯಾ ಅವರ ಮನೆ ಮುಂದೆ ದುಷ್ಕರ್ಮಿಗಳು ಗದ್ದಲ ಮಾಡಿದ್ದರು. ಜಾತಿ ನಿಂದನೆ ಮಾಡಿ ಕುಟುಂಬಕ್ಕೆ ಬೆದರಿಕೆಯೊಡ್ಡಿದ್ದರು. ಹರಿಯಾಣದಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಕುಸ್ತಿ ಅಖಾಡಕ್ಕೆ ಇಳಿಸಲು ಮುಂದಾಗಿದ್ದ ಮಹಾವೀರ್ ಫೋಗಾಟ್ ಎದುರಿಸಿದ ಸವಾಲುಗಳು ಒಂದೆರಡಲ್ಲ. ಸಮವಸ್ತ್ರದ ಕಾರಣಕ್ಕಾಗಿಯೇ ವಯಸ್ಕ ಹೆಣ್ಣುಮಕ್ಕಳು ಈಜು ಹಾಗೂ ಜಿಮ್ನಾಸ್ಟಿಕ್ಸ್ ಕ್ರೀಡೆಗಳನ್ನು ಬಿಟ್ಟು ಬೇರೆ ಕ್ರೀಡೆಗಳತ್ತ ವಾಲುವುದು ನಿಂತಿಲ್ಲ.

ಬ್ಯಾಡ್ಮಿಂಟನ್ ತಾರೆಯರಾದ ಸೈನಾ ನೆಹ್ವಾಲ್, ಪಿ.ವಿ. ಸಿಂಧು, ಕುಸ್ತಿಪಟು ಸಾಕ್ಷಿ ಮಲಿಕ್, ಬಾಕ್ಸಿಂಗ್ ಪಟು ಮೇರಿ ಕೋಮ್, ನಿಖತ್ ಜರೀನ್ ಅವರ ಸಾಧನೆಯಿಂದ ಪ್ರೇರಣೆಗೊಂಡು ಕ್ರೀಡೆಗೆ ಬರಲು ಹಾತೊರೆಯುವ ಬಾಲೆಯರಿಗೆ ಸುರಕ್ಷಿತ ವಾತಾವರಣ ಕಲ್ಪಿಸುವುದು ಸಮಾಜದ ಹೊಣೆ. ತಮ್ಮ ಮೇಲಿನ ದೌರ್ಜನ್ಯಗಳ ಕುರಿತು ಫಿಯೊನಾ ಅವರಂತೆ ಮುಕ್ತವಾಗಿ ಹೇಳಿಕೊಳ್ಳಲು ಮುಂದಾಗುವ ಹೆಣ್ಣುಮಕ್ಕಳಿಗೆ ಗಟ್ಟಿಯಾದ ಹಾಗೂ ಪ್ರಾಮಾಣಿಕವಾದ ಬೆಂಬಲ ನೀಡುವ ವ್ಯವಸ್ಥೆ ರೂಪುಗೊಳ್ಳಬೇಕು. ಆಗ ಮಾತ್ರ ಮಹಿಳೆಯರ ಕ್ರೀಡಾ ಸಾಧನೆಗಳ ಹೊಳಪು ಹೆಚ್ಚುವುದು.

ಚುರುಮುರಿ

ಬುಲ್ ಬುಲ್ ಬೇಕು!

• ಗುರು ಪಿ.ಎಸ್.

'ಎನ್ರೀ ಬೀಚ್‌ಗೆ, ಅಲ್ಲ... ಆಫೀಸ್‌ಗೆ ಹೋಗಲ್ವ' ರೇಗಿಸಿದಳು ಹೆಂಡತಿ.

ತವರೂರಿನಲ್ಲೇ ಹೋಗಿ ನೆಲೆಸೋಣ ಅನ್ನೋ ಅವಳ ಸಲಹೆಗೆ, 'ಬೆಂಗಳೂರಿನಂಥ ಐಟಿ ಸಿಟಿ ಬಿಟ್ಟು ನಿಮ್ಮ ತವರೂರಿಗೆ ಬಂದು ನಾನೇನು ನೊಣ ಹೊಡೆಯಬೇಕಾ?' ಎಂದು ಹಿಂದೊಮ್ಮೆ ನಾನಾಡಿದ ಮಾತಿಗೆ ಈಗ ಸೇಡು ತೀರಿಸಿಕೊಳ್ಳುವಂತೆ ಮಾತಾಡುತ್ತಿದ್ದಳು.

'ರಾತ್ರಿ ಮಳೆ ಬಂದರೆ, ಗುಂಡಿ ಎಷ್ಟು ಆಳ ಇದೆ ಅಂತ ಗೊತ್ತಾಗದೆ ಬಿದ್ದಿಗಿದ್ದೀರಾ, ತಗೊಳ್ಳಿ ಈ ಹೆಲ್ಮೆಟ್ ಹಾಕ್ಕೊಳ್ಳಿ...'

'ಹಾಗೇನಿಲ್ಲ, ನಾನು ಐದು ವರ್ಷದಿಂದ ಅದೇ ರಸ್ತೇಲಿ ಓಡಾಡ್ತಿರೋದು. ಆಗಿನಿಂದಲೂ ಗುಂಡಿಗಳು ಹಾಗೇ ಇವೆ. ಯಾವ್ಯಾವ ಗುಂಡಿ ಎಷ್ಟು ಆಳ ಇದೆ ಅಂತ ಗೊತ್ತು'.

'ನಿಮ್ಮ ಐಟಿ ಸಿಟಿಯಲ್ಲಿ ಓಡಾಡೋಕೆ ಬೋಟ್ ಬೇಕಾಗುತ್ತೆ ಅನಿಸುತ್ತೆ. ನಮ್ಮಪ್ಪಂಗೆ ಹೇಳಿ ಒಂದು ಕೊಡಿಸ್ಲಾ' ಮತ್ತೆ ಕಾಲೆಳೆದಳು.

'ಕಿಚಾಯಿಸಿದ್ದು ಸಾಕು. ಊಟದ ಬಾಕ್ಸ್ ಕೊಡು' ಎಂದೆ ಸಿಟ್ಟಿನಲ್ಲಿ. ಮೂರು ಬಾಕ್ಸ್ ಕೈಗಿಟ್ಟಳು.

'ಮೂರು ಬಾಕ್ಸ್ ಏಕೆ?'

'ಒಂದು ಮಧ್ಯಾಹ್ನಕ್ಕೆ, ಮತ್ತೊಂದು ರಾತ್ರಿಗೆ. ಇನ್ನೊಂದು ನಾಳೆ ಬೆಳಿಗ್ಗೆಗೆ. ನೀವು ಸಿಲ್ಕ್‌ಬೋರ್ಡ್ ರೋಡ್ ಟ್ರಾಫಿಕ್ ದಾಟಿಕೊಂಡು ಬರೋದು ನಾಳೆ ಮಧ್ಯಾಹ್ನವೇ ಆಗಬಹುದು' ನಕ್ಕಳು.

'ಅನ್ನ ಕೊಟ್ಟ ಬೆಂಗಳೂರಿಗೆ ಬೈಬೇಡ ನೋಡು'.

'ಊರಿಗೆ ಬೈತಿಲ್ಲ ರೀ... ನಿಮ್ಮ ಎಮ್ಮೆಲ್ಲೆ, ಎಂಪಿಗಳಿಗೆ ಬೈತಿರೋದು'.

'ಎಮ್ಮೆಲ್ಲೆ ನಮ್ಮ ಕ್ಲಾಸ್, ಎಂಪಿ ನಮ್ಮ ರಿಲಿಜನ್ ಅಂತ ಗೊತ್ತಿಲ್ವ ನಿಂಗ್' ಸಿಟ್ಟಲ್ಲೇ ಹೇಳಿದೆ.

'ಹೋಗ್ಲಿ ಬಿಡಿ. ನಿಮ್ಮ ಎಮ್ಮೆಲ್ಲೆ, ಎಂಪಿಗಳು ಮಾಡಿರೋ ಚಿನ್ನದ ರಸ್ತೆ ಬಗ್ಗೆನೂ ನಾನು ಆಡ್ಕೊಳ್ಲಲ್ಲ. ಸುಮ್ನೆ ತಲೆನೋವ್ಯಾಕೆ, ಒಂದು ಐಡಿಯಾ ಕೊಡ್ಲಾ?'

'ಹೇಳು'.

'ನಿಮಗೊಂದು, ನಿಮ್ಮ ಮಕ್ಕಳಿಗೆ ಒಂದೊಂದು ಬುಲ್ ಬುಲ್ ತಗೊಂಡ್ ಬಿಡಿ. ಆಫೀಸ್–ಮನೆ–ಸ್ಕೂಲ್‌ಗೆ ಹಾರಾಡ್ಕೊಂಡು ಇರಬಹುದು!'

ಸಂಗತ

ಎಚ್ಚರ... 'ದ್ವೀಪ'ವಾಗುತ್ತಿದೆ ಅರಣ್ಯ!

ಅಭಿವೃದ್ಧಿಯ ಅಮಾತ್ಯರ ಮುಂದೆ ಸೊರಗುತ್ತಿದೆ ಜೀವಿವೈವಿಧ್ಯ

• ಅಖಿಲೇಶ್ ಚಿಪ್ಪಳಿ

ಬೆಂಗಳೂರಿನಿಂದ 20 ಕಿ.ಮೀ. ದೂರದ ಕನಕಪುರ ರಸ್ತೆಗೆ ಸಮಾನಾಂತರವಾಗಿ ಒಂದು ಅರಣ್ಯ ಪ್ರದೇಶವಿದೆ. ಬರೀ 590 ಎಕರೆಯಷ್ಟು ವಿಸ್ತಾರ ಹೊಂದಿರುವ, ಎಲೆಯುದುರಿಸುವ ಈ ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ತುರಹಳ್ಳಿ ಅರಣ್ಯವೆಂದು ಹೆಸರಿದೆ.

ಬೆಂಗಳೂರಿನಿಂದ ಮೈಸೂರಿಗೆ ಬೇಗ ತಲುಪಿಸುವ ರಸ್ತೆ ಯೋಜನೆಯೊಂದು 1996ರಲ್ಲಿ ಬಂತು. 'ನೈಸ್' ಎಂದು ಕರೆಯಲಾಗುವ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೂ ಪೂರ್ವದಲ್ಲಿ ತುರಹಳ್ಳಿ ಅರಣ್ಯ ಪ್ರದೇಶವು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಸಂಪರ್ಕವನ್ನು ಹೊಂದಿತ್ತು.

ಕಾಡಿನ ಸಂಪರ್ಕದಲ್ಲೇ ಚಲಿಸುವ ಚಿರತೆಗಳು ತುರಹಳ್ಳಿ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಸಾಕು ನಾಯಿಗಳನ್ನು ಬೇಟೆಯಾಡುತ್ತಿದ್ದವು. ಅಲ್ಲಿ ಹಂದಿಗಳೂ ಬಹಳಷ್ಟು ಸಂಖ್ಯೆಯಲ್ಲಿ ಇದ್ದಿದ್ದರಿಂದಾಗಿ, ಅದು ಚಿರತೆಗಳು ಓಡಾಡುವ ಪ್ರದೇಶವಾಗಿತ್ತು. ನೈಸ್ ರಸ್ತೆ ನಿರ್ಮಾಣವಾದ ನಂತರದಲ್ಲಿ ತುರಹಳ್ಳಿ ಅರಣ್ಯ ಪ್ರದೇಶದ ನೆಲವಾಸಿ ಪ್ರಾಣಿಗಳಿಗೆ ಬನ್ನೇರುಘಟ್ಟದಿಂದ ಬಂದು ಹೋಗುವ ಅವಕಾಶ ಇಲ್ಲದಂತಾಯಿತು.

ಈ ಪ್ರದೇಶವಿಂದು ಸಂಪೂರ್ಣ 'ದ್ವೀಪ'ದಂತಾಗಿ, ಜೀವಿವೈವಿಧ್ಯವಿಲ್ಲದ ಮೃತ ಅರಣ್ಯ ಪ್ರದೇಶವಾಗಿ ಪರಿವರ್ತಿತವಾಗಿದೆ. ಬೆಂಗಳೂರಿನಿಂದ ಸೈಕಲ್ಲಿನಲ್ಲಿ ಬರುವ ಸವಾರರಿಗೆ ಒಂದಷ್ಟು ಮುದ ನೀಡುವ ಸೇವೆಯನ್ನಷ್ಟೇ ಮಾಡಲು ಅದಕ್ಕೆ ಸಾಧ್ಯವಾಗುತ್ತಿದೆ.

ರಾಜ್ಯದಲ್ಲಿ ಒಟ್ಟು ಒಂಬತ್ತೂವರೆ ಲಕ್ಷ ಹೆಕ್ಟೇರ್ ಡೀಮ್ಡ್ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆ ಹೊಂದಿತ್ತು. ಇಷ್ಟು ದೊಡ್ಡ ವ್ಯಾಪ್ತಿಯನ್ನು ಅರಣ್ಯ ಇಲಾಖೆಗೆ ನೀಡಿದರೆ, ಉಳಿದ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತದೆ ಎಂಬ ವರಾತವನ್ನು ಕೆಲವು ಜನಪ್ರತಿನಿಧಿಗಳು ತೆಗೆದ ಕಾರಣಕ್ಕೆ, ಆರೂವರೆ ಲಕ್ಷ ಹೆಕ್ಟೇರ್ ಪ್ರದೇಶವನ್ನು ಮತ್ತೆ ಕಂದಾಯ ಇಲಾಖೆಗೆ ಹಸ್ತಾಂತರಿಸಬೇಕು ಎಂಬುದು ಸರ್ಕಾರದ ವಾದ. ಈ ಪ್ರದೇಶ ಕೂಡಾ ವಿವಿಧ ವನ್ಯಜೀವಿಗಳ ಸಂಪರ್ಕ ಕೊಂಡಿಯಾಗಿದೆ. ಇದನ್ನು ಕಂದಾಯ ಇಲಾಖೆ ವಾಪಸ್ ಪಡೆದು ಕೃಷಿಗೋ ಕೈಗಾರಿಕೆಗಳಿಗೋ ಹಂಚಿದರೆ, ತುರಹಳ್ಳಿಯಂತಹ ಮತ್ತಷ್ಟು ದ್ವೀಪ ಕಾಡುಗಳು ಸೃಷ್ಟಿಯಾಗುತ್ತವೆ.

ಈ ಹೊತ್ತಿನಲ್ಲೇ ತಾಳಗುಪ್ಪದಿಂದ ಹೊನ್ನಾವರಕ್ಕೆ ಹೊಸ ರೈಲು ಪ್ರಸ್ತಾವ ಮುನ್ನೆಲೆಗೆ ಬರುತ್ತಿದೆ. ಅತ್ಯಂತ ದುರ್ಗಮ ಘಟ್ಟಪ್ರದೇಶ ಹಾಗೂ ಶರಾವತಿ ಅಭಯಾರಣ್ಯದ ನಡುವೆ ಹಾದುಹೋಗುವ ಈ ರೈಲು ಮಾರ್ಗ ಇಲ್ಲಿ ನೆಲೆಸಿರುವ, ಪಶ್ಚಿಮಘಟ್ಟಗಳಿಗೆ ಮಾತ್ರ ಸೀಮಿತವಾಗಿರುವ ಸಿಂಗಳೀಕ ಸಂತತಿಗೆ ಕುತ್ತು ತರುವಂತಹ ಪ್ರಯತ್ನವಾಗಿದೆ.

ರಾಜ್ಯದ ಎಲ್ಲಾ ನಗರಗಳು ಬೆಳೆಯುತ್ತಿವೆ. ಬಯಲುನಾಡಿನ ನಗರಗಳ ಬೆಳವಣಿಗೆಯು ಜೀವಿವೈವಿಧ್ಯದ ಮೇಲೆ ಅಷ್ಟೇನೂ ಪರಿಣಾಮ ಬೀರದು. ಆದರೆ, ಪಶ್ಚಿಮಘಟ್ಟಗಳಲ್ಲಿ ಈ ನಗರೀಕರಣದಿಂದಾಗಿ ಅರಣ್ಯ ಮತ್ತು ಜೀವಿವೈವಿಧ್ಯಗಳಿಗೆ ಧಕ್ಕೆಯಾಗುವುದು ಶತಃಸಿದ್ಧ.

ಸಾಗರದಿಂದ ಮೂರು ಕಿ.ಮೀ. ದೂರದಲ್ಲಿರುವ ಇಕ್ಕೇರಿ ಅಘೋರೇಶ್ವರ ವೃತ್ತದಲ್ಲಿ ಎಡಕ್ಕೆ ತಿರುಗಿ ವರದಾಮೂಲಕ್ಕೆ ಹೋಗುವ ಕಿರುರಸ್ತೆಯಲ್ಲಿ 1.2 ಕಿ.ಮೀ. ಸಾಗಿದರೆ ಎಡಕ್ಕೆ ಟೊಳ್ಳಾದ ದೊಡ್ಡದೊಂದು ಹುಳಿಮಾವಿನಮರವಿದೆ. ಆ ಮರದ ಪೊಟರೆಯಲ್ಲಿ ದಿವಾಚರಿಯಾದ ಉಡ ಹಾಗೂ ನಿಶಾಚರಿಯಾದ ಹಾರುವ ಬೆಕ್ಕು ಹತ್ತು ವರ್ಷಗಳಿಂದ ಸಹಬಾಳ್ವೆ ನಡೆಸುತ್ತಾ ಬಂದಿದ್ದವು. ಮರದ ತುದಿಯಿಂದ ಇನ್ನೊಂದು ಮರದ ಬುಡಕ್ಕೆ ತೊಗಲನ್ನು ಬಳಸಿ ಗ್ಲೈಡ್ ಮಾಡುತ್ತಾ ಇಳಿಯುವ ಹಾರುಬೆಕ್ಕಿಗೆ ಅಪಾಯವಿರುವುದು ವಿದ್ಯುತ್ ತಂತಿಯಿಂದಾದರೆ, ಮರದಿಂದ ಇಳಿದು ನೆಲದಲ್ಲಿ ಆಹಾರ ಹುಡುಕುವ ಉಡಕ್ಕೆ ಅಪಾಯವಿದ್ದುದು ಚಲಿಸುವ ವಾಹನಗಳಿಂದ.

ಆ ರಸ್ತೆಯಲ್ಲಿ ಹೋಗುವ ಅದೆಷ್ಟೋ ಜನ ಉಡವನ್ನು ಹೊಡೆಯಲು ಬಹಳಷ್ಟು ಬಾರಿ ವಿಫಲ ಪ್ರಯತ್ನ ಮಾಡಿದ್ದರು. ಆ ಮಾವಿನಮರದ ಎದುರಿಗೆ ವಾಸಿಸುವ ಮಹಿಳೆಯೊಬ್ಬರು ಬಹಳಷ್ಟು ಬಾರಿ ಉಡವನ್ನು ಬೇಟೆಗಾರರಿಂದ ರಕ್ಷಣೆ ಮಾಡಿದ್ದರು. ಆದರೆ ಇತ್ತೀಚೆಗೆ ಅಕ್ರಮ ಮರಳು ಲಾರಿಯ ವೇಗದ ಚಕ್ರಕ್ಕೆ ಸಿಲುಕಿ ಉಡ ಅಪ್ಪಚ್ಚಿಯಾಯಿತು. ಹಳ್ಳಿಯ ಆ ಹಾದಿಯಲ್ಲಿ ಮಿತಿಮೀರಿದ ವೇಗದಲ್ಲಿ ವಾಹನ ಚಲಾಯಿಸುವುದು ಕಾನೂನುಬಾಹಿರ. ಈಗಂತೂ ಹಸುರು ಹಾವು, ಸಹಸ್ರಪದಿ, ನೆಲಗಪ್ಪೆಯಂತಹ ಅನೇಕ ಪ್ರಭೇದಗಳ ಸಂತತಿಗಳು ಮರಿಗಳಾಗಿ ಹೊರಬರುತ್ತಿವೆ. ಈ ಪ್ರಾಣಿಗಳು ಸೂಕ್ತ ಸ್ಥಳವನ್ನರಸಿ ಸ್ಥಳೀಯವಾಗಿ ವಲಸೆ ಪ್ರಕ್ರಿಯೆ ಪ್ರಾರಂಭಿಸುತ್ತವೆ. ಅವುಗಳ ಪಥದಲ್ಲಿನ ಬಹುತೇಕ ಪ್ರದೇಶಗಳು ರಸ್ತೆಗಳಾಗಿ ಮಾರ್ಪಟ್ಟು ವಾಹನಗಳ ಉಪಯೋಗಕ್ಕೆ ಸಂಪೂರ್ಣವಾಗಿ ಮೀಸಲಾಗಿವೆ. ಇದರಿಂದಾಗಿ, ಅನೇಕ ಜೀವಿವೈವಿಧ್ಯಗಳು ವಾಹನಗಳಿಗೆ ಸಿಲುಕಿ ಸಾವನ್ನಪ್ಪುತ್ತವೆ.



ಬಸುರಿ ಗ್ವಾಂಕರ ಕಪ್ಪೆಯೊಂದು ಮರಳು ಲಾರಿಯಡಿಯಲ್ಲಿ ಅಪ್ಪಚ್ಚಿಯಾಯಿತು ಎಂದುಕೊಳ್ಳಿ. ಅಲ್ಲಿಗೆ ಸುಮಾರು ಇಪ್ಪತ್ತು ಸಾವಿರ ಮೊಟ್ಟೆಗಳು ಇಹಲೋಕ ತ್ಯಜಿಸಿದಂತೆ. ಅದರಲ್ಲಿ ಹತ್ತು ಸಾವಿರ ಮೊಟ್ಟೆಗಳು ಮರಿಗಳಾಗಿ, ಅದರಲ್ಲಿ ಐದು ಸಾವಿರ ಕಪ್ಪೆಗಳು ಬದುಕಿ, ಮಾನವನಿಗೆ ನೈಸರ್ಗಿಕ ಸೇವೆ ನೀಡುತ್ತವೆ ಎಂದುಕೊಂಡರೆ, ಅದರ ಸೇವೆಯನ್ನು ಹಣದ ರೂಪದಲ್ಲಿ ಅಳೆಯಲಾಗುವುದಿಲ್ಲ.

ಕಾಲುದಾರಿ, ಪಂಚಾಯಿತಿ ರಸ್ತೆಯಾಗಿ, ಮೇಲ್ದರ್ಜೆಗೇರಿ ಲೋಕೋಪಯೋಗಿ ರಸ್ತೆಯಾಗುವ ಪ್ರತೀ ಹಂತದಲ್ಲೂ ಈ ತರಹದ ಬೆಳವಣಿಗೆಗಳು ನಡೆಯುತ್ತಲೇ ಇರುತ್ತವೆ. ಪಶ್ಚಿಮಘಟ್ಟದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಘೋಷಣೆ ಮಾಡುವುದನ್ನು ಅರಣ್ಯ ಸಚಿವರೇ ವಿರೋಧಿಸಿದ್ದಾರೆ. ಇನ್ನು ಜೀವಿವೈವಿಧ್ಯ ಉಳಿಯುವುದೆಂತು?

ವಾಚಕರ ವಾಣಿ

ಪಾರದರ್ಶಕತೆ ನಿರಂತರವಾಗಿರಲಿ

ಅಕ್ರಮ ಮಾರ್ಗಗಳಿಂದ ಪಡೆದಿದ್ದ 3.30 ಲಕ್ಷ ನಕಲಿ ಪಡಿತರ ಚೀಟಿಗಳನ್ನು ರಾಜ್ಯ ಸರ್ಕಾರವು ಪತ್ತೆ ಹಚ್ಚಿ ರದ್ದುಗೊಳಿಸಿದ್ದು ಶ್ಲಾಘನೀಯ. ಅನರ್ಹರ ಪಾಲಾಗುತ್ತಿದ್ದ ಪಡಿತರ ಪದಾರ್ಥಗಳು ಇನ್ನು ಮುಂದಾದರೂ ದುರುಪಯೋಗವಾಗದಂತೆ ನೋಡಿಕೊಳ್ಳುವುದು ಮುಖ್ಯ. ಆಹಾರ ಇಲಾಖೆಯು ಈ ಪಾರದರ್ಶಕತೆಯನ್ನು ನಿರಂತರವಾಗಿ ಕಾಪಾಡಿಕೊಂಡು, ಪಡಿತರ ಯೋಜನೆಯನ್ನು ದುರುಪಯೋಗ ಮಾಡಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಹಾಗೆಯೇ ಅರ್ಹ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

ಬೋಟ್ ವ್ಯವಸ್ಥೆ ಕಲ್ಪಿಸಿ!

ಈ ಬಾರಿಯ ಮುಂಗಾರಿನ ಆರ್ಭಟ ಬಹಳ ಬಿರುಸಾಗಿದ್ದು, ಇಡೀ ಕರುನಾಡನ್ನು ಜಲಾಘಾತದಿಂದ ನಲುಗಿಸಿದೆ. ಕೋಡಿ ಬಿದ್ದಿರುವ ಕೆರೆ– ಕಟ್ಟೆಗಳು, ನಾವು ತಾಂತ್ರಿಕವಾಗಿ ಎಷ್ಟೇ ಮುಂದುವರಿದರೂ ಪ್ರಕೃತಿಗೆ ವಿರುದ್ಧವಾಗಿ ನಡೆದರೆ ಮುಂದೆ ಹೋಗಲಾರೆವು ಎಂಬುದನ್ನು ಮತ್ತೆ ತೋರಿಸಿಕೊಟ್ಟಿವೆ. ಬೆಂಗಳೂರಿನ ಒಂದಷ್ಟು ಭಾಗಗಳು ದ್ವೀಪದಂತೆ ಆಗಿರುವುದು ನಮ್ಮ ದುರಾಸೆಯ ಫಲವೇ ಆಗಿದೆ. ಕೆರೆಗಳಿದ್ದ ಪ್ರದೇಶಗಳಲ್ಲಿ ಬಡಾವಣೆಗಳು ತಲೆ ಎತ್ತಿರುವುದರ ಪರಿಣಾಮ ಏನೆಂಬುದು ಈ ರೀತಿಯ ರಣಭಯಂಕರ ಮಳೆ ಆದಾಗ ನಮಗೆ ಎದ್ದು ಕಾಣುತ್ತದೆ.

ಈಗ ನಾವು ಆ್ಯಪ್‌ಗಳ ಮೂಲಕ ವಾಹನಗಳನ್ನು ಬುಕ್ ಮಾಡಿ ಸಂಚಾರ ಮಾಡುತ್ತಿದ್ದೇವೆ. ಸರ್ಕಾರಗಳು ದೋಣಿಗಳನ್ನು ಅಭಿವೃದ್ಧಿಪಡಿಸಿ ಮಳೆಗಾಲದಲ್ಲಿ ಸಂಚರಿಸಲು ಅನುಕೂಲವಾಗುವಂತೆ ಆ್ಯಪ್ ಸೌಲಭ್ಯ ಕಲ್ಪಿಸಬೇಕು. ಇದರಿಂದ ಮಳೆಗಾಲದಲ್ಲಿ ಬೆಂಗಳೂರಿನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತೆರಳಲು ಸಾರ್ವಜನಿಕರಿಗೆ ಬಹಳ ಅನುಕೂಲವಾಗುತ್ತದೆ!

ಹರವೆ ಸಂಗಣ್ಣ ಪ್ರಕಾಶ್, ಹರವೆ, ಚಾಮರಾಜನಗರ

ದಸರಾ ಉದ್ಘಾಟನೆ: ಸೈನಿಕರಿಂದ ಆಗಲಿ

ವಿಶ್ವವಿಖ್ಯಾತ ದಸರಾ ಆರಂಭಕ್ಕೆ ಕೆಲವೇ ದಿನಗಳು ಉಳಿದಿವೆ. ಸಾಮಾನ್ಯವಾಗಿ ಚಿತ್ರನಟರು, ಸಾಹಿತಿಗಳು, ಕ್ರೀಡಾಪಟುಗಳಂತಹ ಪ್ರಮುಖ ವ್ಯಕ್ತಿಗಳಿಂದ ದಸರಾ ಉದ್ಘಾಟನೆ ಮಾಡಿಸಲಾಗುತ್ತದೆ. ಆದರೆ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ, ದೇಶಕ್ಕೆ ಸ್ವಾತಂತ್ರ್ಯ ತಂದುಕೊಡಲು ಹೋರಾಡಿದವರು ಹಾಗೂ ದೇಶ ಕಾಯುವ ಸೈನಿಕರಿಂದ ದಸರಾ ಉದ್ಘಾಟನೆ ಮಾಡಿಸುವುದು ಒಳ್ಳೆಯದು. ಅವರ ಅನುಭವದ ಮಾತುಗಳು ಜನರಿಗೆ ಮತ್ತಷ್ಟು ಸ್ಫೂರ್ತಿ ನೀಡುತ್ತವೆ.

ಎಂ.ಎಸ್.ಉಷಾ ಪ್ರಕಾಶ್, ಮೈಸೂರು

ಮಹತ್ವದ ಹೇಳಿಕೆ: ಜಾರಿಗೆ ಬದ್ಧತೆ ತೋರಿ

ಖಾಲಿಯಾಗುವ ಶಿಕ್ಷಕ ಹುದ್ದೆಗಳಿಗೆ ತಕ್ಷಣವೇ ನೇಮಕ ಮಾಡಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಹಳ ಮಹತ್ವದ ಹೇಳಿಕೆ ನೀಡಿದ್ದಾರೆ (ಪ್ರ.ವಾ., ಸೆ. 6). ಇದು, ಮತ ಗಳಿಕೆಯ ರಾಜಕೀಯ ಹೇಳಿಕೆಯಾಗದೆ, ಕಾರ್ಯಗತವಾದಾಗ ಮಾತ್ರ ಅದಕ್ಕೊಂದು ಅರ್ಥ ಬರುತ್ತದೆ. ಏಕೆಂದರೆ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಕರಿಲ್ಲದೆ ನಮ್ಮ ಗ್ರಾಮಾಂತರ ಶಾಲೆಗಳು ಹಾಳಾಗುತ್ತಿವೆ. ಈ ಶಾಲೆಗಳಲ್ಲಿ ಕಲಿಯುತ್ತಿರುವವರು ಜನಸಾಮಾನ್ಯರ ಮಕ್ಕಳು ಎಂಬುದು ಸರ್ಕಾರದ ಗಮನದಲ್ಲಿರಬೇಕು. ಹೀಗಾಗಿ ಅಗತ್ಯಕ್ಕೆ ಅನುಗುಣವಾಗಿ ಶಿಕ್ಷಕರಿಲ್ಲದಿದ್ದರೆ ಜನಸಾಮಾನ್ಯರ ಮಕ್ಕಳ ಶಿಕ್ಷಣದ ಹಕ್ಕನ್ನೇ ಸರ್ಕಾರ ಕಸಿದುಕೊಂಡಂತಾಗುತ್ತದೆ.

ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ವಿಪರೀತ ಕೊರತೆಯಿಂದಾಗಿ ಪಾಲಕರು ಖಾಸಗಿ ಶಾಲೆಗಳ ಕಡೆ ಮುಖ ಮಾಡುತ್ತಿದ್ದಾರೆ. ಇದರಿಂದಾಗಿಯೇ ನಮ್ಮ ಸರ್ಕಾರಿ ಶಾಲೆಗಳು ಮುಚ್ಚುವ ಹಂತಕ್ಕೆ ತಲುಪಿವೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ನಿರ್ಧಾರ ಜರೂರಾಗಿ ಕಾರ್ಯರೂಪಕ್ಕೆ ಬರಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಭಿಕ್ಷೆ ತಪ್ಪಿಸಿ, ಇಲ್ಲವೇ ತೆರಿಗೆ ಪಡೆಯುವುದನ್ನು ನಿಲ್ಲಿಸಿ

ನಗರಪಾಲಿಕೆಯವರು ಸ್ವತ್ತಿನ ತೆರಿಗೆ ಪಡೆಯುವ ಸಂದರ್ಭದಲ್ಲಿ ಭಿಕ್ಷುಕರ ಸೆಸ್ ಸಹ ವಸೂಲಿ ಮಾಡುತ್ತಾರೆ. ಹಾಗೆಯೇ ರಾಜ್ಯ ಸರ್ಕಾರದ ವತಿಯಿಂದ ಭಿಕ್ಷುಕರ ಪುನರ್ವಸತಿ ಕೇಂದ್ರವು ಕಾರ್ಯನಿರ್ವಹಿಸುತ್ತದೆ. ಪ್ರತೀ ನಗರದ ಸಂಚಾರ ದೀಪಗಳ ಬಳಿ ಇತ್ತೀಚೆಗೆ ಲೈಂಗಿಕ ಅಲ್ಪಸಂಖ್ಯಾತರು ಭಿಕ್ಷಾಟನೆ ನಡೆಸುವುದು ಮಿತಿಮೀರಿದೆ. ರೈಲುಗಳಲ್ಲಿಯೂ ಇವರ ಉಪಟಳ ವಿಪರೀತ ಹೆಚ್ಚಾಗಿದೆ.

ಇದನ್ನು ನಿಯಂತ್ರಿಸುವಲ್ಲಿ ಪಾಲಿಕೆಗಳು ಮತ್ತು ಪುನರ್ವಸತಿ ಕೇಂದ್ರಗಳು ವಿಫಲವಾಗಿವೆ. ಜೀವನ ನಿರ್ವಹಣೆಗೆ ಸಹಾಯವಾಗುವಂತೆ ಇವರಿಗೆ ತರಬೇತಿ ನೀಡುವುದು ಪುನರ್ವಸತಿ ಕೇಂದ್ರಗಳ ಕೆಲಸ. ಅದನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ ಭಿಕ್ಷುಕರ ಸೆಸ್ ವಸೂಲಿ ಮಾಡಲು ಸರ್ಕಾರಕ್ಕೆ ಯಾವುದೇ ಹಕ್ಕಿಲ್ಲ.

ಎಸ್.ರವಿ, ಮೈಸೂರು

ಭ್ರಷ್ಟಾಚಾರಮುಕ್ತ ಆಡಳಿತ: ಬೇಕು ತುರ್ತು ನೀತಿ

ರಾಜ್ಯ ಶಿಕ್ಷಣ ಇಲಾಖೆಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ದೂರುಗಳನ್ನು ಸ್ವೀಕರಿಸಲು ಮತ್ತು ತನಿಖೆ ನಡೆಸಲು ಪ್ರತ್ಯೇಕ ಆಯೋಗ ರಚಿಸುವುದಾಗಿ ಶಿಕ್ಷಣ ಸಚಿವರು ಪ್ರಕಟಿಸಿರುವುದು ಸ್ವಾಗತಾರ್ಹ. ಆದರೆ ನಮ್ಮಲ್ಲಿ ಯಾವ ಇಲಾಖೆ ಭ್ರಷ್ಟಾಚಾರದಿಂದ ಮುಕ್ತವಾಗಿದೆ? ಲಂಚ ನೀಡದಿದ್ದರೆ ಯಾವುದೇ ಸರ್ಕಾರಿ ಕಚೇರಿಯಲ್ಲೂ ಯಾವ ಕೆಲಸವೂ ಆಗುವುದಿಲ್ಲ. ಈ ವ್ಯವಸ್ಥೆಗೆ ಜನ ನಿಧಾನವಾಗಿ ಹೊಂದಿಕೊಳ್ಳುತ್ತಿದ್ದಾರೆ. ಲಂಚ ಪಡೆದು ಶೀಘ್ರವಾಗಿ ಕೆಲಸ ಮಾಡಿಕೊಡುವ ನೌಕರರನ್ನು ಮೆಚ್ಚಿಕೊಳ್ಳುವ ಹಂತ ತಲುಪಿದ್ದಾರೆ.

ಶಿಕ್ಷಣ ಇಲಾಖೆಯೊಂದರ ಅವ್ಯವಹಾರಗಳ ಬಗ್ಗೆ ಮಾತ್ರ ತನಿಖೆ ನಡೆಸಿದರೆ ಸಾಲದು. ಈ ಆಯೋಗಗಳು ಪ್ರಾಮಾಣಿಕವಾಗಿ ಕೆಲಸ ಮಾಡುವ ನಂಬಿಕೆಯಿಲ್ಲ. ಕೇವಲ ಹುತ್ತ ಬಡಿಯುವುದರಿಂದ ಹಾವು ಸಾಯುವುದಿಲ್ಲ. ಹೀಗಾಗಿ, ಭ್ರಷ್ಟಾಚಾರಮುಕ್ತ ಆಡಳಿತವನ್ನು ರೂಪಿಸಬೇಕಾದುದು ಸರ್ಕಾರದ ತುರ್ತುನೀತಿಯಾಗಬೇಕಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೀವರಕ್ಷಕ ಸೀಟ್‌ಬೆಲ್ಟ್

• ಜಯಸಿಂಹ ಆರ್.

ಟಾಟಾ ಸನ್ಸ್‌ನ ಮಾಜಿ ಅಧ್ಯಕ್ಷ ಮತ್ತು ಉದ್ಯಮಿ ಸೈರಸ್ ಮಿಸ್ತ್ರಿ ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಇದು ಹಲವು ವಿಷಯಗಳು ಚರ್ಚೆ ಆಗುವಂತೆ ಮಾಡಿದೆ. ಅತಿವೇಗದ ಮತ್ತು ಅಜಾಗರೂಕ ಚಾಲನೆ, ಎಡಭಾಗದಿಂದ ಓವರ್‌ಟೇಕ್ ಮಾಡಿದ್ದು ಕಾರಿನ ಅಪಘಾತಕ್ಕೆ ಕಾರಣ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಹೆದ್ದಾರಿಯ ವಿನ್ಯಾಸದಲ್ಲಿನ ದೋಷದಿಂದ ಅಪಘಾತ ಸಂಭವಿಸಿದೆ ಎಂಬ ಚರ್ಚೆಯೂ ನಡೆಯುತ್ತಿದೆ. ಸೈರಸ್ ಮಿಸ್ತ್ರಿ ಅವರು ಅಪಘಾತದಲ್ಲಿ ಮೃತಪಟ್ಟಿದ್ದು ಹೇಗೆ ಎಂಬುದರ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಸೈರಸ್ ಅವರು ಸೀಟ್‌ಬೆಲ್ಟ್ ಧರಿಸಿದ್ದಿದ್ದರೆ, ಅಪಘಾತದಲ್ಲಿ ಜೀವಾಪಾಯದಿಂದ ಪಾರಾಗಬಹುದಿತ್ತು ಎಂದು ವಿಶ್ಲೇಷಿಸಲಾಗುತ್ತಿದೆ. ಉದ್ಯಮಿ ಆನಂದ್ ಮಹೀಂದ್ರಾ ಸಹ, ಕಾರಿನ ಎಲ್ಲಾ ಸೀಟಿನಲ್ಲಿ ಕೂತವರು ಸೀಟ್‌ಬೆಲ್ಟ್ ಧರಿಸಿ ಎಂದು ಸಲಹೆ ನೀಡಿದ್ದಾರೆ. ಕಾರಿನಲ್ಲಿ ಪ್ರಯಾಣದ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸೀಟ್‌ಬೆಲ್ಟ್ ಧರಿಸುವುದು ಏಕೆ ಅತ್ಯಗತ್ಯ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಪ್ರಾಥಮಿಕ ಸುರಕ್ಷತಾ ಸವಲತ್ತು

ಎಲ್ಲಾ ಸ್ವರೂಪದ ಕಾರುಗಳಲ್ಲಿಯೂ ಸೀಟ್‌ಬೆಲ್ಟ್ ಇರುವುದು ಈಗ ಕಡ್ಡಾಯವಾಗಿದೆ. ಪ್ರತಿಯೊಂದು ಆಸನದಲ್ಲಿಯೂ ಸೀಟ್‌ಬೆಲ್ಟ್ ಇರುತ್ತದೆ. ಚಾಲಕ ಮಾತ್ರ ಸೀಟ್‌ಬೆಲ್ಟ್ ಧರಿಸುವುದು ನಮ್ಮಲ್ಲಿ ಕಡ್ಡಾಯ. ಹೀಗಾಗಿ ಉಳಿದ ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸುವುದಿಲ್ಲ. ಆದರೆ, ಸೀಟ್‌ಬೆಲ್ಟ್ ಯಾವುದೇ ಕಾರಿನ ಪ್ರಾಥಮಿಕ ಸುರಕ್ಷತಾ ಸವಲತ್ತಾಗಿರುತ್ತದೆ.

ಅಪಘಾತದ ಸಂದರ್ಭದಲ್ಲಿ ಪ್ರಯಾಣಿಕರು ಆಸನದಲ್ಲಿಯೇ ಇರುವಂತೆ ಹಿಡಿದಿಡುವ ಕೆಲಸವನ್ನು ಸೀಟ್‌ಬೆಲ್ಟ್ ಮಾಡುತ್ತದೆ. ಸೀಟ್‌ಬೆಲ್ಟ್ ಧರಿಸದೇ ಇರುವ ಸಂದರ್ಭದಲ್ಲಿ ಅಪಘಾತ ಸಂಭವಿಸಿದರೆ, ಅಂತಹ ಪ್ರಯಾಣಿಕರು ಕಾರಿನಲ್ಲಿರುವ ಇತರ ಪ್ರಯಾಣಿಕರಿಗೆ ಅಪ್ಪಳಿಸುವ ಅಪಾಯವಿರುತ್ತದೆ. ಜತೆಗೆ ಕಾರಿನ ಮುಂಬದಿ/ಹಿಂಬದಿಯ ಗಾಜಿನಿಂದ ತೂರಿ ಹೊರಗೆ ಚಿಮ್ಮುವ ಅಪಾಯವೂ ಇರುತ್ತದೆ. ಇವೆಲ್ಲವನ್ನೂ ಸೀಟ್‌ಬೆಲ್ಟ್ ತಡೆಯುತ್ತದೆ. ಹೀಗಾಗಿ ಕಾರಿನಲ್ಲಿರುವ ಎಲ್ಲರೂ ಸೀಟ್‌ಬೆಲ್ಟ್ ಧರಿಸುವುದು ಅತ್ಯಗತ್ಯ.

ತಪ್ಪು ಕಲ್ಪನೆ

'ನಮ್ಮ ಕಾರಿನಲ್ಲಿ ಏರ್‌ಬ್ಯಾಗ್‌ಗಳಿವೆ. ಹೀಗಾಗಿ ಸೀಟ್‌ಬೆಲ್ಟ್ ಧರಿಸಬೇಕಿಲ್ಲ' ಎಂದು ಹಲವರು ವಾದ ಮಂಡಿಸುತ್ತಾರೆ. ಇದು ತಪ್ಪು ಮತ್ತು ಅಪಾಯಕಾರಿ ಅಭಿಪ್ರಾಯ.

ಏರ್‌ಬ್ಯಾಗ್‌ಗಳು ಯಾವುದೇ ಕಾರಿನ ಎರಡನೇ ಹಂತದ ರಕ್ಷಣಾ ವ್ಯವಸ್ಥೆಯಾಗಿರುತ್ತದೆ (ಸೆಕೆಂಡರಿ ರಿಸ್ಟ್ರೇನ್ ಸಿಸ್ಟಂ–ಎಸ್‌ಆರ್‌ಎಸ್). ಹೀಗಾಗಿಯೇ ಏರ್‌ಬ್ಯಾಗ್ ಇರುವೆಡೆ 'ಎಸ್‌ಆರ್‌ಎಸ್ ಏರ್‌ಬ್ಯಾಗ್' ಎಂದು ಬ್ಯಾಡ್ಜ್ ಹಾಕಲಾಗಿರುತ್ತದೆ. ಅಪಘಾತದಲ್ಲಿ ಚಾಲಕ ಮತ್ತು ಪ್ರಯಾಣಿಕರ ಜೀವ ಉಳಿಸಲು ಏರ್‌ಬ್ಯಾಗ್ ಒಂದರಿಂದಲೇ ಸಾಧ್ಯವಿಲ್ಲ. ಬದಲಿಗೆ ಅವರ ಜೀವ ಉಳಿಸುವ ಕೆಲಸ ಮಾಡುವುದು ಸೀಟ್‌ಬೆಲ್ಟ್.

ಕಾರಿನಲ್ಲಿ ಏರ್‌ಬ್ಯಾಗ್ ಇದ್ದರೂ ಸೀಟ್‌ಬೆಲ್ಟ್ ಧರಿಸದೇ ಇದ್ದರೆ, ಅಪಘಾತದ ಸಂದರ್ಭದಲ್ಲಿ ಅವು ತೆರೆದುಕೊಳ್ಳದೇ ಇರುವ ಸಾಧ್ಯತೆ ಹೆಚ್ಚು. ಏಕೆಂದರೆ, ಸೀಟ್‌ಬೆಲ್ಟ್ ಧರಿಸದೇ ಇದ್ದರೆ ಏರ್‌ಬ್ಯಾಗ್ ತೆರೆದುಕೊಳ್ಳದೇ ಇರುವ ರೀತಿಯಲ್ಲಿ ಅವುಗಳನ್ನು ಪ್ರೋಗ್ರಾಮಿಂಗ್ ಮಾಡಲಾಗಿರುತ್ತದೆ.

ಏರ್‌ಬ್ಯಾಗ್‌ಗಳು ಸೂಕ್ಷ್ಮ ಬಾಂಬ್‌ಗಳ ರೀತಿಯಲ್ಲಿ ಕೆಲಸ ಮಾಡುತ್ತವೆ. ಡಿಕ್ಕಿಯಾದ 35 ಮಿಲಿಸೆಕೆಂಡ್ ಒಳಗೆ ಅವುಗಳು ತೆರೆದುಕೊಳ್ಳಬೇಕು. ಅಷ್ಟು ವೇಗವಾಗಿ ಏರ್‌ಬ್ಯಾಗ್ ಗಾಳಿ ತುಂಬಿಸುವ ಕೆಲಸ ಮಾಡುವುದು ಸೂಕ್ಷ್ಮ ಬಾಂಬ್‌ಗಳು. ಸೀಟ್‌ಬೆಲ್ಟ್ ಧರಿಸದೇ ಇದ್ದರೆ, ಚಾಲಕ/ಪ್ರಯಾಣಿಕರು ಏರ್‌ಬ್ಯಾಗ್‌ಗೆ ಅಪ್ಪಳಿಸುವ ಅಪಾಯವಿರುತ್ತದೆ. ಇದರಿಂದ ಡ್ಯಾಶ್‌ಬೋರ್ಡ್/ಸ್ಟಿಯರಿಂಗ್‌ನ ತುಣುಕುಗಳು ದೇಹದ ಒಳ ಹೋಗುವ ಅಪಾಯವಿರುತ್ತದೆ. ಏರ್‌ಬ್ಯಾಗ್‌ನಲ್ಲಿನ ರಾಸಾಯನಿಕಗಳು ಚರ್ಮವನ್ನು ಸುಡುತ್ತವೆ. ಇದರಿಂದ ಪ್ರಾಣಹಾನಿಯೂ ಆಗಬಹುದು. ಈ ಸ್ವರೂಪದ ಅಪಾಯವನ್ನು ತಪ್ಪಿಸುವ ಉದ್ದೇಶದಿಂದಲೇ ಸೀಟ್‌ಬೆಲ್ಟ್ ಧರಿಸದೇ ಇದ್ದಾಗ, ಏರ್‌ಬ್ಯಾಗ್ ತೆರೆದುಕೊಳ್ಳದೇ ಇರುವಂತೆ ಪ್ರೋಗ್ರಾಮಿಂಗ್ ಮಾಡಲಾಗಿರುತ್ತದೆ.

ಇದರ ಜತೆಯಲ್ಲೇ 30 ಕೆ.ಜಿ.ಗಿಂತ ಕಡಿಮೆ ತೂಕದವರು ಕೂತಿದ್ದರೆ, ಏರ್‌ಬ್ಯಾಗ್ ಅನ್ನು ಡಿಆಕ್ಟಿವೇಟ್ ಮಾಡುವ ಸೆನ್ಸರ್‌ಗಳನ್ನು ಕೆಲವು ಕಂಪನಿಗಳು ತಮ್ಮ ಕಾರಿನಲ್ಲಿ ಅಳವಡಿಸಿರುತ್ತವೆ. ಕಡಿಮೆ ತೂಕದ ವ್ಯಕ್ತಿಗಳು ಅಂದರೆ ಮಕ್ಕಳು ಕೂತಿದ್ದರೂ ಏರ್‌ಬ್ಯಾಗ್‌ಗಳು ತೆರೆದುಕೊಳ್ಳುವುದಿಲ್ಲ. ಹೀಗಾಗಿಯೇ ಮಕ್ಕಳನ್ನು ಹಿಂಬದಿಯಲ್ಲಿ ಚೈಲ್ಡ್‌ಸೀಟ್ ಅಳವಡಿಸಿ ಕೂರಿಸಬೇಕು ಎಂದು ಕಾರಿನ ಡ್ಯಾಶ್‌ಬೋರ್ಡ್ ಅಥವಾ ಸನ್‌ವೈಸರ್‌ನಲ್ಲಿ ಸೂಚನೆ ನೀಡಲಾಗಿರುತ್ತದೆ. ಸೀಟ್‌ಬೆಲ್ಟ್ ಏಕೆ ಧರಿಸಬೇಕು ಎಂಬುದನ್ನೂ ಕಾರಿನ ಬಳಕೆದಾರರ ಕೈಪಿಡಿಯಲ್ಲಿ ವಿವರಿಸಲಾಗಿರುತ್ತದೆ.

ಹಾಗಾಗಿ ಏರ್‌ಬ್ಯಾಗ್‌ಗಳಿವೆ, ಸೀಟ್‌ಬೆಲ್ಟ್ ಧರಿಸದೇ ಇದ್ದರೂ ನಡೆಯುತ್ತದೆ ಎಂಬ ಅಭಿಪ್ರಾಯಕ್ಕೆ ಬರುವುದು ಹಾಗೂ ಸೀಟ್‌ಬೆಲ್ಟ್ ಧರಿಸದೇ ಇರುವುದು ಅಪಾಯವನ್ನು ಮೈಮೇಲೆ ಎಳೆದುಕೊಂಡಂತೆ.

ಹಿಂಬದಿ ಪ್ರಯಾಣಿಕರೂ ಸೀಟ್‌ಬೆಲ್ಟ್ ಏಕೆ ಧರಿಸಬೇಕು?

ಹಿಂಬದಿ ಪ್ರಯಾಣಿಕರೂ ಸೀಟ್‌ಬೆಲ್ಟ್ ಏಕೆ ಧರಿಸಬೇಕು ಎಂಬ ಪಾಠವನ್ನು ಸೈರಸ್ ಮಿಸ್ತ್ರಿ ಅವರ ಅಪಘಾತವು ನಮಗೆ ಕಲಿಸಿ ಕೊಡುತ್ತದೆ. ಸೈರಸ್ ಪ್ರಯಾಣಿಸುತ್ತಿದ್ದ ಜಿಎಲ್‌ಸಿ 220ಡಿ ಕಾರಿನಲ್ಲಿ ಏಳು ಏರ್‌ಬ್ಯಾಗ್‌ಗಳಿವೆ. ಅಪಘಾತವಾದಾಗ ಅದರಲ್ಲಿನ ನಾಲ್ಕು ಏರ್‌ಬ್ಯಾಗ್‌ಗಳು ತೆರೆದುಕೊಂಡಿವೆ. ಹೀಗಿದ್ದೂ ಕಾರಿನ ಹಿಂಬದಿಯ ಆಸನದಲ್ಲಿ ಕುಳಿತಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರಲ್ಲಿ ಸೈರಸ್ ಸಹ ಒಬ್ಬರು. ಅವರು ಸೀಟ್‌ಬೆಲ್ಟ್ ಧರಿಸಿರಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ

ಹಿಂಬದಿ ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸದೇ ಇದ್ದರೆ...

ಚಿತ್ರಕೃಪೆ: ಐಐಎಚ್‌ಸಿ

1. ಚಾಲಕ ಸೀಟ್‌ಬೆಲ್ಟ್ ಧರಿಸಿದ್ದು, ಹಿಂಬದಿ ಕುಳಿತ ಪ್ರಯಾಣಿಕ ಸೀಟ್‌ಬೆಲ್ಟ್ ಧರಿಸಿಲ್ಲ
2. ಅಪಘಾತದ ಸಂದರ್ಭದಲ್ಲಿ ಚಾಲಕ/ಮುಂಬದಿಯ ಪ್ರಯಾಣಿಕರು ಸೀಟ್‌ಬೆಲ್ಟ್ ಧರಿಸಿದ್ದರೆ, ಏರ್‌ಬ್ಯಾಗ್ ತೆರೆದುಕೊಳ್ಳುತ್ತದೆ ಮತ್ತು ಅವರಿಗೆ ಹೆಚ್ಚು ಹಾನಿಯಾಗದಂತೆ ಅದು ತಡೆಯುತ್ತದೆ. ಸೀಟ್‌ಬೆಲ್ಟ್ ಧರಿಸಿರುವ ಕಾರಣ, ಅವರು ತಮ್ಮ ಆಸನದಲ್ಲಿಯೇ ಇರುತ್ತಾರೆ. ಅವರಿಗೆ ಹೆಚ್ಚಿನ ಗಾಯಗಳಾಗುವುದಿಲ್ಲ
3. ಆದರೆ ಹಿಂಬದಿ ಆಸನದಲ್ಲಿ ಕುಳಿತವರು ಸೀಟ್‌ಬೆಲ್ಟ್ ಧರಿಸದೇ ಇದ್ದರೆ, ಅದೇ ಕ್ಷಣದಲ್ಲಿ ಅವರು ಮುಂಬದಿಯ ಆಸನಕ್ಕೆ ಭಾರಿ ವೇಗದಲ್ಲಿ ಅಪ್ಪಳಿಸುತ್ತಾರೆ
4. ಇದರಿಂದ ಮುಂಬದಿ ಕುಳಿತವರು ಡ್ಯಾಶ್‌ಬೋರ್ಡ್ ಮತ್ತು ಹಿಂಬದಿಯಲ್ಲಿ ಕುಳಿತವರ ಮಧ್ಯೆ ಅಪ್ಪಚ್ಚಿಯಾಗುತ್ತಾರೆ. ಇಬ್ಬರಿಗೂ ತೀವ್ರ ಗಾಯಗಳಾಗುತ್ತವೆ. ಬಹುತೇಕ ಸಂದರ್ಭಗಳಲ್ಲಿ ಇಬ್ಬರೂ ಮೃತಪಡುವ ಅಪಾಯವಿರುತ್ತದೆ

• ಸೈರಸ್ ಮಿಸ್ತ್ರಿ ಅವರ ಅಪಘಾತದಲ್ಲೂ ಹೀಗೇ ಆಗಿದೆ ಎಂದು ವಿಶ್ಲೇಷಿಸಲಾಗಿದೆ. ಹಿಂಬದಿ ಕುಳಿತು, ಸೀಟ್‌ಬೆಲ್ಟ್ ಧರಿಸದೇ ಇದ್ದವರು ಮೃತಪಟ್ಟಿದ್ದಾರೆ. ಮುಂಬದಿ ಕುಳಿತಿದ್ದವರಿಗೆ ತೀವ್ರ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ

ಸೀಟ್‌ಬೆಲ್ಟ್ ಧರಿಸದೆ ಅಪಘಾತದಲ್ಲಿ ಮೃತಪಟ್ಟ ಗಣ್ಯರು

ಆಧಾರ: ಗ್ಲೋಬಲ್ ಎನ್‌ಸಿಎಪಿ, ಇನ್ಶೂರೆನ್ಸ್ ಇನ್‌ಸ್ಟಿಟ್ಯೂಟ್ ಫಾರ್ ಹೈವೇ ಸೇಫ್ಟಿ (ಐಐಎಚ್‌ಎಸ್) ಕ್ರ್ಯಾಶ್‌ಟೆಸ್ಟ್ ವರದಿಗಳು, ರಾಯಿಟರ್ಸ್, ಪಿಟಿಐ

ಜಸ್ಪಾಲ್ ಭಟ್ಟಿ

ಪ್ರಸಿದ್ಧ ನಟ, ನಿರ್ದೇಶಕ ಮತ್ತು ವಿಡಂಬನಕಾರ ಜಸ್ಪಾಲ್ ಭಟ್ಟಿ ಅವರು 2012ರ ಅಕ್ಟೋಬರ್ 25ರಂದು ಅಪಘಾತದಲ್ಲಿ ಮೃತಪಟ್ಟರು. ಭಟಿಂಡಾದಿಂದ ಜಲಂಧರ್‌ಗೆ ಅವರು ಕಾರಿನಲ್ಲಿ ಹೋಗುತ್ತಿದ್ದರು. ತಿರುವಿನಲ್ಲಿದ್ದ ಮರಕ್ಕೆ ಕಾರು ಡಿಕ್ಕಿ ಹೊಡೆಯಿತು. ಮುಂದಿನ ಆಸನದಲ್ಲಿ ಕುಳಿತಿದ್ದ ನಟ ಸುರಿಲಿ ಗೌತಮ್ ಮತ್ತು ಕಾರು ಚಲಾಯಿಸುತ್ತಿದ್ದ ಜಸ್‌ರಾಜ್ (ಭಟ್ಟಿ ಅವರ ಮಗ) ಅವರು ಬಚಾವಾದರು. ಅವರಿಬ್ಬರೂ ಸೀಟ್‌ಬೆಲ್ಟ್ ಧರಿಸಿದ್ದರು. ಆದರೆ, ಹಿಂದಿನ ಆಸನದಲ್ಲಿ ಕುಳಿತಿದ್ದ ಜಸ್ಪಾಲ್ ಅವರು ಸೀಟ್‌ಬೆಲ್ಟ್ ಧರಿಸಿರಲಿಲ್ಲ.

ಗೋಪಿನಾಥ ಮುಂಡೆ

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದ ಗೋಪಿನಾಥ ಮುಂಡೆ ಅವರು 2014 ಜೂನ್ 3ರಂದು ದೆಹಲಿಯಲ್ಲಿ ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಅವರು ಪ್ರಯಾಣಿಸುತ್ತಿದ್ದ ಎಸ್‌ಎಕ್ಸ್4 ಕಾರಿಗೆ ಇನ್ನೊಂದು ಕಾರು ಡಿಕ್ಕಿಯಾಯಿತು. ಕಾರಿಗೆ ಗಣನೀಯ ಪ್ರಮಾಣದ ಹಾನಿಯಾಗಿರಲಿಲ್ಲ ಕಾರಿನಲ್ಲಿ ಅವರ ಕಾರ್ಯದರ್ಶಿ ಮತ್ತು ಚಾಲಕ ಇದ್ದರು. ಈ ಇಬ್ಬರೂ ಯಾವುದೇ ಗಾಯಗಳಿಲ್ಲದೆ ಬಚಾವಾದರು. ಆದರೆ, ಸೀಟ್‌ಬೆಲ್ಟ್ ಧರಿಸಿಲ್ಲದ ಗೋಪಿನಾಥ ಮುಂಡೆ ಅವರು ಮೃತಪಟ್ಟರು.

ಅಮೃತ್‌ಕುಮಾರ್ ರಥ್

ಬಜಾಜ್ ಆಟೊದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಅಮೃತ್‌ಕುಮಾರ್ ರಥ್ ಅವರು 2016ರ ಜುಲೈ 11ರಂದು ಅಪಘಾತದಲ್ಲಿ ಮೃತಪಟ್ಟರು. ಅಪಘಾತದಲ್ಲಿ ಅವರ ಹೆಂಡತಿಯೂ ಮೃತಪಟ್ಟರು. ಜತೆಗಿದ್ದ ಇಬ್ಬರು ಮಕ್ಕಳು ಗಂಭೀರವಾಗಿ ಗಾಯಗೊಂಡರು. ಮುಂಬೈ–ಪುಣೆ ಎಕ್ಸ್‌ಪ್ರೆಸ್‌ವೇನಲ್ಲಿ ಈ ಅಪಘಾತ ನಡೆದಿದೆ. ಮುಂದಿನ ಆಸನದಲ್ಲಿ ಕುಳಿತಿದ್ದ ರಥ್ ಮತ್ತು ಅವರ ಹೆಂಡತಿ ಸೀಟ್‌ಬೆಲ್ಟ್ ಧರಿಸಿದ್ದರು. ಆದರೆ, ಹಿಂದೆ ಕುಳಿತಿದ್ದ ಇಬ್ಬರು ಮಕ್ಕಳು ಸೀಟ್‌ಬೆಲ್ಟ್ ಧರಿಸಿರಲಿಲ್ಲ. ಹಾಗಾಗಿ, ಡಿಕ್ಕಿಯ ರಭಸಕ್ಕೆ ಮುಂದಕ್ಕೆ ನುಗ್ಗಿದ ಇಬ್ಬರು ಮಕ್ಕಳು ಮುಂದಿನ ಆಸನದಲ್ಲಿದ್ದವರ ಮೇಲೆ ಬಿದ್ದರು. ಅವರ ಹಲ್ಲುಗಳು ಮುಂದೆ ಕುಳಿತಿದ್ದವರ ತಲೆಗೆ ನಾಟಿತ್ತು. ಈ ಕಾರಣದಿಂದಲೇ ಅವರು ಮೃತಪಟ್ಟರು.

ವಿನಾಯಕ ಮೇಟೆ

ಮಹಾರಾಷ್ಟ್ರದ ರಾಜಕಾರಣಿ ವಿನಾಯಕ ಮೇಟೆ ಅವರು ಈ ವರ್ಷ ಆಗಸ್ಟ್ 15ರಂದು ಪುಣೆ–ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ನಡೆದ ಅಪಘಾತದಲ್ಲಿ ಮೃತಪಟ್ಟರು. ಅವರು ಪ್ರಯಾಣಿಸುತ್ತಿದ್ದ ಎಸ್‌ಯುವಿ, ಟ್ರಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆಯಿತು. ಎಸ್‌ಯುವಿಯಲ್ಲಿ ಇದ್ದ ಏಕನಾಥ ಕದಂ ಅವರಿಗೆ ಸಣ್ಣಪುಟ್ಟ ಗಾಯಗಳಷ್ಟೇ ಆಗಿವೆ. ಅವರು ಸೀಟ್‌ಬೆಲ್ಟ್ ಧರಿಸಿದ್ದರು. ಮೇಟೆ ಅವರು ಸೀಟ್‌ಬೆಲ್ಟ್ ಧರಿಸಿರಲಿಲ್ಲ.

ಈ ಎಲ್ಲರೂ ಸೀಟ್‌ಬೆಲ್ಟ್ ಧರಿಸಿದ್ದರೆ ಬದುಕುಳಿಯುವ ಸಾಧ್ಯತೆ ಹೆಚ್ಚು ಇತ್ತು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಶಿಕ್ಷಣ ಇಲಾಖೆಯಲ್ಲಿನ ಭ್ರಷ್ಟಾಚಾರ ತಪ್ಪಿಸಲು ಪ್ರತ್ಯೇಕ ಆಯೋಗ ರಚಿಸಲು ಸರ್ಕಾರ ಉದ್ದೇಶಿಸಿದೆ. ಇದರಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಸಾಧ್ಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 218

ಶಿವನ ಮೇಲೆ ಮನ್ಮಥ ಲೀಲೆ

ಇಂದ್ರನ ಆಣತಿಯಂತೆ ಶಿವನನ್ನು ಮೋಹಪಾಶಕ್ಕೆ ಸಿಲುಕಿಸಲು ಬಂದ ಮನ್ಮಥನಿಗೆ ಶಿವನ ಹಠಯೋಗ ಅಡ್ಡಿಯಾಗುತ್ತದೆ. ಇಂಥ ಸಂದರ್ಭದಲ್ಲಿ ಶಿವನ ಬಳಿಗೆ ಪಾರ್ವತಿ ಬಂದಿದ್ದು, ಮನ್ಮಥನ ಕಾರ್ಯಕ್ಕೆ ಅನುಕೂಲವಾಗುತ್ತದೆ. ಸೌಂದರ್ಯಕ್ಕೆ ಒಡತಿಯಂತಿದ್ದ ಪಾರ್ವತಿಯನ್ನು ಆಯಾಯ ಋತುಗಳಲ್ಲಿ ಅರಳುವ ಸುಂದರಪುಷ್ಪಗಳಿಂದ ಅಲಂಕರಿಸಿದರೆ, ಅವಳ ಸೌಂದರ್ಯವನ್ನು ವರ್ಣಿಸಲು ಸಾವಿರಾರು ವರ್ಷಗಳಾದರೂ ಸಾಧ್ಯವಾಗುವುದಿಲ್ಲ. ಅಂಥ ಅಪ್ರತಿಮ ಲೋಕಸುಂದರಿಯಾದ ಪಾರ್ವತಿಯು ಶಿವನ ಬಳಿಗೆ ಬಂದಾಗ, ಶಿವ ಧ್ಯಾನವನ್ನು ಬಿಟ್ಟು ಸ್ವಲ್ಪ ಹೊತ್ತು ಬಹಿರ್ಮುಖನಾದ. ಇದೇ ತಕ್ಕ ಸಮಯವೆಂದು ಮನ್ಮಥ ತನ್ನ ಬತ್ತಳಿಕೆಯಲ್ಲಿದ್ದ 'ಹರ್ಷಣ' ಎಂಬ ಬಾಣವನ್ನು ಪ್ರಯೋಗಿಸಿದ. ಇದರಿಂದ ಶಂಕರನ ಮನಸ್ಸಿಗೆ ಹರ್ಷವಾದಂಥ ಅನುಭವವಾಯಿತು.

ಆಗ ಮನ್ಮಥ 'ಪುಷ್ಪಶರ'ವನ್ನು ಬಿಲ್ಲಿಗೇರಿಸಿ ಶಂಕರನ ಮೇಲೆ ಪ್ರಯೋಗಿಸಿದ. ಇದರಿಂದ ಶಿವನ ಮನದಲ್ಲಿ ಅನುರಾಗದ ಅಲೆ ಅಪ್ಪಳಿಸಿದಂತಾಯಿತು. ಇದೇ ಸಮಯಕ್ಕೆ ಗಿರಿಜೆಯು ಎಂದಿನಂತೆ ಶಿವನಿಗೆ ಭಕ್ತಿಯಿಂದ ಪೂಜಿಸಿ, ಅವನ ಮುಂದೆ ನಿಂತಳು. ಪಾರ್ವತಿಯನ್ನು ನೋಡಿದ ಶಿವನಿಗೆ ಒಂದು ಕ್ಷಣ ವಿಚಲಿತನಾದ. 'ಇದೇನು ಮುಖವೋ ಅಥವಾ ಚಂದ್ರನೊ? ಕಣ್ಣುಗಳೋ ಅಥವಾ ಕನ್ನೈದಿಲೆಗಳೋ? ಈ ಭ್ರುಕುಟಗಳು ಮನ್ಮಥನ ಧನುಸ್ಸುಗಳೇ? ಇದೇನು ಅಧರವೊ? ಅಥವಾ ಬಿಂಬಫಲವೊ? ಇದು ನಾಸಿಕವೊ? ಅಥವಾ ಗಿಳಿಯ ಚಂಚುವೊ? ಇದೇನು ಸ್ವರವೋ ಅಥವಾ ಕೋಗಿಲೆಯ ಧ್ವನಿಯೋ?' – ಎಂದು ಶಿವ ಮೋಹಪರವಶನಾಗಿ ನುಡಿದ

ಲೋಕದಲ್ಲಿರುವ ಲೋಕೋತ್ತರವಾದ ಸೌಂದರ್ಯವೆಲ್ಲವೂ ಒಟ್ಟುಗೂಡಿ ಈ ಪಾರ್ವತಿಯನ್ನು ಬಹುಮನೋಹರವಾಗಿಸಿದಂತಿದೆ. ಇವಳ ಅಂಗಗಳು ಎಲ್ಲಾ ರೀತಿಯಿಂದಲೂ ರಮಣೀಯವಾಗಿವೆ. ಇಂತಹ ಆಶ್ಚರ್ಯ, ಅದ್ಭುತರೂಪವುಳ್ಳ ಪಾರ್ವತಿಯಂತಹ ಸುಂದರಿ ಮೂರು ಲೋಕಗಳಲ್ಲಿಯೂ ಇಲ್ಲವೇ ಇಲ್ಲ. ಮಹಾಲಾವಣ್ಯವತಿಯಾದ ಇವಳು, ತನ್ನ ಅದ್ಭುತವಾದ ಅವಯವ ಸೌಷ್ಠವದಿಂದ ಮುನಿಗಳ ಮನಸ್ಸನ್ನೂ ಮೋಹಗೊಳಿಸಬಲ್ಲಳು. ನೋಡುವವರ ಮನಸ್ಸನ್ನು ಕ್ಷಣಾರ್ಧದಲ್ಲಿ ಸೆಳೆಯುವ ಆಕರ್ಷಣಾ ಶಕ್ತಿ ಪಾರ್ವತಿಗೆ ಇದೆ ಎಂದು ಪಾರ್ವತಿಯ ಸೌಂದರ್ಯವನ್ನು ಭಾವಪರವಶನಾಗಿ ಶಿವ ವರ್ಣಿಸತೊಡಗಿದ.

ತನ್ನ ಅಂಗಗಳನ್ನು ಶಿವ ವರ್ಣಿಸಿದ್ದನ್ನು ಕೇಳಿ, ಪಾರ್ವತಿ ನಾಚಿಕೆಯಿಂದ ದೂರಹೋಗಿ ನಿಂತಳು. ಅಲ್ಲಿ ಗಿರಿಜೆ ತನ್ನ ಕೋಮಲವಾದ ಅಂಗಗಳನ್ನು ನೋಡಿಕೊಳ್ಳುತ್ತಾ, ತನಗಿರುವ ಅದ್ಭುತ ಸೌಂದರ್ಯವನ್ನು ನೆನೆದು ಸಂತೋಷದಿಂದ ಹಿಗ್ಗಿದಳು. ಪಾರ್ವತಿಯ ಶೃಂಗಾರ ಚೇಷ್ಟೆಯನ್ನು ನೋಡಿದ ಮಹಾಲೀಲಾಮಯನಾದ ಮಹೇಶ್ವರ ಮೋಹಗೊಂಡ.

ಹೀಗೆ ಸ್ವಲ್ಪ ಹೊತ್ತು ಗಿರಿಜೆಯ ಬಗ್ಗೆ ವಿಚಾರಮಾಡಿದ ಬಳಿಕ ಎಚ್ಚೆತ್ತ ಮಹಾಯೋಗಿಯೂ ವಿರಕ್ತನೂ ಆದ ಮಹಾದೇವ ತನ್ನಲ್ಲಾದ ಬದಲಾವಣೆಯಿಂದ ಆಶ್ಚರ್ಯಗೊಂಡ. 'ಇದೇನಾಯಿತು? ನಾನೇಕೆ ಮೋಹಗೊಂಡೆ. ಪರಮೇಶ್ವರನಾದರೂ ನಾನು ಕಾಮವಿಕಾರಕ್ಕೆ ಒಳಗಾದೆನಲ್ಲಾ. ಹಠಯೋಗಿಯಾದ ನಾನೇ ಸಾಮಾನ್ಯ ಮನುಷ್ಯರಂತೆ ಹೆಣ್ಣಿನ ಮೇಲೆ ಮೋಹಗೊಳ್ಳುವುದು ಸರಿಯಲ್ಲ' ಅಂತ ತೀರ್ಮಾನಿಸಿದ ಮಹಾಶಿವ, ಮತ್ತೆ ವೈರಾಗ್ಯವನ್ನು ಹೊಂದಿದ. ಪರ್ಯಂಕಾಸನದಲ್ಲಿ ಕುಳಿತು ತಪವನ್ನ ಆಚರಿಸುತ್ತಾ ತನ್ನಲ್ಲಾಗುತ್ತಿದ್ದ ಕಾಮವಿಕಾರವನ್ನು ತಡೆದುಕೊಂಡ. ಇಲ್ಲಿಗೆ ಪಾರ್ವತೀಖಂಡದ ಹದಿನೆಂಟನೆಯ ಅಧ್ಯಾಯ ಮುಕ್ತಾಯವಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಕಾರಿನ ಹಿಂಬದಿ ಮತ್ತು ಮುಂಬದಿ ಬಂಪರ್‌ಗಳಿಗೆ ಲೋಹದ ಕ್ರ್ಯಾಶ್‌ಗಾರ್ಡ್ ಅಥವಾ ಬುಲ್‌ಬಾರ್ ಅಳವಡಿಸುವುದರಿಂದ ಕಾರಿನ ಸುರಕ್ಷತೆ ಹೆಚ್ಚುತ್ತದೆ. ಅಪಘಾತದ ಸಂದರ್ಭದಲ್ಲಿ ಕಾರಿಗೆ ಹಾನಿಯಾಗುವುದನ್ನು ಕ್ರ್ಯಾಶ್‌ಗಾರ್ಡ್ ತಪ್ಪಿಸುತ್ತದೆ. ಹೀಗಾಗಿ ಇವುಗಳನ್ನು ಅಳವಡಿಸಿಕೊಳ್ಳಬೇಕು ಎಂಬ ವಿವರ ಇರುವ ವಿಡಿಯೊಗಳು ಇನ್‌ಸ್ಟಾಗ್ರಾಂ ಮತ್ತು ಯುಟ್ಯೂಬ್ ಶಾರ್ಟ್‌ನಲ್ಲಿ ಹರಿದಾಡುತ್ತಿವೆ. ಸಣ್ಣ–ಪುಟ್ಟ ಅಪಘಾತದ ಸಂದರ್ಭದಲ್ಲಿ ಕಾರು ಮತ್ತು ಎಸ್‌ಯುವಿಗಳಿಗೆ ಹಾನಿಯಾಗುವುದನ್ನು ಬುಲ್‌ಬಾರ್‌ಗಳು ತಡೆದಿರುವುದನ್ನೂ ಈ ವಿಡಿಯೊಗಳಲ್ಲಿ ತೋರಿಸಲಾಗಿದೆ. ಹಾಗಾಗಿ ಬುಲ್‌ಬಾರ್‌ಗಳನ್ನು ಅಳವಡಿಸಿಕೊಳ್ಳಿ ಎಂದು ಸಾಮಾಜಿಕ ಜಾಲತಾಣ ಇನ್‌ಫ್ಲುಯೆನ್ಸರ್‌ಗಳು ಈ ವಿಡಿಯೊಗಳಲ್ಲಿ ಹೇಳಿದ್ದಾರೆ.

✓ ಬುಲ್‌ಬಾರ್ ಅಥವಾ ಕ್ರ್ಯಾಶ್‌ಗಾರ್ಡ್ ಅಳವಡಿಸುವುದರಿಂದ ಅಪಾಯವೇ ಹೆಚ್ಚು. ಅಪಘಾತದ ಸಂದರ್ಭದಲ್ಲಿ ಏರ್‌ಬ್ಯಾಗ್‌ನ ಸೆನ್ಸರ್‌ಗಳು ಕೆಲಸ ಮಾಡುವುದನ್ನು ಇವು ತಡೆಯುತ್ತವೆ. ಸಾಮಾನ್ಯವಾಗಿ ಹೆಡ್‌ಲ್ಯಾಂಪ್‌ನ ಹಿಂಬದಿಯಲ್ಲಿ ಈ ಸೆನ್ಸರ್‌ಗಳಿರುತ್ತವೆ. ಕ್ರ್ಯಾಶ್‌ಗಾರ್ಡ್‌ಗಳೇ ಅಪಘಾತದ ತೀವ್ರತೆಯನ್ನು ತಡೆದುಕೊಳ್ಳುವುದರಿಂದ ಈ ಸೆನ್ಸರ್‌ಗಳು ಚಾಲನೆ ಆಗುವುದಿಲ್ಲ. ಜತೆಗೆ ಕಾರಿನ ಕ್ರಂಪಲ್ ಝೋನ್ (ಅಪಘಾತದ ಸಂದರ್ಭದಲ್ಲಿ ಕಾರಿನ ಮುಂಭಾಗ ನುಜ್ಜುಗುಜ್ಜಾಗಿ, ಡಿಕ್ಕಿಯ ತೀವ್ರತೆ ಕಡಿಮೆ ಮಾಡುವಂತಹ ವಿನ್ಯಾಸ) ಕೆಲಸ ಮಾಡುವುದನ್ನು ಕ್ರ್ಯಾಶ್‌ಗಾರ್ಡ್ ತಡೆಯುತ್ತದೆ. ಆದರೆ, ಡಿಕ್ಕಿಯ ತೀವ್ರತೆ ಕ್ರ್ಯಾಶ್‌ಗಾರ್ಡ್‌ನಿಂದ ನೇರವಾಗಿ ಪ್ರಯಾಣಿಕರ ಕ್ಯಾಬಿನ್‌ಗೆ ರವಾನೆಯಾಗುತ್ತದೆ. ಇದು ಪ್ರಯಾಣಿಕರ ದೇಹದೊಳಗೆ ಗಾಯಗಳಾಗುವಂತೆ ಮಾಡುತ್ತವೆ. ಅಂತಹ ಗಾಯಗಳಿಂದ ಪ್ರಯಾಣಿಕರು ಮೃತಪಡುವ ಅಪಾಯವಿರುತ್ತದೆ. ಹೀಗಾಗಿಯೇ ಕ್ರ್ಯಾಶ್‌ಗಾರ್ಡ್‌ಗಳನ್ನು ಅಳವಡಿಸಬಾರದು ಎಂದು ಕಾರಿನ ಬಳಕೆದಾರರ ಕೈಪಿಡಿಯಲ್ಲಿ ಸೂಚಿಸಲಾಗಿರುತ್ತದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಕಾರ್ಯದಕ್ಷತೆಯ ಮಾದರಿ

ದೊರೆತನದ ಜಟಿಲಗಳ, ಕುಟಿಲಗಳ, ಕಠಿಣಗಳ |
ಭರತನುಳಿಸಿದನೆ ರಾಮನ ತೀರ್ಪಿಗೆಂದು ? ||
ಅರಿವಿಗಿಹ ಕರ್ತವ್ಯಭಾರವನು ತಾನರಿತು |
ಧುರವ ಧರಿಸಿದನವನು – ಮಂಕುತಿಮ್ಮ || 709 ||

ಪದ-ಅರ್ಥ: ಜಟಿಲಗಳ = ತೊಡಕುಗಳ, ಕುಟಿಲಗಳ = ವಕ್ರಗಳನ್ನು, ನೇರವಲ್ಲದ್ದು, ಭರತನುಳಿಸಿದನೆ = ಭರತನು = ಉಳಿಸಿದನೆ, ಅರಿವಿಗಿಹ = ಅರಿವಿಗೆ (ತಿಳುವಳಿಕೆಗೆ) + ಇಹ(ಇದ್ದ), ಧುರ = ನೊಗ, ರಾಜ್ಯಭಾರ.

ವಾಚ್ಯಾರ್ಥ: ರಾಜ್ಯ ವ್ಯವಹಾರದಲ್ಲಿ ತೋರಿದ ಕಷ್ಟ, ಮೋಸ, ಕಠಿಣ ಸಮಸ್ಯೆಗಳನ್ನು ಭರತ ರಾಮನ ತೀರ್ಪಿಗೆ ಎಂದು ಬಿಟ್ಟುಬಿಟ್ಟನೆ? ತನ್ನ ತಿಳಿವಿಗೆ ತಿಳಿದ ಕರ್ತವ್ಯವನ್ನು ತಾನೇ ಅರಿತುಕೊಂಡು ರಾಜ್ಯದ ಭಾರವನ್ನು ಹೊತ್ತು ನಡೆಸಿದನು.

ವಿವರಣೆ: ಅದೊಂದು ದೊಡ್ಡ ಸಂಸ್ಥೆ. ನಿತ್ಯ ಲಕ್ಷಾಂತರ ರೂಪಾಯಿಗಳ ವ್ಯವಹಾರ. ಅದಕ್ಕೊಬ್ಬ ನಿರ್ದೇಶಕರು. ಅವರು ಅತ್ಯಂತ ಪ್ರಾಮಾಣಿಕತೆಯಿಂದ ಮತ್ತು ದಕ್ಷತೆಯಿಂದ ಅದನ್ನು ನಡೆಸುತ್ತಿದ್ದರು. ಒಮ್ಮೆ ಅಮೇರಿಕಾದಲ್ಲಿದ್ದ ಮಗಳಿಗೆ ಏನೋ ಸಮಸ್ಯೆಯಾಯಿತು. ಹೇಗೋ ಹೊಂದಿಸಿಕೊಂಡು, ಕೆಲಸಗಳನ್ನು ಹಂಚಿ, ಒಂದು ತಿಂಗಳು ರಜೆಯ ಮೇಲೆ ಅಮೇರಿಕೆಗೆ ಹೋದರು. ಅವರ ಸ್ಥಾನದಲ್ಲಿ ಒಬ್ಬರು ಪ್ರಭಾರ ನಿರ್ದೇಶಕರಾದರು. ನಿರ್ದೇಶಕ ಹುದ್ದೆಯನ್ನು ಖಾಲಿ ಬಿಡುವಂತಿಲ್ಲ. ಅದಕ್ಕಾಗಿ ತಾತ್ಕಾಲಿಕವಾಗಿ ಮತ್ತೊಬ್ಬರು ಆ ಜವಾಬ್ದಾರಿಯನ್ನು ವಹಿಸಿಕೊಳ್ಳಲೇಬೇಕು. ಅವರನ್ನು ಪ್ರಭಾರಗಳು ಎನ್ನುತ್ತಾರೆ. ಅವರು ಮೂಲ ನಿರ್ದೇಶಕರ ಅನುಪಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತ, ಅವಶ್ಯಬಿದ್ದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಲೇ, ಸಂಸ್ಥೆಯ ಮೂಲ ಆಶಯಕ್ಕೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕಾಗುತ್ತದೆ.

ಈ ಪ್ರಭಾರ ನಿರ್ದೇಶಕರು ಚಿಂತಿಸಿದರು. ತನ್ನ ಕಾರ್ಯ ಕೇವಲ ಒಂದು ತಿಂಗಳಿನದು. ಹೇಗಾದರೂ ಮಾಡಿ ಮುಗಿಸಿದರಾಯಿತು. ಕಷ್ಟದ ತೀರ್ಮಾನಗಳನ್ನು ತೆಗೆದುಕೊಳ್ಳದೆ ಮುಂದೆ ಹಾಕಿದರಾಯಿತು. ಕೆಲವೊಂದು ಬುದ್ಧಿವಂತಿಕೆಯ ವ್ಯವಹಾರಗಳಿರುತ್ತವೆ. ತಾನು ತೆಗೆದುಕೊಂಡ ತೀರ್ಮಾನ ಸರಿಯಾಗದಿದ್ದರೆ ಮುಂದೆ ತಾನೇ ಜನರ ಟೀಕೆಗೆ ಗುರಿಯಾಗಬೇಕಾಗುತ್ತದೆ. ತಾನು ಏಕೆ ಸಮಸ್ಯೆಗಳನ್ನು ತನ್ನ ತಲೆಯ ಮೇಲೆ ಎಳೆದುಕೊಳ್ಳಬೇಕು? ಹೇಗಿದ್ದರೂ ನಿರ್ದೇಶಕರು ಒಂದುತಿಂಗಳಿನ ನಂತರ ಬರುತ್ತಾರಲ್ಲ? ಅವರೇ ಏನಾದರೂ ಮಾಡಿಕೊಳ್ಳಲಿ ಎಂದು ಬಂದ ಸಮಸ್ಯೆಗಳನ್ನೆಲ್ಲ ಪರಿಹಾರ ನೀಡದೆ ಮುಂದೆ ತಳ್ಳುತ್ತ ಬಂದರು. ಒಂದು ತಿಂಗಳಿನ ನಂತರ ಬಂದ ನಿರ್ದೇಶಕರಿಗೆ ಎದೆ ಒಡೆಯಿತು. ಯಾವ ತೀರ್ಮಾನಗಳೂ ಆಗಿಲ್ಲ. ತೀರ್ಮಾನ ತೆಗೆದುಕೊಳ್ಳದಿರುವುದರಿಂದ ಸಣ್ಣ ಸಮಸ್ಯೆಗಳು ಈಗ ಬಲಿತು ನಿಂತಿವೆ. ಹಣಕಾಸು ಸ್ತಬ್ಧವಾಗಿದೆ. ಯಾಕಾದರೂ ರಜೆ ಹಾಕಿದೆನೊ ಎನ್ನುವಂತಾಯಿತು ಅವರಿಗೆ. ಇದು ಸಾಮಾನ್ಯ ಪ್ರಭಾರಿಗಳ ವಿಷಯ. ಆದರೆ ಭರತ ತಾನು ರಾಜ್ಯಕ್ಕೆ ಕೇವಲ ಹದಿನಾಲ್ಕು ವರ್ಷ ಮಾತ್ರ ಜವಾಬ್ದಾರಿ ಎಂದು ಗೊತ್ತಿದ್ದರೂ, ರಾಮನ ತೀರ್ಪಿಗೆ ಎಂದು ಯಾವ ವಿಷಯವನ್ನೂ ಬಿಟ್ಟು ಕರ್ತವ್ಯದಿಂದ ನುಣುಚಿಕೊಳ್ಳಲಿಲ್ಲ. ತನ್ನ ತಿಳುವಳಿಕೆಗೆ ಬಂದ ಎಲ್ಲ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನಡೆಸಿ, ರಾಜ್ಯಭಾರವನ್ನು ಹೊತ್ತರೂ ರಾಜನಾಗಲಿಲ್ಲ ಭರತ. ಅವನೊಂದು ಕಾರ್ಯದಕ್ಷತೆಗೆ ಮಾದರಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ದ್ವಾದಶಿ ಗಂ. 24-05, ನಕ್ಷತ್ರ: ಉತ್ತರಾಷಾಢ ಗಂ. 16-00 ಯೋಗ: ಶೋಭನ ಗಂ. 25-15, ಕರಣ: ಬವ ಗಂ. 13-36, ಸಿಂಹ ಮಾಸದ 21 ನೇ ದಿನ. ರಾಹುಕಾಲ : ಮಧ್ಯಾಹ್ನ 12:00–01:30, ಸೂರ್ಯೋದಯ : 06-23 ಸೂರ್ಯಾಸ್ತ : 06-34
ಮುಸ್ಲಿಂ ದಿನಾಂಕ : 10 ಸಫರ್
ದಿನ ವಿಶೇಷ : ಓಣಮ್ ಮೊದಲನೇ ದಿನ
ಅದೃಷ್ಟ ಸಂಖ್ಯೆ : 2, 8

ಮೇಷ: ಐಷಾರಾಮಿ ಮಟ್ಟದ ಜೀವನ ನಿರ್ವಹಣೆಯು ಆರ್ಥಿಕ ನಷ್ಟಕ್ಕೆ ಕಾರಣವಾಗುವುದು. ವ್ಯವಹಾರದಲ್ಲಿ ಸಣ್ಣ ಪುಟ್ಟ ನಷ್ಟ ಸಂಭವಿಸುತ್ತದೆ. ದುರಭ್ಯಾಸಗಳು ಹೊಂದಿದ ಸ್ನೇಹಿತರಿಂದ ಆಪತ್ತಿಗೆ ಸಿಲುಕುವಂತಾಗಬಹುದು.

ವೃಷಭ: ಉದ್ಯೋಗದಲ್ಲಿ ಉತ್ತಮ ಹೆಸರು ಗಳಿಸುವ ಪ್ರಯತ್ನಕ್ಕೆ ಶುಭವಾಗುತ್ತದೆ. ಸ್ನೇಹಿತರೊಂದಿಗೆ ಸಂತೋಷದಿಂದ ಕಾಲ ಕಳೆಯುವಿರಿ. ಉದ್ಯಮಿಗಳು ಕೆಲಸಗಾರರಲ್ಲಿ ಯಾವುದೇ ಮನಸ್ತಾಪಗಳನ್ನು ಮಾಡಿಕೊಳ್ಳಬೇಡಿ.

ಮಿಥುನ: ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ತೀವ್ರ ಸಂದೇಶ ಬರಲಿದೆ. ಸಮಾಜದಲ್ಲಿ ಅವಮಾನಕ್ಕೆ ಒಳಗಾಗುವ ಸನ್ನಿವೇಶಗಳು ಎದುರಾಗುವುದು.

ಕರ್ಕಾಟಕ: ಹಾಸ್ಯ ಪ್ರಜ್ಞೆ ಹೆಚ್ಚುವುದು ಆದರೆ ನಿಮ್ಮ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ತಾಯಿಯ ಅಥವಾ ಸೋದರ ಮಾವನ ಆರೋಗ್ಯದ ವ್ಯತ್ಯಾಸದಿಂದ ಬದಲಾವಣೆ ಉಂಟಾಗುತ್ತದೆ.

ಸಿಂಹ: ಭೂ ವ್ಯವಹಾರಗಳಿಂದ ಹೆಚ್ಚಿನ ಲಾಭ ದೊರೆಯಲಿದೆ. ಗೃಹ ನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ಆರ್ಥಿಕತೆ ಸ್ವಲ್ಪ ಮಟ್ಟಿನ ತೊಂದರೆಯನ್ನು ಸೃಷ್ಟಿ ಮಾಡುವುದು. ವಿದ್ಯಾಭ್ಯಾಸದಲ್ಲಿ ಪೈಪೋಟಿ ಇರಲಿದೆ.

ಕನ್ಯಾ: ಪಾಲುದಾರಿಕೆಯ ವ್ಯವಹಾರದಲ್ಲಿ ಈ ದಿನ ಯಾವುದೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ. ಉದ್ಯೋಗದ ಹುಡುಕಾಟ ನಡೆಸುವವರಿಗೆ ಅಪರಿಚಿತ ವ್ಯಕ್ತಿಯಿಂದ ಸಹಾಯ ಆಗುವುದು.

ತುಲಾ: ಹೊಸ ಮನೆಯ ಅಥವಾ ನಿವೇಶನದ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಪ್ರತಿಪಕ್ಷಗಳ ಆಪಾದನೆಗಳಿಗೆ ತೀಕ್ಷ್ಣ ಪ್ರತಿಕ್ರಿಯೆಯನ್ನು ನೀಡುವಿರಿ. ಕಾರ್ಖಾನೆ ಕೆಲಸಗಾರರಿಗೆ ಕೆಲಸ ಇರುವುದು.

ವೃಶ್ಚಿಕ: ಸಮಾಜದಲ್ಲಿ ಸ್ಥಾನಮಾನ ಹೊಂದಿರುವ ನಿಮಗೆ ಮಸಿ ಬಳಿಯುವ ಪ್ರಯತ್ನ ಸಂಬಂಧಿಕರಿಂದ ನಡೆಯುವುದು. ಮಕ್ಕಳು ವಿದ್ಯಾಭ್ಯಾಸದ ಕಡೆಗೆ ಗಮನ ಹರಿಸಿ, ಏಕಾಗ್ರತೆಯನ್ನು ಕಾಯ್ದುಕೊಳ್ಳಿ.

ಧನು: ಕಾನೂನಿಗೆ ವಿರುದ್ಧವಾದ ಕೆಲಸ ಮಾಡಬೇಡಿ. ಉನ್ನತ ಶಿಕ್ಷಣಕ್ಕಾಗಿ ಅದರಲ್ಲೂ ಮುಖ್ಯವಾಗಿ ವೈದ್ಯಕೀಯ ಅಧ್ಯಯನದವರು ದೂರದ ಅಥವಾ ವಿದೇಶ ಪ್ರಯಾಣ ಆಲೋಚನೆಯನ್ನು ಮಾಡಬಹುದು. ಸಾಲಬಾಧೆ ಕಾಡಲಿದೆ.

ಮಕರ: ಶತ್ರುಗಳ ವಿರುದ್ಧ ಧೈರ್ಯವಾಗಿ ಹೋರಾಡುವ ಪ್ರಯತ್ನವಿರಲಿ. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ. ಕೃಷಿ ಕೈಗಾರಿಕೆ ವ್ಯವಹಾರಗಳು ಸಮಾಧಾನಕರವಾದ ಆದಾಯ ತರಲಿವೆ. ಧಾರ್ಮಿಕವಾದ ಮನಸ್ಥಿತಿ ಇರಲಿದೆ.

ಕುಂಭ: ಮನಸ್ಸಿದು ನಿರಾಳವಾಗಲಿದೆ. ಕೆಲಸಗಳು ಸಲೀಸಾಗಿ ಸಾಗಲಿವೆ. ಇಂದಿನ ಎಲ್ಲಾ ಬೆಳವಣಿಗೆಗಳಿಗೂ ನೀವು ನಾಯಕತ್ವವನ್ನು ವಹಿಸಲಿದ್ದೀರಿ. ಜಾಹೀರಾತು ಕಂಪನಿಯಲ್ಲಿ ಕೆಲಸ ಮಾಡುವವರಿಗೆ ಲಾಭವಾಗುವುದು.

ಮೀನ: ಇದುವರೆಗೆ ಗುಪ್ತವಾಗಿದ್ದ ಕೌಟುಂಬಿಕ ವಿಷಯಗಳು ತೆರೆಯ ಮೇಲೆ ಬರಲಿವೆ. ಮಕ್ಕಳಿಗಾಗಿ ವಸ್ತುಗಳನ್ನು ಖರೀದಿಸುವಿರಿ. ಆದಾಯದಲ್ಲಿ ಪ್ರಗತಿ ಇರುವುದು.

ಪದಬಂಧ 5072

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3. ಅಮೋನಿಯಾ ಕ್ಲೋರಿನ್ ಸಂಯೋಗದಿಂದಾದ ಕ್ಷಾರ (5)
4. ಬೇಡಿಕೆಯನ್ನು ಹೀಗೆ ಹೇಳಿ (3)
6. ಏರುತಗ್ಗಿಲ್ಲದಿರುವುದು (3)
8. ಮಣ ಭಾರ ಹೊತ್ತಿರುವ ಇನಿಯ (3)
9. ಆನೆ ನಡೆಸುವವನು (3)
10. ಅಂತರಂಗದಲ್ಲಿರುವ ಅಲೆ! (3)
11. ಮರದೊಳಗೆ ಸವಿಯಾದುದು ಬಂದಿದೆ (3)
13. ಪ್ರಾಧಿಕಾರದ ಸುತ್ತವಿರುವ ಪೌಳಿ (3)
14. ರಜದಲ್ಲಿ ಆಚರಿಸಿದ ಬೆಳ್ಳಿ ಹಬ್ಬ (5)

ಮೇಲಿಂದ ಕೆಳಕ್ಕೆ

1. ಅದೇ ತಾನೆ ಬಿರಿದ ಹೂವು (4)
2. ಪಣ ಹೂಡಿ ಮಾಡಿರುವ ಅಳತೆ (4)
5. ತಮ್ಮನಿಗೆ ಈ ತರಹ ತೋರಿದ ಬೇಧಭಾವ (4)
7. ಗಮ ಗಮ ಎನ್ನುತ್ತಲೇ ಸೇರುವಿಕೆ! (4)
10. ತರತರದ ಕಾಯಿಪಲ್ಲೆ (4)
12. ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)



5071ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುತ್ತು 2.ಕಾಯಕ
4.ಕಡಿವಾಣ 6.ರುದ್ರಭೂಮಿ
8.ರಾವುತ 9.ಅಜ್ಞಾನಿ
11. ಸಮಂಜಸ 13.ಮಧುಕರ
15.ಹಲಗೆ 16.ಗಣಿ

ಮೇಲಿಂದ ಕೆಳಕ್ಕೆ:
1ಮುದುಕ 2.ಕಾರಣ
3.ಕರಾರು 5.ಡಿಕಾವು
7.ಮಿಸುನಿ 8.ರಾಯಸ
10.ಜ್ಞಾಪಕ 12. ಸನಿಹ
13.ಮಲ್ಲಿಗೆ 14.ರಮಣಿ

ಸುಡೊಕು 5458

	3		4			2		7
7		4		3				
			1			8		3
				4				
3		2	9		1			
				6				2
1		8	3		4		2	
						9		8
6		9		2			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5457 ಸುಡೊಕು

8	4	5	1	2	6	7	9	3
6	2	9	5	3	7	1	4	8
1	3	7	9	8	4	6	2	5
2	7	8	4	9	1	5	3	6
5	9	3	6	7	8	2	1	4
4	1	6	2	5	3	8	7	9
7	6	4	8	1	9	3	5	2
9	5	1	3	6	2	4	8	7
3	8	2	7	4	5	9	6	1

ಬೆಂಗಳೂರು ಮುಳುಗಿಲ್ಲ –ಸಿ.ಎಂ

ಒಂದನೇ ಪುಟದಿಂದ...

‘ಇಂಥ ಮಳೆಗೆ ಯಾವ ಚರಂಡಿಗಳನ್ನೂ ವಿನ್ಯಾಸ ಮಾಡ-ಲಾಗಿರುವುದಿಲ್ಲ. ದೊಡ್ಡ ಪ್ರಮಾಣದ ಒತ್ತುವರಿ ಹಾಗೂ ಚರಂಡಿ ಬ್ಲಾಕ್ ಆಗಿ ನೀರು ಸಂಗ್ರಹವಾಗಿದೆ. ಐಟಿ ಪಾರ್ಕ್ ಎದುರು ನೀರು ನಿಂತಿದೆ. ಕೆಲವಡೆ ಚರಂಡಿ ಮುಚ್ಚಿ ಕಟ್ಟಿದ್ದಾರೆ. ಕೆಲವೆಡೆ ಬ್ಲಾಕ್ ಆಗಿದೆ’ ಎಂದರು.

‘ಬಹಳ ದೊಡ್ಡ ಸವಾಲಿದೆ. ಯಾರೇ ಒತ್ತುವರಿ ಮಾಡಿದ್ದರೂ ತೆರವಿಗೆ ಸೂಚಿಸಿದ್ದೇನೆ. ನಾನೇ ಮೇಲ್ವಿಚಾರಣೆ ನಡೆಸುತ್ತಿದ್ದೇನೆ. ವಿರೋಧ ಪಕ್ಷದವರು ಮಳೆ ವಿಚಾರದಲ್ಲೂ ರಾಜಕಾರಣ ಮಾಡುತ್ತಿರುವುದು ದುರ್ದೈವ. ಎಲ್ಲರೂ ಒಗ್ಗಟ್ಟಾಗಿ ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾದ ಸಂದರ್ಭವಿದು. ಸಂಕ-ಷ್ಟದಲ್ಲಿರುವ ಜನರಿಗೆ ನೆರವಾಗಬೇಕು. ಹೀಗಿದ್ದರೂ ರಾಜಕಾರಣ ಮಾಡುವುದು ಸಣ್ಣತನದ ಪ್ರವೃತ್ತಿ’ ಎಂದು ಟೀಕಿಸಿದರು.

ತಮಿಳುನಾಡು: ಪ್ರವಾಹದ ಎಚ್ಚರಿಕೆ

ಕೊಯಮತ್ತೂರು (ಪಿಟಿಐ): ಸೇಲಂ ಜಿಲ್ಲೆಯ ಮೆಟ್ಟೂರು ಅಣೆಕಟ್ಟಿನ ಸ್ಟಾನ್ಲಿ ಜಲಾಶಯದಿಂದ ಹೆಚ್ಚುವರಿ ನೀರಿನ ಹೊರಹರಿವು ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ ಕಾವೇರಿ ನದಿಯ ದಡದಲ್ಲಿ ವಾಸಿಸುವ ಜನರು, ವಿಶೇಷವಾಗಿ ತಗ್ಗು ಪ್ರದೇಶಗಳಲ್ಲಿ ವಾಸಿಸುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಲೋಕೋಪಯೋಗಿ ಇಲಾಖೆ (ಪಿಡಬ್ಲ್ಯುಡಿ) ಅಧಿಕಾರಿಗಳು ಮಂಗಳವಾರ ಸೂಚಿಸಿದ್ದಾರೆ.

ಕರ್ನಾಟಕದಲ್ಲಿ ಭಾರಿ ಮಳೆಯಾಗುತ್ತಿರುವ ಕಾರಣ, ಸೋಮವಾರ ರಾತ್ರಿ ಜಲಾಶಯದ ನೀರಿನ ಒಳಹರಿವು 65,000 ಕ್ಯೂಸೆಕ್‌ನಿಂದ 80,000 ಕ್ಯೂಸೆಕ್‌ಗೆ ಏರಿಕೆಯಾಗಿದೆ. ಹೀಗಾಗಿ 16 ಗೇಟುಗಳ ಮೂಲಕ 1.20 ಲಕ್ಷ ಕ್ಯೂಸೆಕ್ ನೀರನ್ನು ಹೊರಬಿಡಲು ಲೋಕೋಪಯೋಗಿ ಇಲಾಖೆ ನಿರ್ಧರಿಸಿದೆ. ಜಲಾಶಯದ ಆಸುಪಾಸಿನಲ್ಲಿ ವಾಸಿಸುತ್ತಿರುವ ಜನರಿಗೆ ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸಲಹೆ ನೀಡಲಾಗಿದೆ.

ವೈಕುಂಠ ಸಮಾರಾಧನೆ



ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು;
ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಗೆ;
ಎಲ್ಲರೊಳಗೊಂದಾಗು ಮಂಕುತಿಮ್ಮ – ಡಿ.ವಿ.ಜಿ.

ಶ್ರೀ ಎಂ.ಎಂ.ನಾಯ್ಕ

ಕರ್ನಾಟಕ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಮತ್ತು ಮಾಜಿ KPSC ಸದಸ್ಯರು
(ಜನನ: 05.06.1932 • ಮರಣ: 27.08.2022)

ಇವರು ದಿ: 27.08.2022ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ವೈಕುಂಠ ಸಮಾರಾಧನೆಯನ್ನು 09.09.2022ರಂದು ರಾಮಚಂದ್ರ ಕನ್ವೆಂಷನ್ ಹಾಲ್, ನಂ. 4/62, 8ನೇ ಕ್ರಾಸ್, ನ್ಯೂ ಬಿಇಎಲ್ ರಸ್ತೆ, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಿಂಭಾಗ, ಎಂಎಸ್‌ಆರ್ ನಗರ, ಬೆಂಗಳೂರು – 560 054 ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀಮತಿ ವಿಮಲ ಎಂ. ನಾಯ್ಕ, ವೆಂಕಟೇಶ್ ನಾಯ್ಕ, ಡಾ॥ ವೇದವತಿ ನಾಯ್ಕ, ವಿಶ್ವನಾಥ್ ನಾಯ್ಕ ಮತ್ತು ಕುಟುಂಬದವರು ಹಾಗೂ ಬಂಧು–ಮಿತ್ರರು.

ಭಯೋತ್ಪಾದನೆ, ಮೂಲಭೂತವಾದ ವಿರುದ್ಧ ಜತೆಯಾಗಿ ಹೋರಾಡಲು ಮೋದಿ ಕರೆ

ಭಾರತ–ಬಾಂಗ್ಲಾ: 7 ಒಪ್ಪಂದಗಳಿಗೆ ಸಹಿ

ನವದೆಹಲಿ (ಪಿಟಿಐ): ಭಾರತ ಮತ್ತು ಬಾಂಗ್ಲಾದೇಶದ ನಡುವಣ ಪರಸ್ಪರ ವಿಶ್ವಾಸವನ್ನು ಮುರಿಯಲು ಯತ್ನಿಸುವ ಭಯೋತ್ಪಾದನೆ ಮತ್ತು ಮೂಲಭೂತವಾದಿ ಶಕ್ತಿಗಳನ್ನು ಎರಡೂ ದೇಶಗಳು ಜತೆಯಾಗಿ ಎದುರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಅವರ ಜತೆಗೆ ದ್ವಿಪಕ್ಷೀಯ ಮಾತುಕತೆಯಲ್ಲಿ ಮೋದಿ ಅವರು ಮಂಗಳವಾರ ಹೀಗೆ ಹೇಳಿದ್ದಾರೆ.

‘ಭಯೋತ್ಪಾದನೆ ಮತ್ತು ಮೂಲ-ಭೂತವಾದವನ್ನು ತಡೆಯುವ ವಿಚಾರದಲ್ಲಿ ನಾವಿಂದು ಸಹಕಾರಕ್ಕೆ ಒತ್ತು ಕೊಡಬೇಕಿದೆ. 1971ರ ಸ್ಫೂರ್ತಿಯನ್ನು ಸಜೀವವಾಗಿ ಇರಿಸಿಕೊಳ್ಳಬೇಕಿದೆ. ನಮ್ಮಲ್ಲಿನ ಪರಸ್ಪರ ವಿಶ್ವಾಸದ ಮೇಲೆ ದಾಳಿ ನಡೆಸುವವರನ್ನು ಜತೆಯಾಗಿ ಎದುರಿಸಬೇಕಿದೆ’ ಎಂದು ಮೋದಿ ಹೇಳಿದರು.

ರೈಲ್ವೆ, ಬಾಹ್ಯಾಕಾಶ ತಂತ್ರಜ್ಞಾನ, ನೀರು ಹಂಚಿಕೆ, ಸಂವಹನದಂತಹ ಕ್ಷೇತ್ರಗಳಲ್ಲಿನ ಸಹಕಾರಕ್ಕಾಗಿ ಏಳು ಒಪ್ಪಂದಗಳಿಗೆ ಸಹಿ ಮಾಡಲಾಗಿದೆ.

ವಿವಿಧ ವಿಷಯಗಳ ಬಗೆಗಿನ ಸಹಕಾರ ಹೆಚ್ಚಿಸಲು ಇಬ್ಬರೂ ನಾಯಕರು ಸಮಗ್ರವಾದ ಮಾತುಕತೆ ನಡೆಸಿದ್ದಾರೆ ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರ ಹೇಳಿದ್ದಾರೆ.

ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದದ (ಸಿಇಪಿಎ) ಬಗ್ಗೆ ಎರಡೂ ದೇಶಗಳ ನಡುವೆ ಸದ್ಯವೇ ಮಾತುಕತೆ ಆರಂಭವಾಗಲಿದೆ ಎಂದು ಮೋದಿ ಹೇಳಿದ್ದಾರೆ.

ಕನಿಷ್ಠ ಅಭಿವೃದ್ಧಿ ಹೊಂದಿದ ದೇಶ ಎಂಬ ವರ್ಗದಿಂದ ಅಭಿವೃದ್ಧಿ ಹೊಂದುತ್ತಿರುವ ದೇಶ ಎಂಬ ವರ್ಗಕ್ಕೆ ಬಾಂಗ್ಲಾದೇಶವು 2026ರಲ್ಲಿ ಪರಿವರ್ತನೆ ಹೊಂದಲಿದೆ. ಅದಕ್ಕೂ ಮೊದಲು ಸಿಇಪಿಎ ಒಪ್ಪಂದ ಆಗುವ ಸಾಧ್ಯತೆ ಇದೆ ಎಂದು ಕ್ವಾತ್ರ ತಿಳಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಚೀನಾದ ಪ್ರಭಾವ ಹೆಚ್ಚಳದ ಕುರಿತ ಪ್ರಶ್ನೆಗೆ, ‘ಇಬ್ಬರೂ ನಾಯಕರು ಈ ವಿಚಾರದ ಬಗ್ಗೆಯೂ ಮಾತುಕತೆ ನಡೆಸಿದ್ದಾರೆ. ಎರಡೂ ದೇಶಗಳಿಗೆ ಸಂಬಂಧಿಸಿದ ರಕ್ಷಣಾ ಹಿತಾಸಕ್ತಿಗಳು, ಭಾರತದ ಕಳವಳಗಳು, ಬಾಂಗ್ಲಾದೇಶದ ಆದ್ಯತೆಗಳು ಎಲ್ಲವೂ ಮಾತುಕತೆಯಲ್ಲಿ ಉಲ್ಲೇಖ ಆಗಿವೆ. ನಮ್ಮ ಸಂಬಂಧಕ್ಕೆ ಅದರದ್ದೇ ಆದ ಮಹತ್ವ ಇದೆ. ತಮ್ಮದೇ ಆದ ಆದ್ಯತೆಗಳಿಗೆ ಎರಡೂ ದೇಶಗಳು ಗಮನ ಹರಿಸಿವೆ’ ಎಂದು ಕ್ವಾತ್ರ ವಿವರಿಸಿದ್ದಾರೆ.

ಮಾತುಕತೆಗೂ ಮುನ್ನ, ಹಸೀನಾ ಅವರಿಗೆ ರಾಷ್ಟ್ರಪತಿ ಭವನದ ಎದುರಿನಲ್ಲಿ ವಿಧಿಯುಕ್ತ ಸ್ವಾಗತ ಕೋರಲಾಯಿತು. ಹಸೀನಾ ಅವರು ರಾಜಘಾಟ್‌ಗೆ ತೆರಳಿ ಗಾಂಧೀಜಿ ಸ್ಮಾರಕಕ್ಕೆ ಗೌರವ ಅರ್ಪಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರನ್ನೂ ಭೇಟಿಯಾದರು.

ಪ್ರಧಾನಿ ಮೋದಿ ಅವರು ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ಅವರನ್ನು ರಾಷ್ಟ್ರಪತಿ ಭವನದ ಮುಂದೆ ವಿಧ್ಯುಕ್ತ ಸ್ವಾಗತ ಸಮಾರಂಭದ ಸಂದರ್ಭದಲ್ಲಿ ಸ್ವಾಗತಿಸಿದರು –ಪಿಟಿಐ ಚಿತ್ರ

ನೀರು ಹಂಚಿಕೆಗೆ ಒಪ್ಪಿಗೆ

ಕುಶಿಯಾರಾ ನದಿಯ ನೀರು ಹಂಚಿಕೆಗಾಗಿ ಮಧ್ಯಂತರ ಒಪ್ಪಂದಕ್ಕೆ ಭಾರತ ಮತ್ತು ಬಾಂಗ್ಲಾದೇಶ ಸಹಿ ಹಾಕಿವೆ. ಎರಡೂ ದೇಶಗಳ ನಡುವೆ 1996ರಲ್ಲಿ ಗಂಗಾ ನೀರು ಹಂಚಿಕೆ ಒಪ್ಪಂದ ಏರ್ಪಟ್ಟಿತ್ತು. ಆಗ, ಎಚ್.ಡಿ. ದೇವೇಗೌಡ ಅವರು ಪ್ರಧಾನಿಯಾಗಿದ್ದರು. ಅದಾಗಿ 25 ವರ್ಷಗಳ ಬಳಿಕ ಎರಡೂ ದೇಶಗಳ ನಡುವೆ ಅಂತಹುದೊಂದು ಒಪ್ಪಂದ ಆಗಿದೆ.

ಭಾರತ ಮತ್ತು ಬಾಂಗ್ಲಾವನ್ನು ಹಾದು ಹರಿಯುವ 54 ನದಿಗಳಿವೆ. ತೀಸ್ತಾ ನದಿ ನೀರು ಹಂಚಿಕೆ ಒಪ್ಪಂದವನ್ನು ಆದಷ್ಟು ಬೇಗನೆ ಅಂತಿಮಗೊಳಿಸಬೇಕು ಎಂದು ಶೇಖ್ ಹಸೀನಾ ಅವರು ಒತ್ತಾಯಿಸಿದ್ದಾರೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರೋಧದಿಂದಾಗಿ ಈ ಒಪ್ಪಂದವು ಒಂದು ದಶಕದಿಂದ ತೂಗುಯ್ಯಾಲೆಯಲ್ಲಿದೆ.

ಕುಶಿಯಾರಾ ನದಿ ನೀರು ಹಂಚಿಕೆ ಒಪ್ಪಂದದಿಂದ ದಕ್ಷಿಣ ಅಸ್ಸಾಂ ಮತ್ತು ಬಾಂಗ್ಲಾದ ಸಿಲ್‌ಹೆಟ್ ಪ್ರದೇಶದ ಜನರಿಗೆ ಪ್ರಯೋಜನ ಆಗಲಿದೆ.

ಮುಜೀಬ್ ವಿದ್ಯಾರ್ಥಿವೇತನ

ಬಾಂಗ್ಲಾದೇಶ ವಿಮೋಚನೆಗಾಗಿ 1971ರಲ್ಲಿ ನಡೆದ ಯುದ್ಧದಲ್ಲಿ ಮೃತಪಟ್ಟ ಅಥವಾ ಗಂಭೀರವಾಗಿ ಗಾಯಗೊಂಡ ಭಾರತದ ಸೈನಿಕರು ಮತ್ತು ಅಧಿಕಾರಿಗಳ ವಂಶಸ್ಥರಿಗೆ ಮುಜೀಬ್ ವಿದ್ಯಾರ್ಥಿವೇತನವನ್ನು ನೀಡಲಾಗುವುದು ಎಂದು ಶೇಖ್ ಹಸೀನಾ ಅವರು ಘೋಷಿಸಿದ್ದಾರೆ.

ವಿದ್ಯಾರ್ಥಿವೇತನವನ್ನು ಬುಧವಾರ ಪ್ರದಾನ ಮಾಡಲಾಗುವುದು. ಹಸೀನಾ ಅವರ ತಂದೆ ಬಂಗಬಂಧು ಶೇಖ್ ಮುಜೀಬುರ್ ರಹಮಾನ್ ಅವರ ಹೆಸರಿನಲ್ಲಿ ಈ ವಿದ್ಯಾರ್ಥಿವೇತನ ಸ್ಥಾಪಿಸಲಾಗಿದೆ. ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ 200 ಸಿಬ್ಬಂದಿಯ ಕುಟುಂಬಗಳು ಈ ವಿದ್ಯಾರ್ಥಿವೇತನ ಪಡೆಯಲಿವೆ.

ಬಾಂಗ್ಲಾದೇಶ ಸರ್ಕಾರದ ಮಾಹಿತಿ ಪ್ರಕಾರ, 1971ರ ಯುದ್ಧದಲ್ಲಿ ಭಾರತೀಯ ಸೇನೆಯ 1,984 ಯೋಧರು ಹುತಾತ್ಮರಾಗಿದ್ದಾರೆ.

ಸುದ್ದಿ 2 ನಿಮಿಷ

ಮೂಗಿನ ಮೂಲಕ ನೀಡುವ ಲಸಿಕೆ: ತುರ್ತು ಬಳಕೆಗೆ ಅನುಮತಿ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿರುವ, ಮೂಗಿನ ಮೂಲಕ ನೀಡಬಹುದಾದ ಕೋವಿಡ್ ಲಸಿಕೆಯನ್ನು 18 ವರ್ಷ ಮೇಲ್ಪಟ್ಟವರಿಗೆ ತುರ್ತು ಸಂದರ್ಭದಲ್ಲಿ ಸೀಮಿತವಾಗಿ ಬಳಸಲು ಭಾರತೀಯ ಔಷಧ ಮಹಾನಿಯಂತ್ರಿಕರು (ಡಿಸಿಜಿಐ) ಮಂಗಳವಾರ ಅನುಮತಿ ನೀಡಿದ್ದಾರೆ.

‘ಹೈದರಾಬಾದ್‌ನ ಭಾರತ್ ಬಯೋಟೆಕ್ ಅಭಿವೃದ್ಧಿಪಡಿಸಿ, ತಯಾರಿಸಿರುವ, ಮೂಗಿನ ಮೂಲಕ ನೀಡಬಹುದಾದ ಕೋವಿಡ್ ಲಸಿಕೆಯ ಸೀಮಿತ ಬಳಕೆಗೆ ಡಿಸಿಜಿಐ ಅನುಮತಿ ನೀಡಿರುವುದು, ಕೋವಿಡ್–19 ವಿರುದ್ಧ ಭಾರತ ನಡೆಸುತ್ತಿರುವ ಹೋರಾಟಕ್ಕೆ ಮತ್ತಷ್ಟು ಶಕ್ತಿ ತುಂಬಿದಂತಾಗಿದೆ’ ಎಂದು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವಿಯಾ ಟ್ವೀಟ್ ಮಾಡಿದ್ದಾರೆ.



ಭಾರತ್ ಬಯೋಟೆಕ್ ಕಂಪನಿಯು ಈ ಲಸಿಕೆಯ ಕ್ಲಿನಿಕಲ್ ಟ್ರಯಲ್ ಪೂರ್ಣಗೊಳಿಸಿದೆ. 4 ಸಾವಿರದಷ್ಟು ಸ್ವಯಂ ಸೇವಕರು ಈ ಟ್ರಯಲ್‌ನ ಭಾಗವಾಗಿದ್ದರು. ಈ ಲಸಿಕೆಯಿಂದ ಯಾವುದೇ ಅಡ್ಡಪರಿಣಾಮಗಳು ಈ ವರೆಗೆ ಕಂಡು ಬಂದಿಲ್ಲ ಎಂದೂ ಅವರು ತಿಳಿಸಿದ್ದಾರೆ.

‘ರಕ್ತದಾನ ಅಮೃತ ಮಹೋತ್ಸವ’ಕ್ಕೆ ನೋಂದಣಿ ಆರಂಭ

ನವದೆಹಲಿ (ಪಿಟಿಐ): ‘ರಕ್ತದಾನ ಅಮೃತ ಮಹೋತ್ಸವ’ ಅಭಿಯಾನಕ್ಕಾಗಿ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದ್ದು, ಆರೋಗ್ಯ ಸೇತು ಆ್ಯಪ್ ಮೂಲಕ ಜನರು ತಮ್ಮ ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಸೆಪ್ಟೆಂಬರ್ 17ಕ್ಕೆ ಒಂದು ಲಕ್ಷ ಯುನಿಟ್ ರಕ್ತವನ್ನು ಸಂಗ್ರಹಿಸುವ ದೊಡ್ಡ ಮಟ್ಟದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಅಂಗವಾಗಿ ಈ ಅಭಿಯಾನ ಕೈಗೊಳ್ಳಲಾಗಿದೆ. ಅಂದು ಪ್ರಧಾನಿ ನರೇಂದ್ರ ಮೋದಿ ಅವರ ಹುಟ್ಟುಹಬ್ಬದ ದಿನವೂ ಆಗಿದೆ.

ಕೇಂದ್ರ ಆರೋಗ್ಯ ಸಚಿವಾಲಯವು ಈ ಸಂಬಂಧ ಎಲ್ಲಾ ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಮಂಗಳವಾರ ಪತ್ರ ಬರೆದಿದೆ. ಈ ಅಭಿಯಾನವು ರಾಷ್ಟ್ರೀಯ ಸ್ವಯಂ ಪ್ರೇರಿತ ರಕ್ತದಾನ ದಿನದ (ಅ.1) ವರೆಗೆ ಮುಂದುವರೆಯಲಿದೆ. ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಲ್ಲಿ ಸ್ಥಳೀಯ ಭಾಷೆಗಳಲ್ಲಿ ಅಭಿಯಾನದ ಕುರಿತು ಜಾಗೃತಿ ಮೂಡಿಸಬೇಕು ಎಂದೂ ಸಚಿವಾಲಯ ಹೇಳಿದೆ.

ರಾಜ್ಯ ಸರ್ಕಾರಿ ನೌಕರರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ

ಡಿಜಿಟಲ್ ಯುಗಕ್ಕೆ ತಕ್ಕಂತೆ ಬದಲಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ನೌಕರರು ಈಗ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ಜನರಿಗೆ ತ್ವರಿತ ಸೇವೆ ನೀಡುವುದಕ್ಕೆ ಪೂರಕವಾಗಿ ಬದಲಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಲಹೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಸರ್ಕಾರಿ ನೌಕರರ ದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಕಂಪ್ಯೂಟ-ರೀಕರಣದ ಯುಗ ಮುಗಿದು ಈಗ ಡಿಜಿಟಲ್ ಯುಗ ಆರಂಭವಾಗಿದೆ. ಸರ್ಕಾರಿ ಸೇವೆಗಳೂ ಡಿಜಿಟಲೀಕರ-ಣಗೊಳ್ಳುತ್ತಿವೆ. ಸರ್ಕಾರಿ ಸೇವೆಯಲ್ಲಿ ತಂತ್ರಜ್ಞಾನದ ಬಳಕೆ ವೇಗ ಪಡೆಯಬೇಕು’ ಎಂದರು.

‘ನೌಕರರು ಸರ್ಕಾರದ ಒಂದು ಪ್ರಮುಖ ಭಾಗ. ನಿಮ್ಮ ಹಿತ ರಕ್ಷಿಸುವುದು ನಮ್ಮ ಹೊಣೆ. ಆ ಕೆಲಸವನ್ನು ಸರ್ಕಾರ ಮಾಡಲಿದೆ. ಅದಕ್ಕೆ ಪ್ರತಿಯಾಗಿ ನೌಕರರು ಜನರಿಗೆ ಉತ್ತಮ ಸೇವೆಗಳನ್ನು ಒದಗಿಸುವ ಕೆಲಸ ಮಾಡಬೇಕು’ ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

ಸರ್ಕಾರಿ ನೌಕರರು ಸಾಮಾನ್ಯ ಜನರ ಸಂಕಷ್ಟಗಳಿಗೆ ಸ್ಪಂದಿಸುವುದು ಮುಖ್ಯ. ಆ ದಿಸೆಯಲ್ಲಿ ಎಲ್ಲರೂ ಸಕಾ-ರಾತ್ಮಕವಾಗಿರಬೇಕು. ಸರ್ಕಾರದ ಯೋಜನೆಗಳು ಜನರನ್ನು ತಲುಪಬೇಕು. ಜನರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕು ಎಂದರು.

ಸರ್ಕಾರಿ ನೌಕರರಿಗೆ ನಗದು ರಹಿತ ಚಿಕಿತ್ಸೆ ಒದಗಿಸುವುದಕ್ಕಾಗಿ ರೂಪಿಸಿರುವ ಆರೋಗ್ಯ ಸಂಜೀವಿನಿ ಯೋಜನೆ ಅನುಷ್ಠಾನಕ್ಕೆ ಮುಖ್ಯಮಂತ್ರಿ ಚಾಲನೆ ನೀಡಿದರು. ಅತ್ಯುತ್ತಮ ಸೇವೆ ಸಲ್ಲಿಸಿರುವ 30 ಸರ್ಕಾರಿ ಅಧಿಕಾರಿಗಳು ಮತ್ತು ನೌಕರರಿಗೆ ರಾಜ್ಯಮಟ್ಟದ ಸರ್ವೋತ್ತಮ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿಯು ₹ 50 ಸಾವಿರ ನಗದು, ಪ್ರಮಾಣಪತ್ರ ಮತ್ತು ಸ್ಮರಣಿಕೆಯನ್ನು ಒಳಗೊಂಡಿದೆ.

ಕಂದಾಯ ಸಚಿವ ಆರ್. ಅಶೋಕ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿ ಪಿ. ಹೇಮಲತಾ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಉಪಸ್ಥಿತರಿದ್ದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಮಂಗಳವಾರ ನಡೆದ ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಜಂಟಿ ನಿರ್ದೇಶಕ ಡಿ.ಪಿ. ಮುರಳೀಧರ ಮತ್ತು ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್. ಲತಾ ಅವರಿಗೆ ‘ಸರ್ವೋತ್ತಮ’ ಪ್ರಶಸ್ತಿ ಪ್ರದಾನ ಮಾಡಿದರು. ಡಿಪಿಎಆರ್ ಪ್ರಧಾನ ಕಾರ್ಯದರ್ಶಿ ಶ್ರೀವತ್ಸ ಕೃಷ್ಣ, ಮುಖ್ಯಮಂತ್ರಿ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಇದ್ದರು – ಪ್ರಜಾವಾಣಿ ಚಿತ್ರ

ಗೋವುಗಳ ದತ್ತು ಪಡೆಯಲು ಮನವಿ

ವೇತನ ಪರಿಷ್ಕರಣೆ ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ಹಲವು ಬೇಡಿಕೆಗಳನ್ನು ಸರ್ಕಾರ ಈಡೇರಿಸುತ್ತಿದೆ. ಸರ್ಕಾರಿ ನೌಕರರು ಗೋಶಾಲೆಗಳಲ್ಲಿರುವ ಗೋವುಗಳನ್ನು ದತ್ತು ಪಡೆಯುವ ಮೂಲಕ ಸರ್ಕಾರದ ಪುಣ್ಯಕೋಟಿ ಯೋಜನೆಯನ್ನು ಬೆಂಬಲಿಸಬೇಕು ಎಂದು ಮುಖ್ಯಮಂತ್ರಿ ಬೊಮ್ಮಾಯಿ ಮನವಿ ಮಾಡಿದರು.

ಹಿಜ್ಬುಲ್ ಮುಜಾಹಿದ್ದೀನ್‌ನ ಇಬ್ಬರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ, ಹಿಜ್ಬುಲ್ ಮುಜಾಹಿದ್ದೀನ್ ಉಗ್ರ ಸಂಘಟನೆಗೆ ಸೇರಿದ ಇಬ್ಬರು ಭಯೋತ್ಪಾದಕರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ’ ಎಂದು ಪೊಲೀಸರು ಮಂಗಳವಾರ ತಿಳಿಸಿದರು.

‘ಅನಂತ್‌ನಾಗ್ ಜಿಲ್ಲೆಯ ಪೊಷ್ಕ್ರೀರಿ ಪ್ರದೇಶದಲ್ಲಿ ಉಗ್ರರಿದ್ದಾರೆಂಬ ಬಗ್ಗೆ ಖಚಿತ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿದ್ದವು. ಕಾರ್ಯಾಚರಣೆಯ ವೇಳೆ ಉಗ್ರರು ಭದ್ರತಾ ಪಡೆಗಳ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಪ್ರತಿ ದಾಳಿ ನಡೆಸಿದ ಪಡೆಗಳು ಇಬ್ಬರು ಉಗ್ರರನ್ನು ಕೊಂದಿದ್ದಾರೆ’ ಎಂದರು.

‘ಹತ್ಯೆಯಾದವರನ್ನು ಡ್ಯಾನಿಶ್ ಭಟ್ ಅಲಿಯಾಸ್ ಕೊಕಾಬ್ ದುರೀ ಮತ್ತು ಬಶರತ್ ನಬಿ ಎಂದು ಗುರುತಿಸಲಾಗಿದೆ. ಇಬ್ಬರೂ 2021ರ ಏಪ್ರಿಲ್ 9 ರಂದು ಪ್ರಾದೇಶಿಕ ಸೈನ್ಯದ ಯೋಧ ಸಲೀಂನನ್ನು ಮತ್ತು ಮೇ 29 2021ರಂದು ಜಬ್ಲಿ-ಪೋರಾದಲ್ಲಿ ಇಬ್ಬರು ನಾಗರಿಕರನ್ನು ಕೊಂದಿದ್ದಾರೆ’ ಎಂದು ಕಾಶ್ಮೀರ ವಲಯದ ಹೆಚ್ಚುವರಿ ಡಿಜಿಪಿ ವಿಜಯ್ ಕುಮಾರ್ ಟ್ವೀಟ್ ಮಾಡಿದ್ದಾರೆ.

‘ಯಾತ್ರೆಯಿಂದ ಭಾರತ ಜೋಡೊ, ಕಾಂಗ್ರೆಸ್ ಜೋಡೊ ಸಾಧ್ಯ’

ತಿರುವನಂತಪುರ (ಪಿಟಿಐ): ‘ಭಾರತವನ್ನು ಜೋಡಿಸುವ ಹಾಗೂ ಕಾಂಗ್ರೆಸನ್ನು ಒಂದಾಗಿಸುವ ಎರಡೂ ಉದ್ದೇಶಗಳು ‘ಭಾರತ್ ಜೋಡೊ’ ಯಾತ್ರೆ ಮೂಲಕ ಈಡೇರಲಿವೆ’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಶಶಿ ತರೂರ್ ಮಂಗಳವಾರ ಇಲ್ಲಿ ಹೇಳಿದ್ದಾರೆ.

‘ದೇಶದ ಉದ್ದಗಲಕ್ಕೂ ನಡೆಯುವ ಭಾರತ್ ಜೋಡೊ ಯಾತ್ರೆಯು ಪಕ್ಷದ ಮೌಲ್ಯಗಳು ಹಾಗೂ ಆದರ್ಶಗಳೊಂದಿಗೆ ಮುಖಂಡರನ್ನು ಒಂದುಗೂಡಿಸುವುದು’ ಎಂದು ಸುದ್ದಿಸಂಸ್ಥೆ ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಸ್ಪರ್ಧಿಸಲು ತರೂರ್ ಚಿಂತನೆ ನಡೆಸಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಹಲವು ನಾಯಕರು ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. ಇದರಿಂದ ಪಕ್ಷದ ಮತದಾರರಿಗೆ ಹೆಚ್ಚು ಆಯ್ಕೆ ಸಿಕ್ಕಂತಾಗಲಿದೆ’ ಎಂದರು.

ಇಂದು ಚಾಲನೆ (ಕನ್ಯಾಕುಮಾರಿ ವರದಿ): ‘ಭಾರತ್ ಜೋಡೊ ಯಾತ್ರೆ’ಗೆ ಬುಧವಾರ (ಸೆ.7) ಇಲ್ಲಿ ಬೃಹತ್ ರ‍್ಯಾಲಿ ನಡೆಸುವ ಮೂಲಕ ಚಾಲನೆ ನೀಡಲಾಗುತ್ತಿದೆ. 3,570 ಕಿ.ಮೀ. ಸಂಚರಿಸಲಿರುವ ಈ ಯಾತ್ರೆಯು 2023ರ ಜನವರಿ 30ಕ್ಕೆ ಶ್ರೀನಗರದಲ್ಲಿ ಮುಕ್ತಾಯವಾಗಲಿದೆ, ಯಾತ್ರೆ ಸಂದರ್ಭದಲ್ಲಿ, ಆರ್ಥಿಕ ಅಸಮಾನತೆ, ಸಾಮಾಜಿಕ ಧ್ರುವೀಕರಣ, ರಾಜಕೀಯ ಕೇಂದ್ರೀಕರಣ ಸೇರಿದಂತೆ ದೇಶವನ್ನು ಬಾಧಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತದೆ ಎಂದು ಪಕ್ಷವು ಹೇಳಿದೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಕೆ. ನಲ್ಲತಂಬಿ, ವಿ. ಕೃಷ್ಣ, ವಿಜಯಾ ಗುತ್ತಲ, ಆರ್.ವಿ.ಎಸ್. ಸುಂದರಂ ಮತ್ತು ಸಿ.ಆರ್. ಯರವಿನತೆಲಿಮಠ ಅವರಿಗೆ ಪ್ರಾಧಿಕಾರದ ‘ಗೌರವ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಮೋಹನ ಕುಂಟಾರ್, ಕೆ. ಮಲ್ಲರ್ ವಿಳಿ, ದಾದಾಪೀರ್ ಜೈಮನ್, ಎಚ್.ಆರ್. ವಿಶ್ವಾಸ, ಅರ್ಜುನ ಭಾರದ್ವಾಜ ಮತ್ತು ಹರಿ ರವಿಕುಮಾರ್ ಅವರಿಗೆ ‘ಪುಸ್ತಕ ಬಹುಮಾನ’ ನೀಡಲಾಯಿತು. (ನಿಂತವರು ಎಡದಿಂದ) ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ, ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್, ಸಾಹಿತಿ ಶಾ.ಮಂ. ಕೃಷ್ಣರಾಯ ಮತ್ತು ಪ್ರಾಧಿಕಾರದ ಸದಸ್ಯ ರಾಘವೇಂದ್ರ ಪಾಟೀಲ ಇದ್ದಾರೆ. ‘ಗೌರವ ಪ್ರಶಸ್ತಿ’ ತಲಾ ₹ 50 ಸಾವಿರ ಹಾಗೂ₹ ‘ಪುಸ್ತಕ ಬಹುಮಾನ’ ತಲಾ ₹ 25 ಸಾವಿರ ನಗದು ಒಳಗೊಂಡಿದೆ –ಪ್ರಜಾವಾಣಿ ಚಿತ್ರ

₹1,200 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ನವದೆಹಲಿ (ಪಿಟಿಐ): ‘ಆಗ್ನೇಯ ದೆಹಲಿಯ ಕಾಲಿಂದಿ ಕುಂಜ್ ಪ್ರದೇಶದಲ್ಲಿ ಅಕ್ರಮವಾಗಿ ಸಂಗ್ರಹಿ-ಸಿಡಲಾಗಿದ್ದ ₹1,200 ಕೋಟಿಗೂ ಅಧಿಕ ಮೌಲ್ಯದ ಮಾದಕ ವಸ್ತುವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಅಫ್ಗಾನಿಸ್ತಾನದ ಪ್ರಜೆಗಳಾದ ಮುಸ್ತಾಫಾ ಸ್ಟಾನಿಕ್‌ಜಾಯ್ (23) ಮತ್ತು ರಹೀಮುಲ್ಲಾ ರಹೀಮಿ (44) ಎಂಬುವರನ್ನು ಬಂಧಿಸಲಾಗಿದೆ. ಇವರಿಂದ ಒಟ್ಟು 3 ಕ್ವಿಂಟಲ್ 12.5 ಕೆ.ಜಿ.ಮೆಟಾಂಪೆಟಮೈನ್ ಹಾಗೂ 10 ಕೆ.ಜಿ.ಹೆರಾಯಿನ್ ಜಪ್ತಿ ಮಾಡಲಾಗಿದೆ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆಕೆಲಸದವರು ಮತ್ತು ಮಹಿಳಾ ಮನೆಕೆಲಸದವರು ಬೇಕಾಗಿದ್ದಾರೆ. ಉತ್ತಮ_ಸಂಬಳ ಹಾಗೂ ಇಬ್ಬರಿಗೂ_ಪ್ರತ್ಯೇಕ ವಸತಿಸೌಲಭ್ಯ ನೀಡಲಾಗುತ್ತದೆ. ಸಂಪರ್ಕಿಸಿ: 9845058243"

Drivers

HAEID_REQUIRES Experienced Educated 4WH`Automatic Car-`Driver`at Rajajinagar Bangalore. Attractive package &.immediate placement Contact +916366443134.

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC,PUC, Degree ಸಂಬಳ15000 to 28000 ಸಂಪರ್ಕಿಸಿರಿ 9980814578, 9980812378

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT 17800/-68000/-9844708666, 9844702666

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

Hospital & Medical Jobs

ಬೇಕಾಗಿದ್ದಾರೆ- ಮಹಿಳೆಯರು, ಪುರುಷರು ಹೋಂನರ್ಸಿಂಗ್ ಕೆಲಸಕ್ಕೆ ತಕ್ಷಣವೇ ಸಂಪರ್ಕಿಸಿ. ಊಟ ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. 9742270055, 9742384444

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225388/ 9611225266

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Banashankari

40*60 SOUTH facing semi commercial site for sale in banashankri 6th stage bengaluru 7000/sqft ph 9945861392,9591191563

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

15/9/22, 8/10/22 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್, 6/10/22 ನೇಪಾಳ್, ಮುಕ್ತಿನಾಥ್, ಕಾಶಿ. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ್) 9845035349, 9482435755

ಸುಸಜ್ಜಿತ ವ್ಯವಸ್ಥೆಯೊಂದಿಗೆ: 02.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 06.10.2022 ರಿಂದ 12/9 ದಿನಗಳ ಕಾಶಿ,ಗಯಾ,ದೆಹಲಿ. 07.11.2022 13.11.2022 ರಿಂದ 8/10/16 ದಿನಗಳ ಜಗನ್ನಾಥ್‌ಪುರಿ ಕೊನಾರ್ಕ್, ಕೊಲ್ಕತ್ತ,ಕಾಶಿ,ನೇಪಾಳ ಮುಕ್ತಿನಾಥ್ 18.11.2022 ರಿಂದ 11 ದಿನಗಳ ಮಧ್ಯಪ್ರದೇಶ. 11.11.2022 ರಿಂದ 8/11/17 ದಿನಗಳ ಗುಜರಾತ್,ರಾಜಸ್ಥಾನ್ 02.11.2022 04.12.2022 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್. 11.12.2022 30.12.2022 ರಿಂದ 5 ದಿನಗಳ ದುಬೈ,ಅಬುಧಾಬಿ. 02.12.2022 ರಿಂದ 8 ದಿನಗಳ ಕಾಂಬೋಡಿಯಾ ವಿಯಟ್ನಂ ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

24.11.2022 ರಿಂದ 10 ದಿನಗಳ ಮಧ್ಯಪ್ರದೇಶ, ಗುಜರಾತ್ ರಾಜ್ಯದ ರಾಜ್ಯದ ನಾಲ್ಕು ಜ್ಯೋತಿರ್ಲಿಂಗ, ಸರ್ದಾರ್ ಪಟೇಲ್ ಪ್ರತಿಮೆ ವಿಮಾನ ಪ್ರವಾಸ; ಊಟ, ಎಸಿ ರೂಂ, ಸ್ಥಳೀಯ ವೆಚ್ಚ ಸೇರಿದೆ ಮಲ್ಲಿಕಾರ್ಜುನ ಟೂರ್ಸ್ ತುಮಕೂರು 8496044942

Travel Agencies

10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

ಶಿಕ್ಷಣಕ್ಕೆ
ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

DH ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, Education Success • Congratulation Ads
For More Details Contact:
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಕ್ರಮ ನೇಮಕಾತಿ: 11 ಸಹ ಶಿಕ್ಷಕರ ಬಂಧನ

ಒಂದನೇ ಪುಟದಿಂದ...

2012–13 ಹಾಗೂ 2014–15ನೇ ಸಾಲಿನ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ (ಪ್ರೌಢ) ಅವರು ವಿಧಾನಸೌಧ ಠಾಣೆಗೆ ಪ್ರತ್ಯೇಕ ದೂರು ನೀಡಿದ್ದರು.

ಪ್ರಕರಣದ ಕಡತ ಹಾಗೂ ದಾಖಲೆಗಳನ್ನು ಸುಪರ್ದಿಗೆ ಪಡೆದಿರುವ ಸಿಐಡಿ ಅಧಿಕಾರಿಗಳು, ರಾಜ್ಯದಾದ್ಯಂತ ಕಾರ್ಯಾಚರಣೆ ನಡೆಸಿ ಕರ್ತವ್ಯನಿರತ 11 ಸಹ ಶಿಕ್ಷಕರನ್ನು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದು, ಪತ್ತೆಗೆ ವಿಶೇಷ ತಂಡ ತನಿಖೆ ಮುಂದುವರಿಸಿದೆ.

ಅನರ್ಹರಿಗೆ ನೇಮಕಾತಿ ಆದೇಶ: ‘ ರಾಜ್ಯದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿ ಇದ್ದ ಗ್ರೇಡ್–2 ಸಹ ಶಿಕ್ಷಕರು ಹಾಗೂ ದೈಹಿಕ ಶಿಕ್ಷಕರ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ನೇಮಕಾತಿ ಸಮಯದಲ್ಲಿ ಅನರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿತ್ತು. ಇದೇ ಆದೇಶ ಪಡೆದ ಕೆಲ ಸಹಶಿಕ್ಷಕರು ಕೆಲಸಕ್ಕೆ ಸೇರಿದ್ದರು. ಇವರ ಅಕ್ರಮದ ಸುಳಿವು ಯಾರಿಗೂ ಲಭ್ಯವಾಗಿರಲಿಲ್ಲ. ಇತ್ತೀಚೆಗೆ ಸಹ ಶಿಕ್ಷಕರ ಅಕ್ರಮ ನೇಮಕಾತಿ ಸಂಗತಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧಿಕಾರಿಗಳ ಗಮನಕ್ಕೆ ಬಂದಿತ್ತು’ ಎಂದು ಮೂಲಗಳು ತಿಳಿಸಿವೆ.

‘ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ಹೇಗಾಯಿತು? ಹಣದ ವ್ಯವಹಾರ ನಡೆದಿದೆಯಾ? ಎಂಬಿತ್ಯಾದಿ ಸಂಗತಿಗಳು ತನಿಖೆಯಿಂದ ಹೊರಬೀಳಬೇಕಿದೆ’ ಎಂದೂ ಮೂಲಗಳು ಹೇಳಿವೆ.

‘ಕೆಲ ರಾಜಕಾರಣಿಗಳ ವಿಚಾರಣೆ’

ಅಕ್ರಮ ಎಸಗಿದ್ದ ಬಗ್ಗೆ ಲಭ್ಯವಾಗಿರುವ ದಾಖಲೆ ಆಧರಿಸಿ ಸದ್ಯ ಸಹಶಿಕ್ಷಕರ-ನ್ನು ಮಾತ್ರ ಸಿಐಡಿ ಅಧಿಕಾರಿಗಳು ಬಂಧಿಸಿದ್ದಾರೆ. ಅಕ್ರಮದಲ್ಲಿ ನೇಮಕಾತಿ ಮಂಡಳಿಯ ಕೆಲವರು ಹಾಗೂ ಕೆಲ ರಾಜಕಾರಣಿಗಳೂ ಭಾಗಿಯಾಗಿರುವ ಅನುಮಾನವಿದ್ದು, ಅವರೆಲ್ಲರನ್ನೂ ಅಧಿಕಾರಿಗಳು ವಿಚಾರಣೆ ನಡೆಸುವ ಸಾಧ್ಯತೆ ಇದೆ.

‘ಪ್ರಕರಣದ ತನಿಖೆ ಹೊಣೆ ವಹಿಸಿಕೊಳ್ಳುತ್ತಿದ್ದಂತೆ ಸಹಶಿಕ್ಷಕರನ್ನು ಬಂಧಿಸಲಾಗಿದೆ. ಪ್ರಕರಣದಲ್ಲಿ ಹಲವು ಪ್ರಭಾವಿಗಳ ಕೈವಾಡವಿರುವ ಶಂಕೆ ಇದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಬಂಧಿತ ಸಹ ಶಿಕ್ಷಕರ ವಿವರ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಬೋರನ ಕಣಿವೆ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕಿ ಶಮೀನಾಜ್ ಬಾನು (34), ಕಮಲಾಪುರ ಶಾಲೆಯ ನವೀನ್ ಹನುಮನಗೌಡ (35), ಕುಣಿಗಲ್ ತಾಲ್ಲೂಕಿನ ಕೊಡವತ್ತಿಯ ರಾಜೇಶ್ವರಿ ಜಗ್ಲಿ (35), ನಾಗಸಂದ್ರದ ಸಹ ಶಿಕ್ಷಕಿ ನಾಗರತ್ನ (42), ಅಮೃತೂರು ಶಾಲೆಯ ಬಿ.ಎನ್. ನವೀನ್‌ಕುಮಾರ್ (38), ಹೊಳಗೇರಿಪುರದ ಆರ್. ಹರೀಶ್ (37)’

ತಿಪಟೂರು ತಾಲ್ಲೂಕಿನ ಆಲ್ಬೂರ್‌ನ ಕಮಲಾ (35), ತುರುವೇಕೆರೆ ತಾಲ್ಲೂಕಿನ ಹುಲಿಕಲ್ ಶಾಲೆಯ ಎಚ್. ದಿನೇಶ್ (38), ಹುಲಿಕೆರೆಯ ಬಿ.ಎಂ. ಪ್ರಸನ್ನ (42), ಗುಬ್ಬಿ ತಾಲ್ಲೂಕಿನ ಕೆ. ಮತ್ತಿಘಟ್ಟದ ಎಸ್. ದೇವೇಂದ್ರ ನಾಯ್ಕ ಹಾಗೂ ವಿಜಯಪುರ ಜಿಲ್ಲೆಯ ಚಡಚಣ ತಾಲ್ಲೂಕಿನ ಹತ್ತಳ್ಳಿ ಗ್ರಾಮದ ಮಹೇಶ ಶ್ರೀಮಂತ ಸೊಸಲಾಡಿ (38)

‘ಪ್ರಧಾನಿ ಹುದ್ದೆಗೆ ಹಕ್ಕು ಸ್ಥಾಪಿಸಿಲ್ಲ’

ನವದೆಹಲಿ(ಪಿಟಿಐ) : ‘ನಾನು ಪ್ರಧಾನಿ ಹುದ್ದೆಗಾಗಿ ಹಕ್ಕು ಸ್ಥಾಪಿಸಿಲ್ಲ ಅಥವಾ ಆ ಸ್ಥಾನಕ್ಕೇರುವ ಅಪೇಕ್ಷೆಯನ್ನೂ ಹೊಂದಿಲ್ಲ’ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮಂಗಳವಾರ ಹೇಳಿದ್ದಾರೆ.

ಸಿಪಿಎಂ ಕಚೇರಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಅವರನ್ನು ಭೇಟಿ ಮಾಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ವಿರೋಧ ಪಕ್ಷಗಳನ್ನು ಒಳಗೊಂಡ ಮೈತ್ರಿಕೂಟದ ನಾಯಕತ್ವದ ಮೇಲೆ ಕಣ್ಣಿಟ್ಟಿರುವ ನಿತೀಶ್‌ಕುಮಾರ್, ಅವರು ಇದೇ ಕಾರಣಕ್ಕಾಗಿ ನವದೆಹಲಿಗೆ ಭೇಟಿ ನೀಡಿದ್ದಾರೆ ಎಂಬ ವದಂತಿಗಳ ಹಿನ್ನೆಲೆಯಲ್ಲಿ ಅವರ ಹೇಳಿಕೆಗೆ ಮಹತ್ವ ಬಂದಿದೆ.

‘ಎಡಪಕ್ಷಗಳು, ಕಾಂಗ್ರೆಸ್ ಹಾಗೂ ಎಲ್ಲ ಪ್ರಾದೇಶಿಕ ಪಕ್ಷಗಳು ಒಂದಾಗಿ ಮೈತ್ರಿಕೂಟ ರಚಿಸುವ ಸಮಯ ಬಂದಿದೆ’ ಎಂದು ನಿತೀಶ್ ಕುಮಾರ್ ಅವರು ಹೇಳಿದರು.

ಕೇಜ್ರಿವಾಲ್ –ನಿತೀಶ್ ಭೇಟಿ: ನಿತೀಶ್ ಅವರು ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಇಲ್ಲಿ ಭೇಟಿ ಮಾಡಿ ಚರ್ಚಿಸಿದ್ದಾರೆ. ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರು ಈ ವೇಳೆ ಉಪಸ್ಥಿತರಿದ್ದರು.

ಹಣ ಅಕ್ರಮ ವರ್ಗಾವಣೆ ಸಂಬಂಧ ತನಿಖೆ ನಡೆಸುತ್ತಿರುವ ಅಧಿಕಾರಿಗಳು

ಕರ್ನಾಟಕ ಸೇರಿ ಹಲವೆಡೆ ಇ.ಡಿ ಶೋಧ

ನವದೆಹಲಿ (ಪಿಟಿಐ): 'ದೆಹಲಿ ಸರ್ಕಾರದ ಅಬಕಾರಿ ನೀತಿಯಲ್ಲಿ ಹಣ ಅಕ್ರಮ ವರ್ಗಾವಣೆಯಾಗಿರುವ ಕುರಿತು ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಕರ್ನಾಟಕ ಸೇರಿ ಇತರ ರಾಜ್ಯಗಳ ಸುಮಾರು 40 ಸ್ಥಳಗಳಲ್ಲಿ ಮಂಗಳವಾರ ಶೋಧ ನಡೆಸಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ದೆಹಲಿ, ತೆಲಂಗಾಣ, ಮಹಾರಾಷ್ಟ್ರ, ತಮಿಳುನಾಡು, ಹರಿಯಾಣ, ಉತ್ತರ ಪ್ರದೇಶ ಹಾಗೂ ಕರ್ನಾಟಕದ 38 ರಿಂದ 49 ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ. ಈ ಹಗರಣದಲ್ಲಿ ಖಾಸಗಿ ವ್ಯಕ್ತಿಗಳು ಹಾಗೂ ಕೆಲ ಸರ್ಕಾರಿ ಅಧಿಕಾರಿಗಳ ಹೆಸರು ಕೇಳಿಬಂದಿದ್ದು ಅವರಿಗೆ ಸೇರಿದ ಜಾಗಗಳ ಮೇಲೆ ದಾಳಿ ನಡೆಸಲಾಗಿದೆ' ಎಂದು ಹೇಳಿದ್ದಾರೆ.

'ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರಿಗೆ ಸೇರಿದ ಯಾವುದೇ ಸ್ಥಳಗಳಲ್ಲಿ ಶೋಧ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಅಬಕಾರಿ ನೀತಿಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸಿಬಿಐ ಎಫ್‌ಐಆರ್ ದಾಖಲಿಸಿತ್ತು. ಅದರಲ್ಲಿ ಸಿಸೋಡಿಯಾ ಸೇರಿ ಒಟ್ಟು 14 ಮಂದಿಯನ್ನು ಆರೋಪಿಗಳನ್ನಾಗಿ ಮಾಡಲಾಗಿತ್ತು. ಈ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿರುವ ಅಂಶಗಳ ಆಧಾರದಲ್ಲಿ ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕ್ರಿಮಿನಲ್ ಸೆಕ್ಷನ್‌ನಡಿ ತನಿಖೆ ನಡೆಸುತ್ತಿದೆ.

'ಅಬಕಾರಿ ನೀತಿ ಜಾರಿಗೊಳಿಸುವಿಕೆಯಲ್ಲಿ ಭಾಗಿಯಾಗಿದ್ದ ವ್ಯಕ್ತಿಗಳು ಮತ್ತು ಕಂಪನಿಗಳು ಪಿಎಂಎಲ್‌ಎ ಕಾಯ್ದೆ ಉಲ್ಲಂಘಿಸಿರುವ, ಅಕ್ರಮ ಅಥವಾ ಬೇನಾಮಿ ಆಸ್ತಿ ಸೃಷ್ಟಿಯ ಸಂಭವನೀಯತೆಯ ಬಗ್ಗೆ ಇ.ಡಿ ಅಧಿಕಾರಿಗಳು ತನಿಖೆ ಕೈಗೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಹಗರಣದ ಸಂಬಂಧ ಸಿಬಿಐ ಅಧಿಕಾರಿಗಳು ಸಿಸೋಡಿಯಾ ಹಾಗೂ ಐಎಎಸ್ ಅಧಿಕಾರಿ ಆರವ ಗೋಪಿ ಕೃಷ್ಣ ಅವರ ದೆಹಲಿ ನಿವಾಸ ಮತ್ತು ಏಳು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದ ಇತರೆ 19 ಸ್ಥಳಗಳ ಮೇಲೆ ಆಗಸ್ಟ್ 19ರಂದು ದಾಳಿ ನಡೆಸಿದ್ದರು.

ಮನೆ ಎದುರು ಧರಣಿ: ಸಿಸೋಡಿಯಾ ಅವರನ್ನು ವಜಾಗೆ ಒತ್ತಾಯಿಸಿ ಬಿಜೆಪಿ ಶಾಸಕರು ಅವರ ಮನೆ ಸಮೀಪ ಮಂಗಳವಾರ ಸಂಜೆ ಪ್ರತಿಭಟಿಸಿದರು.

ಸಿಸೋಡಿಯಾಗೆ ಕ್ಲೀನ್ ಚಿಟ್ ನೀಡಿದ ಇ.ಡಿ: ಎಎಪಿ ಹೇಳಿಕೆ

'ಅಬಕಾರಿ ನೀತಿಯಲ್ಲಿನ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಇ.ಡಿ ಕೂಡ ಮನೀಷ್ ಸಿಸೋಡಿಯಾ ಅವರಿಗೆ 'ಕ್ಲೀನ್ ಚಿಟ್' ನೀಡಿದೆ. ಒಂದೊಮ್ಮೆ ಅವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಿದ್ದರೆ ಅವರ ಮನೆ ಮೇಲೂ ಅಧಿಕಾರಿಗಳು ದಾಳಿ ನಡೆಸುತ್ತಿದ್ದರು' ಎಂದು ಆಮ್ ಆದ್ಮಿ ಪಕ್ಷ ಹೇಳಿದೆ.

'ಸಿಸೋಡಿಯಾ ಅವರಿಗೆ ಈ ಮೊದಲು ಸಿಬಿಐ ಕ್ಲೀನ್ ಚಿಟ್ ನೀಡಿತ್ತು' ಎಂದು ತಿಳಿಸಿದೆ. ಎಎಪಿ ಹೇಳಿಕೆಯನ್ನು ಇ.ಡಿ ನಿರಾಕರಿಸಿದೆ. 'ಪ್ರಕರಣವು ಇನ್ನೂ ತನಿಖಾ ಹಂತದಲ್ಲಿದೆ. ನಾವು ಯಾರನ್ನೂ ಆರೋಪದಿಂದ ಮುಕ್ತಗೊಳಿಸಿಲ್ಲ' ಎಂದು ಇ.ಡಿ ಹೇಳಿದೆ.

> ಮುಚ್ಚಿಡುವುದಕ್ಕೆ ಏನೂ ಇಲ್ಲ. ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಒಂದೊಮ್ಮೆ ಇ.ಡಿ ಅಧಿಕಾರಿಗಳು ನನ್ನ ಸ್ಥಳಕ್ಕೆ ಬಂದರೆ ಅವರಿಗೆ ಕೆಲ ಶಾಲೆಗಳ ನಕಾಶೆ ಸಿಗಬಹುದಷ್ಟೆ
> **- ಮನೀಷ್ ಸಿಸೋಡಿಯಾ**
> ದೆಹಲಿ ಉಪ ಮುಖ್ಯಮಂತ್ರಿ

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ

- **ಪ್ರಶ್ನೆ:** ನನ್ನ ವಯಸ್ಸು 29 ವರ್ಷ, ನಾನು ಬ್ರಿಟನ್ ಮೂಲದ ಫಿನ್‌ಟೆಕ್ ಕಂಪನಿಯೊಂದರಲ್ಲಿ ಸೆಕ್ಯುರಿಟಿಸ್ ಅನಲಿಸ್ಟ್ ಆಗಿ ಮನೆಯಿಂದಲೇ ಕೆಲಸ ಮಾಡುತ್ತಿದ್ದೇನೆ. ತಿಂಗಳಲ್ಲಿ ಸರಿಸುಮಾರು 22 ದಿನ ಕೆಲಸ ಇರುತ್ತದೆ. ಇದು ಗುತ್ತಿಗೆ ಆಧಾರದ ಒಪ್ಪಂದವಾಗಿರುವ ಕಾರಣ ಕೆಲಸ ಮಾಡಿದ ದಿನಗಳಿಗೆ ಸಮಾನವಾಗಿ ನಾನು ಸಂಬಳವನ್ನು ಪೌಂಡ್‌ನಲ್ಲಿ ಪಡೆಯುತ್ತಿದ್ದೇನೆ. ಇದು ಭಾರತದ ರೂಪಾಯಿಗೆ ಪರಿವರ್ತನೆ ಆದಾಗ ತಿಂಗಳಿಗೆ ಸರಾಸರಿ ₹ 70,000 ಆಗುತ್ತದೆ. ನನ್ನ ಪ್ರಶ್ನೆಯೆಂದರೆ, ನಾನು ತೆರಿಗೆಯನ್ನು ಹೇಗೆ ನಿರ್ವಹಿಸಬಹುದು? ನಾನು ಉಳಿತಾಯ ಯೋಜನೆಯನ್ನು ಹೇಗೆ ಹೊಂದಬಹುದು? ನನ್ನ ಕುಟುಂಬಕ್ಕೆ (ತಂದೆ, ತಾಯಿ ಮತ್ತು ಕಿರಿಯ ಸಹೋದರಿ) ವೈದ್ಯಕೀಯ ವಿಮೆ ಹೊಂದುವ ಬಗೆಯನ್ನು ತಿಳಿಸಿ. ನಾನು ಚಿನ್ನ ಖರೀದಿಸುವ ಯೋಜನೆ ಹೊಂದಿದ್ದೇನೆ. ನನ್ನ ತಿಂಗಳ ವೆಚ್ಚ ₹ 10,000 ಮೀರುವುದಿಲ್ಲ ಎಂಬುದನ್ನು ಗಮನಿಸಿ.

ಉತ್ತರ: ನೀವು ವಿದೇಶಿ ಕಂಪನಿಯೊಂದಕ್ಕೆ ಭಾರತದಲ್ಲಿದ್ದೇ ಕೆಲಸ ಮಾಡುತ್ತಿದ್ದೀರಿ. ವೇತನ ನಿಮ್ಮ ಖಾತೆಗೆ ಕೆಲಸ ಮಾಡಿದ ದಿನಗಳಿಗೆ ಅನುಗುಣವಾಗಿ ಜಮಾ ಆಗುತ್ತಿದೆ. ನೀವು ನಿವಾಸಿ ಭಾರತೀಯರಾಗಿರುವುದರಿಂದ ಹಾಗೂ ನಿಮ್ಮ ಸೇವೆ ಭಾರತದಿಂದ ದೊರೆಯುತ್ತಿರುವುದರಿಂದ ನಿಮ್ಮ ಒಟ್ಟು ಜಾಗತಿಕ ಆದಾಯವು ಭಾರತೀಯ ಆದಾಯ ತೆರಿಗೆ ಕಾನೂನುಗಳ ಅಡಿಯಲ್ಲಿ ತೆರಿಗೆಗೆ ಒಳಪಡುತ್ತದೆ. ನಿಮಗೆ ಎಲ್ಲರಂತೆ ತೆರಿಗೆ ಅನ್ವಯವಾಗುತ್ತದೆ. ಇಲ್ಲಿ ನಿಮಗೆ ಗುತ್ತಿಗೆ ಆಧಾರದ ಮೇಲೆ ವೇತನ ಪಾವತಿಸುವಾಗ ವಿದೇಶಿ ತೆರಿಗೆ ನಿಯಮಗಳ ಪ್ರಕಾರ ತೆರಿಗೆ ಕಡಿತ ಮಾಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ. ಒಂದು ವೇಳೆ ಅಲ್ಲಿ ತೆರಿಗೆ ಕಡಿತ ಮಾಡಿ, ಸಂಬಂಧಿತ ದಾಖಲೆಗಳಿದ್ದಲ್ಲಿ ಎರಡು ದೇಶಗಳ ನಡುವಿನ ದ್ವಿತೆರಿಗೆ ತಪ್ಪಿಸುವ ಒಪ್ಪಂದ ಮೇರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ವ್ಯತ್ಯಾಸವುಳ್ಳ ತೆರಿಗೆ ಮೊತ್ತವನ್ನಷ್ಟೇ ಪಾವತಿಸಬೇಕಾಗುತ್ತದೆ. ಇದಕ್ಕೆ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ತೆರಿಗೆ ಉಳಿತಾಯಕ್ಕೆ ಸಂಬಂಧಿಸಿದಂತೆ: ಮೊದಲು ಸೆಕ್ಷನ್ 80ಸಿ ಅಡಿ ಬರುವ ತೆರಿಗೆ ಉಳಿತಾಯ ಯೋಜನೆಗಳಲ್ಲಿ ಹಣ ಹೂಡಿಕೆ ಮಾಡಿ. ವರ್ಷಕ್ಕೆ ₹ 1.50 ಲಕ್ಷದಷ್ಟು ಮೊತ್ತವನ್ನು ಹೂಡಿಕೆಯಾಗಿಯೂ, ತೆರಿಗೆ ಲಾಭದ ಉದ್ದೇಶಕ್ಕೂ ವಿವಿಧೆಡೆ ಜಮಾ ಮಾಡಬಹುದು. ಇದಲ್ಲದೆ, ನಿವೃತ್ತಿ ಜೀವನಕ್ಕಾಗಿ ನೀವು ಈಗಲೇ ಎನ್‌ಪಿಎಸ್‌ನಲ್ಲೂ ಹೂಡಿಕೆ ಆರಂಭಿಸಬಹುದು. ಇದರಲ್ಲಿ ಈಕ್ವಿಟಿಯಲ್ಲಿ ಹೆಚ್ಚಿನ ಹಣ ತೊಡಗಿಸುವುದರಿಂದ ದೀರ್ಘಾವಧಿಯಲ್ಲಿ ನಿಮ್ಮ ಹೂಡಿಕೆ ದೊಡ್ಡ ಮೊತ್ತವಾಗಬಲ್ಲದು.

ನೀವು ನಿಮ್ಮ ಹೆಸರಲ್ಲಿ ₹ 25 ಲಕ್ಷದಿಂದ ₹ 50 ಲಕ್ಷದವರೆಗಿನ ಅವಧಿ ವಿಮೆ ಪಡೆಯುವುದು ಉತ್ತಮ. ವೈದ್ಯಕೀಯ ವಿಮೆ ಯೋಜನೆಯಡಿ ಫ್ಲೋಟರ್ ಪಾಲಿಸಿ ಬಗ್ಗೆ ವಿಮಾ ಕಂಪನಿಯಿಂದ ಮಾಹಿತಿ ಪಡೆದು ಮುಂದುವರಿಯಿರಿ. ಈ ಎರಡು ವಿಮೆಗಳು ಹೂಡಿಕೆ ಅಲ್ಲದಿದ್ದರೂ ತೆರಿಗೆ ವಿನಾಯಿತಿ ಪ್ರಯೋಜನವನ್ನು ನೀಡುತ್ತವೆ ಹಾಗೂ ವಿಪತ್ತಿನ ಸಂದರ್ಭದಲ್ಲಿ ವಿಮಾ ರಕ್ಷೆ ನೀಡುತ್ತವೆ. ಹೂಡಿಕೆಯ ಉದ್ದೇಶಕ್ಕಾಗಿ ಸಾಂಪ್ರದಾಯಿಕ ವಿಮಾ ಯೋಜನೆಯಲ್ಲಿ ಪಾಲ್ಗೊಳ್ಳಿ. ಹೆಚ್ಚುವರಿಯಾಗಿ ತೆರಿಗೆ ಉಳಿಸುವ ಉದ್ದೇಶವಿದ್ದಲ್ಲಿ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿಸಿಡಿ(1ಬಿ) ಅಡಿ ₹ 50,000 ಹೆಚ್ಚುವರಿ ಕಡಿತ ನೀಡುವ ಹೂಡಿಕೆಯಲ್ಲಿ ತೊಡಗಿಸಿ. ಹೂಡಿಕೆಯ ಉದ್ದೇಶಕ್ಕಾಗಿ ಚಿನ್ನ ಖರೀದಿಸುವ ಉದ್ದೇಶ ಇದ್ದರೆ ಚಿನ್ನದ ಬಾಂಡ್ ಉತ್ತಮ.

ಸಂಗನಬಸವ ರೆಡ್ಡಿ, ಊರುಬೇಡ

- **ಪ್ರಶ್ನೆ:** ನನ್ನ ಹತ್ತಿರ ₹ 80 ಲಕ್ಷ ಇದೆ. ಇದನ್ನು ಹೇಗೆ ಬೆಳೆಸುವುದು? ನನಗೆ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ.

ಉತ್ತರ: ನಿಮ್ಮ ಪ್ರಶ್ನೆಯಲ್ಲಿ ನಿಮ್ಮ ವಯಸ್ಸು ಹಾಗೂ ನಿಮ್ಮ ಮಕ್ಕಳ ವಯಸ್ಸು ತಿಳಿಸಿಲ್ಲ. ಹೀಗಾಗಿ ವಯೋಮಾನಕ್ಕೆ ಸಂಬಂಧಿಸಿ ನಿಮ್ಮ ತಕ್ಷಣದ ಅಗತ್ಯ ಅಂದಾಜಿಸುವುದು ಕಷ್ಟ. ಆದರೂ, ನೀವು ನೀಡಿದ ಮಾಹಿತಿಯ ಅಡಿ ಊಹಿಸಿ ಉತ್ತರಿಸುವುದಾದರೆ, ನಿಮ್ಮಲ್ಲಿರುವ ಈ ಹೆಚ್ಚುವರಿ ಮೊತ್ತದಲ್ಲಿ ನಿಮ್ಮ ಹೆಣ್ಣು ಮಕ್ಕಳ ಶಿಕ್ಷಣ - ವಿವಾಹಕ್ಕೆ ಅಗತ್ಯವಾಗಿ ಬೇಕಾದ ಹಣವನ್ನು ಪ್ರತ್ಯೇಕವಾಗಿ ಬ್ಯಾಂಕ್ ಖಾತೆಯಲ್ಲಿ ಹೂಡಿಕೆ ಮಾಡಿ. ಇದು ನಿಮಗೆ ಶೇಕಡ 6-7ರಷ್ಟು ಬಡ್ಡಿ ಕೊಟ್ಟರೂ ಅಸಲು ಭದ್ರವಾಗಿರುತ್ತದೆ. ಅಷ್ಟು ಮೊತ್ತವನ್ನು ಏರಿಳಿತ ಕಾಣುವ ಮ್ಯೂಚುವಲ್ ಫಂಡ್ ಅಥವಾ ಷೇರು ಮಾರುಕಟ್ಟೆಯಲ್ಲಿ ತೊಡಗಿಸದಿರಿ. ಇನ್ನು ಉಳಿದ ಮೊತ್ತವನ್ನಷ್ಟೇ ನೀವು ಹೆಚ್ಚುವರಿ ಲಾಭ ಗಳಿಸುವ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಿ. ನಿಮ್ಮ ನಿವೃತ್ತಿ ಬದುಕು ಹತ್ತಿರವಿದ್ದರೆ ಅಥವಾ ಈಗಾಗಲೇ ನಿವೃತ್ತಿಯಾಗಿದ್ದರೆ, ಸಂಪೂರ್ಣ ಮಾಹಿತಿ ಇಲ್ಲದೆ ಅಪಾಯ ಇರುವ ಎಲ್ಲಿಯೂ ತೊಡಗಿಸದಿರಿ.

ನಿಮ್ಮ ಹಾಗೂ ಮಕ್ಕಳ ವಯೋಮಾನಕ್ಕೆ ಅಗತ್ಯವಿರುವ ಜೀವ ವಿಮೆ, ಆರೋಗ್ಯ ವಿಮೆ ಹೊಂದಿಸಿಕೊಳ್ಳಿ. ಸ್ವಂತ ಮನೆ-ನಿವೇಶನ ಇತ್ಯಾದಿಗಳಲ್ಲಿ ಹೂಡಿಕೆ ಮಾಡಿಲ್ಲದಿದ್ದರೆ ಸಾಮಾನ್ಯ ಅಗತ್ಯದಂತೆ ಆ ಬಗ್ಗೆಯೂ ಗಮನ ಹರಿಸಿ. ನೀವು ವೃತ್ತಿಯಲ್ಲಿದ್ದರೆ, ಪಿಂಚಣಿ ನೀಡುವ ಯೋಜನೆಗಳಲ್ಲಿ ಹೂಡಿಕೆ ಮಾಡಿ. ಹೆಚ್ಚಿನ ಲಾಭ ಬೇಕಾದರೆ ಉತ್ತಮ ಕಂಪನಿಯ ಷೇರು, ಇಟಿಎಫ್, ಮ್ಯೂಚುವಲ್ ಫಂಡ್‌ಗಳಲ್ಲಿ ಮೇಲೆ ಹೇಳಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಕ್ರಮಬದ್ಧವಾಗಿ ಹೂಡಿಕೆ ಮಾಡಿ. ಒಂದೇ ಬಾರಿಗೆ ಒಂದೇ ರೀತಿಯ ಹೂಡಿಕೆಗಳಲ್ಲಿ ಅಷ್ಟೂ ಮೊತ್ತ ತೊಡಗಿಸದಿರಿ.

ಎಲ್ಲದಕ್ಕಿಂತ ಮುಖ್ಯವಾಗಿ, ಹೂಡಿಕೆದಾರ ನಿರೀಕ್ಷಿಸುವ ಲಾಭದ ಶೇಕಡಾವಾರು ಪ್ರಮಾಣ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಇದು ಅವರವರ ಯೋಚನಾ ಸಾಮರ್ಥ್ಯ ಹಾಗೂ ಮಾನಸಿಕ ಸ್ಥೈರ್ಯ ಆಧರಿಸಿ ಭಿನ್ನವಾಗಿರುತ್ತದೆ. ಮಾತ್ರವಲ್ಲ, ನೀವು ಒಂದು ಹಂತದ ಸರಾಸರಿ ಲಾಭಕ್ಕಿಂತ ಅಧಿಕ ಲಾಭ ನಿರೀಕ್ಷಿಸುತ್ತಿದ್ದರೆ, ಕೆಲವೊಮ್ಮೆ ಅಂತಹ ಹೂಡಿಕೆಗಳಿಂದ ಸಂಭವಿಸಬಹುದಾದ ನಷ್ಟ ತಡೆದುಕೊಳ್ಳುವ ನಿಮ್ಮ ಸಾಮರ್ಥ್ಯದ ಬಗ್ಗೆಯೂ ಮೊದಲೇ ಖಚಿತತೆ ಹೊಂದಿರಬೇಕು.

ಇದಕ್ಕೆ ಬೇಕಾದ ಮಾನಸಿಕ ತಯಾರಿ ಹಾಗೂ ಆಯಾ ಹೂಡಿಕೆ ಕ್ಷೇತ್ರದ ಬಗೆಗಿನ ಸೂಕ್ಷ್ಮ ಮಾಹಿತಿ ಅಥವಾ ಪರಿಣತಿ ಅಗತ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001 ಇ-ಮೇಲ್: businessdesk@prajavani.co.in

ಬ್ರಿಟನ್‌ನ ನೂತನ ಪ್ರಧಾನಿಯಾಗಿ ರಾಣಿಯಿಂದ ನೇಮಕ

ಭರವಸೆಯ ರಾಷ್ಟ್ರವಾಗಿ ಬ್ರಿಟನ್: ಲಿಜ್ ಟ್ರಸ್

ಲಂಡನ್ (ಪಿಟಿಐ): ಬ್ರಿಟನ್‌ನ ನೂತನ ಪ್ರಧಾನಿ, ಕನ್ಸರ್ವೇಟಿವ್ ಪಕ್ಷದ ನಾಯಕಿ ಲಿಜ್ ಟ್ರಸ್ ಅವರು, ತೆರಿಗೆ ಕಡಿತ ಮತ್ತು ಸುಧಾರಣೆ ಕ್ರಮಗಳ ಮೂಲಕ ಆರ್ಥಿಕತೆಗೆ ಚೇತರಿಕೆ ನೀಡುವ ಭರವಸೆ ನೀಡಿದ್ದಾರೆ

ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಂಗಳವಾರ, ಪ್ರಧಾನಿ ಕಾರ್ಯಾಲಯ '10, ಡೌನಿಂಗ್ ಸ್ಟ್ರೀಟ್'ನ ಹೊರಗಡೆ ಮಾತನಾಡಿದ ಅವರು, ನಿರ್ಣಾಯಕ ಕಾಲಘಟ್ಟದಲ್ಲಿ ಗುರುತರ ಹೊಣೆಗಾರಿಕೆ ಹೊತ್ತಿರುವುದಕ್ಕೆ ಹೆಮ್ಮೆ ಆಗುತ್ತಿದೆ' ಎಂದರು.

ಇದಕ್ಕೂ ಮೊದಲು ಬ್ರಿಟನ್‌ನ ರಾಣಿ 2ನೇ ಎಲಿಜಬೆತ್ ಅವರು, 47 ವರ್ಷದ ಲಿಜ್ ಟ್ರಸ್ ಅವರನ್ನು ನೂತನ ಪ್ರಧಾನಿಯಾಗಿ ನೇಮಿಸಿದರು.

'ನನ್ನ ನೇತೃತ್ವದ ಸರ್ಕಾರ ಬ್ರಿಟನ್ ಅನ್ನು ಒಂದು ಭರವಸೆಯ ರಾಷ್ಟ್ರವಾಗಿ ರೂಪಿಸಲು ಒತ್ತು ನೀಡಲಿದೆ. ಅತ್ಯಧಿಕ ವೇತನದ ನೌಕರಿ, ಸುರಕ್ಷಿತ ರಸ್ತೆ ನಮ್ಮ ಆಶಯ. ದೇಶದಲ್ಲಿ ಪ್ರತಿಯೊಬ್ಬರಿಗೂ ಅವರು ಅರ್ಹರಿರುವ ಅವಕಾಶಗಳು ದೊರೆಯಬೇಕು' ಎಂದರು.

ರಾಣಿ ಎಲಿಜಬೆತ್ ಭೇಟಿಯಾದ ಲಿಜ್ –ಎಎಫ್‌ಪಿ ಚಿತ್ರ

ಈ ಗುರಿಸಾಕಾರಗೊಳಿಸಲು ಈ ದಿನ ಹಾಗೂ ಪ್ರತಿ ದಿನ ಕಾರ್ಯನಿರ್ವಹಿಸುತ್ತೇವೆ ಎಂದು ಭರವಸೆ ನೀಡಿದರು. ದೇಶದ ಆರ್ಥಿಕತೆ ಉತ್ತಮಪಡಿಸಲು ದಿಟ್ಟ ಯೋಜನೆ ಹೊಂದಿದ್ದೇವೆ ಎಂದು ಹೇಳಿದರು.

ರಾಣಿಯಿಂದ ಆಹ್ವಾನ: ಸ್ಕಾಟ್ಲೆಂಡ್‌ನ ಅಬೆರ್ಡೀನ್‌ಶೈರ್‌ನಲ್ಲಿರುವ ರಾಣಿ ಅವರ ಬಲ್‌ಮೊರಲ್ ಕ್ಯಾಸಲ್ ನಿವಾಸಕ್ಕೆ ತೆರಳಿದ ಲಿಜ್ ಟ್ರಸ್ ಅವರಿಗೆ 96 ವರ್ಷದ ರಾಣಿ ಎಲಿಜಬೆತ್, ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಲು ಆಹ್ವಾನಿಸಿದರು.

ಅದಕ್ಕೂ ಪೂರ್ವದಲ್ಲಿ ಹಾಲಿ ಪ್ರಧಾನಿ ಬೋರಿಸ್ ಜಾನ್ಸನ್ ಅವರು ರಾಣಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದರು. ಲಿಜ್ ಟ್ರಸ್ ಈಗ ತಮ್ಮ ಸಂಪುಟದ ಸದಸ್ಯರನ್ನು ಆಯ್ಕೆಯ ಸಿದ್ಧತೆಯಲ್ಲಿ ಇದ್ದಾರೆ.

ಕೈಗಾರಿಕೆ: 10 ಎಕರೆವರೆಗಿನ ಭೂಮಿ ನೇರ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಹಂಚಿಕೆ ವ್ಯವಸ್ಥೆಯನ್ನು ಸರಳೀಕರಣಗೊಳಿಸಿದ್ದು, ಇನ್ನು ಮುಂದೆ 10 ಎಕರೆವರೆಗಿನ ಭೂ ಹಂಚಿಕೆಗೆ ಭೂಪರಿಶೋಧನಾ ಸಮಿತಿಯ (ಎಲ್‌ಎಸಿ) ಪರಿಶೀಲನೆ ಅಗತ್ಯವಿಲ್ಲ ಎಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೊಸ ಆದೇಶ ಹೊರಡಿಸಿದೆ.

ಅಲ್ಲದೆ, ಹೂಡಿಕೆ ಪ್ರಸ್ತಾವನೆಗಳು ನೇರವಾಗಿ ರಾಜ್ಯ ಮಟ್ಟದ ಸಮಿತಿಯ ಮುಂದೆ ಮಂಡನೆಯಾಗಲಿವೆ. ಸುಲಲಿತ ವಹಿವಾಟು ಮಾದರಿಯಲ್ಲೇ ಸುಲಲಿತ ಭೂ ಹಂಚಿಕೆ ಪದ್ಧತಿಯನ್ನು ಜಾರಿಗೊಳಿಸಲಾಗಿದೆ.

'ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ಅಗತ್ಯವಿರುವ ಭೂಮಿಯನ್ನು ತ್ವರಿತವಾಗಿ ನೀಡಲಾಗುವುದು. ಇದರಿಂದ ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳ ಆಕರ್ಷಿಸಬಹುದಾಗಿದೆ' ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದ್ದಾರೆ.

'10 ಎಕರೆಗಿಂತ ಕಡಿಮೆ ವಿಸ್ತೀರ್ಣದ ಭೂಮಿಗಾಗಿ ಜಮೀನು ಪರಿಶೀಲನಾ ಸಮಿತಿಗೆ ಹೋಗುವ ಬದಲು ನೇರವಾಗಿ ಜಿಲ್ಲಾ ಅಥವಾ ರಾಜ್ಯ ಮಟ್ಟದ ಅನುಮೋದನಾ ಸಮಿತಿಯಲ್ಲಿ ಅನುಮೋದನೆ ನೀಡಿರುವುದರಿಂದ ಪ್ರಸ್ತಾವನೆಗಳಿಗೆ ತ್ವರಿತವಾಗಿ ಅನುಮೋದನೆ ದೊರೆಯುತ್ತದೆ. ಇದರಿಂದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಅನುಕೂಲವಾಗುವುದು' ಎಂದು ಹೇಳಿದರು.

'10 ಎಕರೆಗಿಂತ ಹೆಚ್ಚಿನ ವಿಸ್ತೀರ್ಣ ಮತ್ತು ₹15 ಕೋಟಿಯಿಂದ ₹500 ಕೋಟಿವರೆಗಿನ ಹೂಡಿಕೆ ಪ್ರಸ್ತಾವನೆಗಳನ್ನು ಭೂ ಲೆಕ್ಕ ಪರಿಶೋಧನಾ ಸಮಿತಿಯ ಮುಂದೆ ಮಂಡಿಸಬಹುದು. ಇಲ್ಲಿ ಒಪ್ಪಿಗೆ ಸಿಕ್ಕ ನಂತರ, ಅಂತಿಮ ಅನುಮೋದನೆಗಾಗಿ ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿಯ ಮುಂದೆ ಪ್ರಸ್ತಾವನೆ ಸಲ್ಲಿಸಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಬೆಳವಣಿಗೆಯ ಉದ್ದೇಶದಿಂದ 10 ಎಕರೆವರೆಗೆ ಜಮೀನು ಹಂಚಿಕೆಯನ್ನು ನೇರವಾಗಿ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆ ಮುಂದೆ ಮಂಡಿಸಲು ಅವಕಾಶ ನೀಡಲಾಗಿದೆ. ಭೂಮಿ ಪರಿಶೋಧನಾ ಸಮಿತಿಯ ಅನುಮೋದನೆಗಾಗಿ ಕಾಯಬೇಕಾಗಿಲ್ಲ' ಎಂದು ಹೇಳಿದ್ದಾರೆ.

ಏಕಗವಾಕ್ಷಿ ಅನುಮೋದನಾ ವ್ಯವಸ್ಥೆಯನ್ನು ಸರಳೀಕರಣಗೊಳಿಸುವ ಮೂಲಕ ಸುಲಲಿತ ವ್ಯವಹಾರ ಮತ್ತು ಪಾರದರ್ಶಕತೆಗೆ ಒತ್ತು ನೀಡಿ ಈ ಆದೇಶ ಹೊರಡಿಸಲಾಗಿದೆ ಎಂದು ನಿರಾಣಿ ತಿಳಿಸಿದ್ದಾರೆ.

ಷೇರುಪೇಟೆ ವಹಿವಾಟು

▼ 48



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,665
ಇಂದಿನ ಅಂತ್ಯ	17,655
▼	10
ದಿನದ ಕನಿಷ್ಠ	17,764

ವಿನಿಮಯ ದರ

$ ಡಾಲರ್	79.82
£ ಪೌಂಡ್	92.6
€ ಯೂರೊ	79.45
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1230 (1237)
ಸೂರ್ಯಕಾಂತಿ (ರಿಫೈನ್ಡ್)	₹1440 (1450)
ಪಾಮೋಲಿನ್	₹985 (995)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹147
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹132

ಕೊಬ್ಬರಿ ಧಾರಣೆ

ಅರಸೀಕೆರೆ	₹12000-13826
ತುರುವೇಕೆರೆ	₹13800-13900

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹336-556
ದ್ವಿತಳಿ (ಬಿ.ವಿ)	₹335-845

ತಗ್ಗುತ್ತಿದೆ ಸಾಲದ ಪ್ರಮಾಣ: ಅದಾನಿ

ನವದೆಹಲಿ (ಪಿಟಿಐ): ದೇಶದ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿರುವ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು, ನಿವ್ವಳ ಸಾಲ ಹಾಗೂ ಕಾರ್ಯಾಚರಣೆ ಲಾಭದ ಅನುಪಾತ ಸುಧಾರಿಸಿದೆ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದ ಪಡೆದಿರುವ ಸಾಲದ ಮೊತ್ತವು ಶೇಕಡ 50ಕ್ಕಿಂತ ಕಡಿಮೆ ಆಗಿದೆ ಎಂದು ಹೇಳಿದೆ.

ಸಮೂಹವು ಹೆಚ್ಚು ಸಾಲದಲ್ಲಿದೆ ಎಂದು ಕ್ರೆಡಿಟ್‌ಸೈಟ್ಸ್ ಸಂಸ್ಥೆಯ ವರದಿಯೊಂದು ಈಚೆಗೆ ಹೇಳಿತ್ತು. ಈ ವರದಿಗೆ ಸಮೂಹವು 15 ಪುಟಗಳ ಪ್ರತಿಕ್ರಿಯೆ ನೀಡಿದೆ. ಸಮೂಹದ ಕಂಪನಿಗಳು ನಿರಂತರವಾಗಿ ಸಾಲವನ್ನು ಕಡಿಮೆ ಮಾಡಿಕೊಳ್ಳುತ್ತಿವೆ ಎಂದು ಹೇಳಿದೆ.

'ಕಂಪನಿಗಳ ವಹಿವಾಟು ಸರಳವೂ ಬಲಿಷ್ಠವೂ ಆದ ನೆಲೆಯಲ್ಲಿ ನಡೆಯುತ್ತಿದೆ' ಎಂದು ಅದು ಹೇಳಿದೆ.

> **ಮುಖ್ಯಾಂಶಗಳು**
> - ಸಮೂಹವು ಹೆಚ್ಚು ಸಾಲದಲ್ಲಿದೆ ಎಂದು ಕ್ರೆಡಿಟ್‌ಸೈಟ್ಸ್ ಸಂಸ್ಥೆಯ ವರದಿ ಹೇಳಿತ್ತು
> - 'ನಿವ್ವಳ ಸಾಲ ಹಾಗೂ ಕಾರ್ಯಾಚರಣೆ ಲಾಭದ ಅನುಪಾತ ಸುಧಾರಿಸಿದೆ'

ಈ ವರ್ಷದ ಮಾರ್ಚ್ ವೇಳೆಗೆ ಸಮೂಹದ ಒಟ್ಟು ಸಾಲವು ₹ 1.88 ಲಕ್ಷ ಕೋಟಿ ಆಗಿತ್ತು, ನಿವ್ವಳ ಸಾಲವು ₹ 1.61 ಲಕ್ಷ ಕೋಟಿ ಆಗಿತ್ತು ಎಂದು ಹೇಳಿದೆ.

2015–16ರಲ್ಲಿ ಸಮೂಹ ಪಡೆದ ಒಟ್ಟು ಸಾಲದಲ್ಲಿ ಸರ್ಕಾರಿ ಬ್ಯಾಂಕ್‌ಗಳ ಪಾಲು ಶೇಕಡ 55ರಷ್ಟು ಇತ್ತು. ಇದು 2021–22ರಲ್ಲಿ ಶೇ 21ಕ್ಕೆ ಇಳಿಕೆಯಾಗಿದೆ ಎಂದು ಸಮೂಹ ವಿವರಿಸಿದೆ. 2015–16ರಲ್ಲಿ ಒಟ್ಟು ಸಾಲದಲ್ಲಿ ಖಾಸಗಿ ಬ್ಯಾಂಕ್‌ಗಳ ಪಾಲು ಶೇ 31ರಷ್ಟು ಇದ್ದಿದ್ದು ಈಗ ಶೇ 11ಕ್ಕೆ ಇಳಿಕೆಯಾಗಿದೆ. ಬಾಂಡ್‌ಗಳ ಮೂಲಕ ಸಂಗ್ರಹಿಸಿರುವ ಸಾಲದ ಪ್ರಮಾಣವು ಹಿಂದೆ ಶೇ 14ರಷ್ಟು ಇದ್ದಿದ್ದು ಈಗ ಶೇ 50ಕ್ಕೆ ಹೆಚ್ಚಳವಾಗಿದೆ.

ಹಾಲಿ ಹಾಗೂ ಹೊಸ ಉದ್ದಿಮೆಗಳಲ್ಲಿ ಹೂಡಿಕೆ ಮಾಡಲು ಸಮೂಹವು ಸಾಲವಾಗಿ ಪಡೆದ ಹಣವನ್ನು ಹೆಚ್ಚಾಗಿ ಬಳಕೆ ಮಾಡುತ್ತಿದೆ ಎಂದು ಕ್ರೆಡಿಟ್‌ಸೈಟ್ಸ್ ವರದಿಯು ಹೇಳಿತ್ತು.

ಅದಾನಿ ಸಮೂಹ ನೀಡಿರುವ ಅಂಕಿ-ಅಂಶಗಳು ಕ್ರೆಡಿಟ್‌ಸೈಟ್ಸ್ ವರದಿಯಲ್ಲಿ ಇರುವ ಅಂಕಿ-ಅಂಶಗಳಿಗಿಂತ ಭಿನ್ನವಾಗಿವೆ. ಸಮೂಹದ ಸಾಲದ ಪ್ರಮಾಣವು ಆರೋಗ್ಯಕರ ಮಟ್ಟದಲ್ಲಿ ಇದೆ, ಉದ್ಯಮದ ಮಾನದಂಡಗಳಿಗೆ ಅನುಗುಣವಾಗಿದೆ ಎಂದು ಸಮೂಹ ಹೇಳಿದೆ.

ಖಜಾನೆ ವ್ಯವಸ್ಥೆಗೆ ಕರ್ಣಾಟಕ ಬ್ಯಾಂಕ್ ಸೇರ್ಪಡೆ

ಮಂಗಳೂರು: ರಾಜ್ಯ ಸರ್ಕಾರದ ಖಜಾನೆ ಇಲಾಖೆ ವ್ಯವಸ್ಥೆಗೆ ಕರ್ಣಾಟಕ ಬ್ಯಾಂಕ್ ಸೇರ್ಪಡೆಯಾಗಿದ್ದು, ಬ್ಯಾಂಕ್ ಇನ್ನು ಮುಂದೆ ಎಲ್ಲ ವಿತ್ತೀಯ ವಹಿವಾಟುಗಳನ್ನು ನಿರ್ವಹಿಸಬಹುದಾಗಿದೆ. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳಿಗೆ ಏಕ ನೋಡಲ್ ಏಜೆನ್ಸಿ ಖಾತೆಯಾಗಿ ಬ್ಯಾಂಕ್ ಕಾರ್ಯ ನಿರ್ವಹಿಸಬಹುದು.

'ಕರ್ಣಾಟಕ ಬ್ಯಾಂಕ್ ಸರ್ಕಾರಿ ಇಲಾಖೆಗಳ ಹಣಕಾಸು ವ್ಯವಹಾರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಈಗ, ಖಜಾನೆ-II (ಎ2) ಜೊತೆ ಸಂಯೋಜಿತಗೊಂಡು, ವಿವಿಧ ಯೋಜನೆಗಳ ಫಲಾನುಭವಿಗಳ ಖಾತೆಗೆ ನೇರ ನಗದು ಪ್ರಯೋಜನಗಳನ್ನು ವಿತರಿಸಲಿದೆ. ತಂತ್ರಜ್ಞಾನ ಮತ್ತು ಡಿಜಿಟಲ್ ವ್ಯವಹಾರಗಳ ಮೂಲಕ ಬ್ಯಾಂಕ್ ಸಾರ್ವಜನಿಕ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರದೊಂದಿಗೆ ಸಹಭಾಗಿಯಾಗಲು ಈ ಪಾಲುದಾರಿಕೆಯು ಸಹಕಾರಿ' ಎಂದು ಬ್ಯಾಂಕ್‌ನ ಸಿಇಒ ಮಹಾಬಲೇಶ್ವರ ಎಂ.ಎಸ್. ತಿಳಿಸಿದ್ದಾರೆ.

ಸೆನ್ಸ್‌ಹಾಕ್ ಕಂಪನಿ ಖರೀದಿಸಲಿರುವ ರಿಲಯನ್ಸ್

ನವದೆಹಲಿ (ಪಿಟಿಐ): ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ಸೌರ ವಿದ್ಯುತ್ ಸಾಫ್ಟ್‌ವೇರ್ ಕಂಪನಿ 'ಸೆನ್ಸ್‌ಹಾಕ್'ನ ಬಹುಪಾಲು ಷೇರುಗಳನ್ನು ₹ 256 ಕೋಟಿಗೆ ಖರೀದಿಸುವುದಾಗಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮಂಗಳವಾರ ಹೇಳಿದೆ.

ರಿಲಯನ್ಸ್, ಸೆನ್ಸ್‌ಹಾಕ್‌ನ ಶೇಕಡ 79.4ರಷ್ಟು ಷೇರುಗಳನ್ನು ಖರೀದಿ ಮಾಡಲಿದೆ. ನವೀಕರಿಸಬಹುದಾದ ಇಂಧನ ವಹಿವಾಟಿನಲ್ಲಿ ಹೆಚ್ಚು ಹಣ ತೊಡಗಿಸುವ ಭಾಗವಾಗಿ ಈ ಖರೀದಿಗೆ ಮುಂದಾಗಿದೆ. ಸೆನ್ಸ್‌ಹಾಕ್ ಕಂಪನಿಯು, ಸೌರವಿದ್ಯುತ್ ಉದ್ದಿಮೆಗೆ ಅಗತ್ಯವಿರುವ ಸಾಫ್ಟ್‌ವೇರ್ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಿಕೊಂಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಚನ್ನಗಿರಿ	
ರಾಶಿ	47229-55509
ಚಿತ್ರದುರ್ಗ	
ಆಪಿ	54339-54769
ಬೆಟ್ಟೆ	41219-41679
ಕೆಂಪುಗೋಟು	31409-31810
ರಾಶಿ	53829-54289
ಕಾರ್ಕಳ	
ಹೊಸತು	40000-47500
ಪುತ್ತೂರು	
ಹೊಸತು	34500-47500
ಸಾಗರ	
ಬಿಳಿಗೋಟು	32829-33689
ಚಾಲಿ	39789-41189
ಕೋಕ	34519-37989
ಕೆಂಪುಗೋಟು	32969-40509
ಸಾಗರ	47009-54509
ಸಿಪ್ಪೆಗೋಟು	22329-23229
ಶಿವಮೊಗ್ಗ	
ಬೆಟ್ಟೆ	51100-55700
ರಾಶಿ	49059-55099
ಸರಕು	5859-81000
ಸಿದ್ದಾಪುರ	
ಬಿಳಿಗೋಟು	28099-34899
ಚಾಲಿ	38899-43099
ಕೋಕ	26899-34859
ಕೆಂಪುಗೋಟು	34389-34809
ರಾಶಿ	50899-53129
ತಟ್ಟಿಬೆಟ್ಟೆ	44679-50199
ಶಿರಸಿ	
ಬೆಟ್ಟೆ	38099-48999
ಬಿಳಿಗೋಟು	27009-37499
ಚಾಲಿ	38889-44542
ಕೆಂಪುಗೋಟು	26199-37399
ರಾಶಿ	49069-53529
ಸೊರಬ	
ಚಾಲಿ	41000-41000
ಯಲ್ಲಾಪುರ	
ಆಪಿ	51700-61700
ಬಿಳಿಗೋಟು	27691-36431
ಚಾಲಿ	38099-43299
ಕೋಕ	26899-32900
ಕೆಂಪುಗೋಟು	31799-35706
ರಾಶಿ	48929-57399
ತಟ್ಟಿಬೆಟ್ಟೆ	38799-47699

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ		
	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16250	-
ಎಸಿ	8500	8800	
ಆರ್‌ಪಿ	9800	9800	ಲಂಡನ್
ಆರ್‌ಸಿ	4500	4655	2217 ಡಾಲರ್ಸ್

ಚೀನಾ ಭೂಕಂಪ: 65 ಸಾವು

ಬೀಜಿಂಗ್ (ಎಪಿ): ಟಿಬೆಟ್ ಸಮೀಪದ ಚೀನಾದ ಸಿಚುವಾನ್ ಪ್ರಾಂತ್ಯದಲ್ಲಿ ಸೋಮವಾರ ಸಂಭವಿಸಿದ 6.8ರಷ್ಟು ತೀವ್ರತೆಯ ಭೂಕಂಪನದಲ್ಲಿ ಸತ್ತವರ ಸಂಖ್ಯೆ 65ಕ್ಕೆ ಏರಿಕೆಯಾಗಿದ್ದು, 100ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.

ಸಿಚುವಾನ್ ಪ್ರಾಂತ್ಯದ ಲುಡಿಂಗ್ ಕೌಂಟಿಯ ಮುಖ್ಯ ಪಟ್ಟಣದಲ್ಲಿ ಸಂಭವಿಸಿದ ಭೂಕಂಪನದ ಬಳಿಕ ಕನಿಷ್ಠ 16 ಮಂದಿ ನಾಪತ್ತೆಯಾಗಿದ್ದಾರೆ. ಟಿಬೆಟಿಯನ್ ಸ್ವಾಯತ್ತ ಪ್ರಾಂತ್ಯ ಗಾರ್ಜ್‌ನ ಐತಿಹಾಸಿಕ ಪಟ್ಟಣ ಮೋಕ್ಸಿಯಲ್ಲಿ 37 ಮಂದಿ ಮತ್ತು ಶಿಮಿಯಾನ್ ಕೌಂಟಿ ಪ್ರದೇಶದಲ್ಲಿ 28 ಮಂದಿ ಮೃತಪಟ್ಟಿದ್ದಾರೆ.

'ಶ್ರೀಲಂಕಾದ 22ನೇ ಸಂವಿಧಾನ ತಿದ್ದುಪಡಿಗೆ ಸುಪ್ರೀಂ' ಸಮ್ಮತಿ

ಕೊಲಂಬೊ (ಪಿಟಿಐ): ಶ್ರೀಲಂಕಾದಲ್ಲಿ ಅಧ್ಯಕ್ಷರ ಅಧಿಕಾರವನ್ನು ಮೊಟಕುಗೊಳಿಸಿ ಸಂಸತ್‌ಗೆ ಪರಮಾಧಿಕಾರವನ್ನು ನೀಡುವ ಸಂವಿಧಾನದ 22ನೇ ತಿದ್ದುಪಡಿ ಮಸೂದೆಗೆ ದೇಶದ ಸುಪ್ರೀಂ ಕೋರ್ಟ್ ಮಂಗಳವಾರ ಸಮ್ಮತಿ ಸೂಚಿಸಿದೆ.

ವೆನ್ಯು ಎನ್–ಲೈನ್ ಬಿಡುಗಡೆ

ನವದೆಹಲಿ (ಪಿಟಿಐ): ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್ (ಎಚ್‌ಎಂಐಎಲ್) ಕಂಪನಿಯು ವೆನ್ಯು ಮಾದರಿಯ ಎನ್-ಲೈನ್ ಆವೃತ್ತಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಅಲ್ಲದೆ, ದೇಶದ ಮಾರುಕಟ್ಟೆಯಲ್ಲಿ ಈ ವರ್ಷ ದಾಖಲೆಯ ಪ್ರಮಾಣದಲ್ಲಿ ವಾಹನ ಮಾರಾಟ ಆಗುವ ನಿರೀಕ್ಷೆ ಕಂಪನಿಗೆ ಇದೆ.

'ಸೆಮಿಕಂಡಕ್ಟರ್ ಕೊರತೆಯು ಸುಧಾರಿಸುತ್ತಿದೆ. ವಾಹನಗಳಿಗೆ ಬೇಡಿಕೆ ಚೆನ್ನಾಗಿದೆ' ಎಂದು ಕಂಪನಿಯ ಮಾರಾಟ, ಮಾರುಕಟ್ಟೆ ಹಾಗೂ ಸೇವಾ ವಿಭಾಗದ ನಿರ್ದೇಶಕ ತರುಣ್ ಗರ್ಗ್ ಹೇಳಿದ್ದಾರೆ.

ವೆನ್ಯು ಎನ್-ಲೈನ್ ಆವೃತ್ತಿಯ ಎಕ್ಸ್-ಷೋರೂಂ ಬೆಲೆಯು ₹ 12.16 ಲಕ್ಷದಿಂದ ₹ 13.15 ಲಕ್ಷದವರೆಗೆ ಇದೆ. ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಕಂಪನಿಯು ಐ20 ಮಾದರಿಯ ಎನ್-ಲೈನ್ ಆವೃತ್ತಿಯನ್ನು ಬಿಡುಗಡೆ ಮಾಡಿತ್ತು.ವೆನ್ಯು ಎನ್-ಲೈನ್ ಆವೃತ್ತಿಯಲ್ಲಿ 1 ಲೀಟರ್ ಸಾಮರ್ಥ್ಯದ ಟರ್ಬೊ ಪೆಟ್ರೋಲ್ ಎಂಜಿನ್ ಇದೆ. ಏಳು ಗಿಯರ್‌ಗಳ ಆಟೊಮ್ಯಾಟಿಕ್ ಟ್ರಾನ್ಸ್‌ಮಿಷನ್ ಸೌಲಭ್ಯ ಇದೆ. ಈ ವಾಹನದ ಮಾರಾಟವು ಮುಂದಿನ ವರ್ಷದಲ್ಲಿ 10 ಸಾವಿರದ ಗಡಿಯನ್ನು ದಾಟಲಿದೆ ಎಂಬ ನಿರೀಕ್ಷೆಯನ್ನು ಕಂಪನಿಯು ಹೊಂದಿದೆ.

ಮುಂಬೈ ಧಾರಣೆ

ಶೇಂಗಾ

6-9-2022

ಜಾವಾ 70/80(ಹೊಸ)	11550-16000
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1180 (1170)
ಪಾಮ್ ವಾರದ ಡೆಲಿವರಿ	983 (993)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1350)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,500 (50,550)
ಬೆಳ್ಳಿ ಕೆ.ಜಿ 53,650 (53,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೆನರಾ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ದರ ಏರಿಕೆ

ನವದೆಹಲಿ (ಪಿಟಿಐ): ಎಂಸಿಎಲ್‌ಆರ್ ಆಧಾರಿತ ಸಾಲದ ಮೇಲಿನ ಬಡ್ಡಿ ದರವನ್ನು ಗರಿಷ್ಠ ಶೇಕಡ 0.15ರವರೆಗೆ ಹೆಚ್ಚಿಸಿರುವುದಾಗಿ ಕೆನರಾ ಬ್ಯಾಂಕ್ ಮಂಗಳವಾರ ಹೇಳಿದೆ. ಈ ಹೆಚ್ಚಳದಿಂದಾಗಿ ಸಾಲಗಳ ಮೇಲಿನ ಬಡ್ಡಿ ದರ ಜಾಸ್ತಿಯಾಗಲಿದೆ. ಹೆಚ್ಚಳವು ಬುಧವಾರದಿಂದ ಅನ್ವಯವಾಗಲಿದೆ. ಒಂದು ವರ್ಷದ ಅವಧಿಯ ಎಂಸಿಎಲ್‌ಆರ್ ಆಧಾರಿತ ಸಾಲದ ಬಡ್ಡಿ ದರವು ಇನ್ನು ಮುಂದೆ ಶೇ 7.75 ಆಗಲಿದೆ. ಇದು ಶೇ 7.65 ಆಗಿತ್ತು.

ಕರ್ನಾಟಕ ಸರ್ಕಾರ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಸಿರವಾರ
E-mail id:cdposirwar3@gmail.com

ಶಿ.ಅ.ಯೋ.ಸಿ.ಅಂ.ಕೇ.ಫ.ಕೊ.ಮೊ.ಟೆ.ಪ್ರ.2022–23/ ದಿನಾಂಕ: 26/07/2022

–:: ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ::–

1. ಟೆಂಡರ್ ಉಲ್ಲೇಖ ಸಂಖ್ಯೆ: ಶಿ.ಅ.ಯೋ.ಸಿ.ಅಂ.ಕೇ.ಫ.ಕೊ.ಮೊ.ಟೆ.ಪ್ರ.2022–23/ದಿನಾಂಕ: 26/07/2022 2. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.inನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ ದಿನಾಂಕ: ಪ್ರಾರಂಭ ದಿನಾಂಕ:26/07/2022 3. ಪೂರ್ವ ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ: 12/09/2022 ಬೆಳಗ್ಗೆ 11:00 ಗಂಟೆಗೆ ಈ ಕೆಳಗಿನ ಸ್ಥಳದಲ್ಲಿ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಿರವಾರ. 4. ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಆನ್‌ಲೈನ್‌ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: –– 5. ಇ–ಟೆಂಡರ್ ಅನ್ನು ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ: 26/09/2022 05:00 PM 6. ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: 28/09/2022, 11:00 AM 7. ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 30/09/2022 11.00 AM 8. ಟೆಂಡರ್‌ಗಳನ್ನು ತೆರೆಯುವ ಸ್ಥಳ: ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ 9. ಸಂವಹನಕ್ಕಾಗಿ ವಿಳಾಸ: ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿರವಾರ, 8970048548
1. ಪೂರ್ಣಗೊಂಡ ಟೆಂಡರ್‌ಗಳನ್ನು ಟೆಂಡರ್‌ದಾರರು ತಮ್ಮ ಬಳಕೆದಾರ ID ಯನ್ನು ಬಳಸಿಕೊಂಡು ಇ–ಟೆಂಡರಿಂಗ್ ವ್ಯವಸ್ಥೆಯ ಮೂಲಕ ಅಪ್‌ಲೋಡ್ ಮಾಡಬೇಕು, ಸೆಕ್ಷನ್ II ಅಡಿಯಲ್ಲಿ ಸೂಚಿಸಲಾದ ರೀತಿಯಲ್ಲಿ – ಟೆಂಡರ್ ಡಾಕ್ಯುಮೆಂಟ್‌ಗಳ ಟೆಂಡರ್‌ದಾರರಿಗೆ ಸೂಚನೆಗಳು ಟೆಂಡರ್ ವೇಳಾಪಟ್ಟಿಯಲ್ಲಿ ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯದ ಮೊದಲು ಅಥವಾ ಮೊದಲು. 2. ತಾಂತ್ರಿಕ ಬಿಡ್ ತೆರೆಯುವ ನಿರ್ದಿಷ್ಟ ದಿನಾಂಕವನ್ನು ಖರೀದಿದಾರರಿಗೆ ರಜಾದಿನವೆಂದು ಘೋಷಿಸಿದರೆ, ಮುಂದಿನ ಕೆಲಸದ ದಿನದಂದು ತಾಂತ್ರಿಕ ಬಿಡ್ ತೆರೆಯಲಾಗುತ್ತದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಸಿರವಾರ.

ವಾ.ಸಾ.ಸಂ.ಇ/ರಾಯಚೂರು/286/ಎಂ.ಸಿ.ಎ/2022–23

ಕರ್ನಾಟಕ ಗೃಹ ಮಂಡಳಿ
ಕರ್ನಾಟಕ ಗೃಹ ಮಂಡಲಿ – ಸಮುದಾಯದ ನಿರ್ಮಾಣದತ್ತ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080–22273511–16

ಸಂಖ್ಯೆ: ಕಗೃಮಂ/ಹಂಚಿಕೆ–10/ಇಲವಾಲ/2022–23 ದಿನಾಂಕ: 06.09.2022

ಸಾರ್ವಜನಿಕ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಕಾವಲ್, ಯಲಚನಹಳ್ಳಿ ಹಾಗೂ ಗುಂಗ್ರಾಲ್ ಛತ್ರ ಗ್ರಾಮಗಳ ಹಲವು ಸರ್ವೆ ನಂಬರ್ ಜಮೀನುಗಳಲ್ಲಿ ಕರ್ನಾಟಕ ಗೃಹ ಮಂಡಳಿಯು ಅಭಿವೃದ್ಧಿಪಡಿಸಿರುವ ಬಡಾವಣೆಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ಈ ಹಿಂದೆ ದಿನಾಂಕ: 28–09–2015 ರಿಂದ 01–10–2015 ರವರೆಗೆ ಲಾಟರಿ ಮೂಲಕ ಹಂಚಿಕೆ ಮಾಡಲಾಗಿತ್ತು. ನಂತರ ನಿವೇಶನ ಹಂಚಿಕೆಯಾಗದ ಅರ್ಜಿದಾರರಲ್ಲಿ ಆರಂಭಿಕ ಠೇವಣಿ ಮರುಪಾವತಿ ಪಡೆಯದೇ ಇರುವ ಅರ್ಜಿದಾರರಿಗೆ ಮತ್ತೊಮ್ಮೆ ಅವಕಾಶ ನೀಡಿ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸಲು ದಿನಾಂಕ: 28–01–2022 ರಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಅದರಂತೆ ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿಸಿರುವ ಅರ್ಜಿದಾರರಿಗೆ ದಿನಾಂಕ: 08–07–2022 ರಂದು ಇ–ಲಾಟರಿ ಮೂಲಕ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಸದರಿ ಇ–ಲಾಟರಿ ಪ್ರಕ್ರಿಯೆಯಲ್ಲಿ ಹಂಚಿಕೆಯಾಗದ EWS, LIG ಮತ್ತು HIG-II ವರ್ಗದ ಅರ್ಜಿದಾರರುಗಳಿಗೆ ಪ್ರಸ್ತುತ ಸದರಿ ಬಡಾವಣೆಯಲ್ಲಿ MIG ಮತ್ತು HIG-I ವರ್ಗದಲ್ಲಿ ಲಭ್ಯವಿರುವ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.

ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿ ಮಾಡಲು ಕೊನೆಯ ದಿನಾಂಕ: 27–09–2022 ಆಗಿರುತ್ತದೆ.
ಅರ್ಜಿದಾರರು ಪಾವತಿಸಬೇಕಾಗಿರುವ ವ್ಯತ್ಯಾಸದ ಆರಂಭಿಕ ಠೇವಣಿ ಮೊತ್ತದ ವಿವರ ಈ ಕೆಳಕಂಡಂತಿದೆ.

ಕ್ರ. ಸಂ	ಸ್ವತ್ತಿನ ವರ್ಗ	ಲಭ್ಯವಿರುವ ನಿವೇಶನಗಳ ವರ್ಗ	ಲಭ್ಯವಿರುವ ಅಂದಾಜು ಸ್ವತ್ತುಗಳ ಸಂಖ್ಯೆ	ಈಗಾಗಲೇ ಪಾವತಿಸಿರುವ ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ	ಪಾವತಿಸಬೇಕಾದ ವ್ಯತ್ಯಾಸದ ಆರಂಭಿಕ ಠೇವಣಿ
1	EWS	MIG	362	ರೂ.10,300/–	ರೂ.40,000/–
2	LIG			ರೂ.50,550/–	–
3	LIG	HIG-I	114	ರೂ.50,550/–	–
4	HIG-II			ರೂ.1,01,550/–	–

ಷರತ್ತುಗಳು:– (1) EWS ವರ್ಗದ ಅರ್ಜಿದಾರರು ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸಿ ಎಂ.ಐ.ಜಿ. ವರ್ಗದ ನಿವೇಶನವನ್ನು ಪಡೆಯಲು ಅರ್ಹರಿರುತ್ತಾರೆ.
2) ಎಲ್.ಐ.ಜಿ. ವರ್ಗದ ಅರ್ಜಿದಾರರು ಎಮ್.ಐ.ಜಿ ವರ್ಗದ ನಿವೇಶನವನ್ನು ಪಡೆಯಬೇಕಾದಲ್ಲಿ ಯಾವುದೇ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವಂತಿಲ್ಲ. ಆದರೆ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯಂತೆ ತಾವು ನಿವೇಶನ ಬೇಕಾದಲ್ಲಿ ಅಥವಾ ಬೇಡವಾದಲ್ಲಿ ನಿಗಧಿತ ವರ್ಗದ ಆವರಣದಲ್ಲಿ ಗುರುತು ಮಾಡುವುದು.
3) ಎಲ್.ಐ.ಜಿ. ಮತ್ತು ಹೆಚ್.ಐ.ಜಿ–2 ವರ್ಗದ ಅರ್ಜಿದಾರರು ಹೆಚ್.ಐ.ಜಿ–1 ವರ್ಗದ ನಿವೇಶನವನ್ನು ಪಡೆಯಬೇಕಾದಲ್ಲಿ ಯಾವುದೇ ವ್ಯತ್ಯಾಸದ ಆರಂಭಿಕ ಠೇವಣಿಯನ್ನು ಪಾವತಿಸುವಂತಿಲ್ಲ. ಆದರೆ ವೆಬ್‌ಸೈಟ್‌ನಲ್ಲಿ ನೀಡಿರುವ ಮಾಹಿತಿಯಂತೆ ತಾವು ಯಾವ ವರ್ಗದ ನಿವೇಶನ ಬೇಕಾದಲ್ಲಿ ಅಥವಾ ಬೇಡವಾದಲ್ಲಿ ನಿಗಧಿತ ವರ್ಗದ ಆವರಣದಲ್ಲಿ ಗುರುತು ಮಾಡುವುದು.
4) ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ನೋಂದಣಿ ಸಂಖ್ಯೆಯ ಅರ್ಜಿದಾರರು ಮಾತ್ರ ನಿವೇಶನ ಹಂಚಿಕೆಗೆ ಅರ್ಹರಾಗಿರುತ್ತಾರೆ. ವ್ಯತ್ಯಾಸದ ಆರಂಭಿಕ ಠೇವಣಿ ಪಾವತಿ ಹಾಗೂ ನಿಯಮ ಮತ್ತು ಷರತ್ತುಗಳ ವಿವರಗಳಿಗಾಗಿ ಕರ್ನಾಟಕ ಗೃಹ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/–
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/2099/Zenkar/2022-23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕ್ರಿಕೆಟ್: ಆರು ವಿಕೆಟ್ ಸೋಲು; ರೋಹಿತ್ ಬಳಗದ ಫೈನಲ್ ಪ್ರವೇಶ ಸಾಧ್ಯತೆ ಕ್ಷೀಣ

ಲಂಕಾ ಎದುರು ಎಡವಿದ ಭಾರತ

ದುಬೈ (ಪಿಟಿಐ): ಯುವ ಆಟಗಾರರನ್ನು ಒಳಗೊಂಡ ಶ್ರೀಲಂಕಾ ತಂಡ, ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಭಾರತಕ್ಕೆ ಆಘಾತ ನೀಡಿತು.

ದುಬೈನಲ್ಲಿ ಮಂಗಳವಾರ ಜಿದ್ದಾಜಿದ್ದಿನ ಹೋರಾಟ ನಡೆದ ಪಂದ್ಯದಲ್ಲಿ ಲಂಕಾ ತಂಡ ಆರು ವಿಕೆಟ್‌ಗಳ ಜಯ ಸಾಧಿಸಿತು. ಸೂಪರ್ ಫೋರ್ ಹಂತದಲ್ಲಿ ಸತತ ಎರಡನೇ ಸೋಲು ಅನುಭವಿಸಿದ ರೋಹಿತ್ ಶರ್ಮ ಬಳಗದ ಫೈನಲ್ ಪ್ರವೇಶದ ಸಾಧ್ಯತೆ ಕ್ಷೀಣಿಸಿದೆ. ಪ್ರಶಸ್ತಿ ಸುತ್ತು ತಲುಪಬೇಕಾದರೆ ಇತರ ಪಂದ್ಯಗಳ ಫಲಿತಾಂಶ ಅವಲಂಬಿಸಬೇಕಿದೆ.

ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 173 ರನ್ ಗಳಿಸಿದರೆ, ಲಂಕಾ ತಂಡ ಇನ್ನೂ ಒಂದು ಎಸೆತ ಬಾಕಿಯಿರುವಂತೆ 4 ವಿಕೆಟ್‌ಗೆ 174 ರನ್ ಗಳಿಸಿ ಗೆಲುವಿನ ಕೇಕೆ ಹಾಕಿತು.

ಪಥುಮ್ ನಿಸ್ಸಂಕಾ (52 ರನ್, 37 ಎ., 4X4, 6X2) ಮತ್ತು ಕುಶಾಲ್ ಮೆಂಡಿಸ್ (57 ರನ್, 37 ಎ., 4X4, 6X3) ಅವರು ಮೊದಲ ವಿಕೆಟ್‌ಗೆ 97 ರನ್ ಗಳಿಸಿ ತಂಡಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು.

ಆ ಬಳಿಕ 13 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್ ಪಡೆದ ಭಾರತ, ಪಂದ್ಯದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿತು. ಆದರೆ ಐದನೇ ವಿಕೆಟ್‌ಗೆ 34 ಎಸೆತಗಳಲ್ಲಿ 64 ರನ್ ಸೇರಿಸಿದ ನಾಯಕ ದಸುನ್ ಶನಕ (ಅಜೇಯ 33) ಮತ್ತು ಭಾನುಕ ರಾಜಪಕ್ಸ (ಅಜೇಯ 25) ಅವರು ಪಂದ್ಯವನ್ನು ಭಾರತದ ಕೈಯಿಂದ ಕಿತ್ತುಕೊಂಡರು.

ಶ್ರೀಲಂಕಾ ತಂಡದ ದಸುನ್ ಶನಕ ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಏಷ್ಯಾ ಕಪ್ ಯುಎಇ 2022

ಲಂಕಾ ಜಯಕ್ಕೆ ಕೊನೆಯ ಎರಡು ಓವರ್‌ಗಳಲ್ಲಿ 21 ರನ್‌ಗಳು ಬೇಕಿದ್ದವು. ಭುವನೇಶ್ವರ್ ಬೌಲ್ ಮಾಡಿದ 19ನೇ ಓವರ್‌ನಲ್ಲಿ 14 ರನ್‌ಗಳು ಬಂದವು. ಅರ್ಷದೀಪ್ ಸಿಂಗ್ ಹಾಕಿದ ಕೊನೆಯ ಓವರ್‌ನಲ್ಲಿ ಏಳು ರನ್‌ಗಳ ಅಗತ್ಯವಿತ್ತು. ದಸುನ್ ಮತ್ತು ರಾಜಪಕ್ಸ ಒತ್ತಡ ಮೆಟ್ಟಿನಿಲ್ಲಲು ಯಶಸ್ವಿಯಾದರು.

ರೋಹಿತ್ ಅಬ್ಬರ: ಮೊದಲು ಬ್ಯಾಟ್ ಮಾಡಿದ ಭಾರತಕ್ಕೆ ಒಳ್ಳೆಯ ಆರಂಭ ಲಭಿಸಲಿಲ್ಲ. ಕೆ.ಎಲ್. ರಾಹುಲ್ (6 ರನ್) ಎರಡನೇ ಓವರ್‌ನಲ್ಲಿ ತೀಕ್ಷಣ ಹಾಕಿದ ಯಾರ್ಕರ್ ಎಸೆತಕ್ಕೆ ಎಲ್‌ಬಿಡಬ್ಲ್ಯು ಆದರು. ನಂತರದ ಓವರ್‌ನಲ್ಲಿ ಮಧುಶಂಕಾ ಎಸೆತದಲ್ಲಿ ವಿರಾಟ್ ಕೊಹ್ಲಿ ಕ್ಲೀನ್ ಬೌಲ್ಡ್ ಆಗಿ ಸೊನ್ನೆ ಸುತ್ತಿದರು. ಕಳೆದ ಎರಡೂ ಪಂದ್ಯಗಳಲ್ಲಿ ವಿರಾಟ್ ಅರ್ಧಶತಕ ಗಳಿಸಿದ್ದರು.

ತಂಡವು 13 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೀಡಾಯಿತು. ಆದರೆ ಈ ಆತಂಕವನ್ನು ಹಿಟ್‌ಮ್ಯಾನ್ ಖ್ಯಾತಿಯ ರೋಹಿತ್ (72; 41ಎ, 4X5, 6X4) ದೂರ ಮಾಡಿದರು. ಅವರಿಗೆ ಸೂರ್ಯಕುಮಾರ್ (34; 29ಎ) ಉತ್ತಮ ಜೊತೆ ನೀಡಿದರು. ಹಸರಂಗಾ ಬೌಲಿಂಗ್ ಮಾಡಿದ ಒಂಬತ್ತನೇ ಓವರ್‌ನಲ್ಲಿ ರೋಹಿತ್ ಕ್ಯಾಚ್ ಕೈಚೆಲ್ಲಿದ ಫೀಲ್ಡರ್ ಮಧುಶಂಕಾ ಜೀವದಾನ ನೀಡಿದರು. ಇದರ ಲಾಭ ಪಡೆದ ರೋಹಿತ್ ಮತ್ತಷ್ಟು ರನ್‌ಗಳನ್ನು ಗಳಿಸಿದರು. ಮುಂಬೈನ ರೋಹಿತ್ ಹಾಗೂ ಸೂರ್ಯ ಜೋಡಿ ಮೂರನೇ ವಿಕೆಟ್ ಜೊತೆಯಾಟದಲ್ಲಿ 97 ರನ್ ಗಳಿಸಿತು.

ಸ್ಕೋರ್ ಕಾರ್ಡ್

ಭಾರತ 8ಕ್ಕೆ 173 (20 ಓವರ್)
ರಾಹುಲ್ ಎಲ್‌ಬಿಡಬ್ಲ್ಯು ತೀಕ್ಷಣ 6 (7ಎ, 4X1), ರೋಹಿತ್ ಸಿ ನಿಸ್ಸಂಕಾ ಬಿ ಕರುಣರತ್ನೆ 72 (41ಎ, 4X5, 6X4), ವಿರಾಟ್ ಬಿ ಮಧುಶಂಕಾ 0 (4ಎ), ಸೂರ್ಯಕುಮಾರ್ ಸಿ ತೀಕ್ಷಣ ಬಿ ಶನಕ 34 (29ಎ, 4X1, 6X1), ಹಾರ್ದಿಕ್ ಸಿ ನಿಸ್ಸಂಕಾ ಬಿ ಶನಕ 17 (13ಎ, 6X1), ರಿಷಭ್ ಸಿ ನಿಸ್ಸಂಕಾ ಬಿ ಮಧುಶಂಕಾ 17 (13ಎ, 4X3), ದೀಪಕ್ ಬಿ ಮಧುಶಂಕಾ 3 (4ಎ), ಅಶ್ವಿನ್ ಔಟಾಗದೆ 15 (7ಎ, 6X1), ಭುವನೇಶ್ವರ್ ಬಿ ಕರುಣರತ್ನೆ 0 (2ಎ), ಅರ್ಷದೀಪ್ ಔಟಾಗದೆ 1 (1ಎ)
ಇತರೆ: 8 (ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-11 (ಕೆ.ಎಲ್. ರಾಹುಲ್, 1.5), 2-13 (ವಿರಾಟ್ ಕೊಹ್ಲಿ, 2.4), 3-110 (ರೋಹಿತ್ ಶರ್ಮಾ, 12.2), 4-119 (ಸೂರ್ಯಕುಮಾರ್ ಯಾದವ್, 14.2), 5-149 (ಹಾರ್ದಿಕ್ ಪಾಂಡ್ಯ, 17.3), 6-157 (ದೀಪಕ್ ಹೂಡಾ, 18.1), 7-158 (ರಿಷಭ್ ಪಂತ್, 18.3), 8-164 (ಭುವನೇಶ್ವರ್ ಕುಮಾರ್, 19.3)
ಬೌಲಿಂಗ್: ದಿಲ್‌ಶಾನ್ ಮಧುಶಂಕಾ 4-0-24-3, ಮಹೇಶ್ ತೀಕ್ಷಣ 4-0-29-1, ಚಮಿಕಾ ಕರುಣರತ್ನೆ 4-0-27-2, ಅಸಿತ ಫರ್ನಾಂಡೊ 2-0-28-0, ವನಿಂದು ಹಸರಂಗ 4-0-39-0, ದಸುನ್ ಶನಕ 2-0-26-2

ಶ್ರೀಲಂಕಾ 4ಕ್ಕೆ 174 (19.5 ಓವರ್)
ನಿಸ್ಸಂಕಾ ಸಿ ರೋಹಿತ್ ಬಿ ಚಾಹಲ್ 52 (37ಎ, 4X4, 6X2), ಕುಶಾಲ್ ಎಲ್‌ಬಿಡಬ್ಲ್ಯು ಬಿ ಚಾಹಲ್ 57 (37ಎ, 4X4, 6X3), ಅಸಲಂಕ ಸಿ ಸೂರ್ಯಕುಮಾರ್ ಬಿ ಚಾಹಲ್ 0 (3ಎ), ಧನುಷ್ಕ ಸಿ ರಾಹುಲ್ ಬಿ ಅಶ್ವಿನ್ 1 (7ಎ), ಭಾನುಕ ಔಟಾಗದೆ 25 (17ಎ, 6X2), ಶನಕ ಔಟಾಗದೆ 33 (18ಎ, 4X4, 6X1)
ಇತರೆ: 6 (ಬೈ 2, ಲೆಗ್‌ಬೈ 1, ವೈಡ್ 3)
ವಿಕೆಟ್ ಪತನ: 1-97 (ಪಥುಮ್ ನಿಸ್ಸಂಕಾ, 11.1), 2-97 (ಚರಿತ್ ಅಸಲಂಕ, 11.4), 3-110 (ಧನುಷ್ಕ ಗುಣತಿಲಕ, 13.5), 4-110 (ಕುಶಾಲ್ ಮೆಂಡಿಸ್, 14.1)
ಬೌಲಿಂಗ್: ಭುವನೇಶ್ವರ್ ಕುಮಾರ್ 4-0-30-0, ಅರ್ಷದೀಪ್ ಸಿಂಗ್ 3.5-0-40-0, ಹಾರ್ದಿಕ್ ಪಾಂಡ್ಯ 4-0-35-0, ಯುಜುವೇಂದ್ರ ಚಾಹಲ್ 4-0-34-3, ರವಿಚಂದ್ರನ್ ಅಶ್ವಿನ್ 4-0-32-1

ಫಲಿತಾಂಶ: ಶ್ರೀಲಂಕಾಕ್ಕೆ 6 ವಿಕೆಟ್ ಗೆಲುವು

ಶಶಿಕಾಂತ್ ಮುಖ್ಯ ಕೋಚ್

ಕ್ರಿಕೆಟ್: ಕರ್ನಾಟಕ ತಂಡಕ್ಕೆ ನೂತನ ಆಯ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡಕ್ಕೆ ಪಿ.ವಿ. ಶಶಿಕಾಂತ್ ಅವರನ್ನು ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿದೆ.

ಯರೇ ಗೌಡ ಅವರು ಆಂಧ್ರ ಕ್ರಿಕೆಟ್ ತಂಡಕ್ಕೆ ಮುಖ್ಯ ಕೋಚ್ ಆಗಿ ತೆರಳಿದ್ದರಿಂದ ಕರ್ನಾಟಕದ ಕೋಚ್ ಸ್ಥಾನ ತೆರವಾಗಿತ್ತು.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಮಂಗಳವಾರ ಪುರುಷ ಹಾಗೂ ಮಹಿಳಾ ವಿಭಾಗಗಳ ರಾಜ್ಯ ತಂಡಗಳ ಆಯ್ಕೆ ಸಮಿತಿ ಹಾಗೂ ಮುಖ್ಯ ಕೋಚ್‌ಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಫಜಲ್ ಖಲೀಲ್ ಸೀನಿಯರ್ ತಂಡದ ಆಯ್ಕೆ ಸಮಿತಿಯ ಮುಖ್ಯಸ್ಥರಾಗಿ ಮುಂದುವರಿದಿದ್ದಾರೆ. ಅವರು 25 ವರ್ಷದೊಳಗಿನವರ ತಂಡದ ಆಯ್ಕೆ ಸಮಿತಿಗೂ ಮುಖ್ಯಸ್ಥರಾಗಿದ್ದಾರೆ.

ಕೋಚ್ ಶಶಿಕಾಂತ್ ಅವರು ನಾಲ್ಕು ವರ್ಷಗಳ ಹಿಂದೆ ಕರ್ನಾಟಕ ತಂಡದಲ್ಲಿ ಕಾರ್ಯನಿರ್ವಹಿಸಿದ್ದರು.

ವಿವಿಧ ವಿಭಾಗಗಳ ಆಯ್ಕೆ ಸಮಿತಿಗಳು:
ಪುರುಷರು: ಸೀನಿಯರ್;ಫಜಲ್ ಖಲೀಲ್ (ಮುಖ್ಯಸ್ಥ), ಆನಂದ ಕಟ್ಟಿ, ರಮೇಶ್ ಹೆಜ್ಮಾಡಿ, ಕೆ.ಎಲ್. ಅಶ್ವಥ್ (ಸದಸ್ಯರು);ಪಿ.ವಿ. ಶಶಿಕಾಂತ್ (ಮುಖ್ಯ ಕೋಚ್)

25 ವರ್ಷದೊಳಗಿನವರು;ಫಜಲ್ ಆರ್. ಖಲೀಲ್ (ಮುಖ್ಯಸ್ಥ), ತೇಜಪಾಲ್ ಕೊಠಾರಿ, ರಘುತ್ತಮ ನವಲಿ, ಕಮಲ್ ಟಂಡನ್ (ಸದಸ್ಯರು), ಎಂ.ಎಸ್. ರವೀಂದ್ರ (ವಲಯ ನಿಮಂತ್ರಕರು, ಮೈಸೂರು);ನಿಖಿಲ್ ಹಳದಿಪುರ(ಮುಖ್ಯ ಕೋಚ್)

19 ವರ್ಷದೊಳಗಿನವರು;ಆನಂದ ಪಿ ಕಟ್ಟಿ (ಮುಖ್ಯಸ್ಥ), ಎಂ.ವಿ. ಪ್ರಶಾಂತ್, ಎ.ಆರ್. ಮಹೇಶ್, ಉದಿತ್ ಪಟೇಲ್ (ಸದಸ್ಯರು), ಕೆ. ಶಶಿಧರ್ (ವಲಯ ನಿಮಂತ್ರಕ, ತುಮಕೂರು); ಕೆ.ಬಿ. ಪವನ್(ಮುಖ್ಯ ಕೋಚ್)

16 ಹಾಗೂ 14 ವರ್ಷದೊಳಗಿನವರು: ರಮೇಶ್ ಹೆಜ್ಮಾಡಿ (ಮುಖ್ಯಸ್ಥ), ಎಸ್. ಪ್ರಕಾಶ್, ಸಿ.ರಘು, ಎ. ವಿಜಯ್ (ಸದಸ್ಯರು); ಕುನಾಲ್ ಕಪೂರ್ (ಮುಖ್ಯ ಕೋಚ್)

ಮಹಿಳೆಯರು: ಸೀನಿಯರ್;ಕೆ. ಆರ್. ಗಾಯತ್ರಿ (ಮುಖ್ಯಸ್ಥರು), ಮುಕ್ತಾ ಆರ್ ಅಲಗೇರಿ, ಲೀನಾ ಪ್ರಸಾದ್, ಪಿ.ಜೆ. ಹೇಮಲತಾ (ಸದಸ್ಯರು); ಲಕ್ಷ್ಮೀ ವಿ ಹರಿಹರನ್ (ಮುಖ್ಯ ಕೋಚ್)

ಜೂನಿಯರ್;ಚಂದ್ರಿಕಾ ಶ್ರೀಧರ್ (ಮುಖ್ಯಸ್ಥರು), ಆಶ್ರಯಿ ಎನ್ ರಾಮ್, ಅನುರಾಧಾ ಪ್ರಸಾದ್, ನಿವೇದಿತಾ ರೇಶ್ಮೆ (ಸದಸ್ಯರು);

ಮುಖ್ಯ ಕೋಚ್: ಕರುಣಾ ಜೈನ್ (19 ವರ್ಷದೊಳಗಿನವರು), ವಿ.ಆರ್. ವನಿತಾ (16 ವರ್ಷದೊಳಗಿನವರು)


ಪಿ.ವಿ. ಶಶಿಕಾಂತ್

ಕರುಣಾ ಜೈನ್

ಟೆನಿಸ್: 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಕನಸು ಭಗ್ನ

ಟೈಫೊ ಆಟ; ನಡಾಲ್‌ಗೆ ಆಘಾತ

ನ್ಯೂಯಾರ್ಕ್ (ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್ ಅವರ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಜಯದ ಕನಸು ಭಗ್ನಗೊಂಡಿದೆ. ಆತಿಥೇಯ ಆಟಗಾರ ಫ್ರಾನ್ಸಿಸ್ ಟೈಫೊ ಎದುರು ಮುಗ್ಗರಿಸಿದ ಅವರು, ಅಮೆರಿಕ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದರು.

ಇಲ್ಲಿ ನಾಲ್ಕು ಬಾರಿ ಚಾಂಪಿಯನ್ ಆಗಿದ್ದ ನಡಾಲ್, ಆರ್ಥರ್ ಆ್ಯಷ್ ಅಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ 4–6, 6–4, 4–6, 3–6ರಿಂದ ಟೈಫೊ ಅವರಿಗೆ ಸೋತರು. 36 ವರ್ಷದ ಸ್ಪೇನ್ ಆಟಗಾರ, ಟೂರ್ನಿಯಲ್ಲಿ ಆರು ವರ್ಷಗಳಲ್ಲಿ ಇಷ್ಟು ಬೇಗ ನಿರ್ಗಮಿಸಿದ್ದು ಇದೇ ಮೊದಲು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಟೈಫೊ 18 ಏಸ್ ಮತ್ತು 49 ವಿನ್ನರ್‌ಗಳ ಮೂಲಕ ನಡಾಲ್ ಅವರನ್ನು ಕಂಗೆಡಿಸಿದರು. ಮೂರು ತಾಸು 34 ನಿಮಿಷಗಳ ಕಾಲ ಪಂದ್ಯ ನಡೆಯಿತು.

ಈ ವರ್ಷದಲ್ಲಿ ಸ್ಪೇನ್ ಆಟಗಾರನಿಗೆ ಇದು ಮೊದಲ ಗ್ರ್ಯಾನ್‌ಸ್ಲಾಮ್ ಸೋಲಾಗಿದೆ. ಆಸ್ಟ್ರೇಲಿಯಾ ಮತ್ತು ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಕಿರೀಟ ಧರಿಸಿದ್ದ ಅವರು, ವಿಂಬಲ್ಡನ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಹೊಟ್ಟೆನೋವಿನಿಂದಾಗಿ ಹಿಂದೆ ಸರಿದಿದ್ದರು.

24 ವರ್ಷದ ಟೈಫೊ ಮುಂದಿನ ಪಂದ್ಯದಲ್ಲಿ ರಷ್ಯಾದ ಆ್ಯಂಡ್ರೆ ರುಬ್ಲೆವ್ ಅವರನ್ನು ಎದುರಿಸುವರು. 16ರ ಘಟ್ಟದ ಮತ್ತೊಂದು ಸೆಣಸಾಟದಲ್ಲಿ ರುಬ್ಲೆವ್ 6-4, 6-4, 6-4ರಿಂದ ಬ್ರಿಟನ್‌ನ ಕ್ಯಾಮರಾನ್ ನೊರಿ ಎದುರು ಗೆದ್ದರು.

ಫ್ರಾನ್ಸಿಸ್ ಟೈಫೊ ಆಟದ ಪರಿ– ಎಎಫ್‌ಪಿ ಚಿತ್ರ

ಅಲ್ಕರಾಜ್‌ಗೆ ಪ್ರಯಾಸದ ಜಯ: ಐದು ಸೆಟ್‌ಗಳ ರೋಚಕ ಹಣಾಹಣಿಯಲ್ಲಿ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ 6-4, 3-6, 6-4, 4-6, 6-3ರಿಂದ 2014ರ ಚಾಂಪಿಯನ್, ಕ್ರೊವೇಷ್ಯಾದ ಮರಿನ್ ಸಿಲಿಚ್ ಅವರನ್ನು ಮಣಿಸಿದರು.

ಎಂಟರಘಟ್ಟದಲ್ಲಿ ಅಲ್ಕರಾಜ್ ಅವರಿಗೆ ಇಟಲಿಯ ಜಾನಿಕ್ ಸಿನ್ನರ್ ಸವಾಲು ಎದುರಾಗಿದೆ.

ಸ್ವಟೆಕ್ ಜಯಭೇರಿ: ಪೋಲೆಂಡ್‌ನ ಇಗಾ ಸ್ವಟೆಕ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಮಹಿಳಾ ಸಿಂಗಲ್ಸ್‌ನ 16ರ ಘಟ್ಟದ ಪಂದ್ಯದಲ್ಲಿ ಅವರು 2-6, 6-4, 6-0ರಿಂದ ಜರ್ಮನಿಯ ಜೂಲ್ ನೀಮರ್ ಎದುರು ಗೆದ್ದರು.

ಸುರೇಶ್ ರೈನಾ ವಿದಾಯ

ನವದೆಹಲಿ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ಸುರೇಶ್ ರೈನಾ ಅವರು ಎಲ್ಲ ಮಾದರಿಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಇದರಿಂದಾಗಿ ಅವರಿಗೆ ವಿದೇಶಗಳಲ್ಲಿ ನಡೆಯುವ ಫ್ರ್ಯಾಂಚೈಸಿ ಲೀಗ್ ಟೂರ್ನಿಗಳಲ್ಲಿ ಆಡಲು ಹಾದಿ ಸುಗಮವಾಗಲಿದೆ.

2020ರಲ್ಲಿ ಮಹೇಂದ್ರ ಸಿಂಗ್ ಧೋನಿ ಹಾಗೂ ಸುರೇಶ್ ರೈನಾ ಒಂದೇ ದಿನ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. 2021ರಲ್ಲಿಯೂ ಅವರು ಐಪಿಎಲ್‌ನಲ್ಲಿ ಆಡಿದ್ದರು. 2022ರ ಋತುವಿನ ಮೆಗಾ ಹರಾಜಿಗೂ ಮುನ್ನ ಅವರನ್ನು ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡವು ಬಿಡುಗಡೆಗೊಳಿಸಿತ್ತು.

‘ದೇಶಮ ಮತ್ತು ಉತ್ತರಪ್ರದೇಶ ರಾಜ್ಯ ತಂಡವನ್ನು ಪ್ರತಿನಿಧಿಸುವ ಅವಕಾಶ ಲಭಿಸಿದ್ದು ದೊಡ್ಡ ಗೌರವದ ಸಂಗತಿ. ಎಲ್ಲ ಮಾದರಿಗಳಿಗೂ ಇಂದು ವಿದಾಯ ಹೇಳುತ್ತಿದ್ದೇನೆ’ ಎಂದು ರೈನಾ ಟ್ವೀಟ್ ಮಾಡಿದ್ದಾರೆ. ಅವರು ಬಿಸಿಸಿಐ, ಉತ್ತರಪ್ರದೇಶ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಿಗೆ ಧನ್ಯವಾದ ತಿಳಿಸಿದ್ದಾರೆ.

ಹೋದ ವರ್ಷ ಅಬುಧಾಬಿಯಲ್ಲಿ ನಡೆದಿದ್ದ ಸಿಎಸ್‌ಕೆ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳ ನಡುವಣ ಅವರು ಕೊನೆಯ ಬಾರಿಗೆ ಆಡಿದ್ದರು.

ರೈನಾ 18 ಟೆಸ್ಟ್, 226 ಏಕದಿನ ಹಾಗೂ 78 ಟಿ20 ಪಂದ್ಯಗಳನ್ನು ಆಡಿದ್ದಾರೆ. 2011ರಲ್ಲಿ ವಿಶ್ವಕಪ್ ಜಯಿಸಿದ್ದ ಭಾರತ ತಂಡದಲ್ಲಿ ಆಡಿದ್ದರು.

ಸುರೇಶ್ ರೈನಾ

‘ಹೆಸರು ಬಹಿರಂಗಪಡಿಸಲಿ’

ನವದೆಹಲಿ (ಪಿಟಿಐ): ‘ಟೆಸ್ಟ್ ಕ್ರಿಕೆಟ್ ತಂಡದ ನಾಯಕತ್ವ ತ್ಯಜಿಸಿದ ಬಳಿಕ ವಿರಾಟ್ ಕೊಹ್ಲಿ ಯಾರಿಂದೆಲ್ಲಾ ಸಂದೇಶಗಳನ್ನು ನಿರೀಕ್ಷಿಸುತ್ತಿದ್ದರು ಎಂಬುದನ್ನು ಬಹಿರಂಗಪಡಿಸಬೇಕು’ ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

‘ನಾಯಕತ್ವ ತೊರೆದ ಬಳಿಕ ಮಹೇಂದ್ರ ಸಿಂಗ್ ಧೋನಿ ಹೊರತುಪಡಿಸಿ, ಬೇರೆ ಯಾರೂ ನನಗೆ ಸಂದೇಶ ಕಳುಹಿಸಿರಲಿಲ್ಲ’ ಎಂದು ಕೊಹ್ಲಿ ಭಾನುವಾರ ಹೇಳಿದ್ದರು.

ವಿರಾಟ್ ಹೇಳಿಕೆ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಗಾವಸ್ಕರ್, ವಿರಾಟ್ ಯಾರನ್ನು ಉಲ್ಲೇಖಿಸಿ ಮಾತನಾಡುತ್ತಿದ್ದಾರೆ ಎಂದು ಹೇಳುವುದು ತುಂಬಾ ಕಷ್ಟ. ಅವರು ಯಾವುದಾದರೂ ವ್ಯಕ್ತಿಯ ಹೆಸರು ಹೇಳಿದ್ದರೆ, ಅವರ ಬಳಿ ತೆರಳಿ ‘ನೀವು ವಿರಾಟ್ ಅವರನ್ನು ಸಂಪರ್ಕಿಸಿದ್ದೀರಾ? ಅಥವಾ ಸಂಪರ್ಕಿಸಿಲ್ಲವೇ’ ಎಂದು ಕೇಳಬಹುದಿತ್ತು ಎಂದಿದ್ದಾರೆ.

‘ಅವರು ಯಾವ ರೀತಿಯ ಸಂದೇಶ ನಿರೀಕ್ಷಿಸುತ್ತಿದ್ದರು? ಉತ್ತೇಜನ ನೀಡುವಂತಹ ಸಂದೇಶ ಬೇಕಿತ್ತೇ? ನಾಯಕತ್ವವನ್ನು ತ್ಯಜಿಸಿದ ಬಳಿಕ ಅವರಿಗೆ ಉತ್ತೇಜನ ಏಕೆ ಬೇಕು? ಆ ಅಧ್ಯಾಯ (ನಾಯಕತ್ವ) ಅವರಿಗೆ ಈಗಾಗಲೇ ಕೊನೆಗೊಂಡಿದೆ’ ಎಂದಿದ್ದಾರೆ.

‘ನಾಯಕತ್ವ ತ್ಯಜಿಸಿದ ಬಳಿಕ ನೀವು ಒಬ್ಬ ಆಟಗಾರನಾಗಿ ತಂಡದಲ್ಲಿದ್ದೀರಿ. ಆದ್ದರಿಂದ ನಿಮ್ಮ ಜವಾಬ್ದಾರಿಯ ಮೇಲಷ್ಟೇ ಗಮನ ಕೇಂದ್ರೀಕರಿಸಿ. ನಾಯಕನಾಗಿದ್ದಾಗ ಸಹ ಆಟಗಾರರ ಪ್ರದರ್ಶನದ ಬಗ್ಗೆಯೂ ಚಿಂತಿಸಬೇಕಾಗುತ್ತದೆ. ಆದರೆ ಆ ಜವಾಬ್ದಾರಿಯಿಂದ ಹೊರಬಂದ ಬಳಿಕ ನಿಮ್ಮ ಆಟದತ್ತ ಚಿತ್ತಹರಿಸಿದರೆ ಸಾಕು’ ಎಂದು ಸಲಹೆ ನೀಡಿದ್ದಾರೆ.


ಸುನಿಲ್ ಗಾವಸ್ಕರ್

ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಆರಂಭ

ಕೂಟ ದಾಖಲೆ ಬರೆದ ಶಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಎಸ್.ಶಿವ ಅವರು ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಗುವಾಹಟಿಯ ಡಾ. ಜಾಕೀರ್ ಹುಸೇನ್ ಈಜು ಸಂಕೀರ್ಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಮೊದಲ ದಿನ ಶಿವ ಅವರು ಪುರುಷರ 200 ಮೀಟರ್ಸ್ ಮೆಡ್ಲೆಯಲ್ಲಿ ಅಗ್ರಸ್ಥಾನ ಗಳಿಸಿದರು. 2 ನಿಮಿಷ 5.64 ಸೆಕೆಂಡುಗಳಲ್ಲಿ ಗುರಿ ತಲುಪಿದ ಅವರು, 2018ರಲ್ಲಿ ಸಜನ್ ಪ್ರಕಾಶ್ ತಿರುವನಂತಪುರದಲ್ಲಿ ನಿರ್ಮಿಸಿದ್ದ ದಾಖಲೆಯನ್ನು (2 ನಿ. 5.83 ಸೆ.) ಮೀರಿದರು.

ಶಿವ, ಶಿವಾಂಕ್ ವಿಶ್ವನಾಥ್, ಧ್ಯಾನ್ ಬಾಲಕೃಷ್ಣ ಮತ್ತು ಪೃಥ್ವಿ ಎಂ. ಅವರನ್ನೊಳಗೊಂಡ ರಾಜ್ಯ ತಂಡವು ಪುರುಷರ 4X200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿತು. ಕರ್ನಾಟಕದ ಈಜುಪಟುಗಳು 7 ನಿಮಿಷ 54.39 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಮಹಿಳೆಯರ 200 ಮೀ. ಮೆಡ್ಲೆಯಲ್ಲಿ ಕರ್ನಾಟಕದ ಮಾನವಿ ವರ್ಮಾ (2 ನಿ. 27.28) ಬೆಳ್ಳಿ ಪದಕ ಜಯಿಸಿದರು.

ಪುರುಷರ 400 ಮೀ. ಫ್ರೀಸ್ಟೈಲ್‌ನಲ್ಲಿ ಶಿವಾಂಕ್ ವಿಶ್ವನಾಥ್ (4 ನಿ. 9.02 ಸೆ.) ಬೆಳ್ಳಿ ಜಯಿಸಿದರೆ, ಮಹಿಳೆಯರ 50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ವಿಹಿತಾ ನಯನಾ (34.77 ಸೆ.) ಮತ್ತು ಮಾನವಿ (34.77 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು. 4X50 ಮೀ. ಮೆಡ್ಲೆ ಮಿಶ್ರ ತಂಡ ವಿಭಾಗದಲ್ಲಿ ಶಿವಾ, ಪೃಥ್ವಿಕ್ ಡಿ.ಎಸ್, ತನಿಶಿ ಗುಪ್ತಾ ಮತ್ತು ಲಿಥೇಶಾ ಮಂದಣ್ಣ ಅವರಿದ್ದ ತಂಡವು ಕಂಚು ಗೆದ್ದಿತು. ತಂಡವು 1 ನಿ. 54.64 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು.

ಎಸ್. ಶಿವ

ಬ್ಯಾಸ್ಕೆಟ್‌ಬಾಲ್: ಭಾರತಕ್ಕೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾ ಆಟಗಾರ್ತಿಯರ ವೇಗ ಮತ್ತು ಚಾಕಚಕ್ಯತೆಗೆ ಸಾಟಿಯಾಗುವಲ್ಲಿ ವಿಫಲವಾದ ಭಾರತ ತಂಡ, ಫಿಬಾ 18 ವರ್ಷದೊಳಗಿನ ಮಹಿಳಾ ಏಷ್ಯನ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಅನುಭವಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ‘ಎ’ ಡಿವಿಷನ್‌ನ ಪಂದ್ಯದಲ್ಲಿ ಆಸ್ಟ್ರೇಲಿಯಾ 116– 49 ಪಾಯಿಂಟ್‌ಗಳಿಂದ ಜಯಿಸಿತು.

ಮೊದಲ ಕ್ವಾರ್ಟರ್‌ನಲ್ಲಿ 32–8ರ ಮೇಲುಗೈ ಸಾಧಿಸಿದ್ದ ಆಸ್ಟ್ರೇಲಿಯಾ, ವಿರಾಮದ ವೇಳೆಗೆ ಮುನ್ನಡೆಯನ್ನು 60–25ಕ್ಕೆ ಹಿಗ್ಗಿಸಿಕೊಂಡಿತು. ಆ ಬಳಿಕವೂ ಮೇಲಿಂದ ಮೇಲೆ ಪಾಯಿಂಟ್ ಕಲೆಹಾಕಿ ‘ಶತಕ’ದ ಗಡಿ ದಾಟಿತು.

ಇಸಾಬೆಲ್ ಬೊರಿಯಸ್ 20 ಹಾಗೂ ಸೋಫಿ ಬರೋವ್ಸ್ ಅವರು 17 ಪಾಯಿಂಟ್ಸ್ ಗಳಿಸಿ ಆಸ್ಟ್ರೇಲಿಯಾದ ಗೆಲುವಿಗೆ ಕಾರಣರಾದರು. ಆತಿಥೇಯ ತಂಡದ ಪರ ದೀಪ್ತಿ ರಾಜಾ (14) ಮತ್ತು ಸತ್ಯಾ ಕೃಷ್ಣಮೂರ್ತಿ (12) ಗಮನ ಸೆಳೆದರು.

ಇನ್ನೊಂದು ಪಂದ್ಯದಲ್ಲಿ ಕೊರಿಯಾ 81–64 ರಲ್ಲಿ ನ್ಯೂಜಿಲೆಂಡ್ ತಂಡವನ್ನು ಮಣಿಸಿತು. ಆರಂಭದಿಂದಲೇ ಮೇಲುಗೈ ಸಾಧಿಸಿದ್ದ ಕೊರಿಯಾ ತಂಡ ವಿರಾಮದ ವೇಳೆಗೆ 44–28 ರಲ್ಲಿ ಮುನ್ನಡೆ ಗಳಿಸಿತ್ತು. ನಾಯಕಿ ಜಿನ್‌ಯಂಗ್ ಪಾರ್ಕ್ ಅವರು 18 ಪಾಯಿಂಟ್ಸ್ ಕಲೆಹಾಕಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಆಸ್ಟ್ರೇಲಿಯಾ ತಂಡದ ಎದುರಿನ ಪಂದ್ಯದಲ್ಲಿ ಭಾರತದ ನಿಹಾರಿಕಾ ರೆಡ್ಡಿ ಪಾಯಿಂಟ್ ಗಳಿಸಲು ಪ್ರಯತ್ನಿಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಚುರುಕಿನ ಆಟವಾಡಿದ ಚೀನಾ ತಂಡ ಇಂಡೋನೇಷ್ಯಾ ವಿರುದ್ಧ 91–30 ರಲ್ಲಿ ಭಾರಿ ಅಂತರದಿಂದ ಗೆದ್ದಿತು. ಡುವೊಲಿಂಗ್ ಹು (19) ಮತ್ತು ವೆನ್‌ಕ್ಸಿಯಾ ಲಿ (16) ಚೀನಾ ಪರ ಮಿಂಚಿದರು. ಜಪಾನ್ ತಂಡ 90–77 ರಲ್ಲಿ ಚೀನಾ ತೈಪೆ ತಂಡವನ್ನು ಮಣಿಸಿತು.

ಕೋರಮಂಗಲ ಕ್ರೀಡಾಂಗಣದಲ್ಲಿ ನಡೆದ ‘ಬಿ’ ಡಿವಿಷನ್ ಪಂದ್ಯದಲ್ಲಿ ಥಾಯ್ಲೆಂಡ್ 124–31 ರಲ್ಲಿ ಮಾಲ್ಡೀವ್ಸ್ ವಿರುದ್ಧ ಜಯಿಸಿತು.

ಏಷ್ಯನ್ ಟಿಟಿ: ಯಶಸ್ವಿನಿ–ಪಾಯಸ್‌ಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಯಶಸ್ವಿನಿ ಘೋರ್ಪಡೆ ಮತ್ತು ಪಾಯಸ್ ಜೈನ್ ಜೋಡಿಯು ಏಷ್ಯನ್ ಜೂನಿಯರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಲಾವೊಸ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಫೈನಲ್ ಹಣಾಹಣಿಯಲ್ಲಿ ಕರ್ನಾಟಕದ ಯಶಸ್ವಿನಿ ಮತ್ತು ಪಾಯಸ್ 11-9, 11-1, 10-12, 7-11, 11-8ರಿಂದ ಚೀನಾದ ಹ್ಯಾನ್ ಜಿನ್ಯುನ್ ಮತ್ತು ಕಿನ್ ಯುಕ್ಸುವಾನ್ ಅವರನ್ನು ಪರಾಭವಗೊಳಿಸಿದರು.

ಏಷ್ಯನ್ ಚಾಂಪಿಯನ್‌ಷಿಪ್‌ನ ಜೂನಿಯರ್ ವಿಭಾಗದಲ್ಲಿ ಭಾರತಕ್ಕೆ ಒಲಿದ ಮೊದಲ ಚಿನ್ನದ ಪದಕ ಇದು. ಬರ್ಮಿಂಗ್‌ಹ್ಯಾಮ್‌ನಲ್ಲಿ ಕಳೆದ ತಿಂಗಳು ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಶರತ್ ಕಮಲ್ ಮತ್ತು ಶ್ರೀಜಾ ಅಕುಲಾ ಜೋಡಿಯು ಚಾಂಪಿಯನ್ ಆಗಿತ್ತು.

ಯಶಸ್ವಿನಿ

ಯಶಸ್ವಿನಿ 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲೂ ಸೆಮಿಫೈನಲ್‌ವರೆಗೆ ತಲುಪಿದ್ದರು. ಅಲ್ಲಿ ಸೋತು ಕಂಚು ಗಳಿಸಿದರು.

ಏಷ್ಯನ್ ಜೂನಿಯರ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಕಂಚಿನ ಪದಕಗಳೂ ಭಾರತದ ಮಡಿಲು ಸೇರಿದವು. 19 ವರ್ಷದೊಳಗಿನ ಬಾಲಕರ ಡಬಲ್ಸ್, ಬಾಲಕರ ತಂಡ ವಿಭಾಗ ಮತ್ತು ಬಾಲಕಿಯರ ಸಿಂಗಲ್ಸ್ ವಿಭಾಗದಲ್ಲಿ ಈ ಪದಕಗಳು ಬಂದವು.

ಸಂಕ್ಷಿಪ್ತ ಸುದ್ದಿ

ಮೆಲ್ಬರ್ನ್ ಸ್ಟಾರ್ಸ್‌ಗೆ ಜೆಮಿಮಾ

ಮೆಲ್ಬರ್ನ್ (ಪಿಟಿಐ): ಭಾರತದ ಆಟಗಾರ್ತಿ ಜೆಮಿಮಾ ರಾಡ್ರಿಗಸ್ ಅವರು ಆಸ್ಟ್ರೇಲಿಯಾದ ಮಹಿಳಾ ಬಿಗ್‌ಬ್ಯಾಷ್ ಲೀಗ್ (ಡಬ್ಲ್ಯುಬಿಬಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಮೆಲ್ಬರ್ನ್ ಸ್ಟಾರ್ಸ್ ಪರ ಆಡಲಿದ್ದಾರೆ.

ಜೆಮಿಮಾ

22 ವರ್ಷದ ಜೆಮಿಮಾ, ಕಳೆದ ಆವೃತ್ತಿಯಲ್ಲಿ ಮೆಲ್ಬರ್ನ್ ರೆನೆಗೇಡ್ಸ್ ಪರ ಆಡಿ 333 ರನ್ ಗಳಿಸಿದ್ದರು.

ಜೆಮಿಮಾ ಅವರು ಮೆಲ್ಬರ್ನ್ ಸ್ಟಾರ್ಸ್ ಪರ ಕಣಕ್ಕಿಳಿಯಲಿರುವ ಭಾರತದ ಮೊದಲ ಆಟಗಾರ್ತಿಯಾಗಿದ್ದಾರೆ. ಎಂಟನೇ ಆವೃತ್ತಿಯ ಡಬ್ಲ್ಯುಬಿಬಿಎಲ್‌ನಲ್ಲಿ ಆಡಲಿರುವ ಭಾರತದ ಮೂರನೇ ಆಟಗಾರ್ತಿಯಾಗಿದ್ದಾರೆ.

5 ವರ್ಷದ ನಂತರ ಕೊಡವ ಹಾಕಿ ಉತ್ಸವ

ಮಡಿಕೇರಿ: ಕೊಡವ ಕುಟುಂಬಗಳ ನಡುವಿನ ಪ್ರತಿಷ್ಠಿತ ಕ್ರೀಡೋತ್ಸವ ಎನಿಸಿದ ಕೌಟುಂಬಿಕ ಕೊಡವ ಹಾಕಿ ಉತ್ಸವ ಐದು ವರ್ಷದ ನಂತರ 2023ರ ಫೆಬ್ರುವರಿಯಲ್ಲಿ ನಡೆಯಲಿದೆ.

‘2018, 2019ರಲ್ಲಿ ಉಂಟಾದ ಪ್ರಕೃತಿ ವಿಕೋಪ, ನಂತರ ಬಂದ ಕೋವಿಡ್‌ನಿಂದಾಗಿ ಉತ್ಸವ ನಡೆದಿರಲಿಲ್ಲ. ಈಗ ಮತ್ತೆ ನಡೆಯಲಿದ್ದು, ಅಪ್ಪಚಟ್ಟೋಳಂಡ ಕುಟುಂಬ ಆಯೋಜನೆಯ ಹೊಣೆ ಹೊತ್ತಿದೆ’ ಎಂದು ಅಪ್ಪಚಟ್ಟೋಳಂಡ ಕುಟುಂಬ ಹಾಕಿ ಉತ್ಸವ ಸಮಿತಿ ಅಧ್ಯಕ್ಷ ಮನು ಮುತ್ತಪ್ಪ ಇಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಎಫ್‌ಐಎಚ್ ಪ್ರಶಸ್ತಿ: ಹರ್ಮನ್‌ಪ್ರೀತ್ ನಾಮನಿರ್ದೇಶನ

ಲಾಸನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡದ ಡ್ರ್ಯಾಗ್‌ಫ್ಲಿಕರ್ ಹರ್ಮನ್‌ಪ್ರೀತ್ ಸಿಂಗ್ ಅವರು ‘ಎಫ್‌ಐಎಚ್ ಹಾಕಿ ಸ್ಟಾರ್ಸ್’ ವಾರ್ಷಿಕ ಪ್ರಶಸ್ತಿಗೆ ಮಂಗಳವಾರ ನಾಮನಿರ್ದೇಶನಗೊಂಡಿದ್ದಾರೆ.

ಹರ್ಮನ್‌ಪ್ರೀತ್ ಅವರನ್ನು ಶ್ರೇಷ್ಠ ಆಟಗಾರ ಪ್ರಶಸ್ತಿಗೆ, ಪಿ.ಆರ್. ಶ್ರೀಜೇಶ್ ಮತ್ತು ಸವಿತಾ ಪೂನಿಯಾ ಅವರನ್ನು ಕ್ರಮವಾಗಿ ಪುರುಷರ ಮತ್ತು ಮಹಿಳಾ ಗೋಲ್‌ಕೀಪರ್ಸ್ ವಿಭಾಗಗಳಿಗೆ ನಾಮನಿರ್ದೇಶನ ಮಾಡಲಾಗಿದೆ.

ಭಾರತದ ಪುರುಷ ಮತ್ತು ಮಹಿಳಾ ಹಾಕಿ ತಂಡಗಳ ಕೋಚ್‌ಗಳಾದ ಗ್ರಹಾಂ ರೀಡ್ ಮತ್ತು ಜಾನೆಕ್ ಶಾಪ್‌ಮನ್ ಅವರನ್ನು ಶ್ರೇಷ್ಠ ತರಬೇತುದಾರರ ವಿಭಾಗಕ್ಕೆ ನಾಮನಿರ್ದೇಶನ ಮಾಡಲಾಗಿದೆ. ಅಕ್ಟೋಬರ್ ಮೊದಲ ವಾರದಲ್ಲಿ ಪ್ರಶಸ್ತಿ ವಿಜೇತರ ಹೆಸರುಗಳನ್ನು ಪ್ರಕಟಿಸಲಾಗುತ್ತದೆ.

ಜಡೇಜಗೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಮಂಗಳವಾರ ಬಲಗಾಲಿನ ಮಂಡಿಯ ಶಸ್ತ್ರಚಿಕಿತ್ಸೆಗೆ ಒಳಗಾದರು.

‘ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ಶೀಘ್ರದಲ್ಲೇ ಚೇತರಿಸಿಕೊಳ್ಳುವ ವಿಶ್ವಾಸವಿದೆ. ಈ ಕಷ್ಟದ ಸಮಯದಲ್ಲಿ ಧೈರ್ಯತುಂಬಿದ ಎಲ್ಲರಿಗೂ ಕೃತಜ್ಞತೆಗಳು’ ಎಂದು ಅವರು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ.

ಆವೇಶ್ ಬದಲು ದೀಪಕ್ ಚಾಹರ್: ಜ್ವರದಿಂದ ಬಳಲುತ್ತಿರುವ ಆವೇಶ್ ಖಾನ್ ಅವರು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಿಂದ ಹೊರಬಿದ್ದಿದ್ದು, ಅವರ ಜಾಗದಲ್ಲಿ ದೀಪಕ್ ಚಾಹರ್ ಭಾರತ ತಂಡವನ್ನು ಸೇರಿಕೊಂಡಿದ್ದಾರೆ.